BROWEN BOOK ONLY

**TEXT CUT WITHIN THE BOOK ONLY**

**TEXT FLY WITHIN THE BOOK ONLY**

**TEXT PROBLEM WITHIN THE BOOK ONLY**

UNIVERSAL LIBRARY
OU_198979
UNIVERSAL LIBRARY

# ಚಾಲುಕ್ಯರ ವೈಭವ!

## ೧. ತಂತು

“ನಾಥ! ಸೋಮೇಶ್ವರನು ನಮ್ಮ ಹಿರಿಯ ಮಗನಲ್ಲವೆ? ಕರ್ನಾಟಕ ಸಾಮ್ರಾಜ್ಯಕ್ಕೆ ಅವನು ಭಾವೀಸಮ್ರಾಟನಲ್ಲವೆ? ಯೌವರಾಜ್ಯದ ಸೊತ್ತು ಅವನಿಗಲ್ಲದೆ ವಿಕ್ರಮಾದಿತ್ಯನಿಗೆ ಹೇಗೆ ಸಲ್ಲುವದು?”

“ನಿನ್ನ ಮಾತು ಒಂದು ದೃಷ್ಟಿಯಿಂದ ನಿಜ. ಈ ಸಂಗತಿಯನ್ನು ನಾನು ಅರಿಯೆನೆಂದು ಭಾವಿಸಿರುವೆಯಾ? ರಾಜ್ಯಲಕ್ಷ್ಮಿಯು ಪ್ರತಾಪ ನಿಧಿಯನ್ನು ಹೊಂದುವಳು. ನಮ್ಮ ಹಿರಿಯಮಗ ಸೋಮೇಶ್ವರನು ದುರದೃಷ್ಟನು; ವಿಕ್ರಮಾದಿತ್ಯನು ಅದೃಷ್ಟಶಾಲಿಯು, ಅಂತೆಯೆ ಪ್ರತಾಪವು ಪುಣ್ಯಶ್ಲೋಕಿ ವಿಕ್ರಮಾರ್ಕನಲ್ಲಿ ನೆಲೆಗೊಂಡಿದೆ. ವಯಸ್ಸಿನಿಂದ ಹಿರಿಯನೆಂಬ ಭರದಲ್ಲಿ ನಾನು ಸೋಮೇಶ್ವರನಿಗೆ ಸಾಮ್ರಾಜ್ಯವನ್ನೊಪ್ಪಿಸಿದರೆ ಅದರ ಪಾಡು ಒಳಿತಾಗದು. ಕರ್ನಾಟಕ ಸಾಮ್ರಾಜ್ಯವು ನಮ್ಮ ಮನೆತನದ ಸೊತ್ತಲ್ಲ; ಅದು ಕನ್ನಡಿಗರ ಸೊತ್ತು. ಅದರ ಸಂರಕ್ಷಣೆ ಸಂವರ್ಧನೆಗಳು ಯಾರಿಂದ ಸುವ್ಯವಸ್ಥೆಯಿಂದ ನೆರವೇರುವವೋ ಅಂತಹವನನ್ನು ಅಧಿಕಾರಿಯನ್ನಾಗಿ ಮಾಡುವದು ನನ್ನ ಕರ್ತವ್ಯವಾಗಿದೆ.”

“ಸೋಮೇಶ್ವರನು ವಿಕ್ರಮನಷ್ಟು ಪ್ರತಾಪಿಯಲ್ಲದಿದ್ದರೂ ಸಾಮ್ರಾಜ್ಯಭಾರ ನಿರ್ವಹಣಕ್ಕೆ ತೀರ ಅಯೋಗ್ಯನಿರುವನೆಂದು ನನ್ನ ಭಾವನೆಯಿಲ್ಲ. ಬರಬರುತ್ತ ಅವನೇ ಯೋಗ್ಯನಾಗಬಹುದು. ಅಣ್ಣನ ನೆರವಿಗಾಗಿ ವಿಕ್ರಮನು ಇದ್ದೇಇರುವನಲ್ಲ?”

“ಪ್ರಿಯೆ, ನಿನ್ನ ತಿಳುವಳಿಕೆ ತಪ್ಪಾದದ್ದಿದೆ. ಸೋಮೇಶ್ವರನು ನಮ್ಮ ಉದರದಲ್ಲಿ ಜನಿಸಿದ್ದು, ಅದರಲ್ಲಿ ಜ್ಯೇಷ್ಠನಾದದ್ದು ನಮ್ಮ ದೈವ ದುರ್ವಿಲಾಸ. ಸಾಮ್ರಾಜ್ಯದ ದುರ್ದೈವ. ಅವನಲ್ಲಿ ಎಲ್ಲ ವಿಧದ ದುರ್ಗುಣ

ಗಳು ಬೀಜ ರೂಪದಲ್ಲಿ ಈಗಾಗಲೆ ದೃಗ್ಗೋಚರವಾಗುತ್ತಿರುವವು. ನಮ್ಮ ಅನುಪಮವಾದ ಸ್ವಾನಂದ ಸಾಮ್ರಾಜ್ಯದಲ್ಲಿ ಸೋಮೇಶ್ವರನೊಬ್ಬನು ದುಃಖಾಂಕುರನಾಗಿ ಪರಿಣಮಿಸಿದ್ದು ದೈವಲೀಲೆಯಲ್ಲದೆ ಬೇರೊಂದಿಲ್ಲ ವೆಂದು ನಾನು ತಿಳಿದಿರುವೆನು."

"ಇನ್ನೂ ಚಿಕ್ಕವನವನು. ಅವನ ಗುಣಗಳನ್ನು ಪ್ರಯತ್ನಪೂರ್ವಕವಾಗಿ ಸುಧಾರಿಸಿದರೆ ಅವನು ಆದರ್ಶ ರಾಜನಾಗಬಹುದು. ಅವನು ಪಟ್ಟಬಾಧ್ಯನಿರುವದರಿಂದ ನಾವು ಅವನನ್ನು ಸನ್ಮಾರ್ಗಕ್ಕೆ ಹಚ್ಚಲಿಕ್ಕೆ ಬೇಕು. ವೀರಶ್ರೀಯು ಅವನಲ್ಲಿ ನೆಲೆಗೊಳ್ಳುವಹಾಗೆ ಕರ್ತವ್ಯಕ್ಕೆ ತೊಡಗಿಸಬೇಕು. ಅವನು ಅಯೋಗ್ಯನಿರುವನೆಂದು ಈಗಿನಿಂದಲೆ ನಾವು ಉಪೇಕ್ಷೆ ಮಾಡಹತ್ತಿದರೆ ಅವನು ಮತ್ತಿಷ್ಟು ಅಯೋಗ್ಯನಾಗುವನು. ನೀವು ಅವನಿಗೆ ಈಗಲೆ ಯೌವರಾಜ್ಯಾಭಿಷೇಕ ಮಾಡಿಸಿರಿ. ಹೀಗೆ ಮಾಡುವದರಿಂದ ಅವನಿಗೆ ಹುರುಪುಬಂದು ಎಷ್ಟಾದರೂ ಕಾರ್ಯತತ್ಪರನಾಗಬಹುದು."

"ಪ್ರಿಯೆ, ಸೋಮೇಶ್ವರನು ಜ್ಯೇಷ್ಠನಿರುವನೆಂದು ನಾನು ಅವನಿಗೆ ಯುವರಾಜಪಟ್ಟವನ್ನು ಕೊಡಲಿಚ್ಛಿಸುವದಿಲ್ಲ. ಅದನ್ನು ಒಬ್ಬ ಅಪಾತ್ರನಿಗೆ ಅರ್ಪಿಸಿ ಸಾಮ್ರಾಜ್ಯವನ್ನು ಅವನತಿಗಿಳಿಸಲು ನನ್ನಮನಸ್ಸಿಲ್ಲ. ರಾಜ್ಯಭಾರ ನಿರ್ವಹಣವೆಂದರೆ ಅದು ಹುಡುಗಾಟಿಕೆಯಲ್ಲ. ಈ ವಿಶಾಲಕರ್ನಾಟಕದ ಸಾಮ್ರಾಜ್ಯ ಭಾರವನ್ನು ಹೊರಲು ವಿಕ್ರಮನೇ ಯೋಗ್ಯನಿರುವದರಿಂದ ಅವನಿಗೇ ಯೌವರಾಜ್ಯ ಪಟ್ಟಕೊಡಬೇಕೆಂದು ನಾನು ನಿರ್ಧಾರ ಮಾಡಿರುವೆನು. ನಾನು ಹೀಗೆ ಆಡುತ್ತಿರುವದರಿಂದ ಸೋಮೇಶ್ವರನ ವಿಷಯವಾಗಿ ನನ್ನಲ್ಲಿ ಅಪ್ರೇಮವಿರುವದೆಂದು ನಿನ್ನ ಭಾವನೆಯಾಗಬಹುದು. ಅವನು ನನ್ನಮಗನಲ್ಲವೆ? ಪಿರಿಯರಶಿಯಾದ ನಿನ್ನ ಉದರದಿಂದ ಜನಿಸಿಲ್ಲವೆ? ಏನು ಮಾಡಬೇಕು? ಅವನು ತೇಜೋಹೀನನಾದುದಕ್ಕಾಗಿ ನನಗೆ ಅತಿರೇಕವಾದ ವ್ಯಸನವಾಗಿದೆ."

"ನೀವು ವಿಕ್ರಮಾದಿತ್ಯನಿಗೆ ಯೌವರಾಜ್ಯ ಪಟ್ಟಾಭಿಷೇಕಮಾಡಿಸಬೇಕೆನ್ನುವಿರಿ. ಈ ಮಾತಿಗೆ ಸೋಮೇಶ್ವರನೊಪ್ಪುವನೇ? ಮಂಡಳೇಶ್ವರರು ಒಡಂಬಡುವರೇ? ಸೋಮೇಶ್ವರನು ಪಟ್ಟಬಾಧ್ಯನಿರಲು ವಿಕ್ರ

ಮನು ಈ ಅಧಿಕಾರವನ್ನು ಸ್ವೀಕರಿಸಲು ಮುಂದಾಗಬಹುದೇ? ನಿಮ್ಮ ಕೃತ್ಯವು ಅಸಮಂಜಸವಾದದ್ದೆಂದು ಸಾಮ್ರಾಜ್ಯದೊಳಗಿನ ಪ್ರಜೆಗಳಿಗೆ ತೋರುವದರಿಂದ ಅವರು ಅಸಂತುಷ್ಟರಾಗದೆ ಇರುವರೆ?''

“ನಾನು ಈ ವಿಷಯದಲ್ಲಿ ನನ್ನ ಮಂತ್ರಿ ಸೇನಾಪತಿಗಳೊಡನೆಯೂ ಮಂಡಲೇಶ್ವರರೊಡನೆಯೂ ವಿಚಾರ ವಿನಿಮಯ ಮಾಡಿರುವೆನು. ವಿಕ್ರಮನಿಗೆ ಯೌವರಾಜ್ಯವನ್ನೊಪ್ಪಿಸಲು ಎಲ್ಲರೂ ಸಮ್ಮತಿಸಿರುವರು. ವಿಕ್ರಮಾದಿತ್ಯನಿಗೆ ಮಾತ್ರ ಇನ್ನೂ ಈ ವಿಷಯ ತಿಳಿಸಿರುವದಿಲ್ಲ. ಜ್ಯೇಷ್ಠತನದ ಅಧಿಕಾರದಿಂದ ಸಾಮ್ರಾಜ್ಯ ಸಿಂಹಾಸನ ದೊರೆಯುವದಿಲ್ಲ; ಪ್ರತಿಭಾಶಾಲಿಯಾದವನು ಅದಕ್ಕೆ ಬಾಧ್ಯನಾಗುವನು ಮೊದಲಾದ ಸಂಗತಿಗಳನ್ನು ಪರ್ಯಾಯದಿಂದ ಸೋಮೇಶ್ವರನಿಗೆ ತಿಳಿಸಿರುವೆನು. ಸಿಂಹಾಸನಾರೂಢನಾಗಿ ವಿಲಾಸೋಪಭೋಗಗಳನ್ನು ಹೊಂದುವದಷ್ಟೇ ರಾಜನ ಕರ್ತವ್ಯವೆಂದು ಅವನ ಭಾವನೆಯುಂಟು, ವಿಕ್ರಮನಂತಹ ಬಂಧುವೂ, ಭಿಲ್ಲಮನಂತಹ ಮಾವನೂ, ಮಹಾಪ್ರಚಂಡರಾದ ಮಂಡಲೇಶ್ವರ ಮಹಾಮಂಡಲೇಶ್ವರರೂ, ಚತುರರೂ ವೀರರೂ ಆದ ಮಹಾ ಪ್ರಧಾನಿ ಮಹಾಸೇನಾನಿಗಳೂ ಕರ್ನಾಟಕ ಸಾಮ್ರಾಜ್ಯದಲ್ಲಿರುವವರೆಗೆ ಸಾಮ್ರಾಜ್ಯಭಾರವು ತನ್ನಮೇಲೇನಿರುವದೆಂದು ಅವನು ಸ್ಪಷ್ಟವಾಗಿ ಆಡಿ ತೋರಿಸಿರುವನು. ಅವನು ಮಹಾ ವಿಲಾಸಿಯು, ಕರ್ತವ್ಯದ ಮಹತ್ವ ಅವನಿಗಿಲ್ಲ. ಪ್ರತಾಪವಂತು ಅವನಲ್ಲಿ ತಿಲಾಂಶವಾದರೂ ಇಲ್ಲ. ಇದುವರೆಗೆ ಅವನು ಯಾವ ಸಂಗ್ರಾಮಗಳಲ್ಲಿಯೂ ಭಾಗವಹಿಸಿಲ್ಲ. ಕಾಳಗಗಳ ಪ್ರಸಂಗಗಳನ್ನು ಅವನು ಬುದ್ಧಿಪೂರ್ವಕವಾಗಿ ತಪ್ಪಿಸುವನು. ಜೀವವನ್ನು ಗಂಡಾಂತರದಲ್ಲಿ ತೊಡಗಿಸಲಿಕ್ಕೆ ಅಂತಹ ಪ್ರಸಂಗವೇನಿರುವದೆಂದು ಅವನು ಅನ್ನುತ್ತಿರುವನು. ರಾಜರಾದವರು ಯುದ್ಧದಲ್ಲಿ ಭಾಗವಹಿಸುತ್ತ ಹೋದರೆ ರಾಜ್ಯದಲ್ಲಿ ಸೇನಾಪತಿಗಳೂ ಮಂಡಲೇಶ್ವರರೂ ಏತಕ್ಕೆ ಇರಬೇಕೆಂದು ಅವನು ಸ್ಪಷ್ಟವಾಗಿ ಹೇಳುತ್ತಿರುವನು. ಪ್ರಿಯೇ, ನೀನೇ ಹೇಳು; ಇಂತಹ ಅಪಾತ್ರನಿಗೆ ಯೌವರಾಜ್ಯಾಧಿಕಾರವನ್ನು ಹೇಗೆ ಒಪ್ಪಿಸಲಿ? ಉಮಾಮಹೇಶ್ವರ ವರಪ್ರಸಾದದಿಂದ ಇಂತಹ ಹೇಡಿ ಜನಿಸಿದ್ದು ವಿಸ್ಮಯ!”

“ ಸೋಮೇಶ್ವರನು ವಿಕ್ರಮನಂತೆ ಪ್ರತಾಪಿಯಲ್ಲ; ತೇಜೋನಿಧಿಯಲ್ಲ ಉದಾರನಲ್ಲ; ಕಾರ್ಯತತ್ಪರನಲ್ಲ. ನೀವಾಡುವ ಮಾತುಗಳು ಎಲ್ಲವೂ ನಿಜ. ಆದರೆ ಹಿರಿಯನು ತಾನಿರಲಾಗಿ ವಿಕ್ರಮನಿಗೆ ಯೌವರಾಜ್ಯಾಭಿಷೇಕ ವಾದರೆ ಅವನು ವಿತುಷ್ಟನಾಗುವನು. ವಿತುಷ್ಟನಾದ ಅವನಿಂದ ಸಾಮ್ರಾಜ್ಯಕ್ಕೆ ಪೆಟ್ಟು ಹತ್ತುವ ಸಂದರ್ಭವುಂಟಾಗಬಹುದು. ಚೋಳರಸನಾದ ಕೋಪರ ಕೇಸರಿವರ್ಮ ರಾಜೇಂದ್ರದೇವನಂತಹ ಸಾಮ್ರಾಜ್ಯದ ಅಸ್ಥಿವೈರತಳೆದಂತಹರ ಬೆನ್ನು ಬಿದ್ದು ಅನೇಕ ಅನರ್ಥಪರಂಪರೆಗಳನ್ನು ತಂದೊಡ್ಡಬಹುದು. ಜ್ಯೇಷ್ಠನಿಗೆ ಪಟ್ಟವೆಂಬುದು ಧರ್ಮಶಾಸ್ತ್ರವಿಹಿತ ಸಂಗತಿ. ಹೀಗಿದ್ದು ನೀವು ವಿಕ್ರಮನಿಗೆ ಯೌವರಾಜ್ಯಾಭಿಷೇಕ ಮಾಡಿಸಿದರೆ ಎಷ್ಟೋ ಪ್ರಜೆಗಳಿಗೆ ಈ ಮಾತು ರುಚಿಸಲಾರದು. ಅನೇಕ ಮಂಡಲೇಶ್ವರರೂ, ಮಂತ್ರಿ-ಸೇನಾನಾಯಕರೂ ನಿಮ್ಮ ಈ ಕೃತ್ಯವನ್ನು ನಿಷೇಧಿಸಬಹುದು. ಈ ಬಗ್ಗೆ ನೀವು ಏನು ಉತ್ತರ ಕೊಡುವಿರಿ ? ”

“ ನಾನು ಎಲ್ಲವನ್ನೂ ವಿಚಾರಿಸಿಯೆ ವಿಕ್ರಮನಿಗೆ ಯೌವರಾಜ್ಯಾಭಿಷೇಕ ಮಾಡಿಸುವ ಯೋಚನೆ ಮಾಡಿರುವೆನು. ಈಗಾಗಲೆ ವಿಕ್ರಮನು ಮಂತ್ರಿ ಸೇನಾಪತಿಗಳನ್ನೂ ಮಹಾಮಂಡಲೇಶ್ವರ ಮಂಡಲೇಶ್ವರರನ್ನೂ ಆಕರ್ಷಿಸಿರುವನು. ಕನ್ನಡ ಸಾಮ್ರಾಜ್ಯದ ಪ್ರಜಾಜನರು ವಿಕ್ರಮನ ವಿಕ್ರಮವನ್ನು ಕಂಡು ಕೌತುಕಬಡುತ್ತಿರುವರು. ವಿಕ್ರಮಾರ್ಕನೇಕೆ ಜ್ಯೇಷ್ಠನಾಗಲಿಲ್ಲ ವೆಂದು ಅವರು ಉದ್ಗಾರ ತೆಗೆಯುತ್ತಿರುವರು. ಕೇವಲ ಧರ್ಮಶಾಸ್ತ್ರ ನಿಯಮಕ್ಕೆ ಕಟ್ಟು ಬಿದ್ದು ಒಬ್ಬ ಅಪಾತ್ರನ ಕೈಯಲ್ಲಿ ಘನತೆ ಹೊಂದಿದ ಈ ಕರ್ನಾಟಕ ಸಾಮ್ರಾಜ್ಯವನ್ನು ಹೇಗೆ ಒಪ್ಪಿಸಲಿ ? ವಿಕ್ರಮನಿಗೆ ಯೌವರಾಜ್ಯಾಭಿಷೇಕವು ಮಾಡಿಸಲ್ಪಟ್ಟರೆ ಸೋಮೇಶ್ವರನು ಆಶಾಭಂಗ ಹೊಂದಿದವನಾಗಿ ವೈರಿಗಳನ್ನು ಕೂಡುವನೆಂದು ನೀನು ಹೇಳುವೆ. ನಿನ್ನ ಈ ಮಾತನ್ನು ನಾನು ಅಲ್ಲಗಳೆಯಲಾರೆನು. ಒಂದು ವೇಳೆ ಅವನು ಹಾಗೆ ಸಾಮ್ರಾಜ್ಯದ್ರೋಹಿಯಾದರೆ ವೈರಿಮಾಲಿಕೆಯಲ್ಲಿ ಸೇರುವನು. ವಿಕ್ರಮನು ಮಿಕ್ಕ ವೈರಿಗಳನ್ನು ಶಾಸನ ಮಾಡುವಂತೆ ಅವನನ್ನು ಸಹ ದಂಡಿಸಿ ಸಾಮ್ರಾಜ್ಯವನ್ನು ನಿರ್ವೈರವನ್ನಾಗಿ ಮಾಡುವನೆಂಬ ವಿಶ್ವಾಸ ನನಗಿದೆ. ”

"ಗೃಹಕಲಹದ ಬೇಗೆ ಅಸಾಮಾನ್ಯ. ಅದು ವೈರಿಗಳ ಕೃತ್ಯಗಳಿಗಿಂತ ಅತ್ಯಂತ ಉಗ್ರವಾಗಿ ಪರಿಣಮಿಸುವಂತಹದು. ಇದಕ್ಕೇನು ಹೇಳುವಿರಿ. ?"

"ಇಂತಹ ದುರ್ಘಟ ಪ್ರಸಂಗಗಳಲ್ಲಿ ದಾರಿ ಹುಡುಕುವದರಲ್ಲಿಯೆ ವಿಕ್ರಮನ ವಿಕ್ರಮವು ಒರೆಗೆ ಹತ್ತುವದು; ಅವನ ಕೀರ್ತಿಯು ಹೆಚ್ಚಾಗಿ ಬೆಳೆಯುವದು; ಕನ್ನಡ ಪ್ರಜೆಗಳಿಗೆ ಅವನ ಆಳಿಕೆ ಸುವರ್ಣಯುಗವಾಗಿ ಪರಿಣಮಿಸುವದು!"

"ನಾಥರೆ, ನೀವು ಹೇಳುವದೆಲ್ಲ ನಿಜವೆನ್ನದೆ ಹೇಗೆ ಇರಲಿ? ವಸ್ತುಸ್ಥಿತಿಯು ಹೀಗಿದ್ದರೂ ವಿಕ್ರಮನಿಗೆ ಯೌವರಾಜ್ಯ ಪಟ್ಟವೀಯಬೇಕೆಂಬ ನಿಮ್ಮ ಮನೀಷೆಯು ಸಿದ್ಧಿಸುವದೆಂಬದೇ ಸಂದೇಹಾಸ್ಪದ ಸಂಗತಿ."

"ಪ್ರಿಯೆ, ನೀನು ಈ ವಿಷಯದಲ್ಲಿ ಹೀಗೆ ಸಂಶಯಗ್ರಸ್ತಳಾದುದೇಕೆ? ಸೋಮೇಶ್ವರನು ನನ್ನ ಕಾರ್ಯಕ್ಕೆ ಅಡ್ಡಿತರುವನೆಂದು ನಿನ್ನ ತಿಳುವಳಿಕೆಯಿರುವದೇನು?"

"ಸೋಮೇಶ್ವರನಿಂದ ಅಷ್ಟು ಅಡ್ಡಿಯಾಗಲಾರದು; ಆದರೆ ಈ ಮಾತಿಗೆ ವಿಕ್ರಮನಿಂದಲೆ ಅಡ್ಡಿಯುಂಟಾಗುವ ಸಂಭವವಿದೆ."

"ಅವನು ಯೌವರಾಜ್ಯಪಟ್ಟವನ್ನು ನಿರಾಕರಿಸುವನೆ?"

"ನಿಶ್ಚಯ. ವಿಕ್ರಮನಲ್ಲಿಯ ಭ್ರಾತೃಭಾವವು ಅತ್ಯಂತ ಜಾಗ್ರತವಿದೆ. ತಾನು ಎಂತಹ ಪ್ರತಿಭಾಶಾಲಿಯಾಗಿದ್ದರೂ, ಎಷ್ಟು ಪ್ರತಾಪನಿಧಿಯಿದ್ದರೂ ಅಣ್ಣನಿಗೆ ಗೌರವಕೊಡುತ್ತಿರುವನು. ಆದುದರಿಂದ ಅವನು ಯೌವರಾಜ್ಯಪದವನ್ನು ನಿರಾಕರಿಸಬಹುದೆಂದು ನನಗೆ ತೋರುವದು. ಮೊದಲು ವಿಕ್ರಮನನ್ನು ವಿಚಾರಿಸಿಯೆ ನಿರ್ಧಾರ ಮಾಡಿರಿ. ಅಣ್ಣನಿಗೆ ಯೌವರಾಜ್ಯವಾಗಬೇಕೆಂದೂ, ತಾನು ಅವನಿಗೆ ಸಹಾಯಕನಾಗಿದ್ದು ಸಾಮ್ರಾಜ್ಯದ ಸಂರಕ್ಷಣೆ ಸಂವರ್ಧನೆಗಳನ್ನು ಮಾಡುವೆನೆಂದೂ ಅವನು ಹೇಳಬಹುದು."

"ಒಳ್ಳೇದು. ಈ ವಿಷಯದಲ್ಲಿ ವಿಕ್ರಮಾದಿತ್ಯನನ್ನು ವಿಚಾರಿಸಿಯೆ ನಿರ್ಧಾರ ಮಾಡೋಣ."

ಕರ್ನಾಟಕ ಸಾಮ್ರಾಟ್ ದಿವ್ಯಪ್ರತಾಪನಿಧಿ ಆಹವಮಲ್ಲ ಒಂದನೆಯ ಸೋಮೇಶ್ವರನು ತನ್ನ ಪಟ್ಟ ಮಹಿಷಿಯಾದ ಬಾಚಲದೇವಿಯೊಡನೆ ಸಂಭಾಷಣನಡೆಯಿಸಿದ್ದನು. ಸೋಮೇಶ್ವರನು ಹಿರಿಯಮಗನಾದುದರಿಂದ ಅವನಿಗೆ ಯುವರಾಜಪದವಿಯು ದೊರೆಯಬೇಕೆಂತಲೂ, ವಿಕ್ರಮಾದಿತ್ಯನು ಅಣ್ಣನಿಗೆ. ನೆರವಾಗಿ ರಾಜ್ಯದಾಡಳಿತ ಸಾಗಿಸಬೇಕೆಂತಲೂ ಅವಳ ಮನಸ್ಸಿತ್ತು. ಹಿರಿಯ ಮಗನಾದ ಎರಡನೆಯ ಸೋಮೇಶ್ವರನು ಎಲ್ಲ ಬಗೆಯಿಂದಲೂ ಅಪಾತ್ರನಿರುವನೆಂಬುದು ಆಹವಮಲ್ಲ ಒಂದನೆಯ ಸೋಮೇಶ್ವರನ ಪ್ರತ್ಯಯಕ್ಕೆ ಬಂದುದರಿಂದ ಯೌವರಾಜ್ಯಪದವನ್ನು ವಿಕ್ರಮಾದಿತ್ಯನಿಗೆ ಕೊಡಬೇಕೆಂದು ಸಂಕಲ್ಪಿಸಿದ್ದನು. ಈ ವಿಷಯವಿನ್ನೂ ತೆರೆಯಮರೆಯಲ್ಲಿತ್ತು. ಸಾಮ್ರಾಜ್ಯಾಭಿಮಾನಿಗಳಾದ ಹಲಕೆಲವು ಪ್ರಮುಖರ ಹೊರತು ಮಿಕ್ಕವರಿಗೆ ಸೋಮೇಶ್ವರ ವಿಕ್ರಮಾದಿತ್ಯರಿಗೆ ಸಹ ಈ ವಿಷಯ ಗೊತ್ತಿರಲಿಲ್ಲ. ಪಟ್ಟಮಹಿಷಿಯಾದ ಬಾಚಲದೇವಿಯ ಅಭಿಪ್ರಾಯತಿಳಿದು ಬೇಗನೆ ಯುವರಾಜ ಪಟ್ಟಬಂಧ ಮಹೋತ್ಸವವನ್ನು ನೆರವೇರಿಸಬೇಕೆಂದು ಆಹವಮಲ್ಲ ಸೋಮೇಶ್ವರನ ವಿಚಾರವಿತ್ತು. ಸಾಮ್ರಾಜ್ಯದ ರಾಜಧಾನಿಯಾದ ಕಲ್ಯಾಣವನ್ನು ಕೋಟೆ ಕೊತ್ತಳ ಗಳಿಂದ ಭದ್ರಪಡಿಸಿ, ಅದನ್ನು ಹೊಸ ಕಟ್ಟಡಗಳಿಂದ ಸಿಂಗರಿಸಿ ಅದರ ಸೊಬಗನ್ನು ಬೆಳೆಯಿಸಿದ ಸೋಮೇಶ್ವರನಿಗೆ ಯೌವರಾಜ್ಯಾಭಿಷೇಕ ಮಹಾ ಸಮಾರಂಭವೊಂದನ್ನು ಜರುಗಿಸಿಬಿಡಬೇಕೆಂಬ ಉತ್ಕಟೇಚ್ಛೆಯಿತ್ತು.

ಆಹವಮಲ್ಲ ಸೋಮೇಶ್ವರನು ಮಹಾಪ್ರತಾಪಶಾಲಿಯೂ ಅವನು ರಾಜ್ಯಾಭಿಷೇಕ ಮಾಡಿಸಿಕೊಂಡಾಗಿನಿಂದ ಕೇವಲ ಯುದ್ಧದಲ್ಲಿಯೆ ಇದು ವರೆಗೆ ತೊಡಗಿದ್ದನು. ಕರ್ನಾಟಕ ಸಾಮ್ರಾಜ್ಯವು ಬಹುಮಟ್ಟಿಗೆ ನಿರ್ವೈರ ವನ್ನಾಗಿ ಮಾಡಿ ಅದರ ವೈಭವವನ್ನು ಬೆಳೆಯಿಸಿದ್ದನು. ಚೇದಿರಾಜಕರ್ಣ ಪರಮಾರಭೋಜ ಮೊದಲಾದವರನ್ನು ಅನೇಕಸಲ ಪರಾಭವಗೊಳಿಸಿ ಕನ್ನಡಿಗರ ಕಲಿತನವನ್ನು ತೋರ್ಪಡಿಸಿದ್ದನು. ತನ್ನಂತೆಯೆ ಮುಂದಿನ ಸಮ್ರಾಟರು ಸಾಮ್ರಾಜ್ಯದ ವರ್ಚಸ್ಸನ್ನು ಕಾಯ್ದುಕೊಳ್ಳುವಂತಹರಾಗಿರ ಬೇಕೆಂಬ ಅವನ ಇಚ್ಛೆಯು ಅನುಚಿತವಾದದ್ದಿರಲಿಲ್ಲ. ಅಂತೆಯೇ ಜ್ಯೇಷ್ಠ ನಾದ ಸೋಮೇಶ್ವರನನ್ನು ಬಿಟ್ಟು, ಎರಡನೆಯವನಾದ ವಿಕ್ರಮಾದಿತ್ಯನಿಗೆ

ಯೌವರಾಜ್ಯಾಭಿಷೇಕ ಮಾಡಿಸಿ ಬಿಡಬೇಕೆಂದು ಅವನು ಯೋಚಿಸಿ ಕೊಂಡಿದ್ದನು.


ಆಹವಮಲ್ಲನು ಪಿರಿಯರಸಿಯಾದ ಬಾಚಲದೇವಿಯೊಡನೆ ಇದೇ ವಿಷಯದಲ್ಲಿ ಮಾತಾಡುತ್ತ ಕುಳಿತಿರುವಾಗ ಪ್ರತಿಹಾರಿಯೊಬ್ಬನು ಅಲ್ಲಿಗೆ ಬಂದು, ಬನವಾಸಿಯ ಮಹಾಮಂಡಲೇಶ್ವರ ಚಾವುಂಡರಾಯರಸರಿಂದ ದೂತನು ಬಂದಿರುವನೆಂದು ಬಿನ್ನವಿಸಿದನು. ಸೋಮೇಶ್ವರನು ದೂತ ನನ್ನು ಕರೆಯಿಸಿ ಬಂಧ ಕಾರಣವನ್ನು ವಿಚಾರಿಸಿದನು. ಕಂಚಿಯ ಅರಸ ನಾದ ಕೋಪರ ಕೇಸರಿವರ್ಮ ರಾಜೇಂದ್ರದೇವನು ಸಾಮ್ರಾಜ್ಯವನ್ನು ಹೊಕ್ಕು ಹಾವಳಿ ಮಾಡತೊಡಗಿರುವನೆಂದೂ, ಕನ್ನಡಿಗರ ದಂಡುಗಳು ಕೊಪ್ಪದಲ್ಲಿ ಕಲಿತನದಿಂದ ಕಾದಿ ನಿರ್ನಾಮವಾದವೆಂದೂ ಚಾವುಂಡ ರಾಯನು ತಿಳಿಸಿದ ಸಂದೇಶವನ್ನು ದೂತನು ಆಹವಮಲ್ಲನಿಗೆ ತಿಳಿಸಿದನು. ಕೂಡಲೇ ಅವನು ಚೋಳರಸನಮೇಲೆ ಅತ್ಯಂತ ಸಂತಪ್ತನಾದನು. ಆಗ ಅವನು ದೂತನನ್ನು ಕುರಿತು— "ರಾಜೇಂದ್ರ ದೇವನು ಚಾವುಂಡರಾಯ ನಿಗೆ ಮಾರಿದನೆ?"

"ಒಡೆಯರೆ, ಚಾವುಂಡರಾಯರ ಮಹಾಸೇನೆಯಿನ್ನೂ ರಾಜೇಂದ್ರ ದೇವನಿಗೆ ಎದುರಾಗಿಲ್ಲ. ಕೆಲವು ಸಣ್ಣ ಮಂಡಲೇಶ್ವರರು ಎದುರಾಗಿ, ಚೋಳರಸನ ರಭಸಕ್ಕೆ ತಡೆಯದೆ ಪಲಾಯನ ಮಾಡಿರುವರು. ಚಾವುಂಡ ರಾಯರಸರು ಕಂಚಿಯರಸನ ಮಹಾಸೇನೆಯನ್ನು ಸದೆಬಡೆಯಲು ದೊಡ್ಡ ಸೈನ್ಯವನ್ನು ಕಟ್ಟುತ್ತಿರುವರು. ಅವರು ನಿಮ್ಮ ಸಹಾಯವನ್ನು ಆತುರತೆ ಯಿಂದ ನಿರೀಕ್ಷಿಸುತ್ತಿರುವರು. ವಿಜಯ ಮದದಿಂದ ಉನ್ಮತ್ತನಾದ ಚೋಳರಸನು ನಡೆಯಿಸಿದ ಹಾವಳಿಯನ್ನು ವರ್ಣಿಸಲಳವಲ್ಲ. ಅವನು ಊರುಗಳನ್ನು ಸುಲಿಯುತ್ತಿರುವನು; ಕೊಳ್ಳೆಯಿಡುತ್ತಿರುವನು. ಬೆಳೆ ಗಳನ್ನು ಹಾಳುಮಾಡುತ್ತಿರುವನು; ಜನರನ್ನು ಕೊಲೆಗೊಳಿಸುತ್ತಿರುವನು. ಎಲ್ಲಿ ನೋಡಿದಲ್ಲಿ ಹಾಹಾಕಾರವೆದ್ದಿರುವದು ಜೀಯಾ!"

"ಒಳ್ಳೇದು!" ಸಂತಪ್ತ ಧ್ವನಿಯಿಂದ ಸೋಮೇಶ್ವರನು ನುಡಿದು ದೂತನನ್ನು ಕುರಿತು– "ಚಾವುಂಡರಾಯರಸರಿಗೆ ಇಷ್ಟೇ ಹೇಳು:– ಆಹವ

ಮಲ್ಲನು ವಾಯುವೇಗದಿಂದ ಸಸೈನ್ಯನಾಗಿ ಬಂದು ರಾಜೇಂದ್ರದೇವನನ್ನು ದಂಡಿಸುವನು. ಮೊದಲು ಚೋಳರಸನಮೇಲೆ ದಾಳಿಮಾಡುವದೇ ಮೊದಲನೆಯ ವಿಚಾರವಿರುವದೆಂಬದನ್ನೂ ನೀನು ಅವರಿಗೆ ತಿಳಿಸು. ಇನ್ನು ಮೇಲೆ ನಿರ್ಭಯರಾಗಿ ಸೈನ್ಯವನ್ನು ಸಜ್ಜುಗೊಳಿಸತಕ್ಕದ್ದೆಂಬದನ್ನು ಹೇಳಲು ಮರೆಯಬೇಡ."

ದೂತನು ಸಂದೇಶವನ್ನು ತಿಳಿದುಕೊಂಡು ಸಮ್ರಾಟನ ಅಪ್ಪಣೆ ಪಡೆದು ಕಲ್ಯಾಣದಿಂದ ಹೊರಟನು. ಅನಂತರ ಚೋಳರಸನ ಪಾರುಪತ್ಯದ ಬಗ್ಗೆ ವಿಚಾರಮಾಡಲು ಆಹವಮಲ್ಲ ಸೋಮೇಶ್ವರನು ಮಂತ್ರಣಾಗಾರಕ್ಕೆ ತೆರಳಿದನು.



# ೨ ವೀರಪ್ರತಿಜ್ಞೆ

▼

ಆಹವಮಲ್ಲ ಮೊದಲನೆಯ ಸೋಮೇಶ್ವರನು ತನ್ನ ಕಲ್ಯಾಣ ರಾಜಧಾನಿಯೊಳಗಿನ ನೂತನ ಮಂತ್ರಣಾಗಾರದಲ್ಲಿ ಕುಳಿತಿದ್ದನು. ಕೋಪರಕೇಶರಿವರ್ಮ ರಾಜೇಂದ್ರದೇವನು ಕೊಪ್ಪದ ಕಾಳಗದಲ್ಲಿ ಮಹಾವಿಜಯವನ್ನು ಸಂಪಾದಿಸಿ ಬನವಾಸಿ ನಾಡಿನಲ್ಲಿ ಬಹಳೇ ಹಾವಳಿಯನ್ನು ಮಾಡಿ, ವರದಾನದಿಯನ್ನು ದಾಟಿ ಕೊಲೆ ಸುಲಿಗೆಗಳನ್ನು ಅವ್ಯಾಹತವಾಗಿ ನಡೆಯಿಸಿದ ಸಂಗತಿಯು ಗುಪ್ತಚಾರರಿಂದ ತಿಳಿದು ಬಂದುದರಿಂದ ಅವನ ಶಾಸನವನ್ನು ಮಾಡುವಬಗ್ಗೆ ಅಂದು ಸೋಮೇಶ್ವರ ಮಹಾರಾಜನು ತನ್ನ ಮಂತ್ರಿ ಸೇನಾಪತಿಗಳೊಡನೆ ವಿಚಾರಮಾಡಬೇಕೆಂದಿದ್ದನು. ಚಾವುಂಡರಾಯರಸನು ಬನವಾಸಿಯಿಂದ ದೂತನನ್ನು ಕಳುಹಿಸಿ ರಾಜೇಂದ್ರದೇವನ ಹಾವಳಿಯ ಸಂಗತಿಯನ್ನು ತಿಳಿಸಿದ್ದನು. ಕಂಚಿಯರಸನ ಅತ್ಯಾಚಾರದಿಂದ ಸೋಮೇಶ್ವರನು ಅತ್ಯಂತ ಸಂತಪ್ತನಾಗಿದ್ದನು. ಮಂತ್ರಣಾಗಾರದಲ್ಲಿ ಮಹಾಪ್ರಧಾನ ರೂಪಭಟ್ಟಯ್ಯ, ಮಹಾಸೇನಾಪತಿ ಉದಯಾದಿತ್ಯ, ಯುವರಾಜ ಎರಡನೆಯ ಸೋಮೇಶ್ವರ, ಪ್ರತಾಪನಿಧಿ ಆರನೆಯ ವಿಕ್ರಮಾದಿತ್ಯ ಮೊದಲಾದವರು ಇದ್ದರು.

''ಮಹಾಪ್ರಧಾನರೆ, ಸೇನಾಪತಿಗಳೆ, ಕರ್ನಾಟಕ ಸಾಮ್ರಾಜ್ಯದಲ್ಲಿ ರಾಜೇಂದ್ರದೇವನು ಮಿತಿಮೀರಿ ಹಾವಳಿ ನಡೆಯಿಸಿರುವನೆಂದೂ, ಅವನು ಕೊಪ್ಪದ ಬಳಿಯಲ್ಲಿ ಚಾಲುಕ್ಯಮಂಡಲೇಶ್ವರರ ದಂಡುಗಳನ್ನು ಸೋಲಿಸಿ ಗ್ರಾಮಗಳನ್ನು ಸುಲಿಯುತ್ತಿರುವನೆಂದೂ, ಬನವಾಸಿಯ ಮಹಾಮಂಡಲೇಶ್ವರರಾದ ಚಾವುಂಡರಾಯರಸರಿಂದ ಸುದ್ದಿಬಂದಿದೆ. ನಾವು ಉನ್ಮತ್ತನಾದ ಕಂಚಿಯ ಅರಸನಿಗೆ ಚನ್ನಾಗಿ ಕೈತೋರಿಸಬೇಕು. ಕೊಪ್ಪದ ಕಾಳಗದಲ್ಲಿ ದೊರೆತ ವಿಜಯದಿಂದ ಅವನು ತಾನೊಬ್ಬ ಅಸಾಮಾನ್ಯವೀರನೆಂದು ಬಗೆದು ಮೈಮರೆತು ಮುಂದೆ ಬಂದಿರುವನು. ಕನ್ನಡಿಗರ ಸೇನಾಸಾಮರ್ಥ್ಯ

ವನ್ನು ಅವನಿಗೆ ತೋರಿಸಿ, ಮುಂದೆ ಎಂದೂ ಇಲ್ಲಿ ಹೆಜ್ಜೆಯಿಡದಹಾಗೆ ವ್ಯವಸ್ಥೆಮಾಡಬೇಕು.'' ಎಂದು ಸೋಮೇಶ್ವರನು ಗಂಭೀರತೆಯಿಂದ ಹೇಳಿದನು.

"ಚಾಲುಕ್ಯ ಸಾಮ್ರಾಟರೆ!" ಮಹಾಮಂತ್ರಿಯಾದ ರೂಪಭಟ್ಟಯ್ಯನು ಎದ್ದುನಿಂತು ವಿನಯದಿಂದ ಕೈಜೋಡಿಸಿ– ''ಕರ್ನಾಟಕ ಸಾಮ್ರಾಜ್ಯದ ಶಕ್ತಿ ಸಾಮರ್ಥ್ಯಗಳ ಕಲ್ಪನೆಯಿಲ್ಲದೆ ಅವನು ಸಾಮ್ರಾಜ್ಯದ ನಡುವೆ ಬಂದು ಕಾಳಗ ನಡೆಯಿಸಿರುವನು. ಹೀಗೆ ಮಾಡುವದರಿಂದ ತನ್ನ ಆತ್ಮನಾಶವಾದೀತೆಂಬದರ ಪರಿವೆ ಅವನಿಗಿಲ್ಲ. ಸದ್ಯದ ಕೊಂಚ ವಿಜಯವು ಸ್ಥಿರವಾದ ವಿಜಯವೆಂದು ಆವನ ಕಲ್ಪನೆಯಾಗಿದೆ. ವಸ್ತುಸ್ಥಿತಿಯು ಹೀಗಿದ್ದರೂ ರಾಜೇಂದ್ರದೇವನು ನಾವು ತಿಳಿದುಕೊಂಡಷ್ಟು ಸುಲಭವಿಲ್ಲೆಂಬದನ್ನು ನಾವು ಮರೆಯಕೂಡದು. ಅವನು ಸಂಗಡ ಪ್ರಚಂಡವಾದ ಪಡೆಯನ್ನು ತಂದಿರುವನು. ಈಗ ದೊರೆಯತೊಡಗಿರುವ ವಿಜಯದ ವಾರ್ತೆಯಿಂದ ಅವನ ಕಡೆಗೆ ಹೊಸ ಸೈನಿಕರು ನಿತ್ಯವೂ ಬಂದು ಕೂಡುತ್ತಿರುವರು. ಸುಲಿಗೆಯಲ್ಲಿ ದೊರೆತ ಸಂಪತ್ತಿನಲ್ಲಿಯ ಕೆಲಭಾಗವನ್ನು ಸೈನಿಕರಿಗೆ ಹಂಚುತ್ತಲಿದ್ದುದರಿಂದ ಅವನ ಸೈನಿಕರ ಸಂಖ್ಯೆಯು ಹೆಚ್ಚಾಗುತ್ತ ನಡೆದಂತೆ ಅವರ ಹುರುಪೂ ಹೆಚ್ಚಾಗತೊಡಗಿದೆ. ಈಗ ಅವನು ತುಂಗಭದ್ರೆವರದೆಗಳನ್ನು ದಾಟಿಬಂದು ಊರುಗಳನ್ನು ಸುಲಿಯುತ್ತಲಿರುವನು; ಕೊಳ್ಳೆಯಿಡುತ್ತಿರುವನು; ಬೆಳೆಗಳನ್ನು ನಾಶಮಾಡುತ್ತಿರುವನು. ಆ ಭಾಗದಲ್ಲಿ ಎಲ್ಲಿ ನೋಡಿದಲ್ಲಿ ಪ್ರಜೆಗಳ ಹಾಹಾಕಾರ ಧ್ವನಿಯು ಕೇಳತೊಡಗಿದೆ. ರಾಜೇಂದ್ರದೇವನ ಪ್ರಚಂಡವಾದ ಸೈನ್ಯವನ್ನು ಪರಾಭವಗೊಳಿಸುವದು ನಾವು ತಿಳಿದುಕೊಂಡಷ್ಟು ಸುಲಭವಾದದ್ದಲ್ಲವೆಂಬ ಮಾತನ್ನು ಮೊದಲು ಲಕ್ಷ್ಯದಲ್ಲಿರಿಸಿಕೊಳ್ಳಬೇಕು. ಎರಡು ಮೂರು ದಿನಗಳಿಂದ ಗುಪ್ತಚಾರರು ದಿನಾಲು ಅಲ್ಲಿಯ ವಾರ್ತೆಗಳನ್ನು ತರುತ್ತಿರುವರು. ಅವರ ವಾರ್ತೆಗಳು ಒಂದಕ್ಕಿಂತ ಒಂದು ಭೀಷಣವೂ, ಘನವೂ ಆಗಿರುವವು. ನಾವು ದಿನ ಕಳೆದಹಾಗೆ ಅವನ ಶಕ್ತಿಸಂಚಯವು ಬೆಳೆಯುತ್ತ ನಡೆಯುವದು. ನಾವು ಬೇಗನೇ ಆ ಮದಾಂಧ ಕಂಚಿಯರಸನಿಗೆ ಎದುರಾಗಿ ಅವನ ಬಲವನ್ನು ನಾಶಪಡಿಸಲಿಕ್ಕೆಬೇಕು. ದಿನಾವಧಿಯಾದರೆ ಅವನು ದುಸ್ಸಾಧ್ಯನಾಗಿ

ಸಾಮ್ರಾಜ್ಯವನ್ನೇ ಬುಡಮೇಲು ಮಾಡಬಹುದೆಂಬ ಲಕ್ಷಣಗಳು ತೋರ ಲಾರಂಭಿಸಿವೆ. ಪ್ರಭುಗಳೆ, ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಯೋಗ್ಯ ಸೇನಾ ನಾಯಕರ ಯೋಜನೆ ಮಾಡಬೇಕು. ಚೋಳರಸನ ಬಲಕ್ಕಿಂತ ಹೆಚ್ಚಿನ ಬಲವನ್ನು ಕಳುಹಿಸಬೇಕು. ಭಾವೀ ಯುದ್ಧದಲ್ಲಿ ಒಂದು ವೇಳೆ ನಾವು ಪರಾಭೂತರಾದರೆ ಕರ್ನಾಟಕ ಸಾಮ್ರಾಜ್ಯದ ಅಸ್ತಿತ್ವವೇ ನಷ್ಟವಾಗುವ ದೆಂದು ನಿಸ್ಸಂದೇಹವಾಗಿ ಹೇಳಬಹುದು."

ರೂಪಭಟ್ಟಯ್ಯನು ಹೀಗೆ ನುಡಿದಕೂಡಲೆ ಮಹಾಸೇನಾಪತಿ ಉದ ಯಾದಿತ್ಯನು ಗಾಂಭೀರ್ಯದಿಂದ- "ರೂಪಭಟ್ಟಯ್ಯ ಮಹಾಪ್ರಧಾನರು ಹೇಳುತ್ತಿರುವ ಮಾತುಗಳು ನಿಜವಾಗಿವೆ. ಆದರೆ ಕರ್ನಾಟಕ ಸಾಮ್ರಾ ಜ್ಯದ ಬಲಕ್ಕೆ ಆ ರಾಜೇಂದ್ರದೇವನು ಎಂದೂ ಈಡಾಗಲಾರನು. ಕೊಪ್ಪದ ಕಾಳಗದಲ್ಲಿ ನಮ್ಮ ಮಂಡಲೇಶ್ವರರ ಪಡೆಗಳು ತೀರಸಣ್ಣವಿದ್ದವು. ಅಂತೆಯೆ ಪರಾಭವ ಹೊಂದಿ ಪಲಾಯನ ಮಾಡಿದವು. ಚಾಲುಕ್ಯರ ಸೈನ್ಯವನ್ನು ಸೋಲಿಸಿದೆನೆಂಬ ಹೆಮ್ಮೆಯಿಂದ ರಾಜೇಂದ್ರದೇವನು ಮುಂದುವರಿದು ಹಾವಳಿಮಾಡತೊಡಗಿರುವನು. ಜೀಯಾ, ನಾನು ಸಸೈನ್ಯವಾಗಿ ಹೊರಟು ಆ ಉನ್ಮತ್ತ ರಾಜೇಂದ್ರದೇವನ ಬಲವನ್ನು ನಾಶಗೊಳಿಸಿ, ಅವನನ್ನು ಜೀವಂತ ಸೆರೆಹಿಡಿದು ತರುವೆನು. ತಾವು ಈ ವಿಷಯದಲ್ಲಿ ಎಷ್ಟೂ ಸಂದೇಹ ಪಡಕೂಡದು."

ಉದಯಾದಿತ್ಯನು ಹೀಗೆ ನುಡಿದಮೇಲೆ ಆಹವಮಲ್ಲನು ತನ್ನ ಹಿರಿಯುಮಗನಾದ ಸೋಮೇಶ್ವರನಿಗೆ- "ಯುವರಾಜ! ನೀನು ಉದಯಾ ದಿತ್ಯ ಮಹಾಸೇನಾಪತಿಗಳೊಡನೆ ದಂಡಯಾತ್ರೆಗೆ ಹೊರಟು ರಾಜೇಂದ್ರ ದೇವನನ್ನು ಪರಾಭವಗೊಳಿಸಿ ಬರುವೆಯಾ?"

ತಂದೆಯ ಮಾತುಗಳನ್ನು ಕೇಳಿ ಯುವರಾಜ ಸೋಮೇಶ್ವರನು ಮೂಗು ಮುರಿದನು. ಅವನು ಸ್ವಲ್ಪುವೇಳೆ ಸುಮ್ಮನೆ ಕುಳಿತನು. ಉತ್ತರ ಕೊಡದೆ ಅವನು ಕುಳಿತದ್ದು ನೋಡಿ ಮೊದಲನೆಯ ಸೋಮೇಶ್ವರನು— "ಯಾಕೆ? ಉತ್ತರ ದೊರೆಯಲಿಲ್ಲವಲ್ಲ? ದಂಡಯಾತ್ರೆಗೆ ಹೊರಡುವ ಇಚ್ಛೆಯಿಲ್ಲವೇನು?"

"ತಂದೆಯವರೆ!" ಯುವರಾಜ ಸೋಮೇಶ್ವರನು ಸ್ಪಷ್ಟವಾಣಿಯಿಂದ– "ಕರ್ನಾಟಕ ಸಾಮ್ರಾಜ್ಯದಲ್ಲಿ ಉದಯಾದಿತ್ಯರಂತಹ ಸೇನಾಪತಿಗಳೂ, ಬನವಾಸಿಯ ಚಾವುಂಡರಾಯರಸ, ಪಾನುಂಗಲ್ಲಿನ ಸೋಯಿಮರಸ, ಸಂತಲಿಗೆಯ ವೀರಶಾಂತರಸ, ವಿನಯಾದಿತ್ಯ ಹೊಯ್ಸಳ ಮೊದಮೊದಲಾದ ಮಂಡಲೇಶ್ವರ ಮಹಾಮಂಡಲೇಶ್ವರರೂ ಸಾಮ್ರಾಜ್ಯದಲ್ಲಿರುವಾಗ ಮಹಾರಾಜ ಯುವರಾಜರು ಯುದ್ಧದಂತಹ ಜೀವಮರಣಗಳ ಸಮಸ್ಯದಲ್ಲಿ ಶಿಲುಕುವದೆಂದರೆ ಅದೊಂದು ಅತ್ಯಂತ ಹೇಯವಾದ ಸಂಗತಿಯೆಂದು ನಾನು ತಿಳಿದಿರುವೆನು. ಅರಸರೇ ಇಂತಹ ಕಾರ್ಯಗಳಲ್ಲಿ ತತ್ಪರರಾದರೆ ಅವರ ಕೈಕೆಳಗೆ ಇಷ್ಟು ಜನ ಕರ್ಮಚಾರಿಗಳೇಕೆ ಬೇಕು?"

"ಶಾಬಾಸ್! ವೀರಕುಮಾರಾ, ನಿನ್ನ ಕ್ಷಾತ್ರಧರ್ಮದ ಗುಟ್ಟು ಅತ್ಯಂತ ಪ್ರಶಂಸನೀಯವಿದೆ! ಕೇವಲ ವಿಲಾಸೋಪಭೋಗವೊಂದು ಅರಸರ ಇತಿಕರ್ತವ್ಯವೆಂದಹಾಗಾಯಿತು. ನಿನ್ನಂತಹನಮೇಲೆ ರಾಜ್ಯಭಾರ ಹೊರಿಸಿದರೆ ಅದರ ಅವಸ್ಥೆ ಹೇಗಾದೀತೆಂಬದರ ಕಲ್ಪನೆ ನನಗಾಯಿತು."

"ಅಂದರೆ? ನಾನು ಯುವರಾಜನಿದ್ದರೂ ನನಗೆ ರಾಜ್ಯಾಧಿಕಾರ ಕೊಡಬಾರದೆಂದು ತಮ್ಮ ಮನೀಷೆಯಿದ್ದಹಾಗಾಯಿತು. ತಂದೆಯವರೆ, ನೀವು ವಿಕ್ರಮನಲ್ಲಿ ಅನುರಾಗವುಳ್ಳವರಾಗಿರುವಿರಿ; ನನ್ನ ವಿಷಯವಾಗಿ ನಿಮ್ಮಲ್ಲಿ ಎಂದಿನಿಂದಲೂ ವೈಷಮ್ಯಭಾವ ನೆಲೆಗೊಂಡಿದೆ. ಆದರೆ ಈ ವಿಷಮತೆಯು ಸಮಯಬಂದಾಗ ವಿಷರೂಪವಾಗಿ ಪರಿಣಮಿಸುವದೆಂಬ ಸಂಗತಿಯನ್ನು ಲಕ್ಷ್ಯದಲ್ಲಿರಿಸಿಕೊಳ್ಳಿರಿ."

"ಮೂರ್ಖಾ! ನನ್ನೊಡನೆ ಬುದ್ಧಿವಾದ ಮಾಡುವಿಯಾ? ನೀನು ಅಪಾತ್ರನಿರುವೆಯೆಂಬುದಕ್ಕೆ ನಿನ್ನ ವರ್ತನವೇ ಸಾಕ್ಷಿಯಾಗಿದೆ. ಕರ್ನಾಟಕ ಸಾಮ್ರಾಜ್ಯಕ್ಕೆ ವಿಕ್ರಮನು ಚಕ್ರವರ್ತಿಯಾಗುವನೆಂದು ಶ್ರೀ ಉಮಾಮಹೇಶ್ವರನು ಆಕಾಶವಾಣಿಯಿಂದ ಹೇಳಿರುವನು. ನೀನು ರಾಜ್ಯಾಧಿಕಾರದ ಆಕಾಂಕ್ಷೆಯನ್ನು ಬಿಡುವದೇ ಒಳಿತು.

"ಆಕಾಂಕ್ಷೆ ಬಿಡಬೇಕೇ? ಒಳ್ಳೇದು. ಹಿರಿಯರಾದ ನೀವೇ ಗೃಹ ಕಲಹದ ಬೇಗೆಯನ್ನು ಹಬ್ಬಿಸಿರಿ. ಪ್ರಸಂಗ ಬಂದಹಾಗೆ ನಡೆಯಲು ಸಾಮ್ರಾಜ್ಯದ ಭಾವೀ ಸಮ್ರಾಟನಾದ ನಾನು ಸಿದ್ಧನೇ ಇರುವೆನು!"

ತಂದೆಮಕ್ಕಳ ಈ ವಾದವು ಪ್ರಕೋಪಕ್ಕೆ ಹೋಗುವದೆಂದು ರೂಪ ಭಟ್ಟಯ್ಯನೂ, ಉದಯಾದಿತ್ಯನು ಬೆದರಿದನು. ಅವರು ಸಮ್ರಾಟನಿಗಾಗಲಿ, ಯುವರಾಜನಿಗಾಗಲಿ ಏನನ್ನೂ ಹೇಳುವ ಧೈರ್ಯ ಮಾಡದೆ ಸುಮ್ಮನಿದ್ದರು. ಆಗ ವಿಕ್ರಮಾದಿತ್ಯನು ವಿನಯದಿಂದ ಕೈಜೋಡಿಸಿ ತಂದೆಯನ್ನು ಕುರಿತು– "ಇದು ಅಸಮಯ. ಗೃಹಸಂಬಂಧವಾದ ಈ ವಾದವನ್ನು ಮುಂದೆ ಹಾಕಬೇಕು. ವೈರಿಯು ಸಾಮ್ರಾಜ್ಯವನ್ನು ಸೂರೆಗೊಳ್ಳತೊಡಗಿರುವ ವೇಳೆಯಲ್ಲಿ ಇಂತಹ ವಾದಗಳನ್ನು ಉಪಸ್ಥಿತಗೊಳಿಸುವದು ತೀರ ಅನುಚಿತವು. ಹಿರಿಯರಾದ ನಿಮ್ಮ ಮನಸ್ಸಿನ ವಿರುದ್ಧವಾಗಿ ವರ್ತಿಸಿದ ಅಣ್ಣಂದಿರನ್ನು ಕ್ಷಮಿಸಿರಿ. ಸಾಮ್ರಾಜ್ಯಾಧಿಕಾರವು ಅವರಿಗೆ ದೊರೆತರೆ ನನಗೆ ದೊರೆತಹಾಗೆ. ಅವರು ಸಾಮ್ರಾಜ್ಯ ವೈಭವಗಳನ್ನನುಭವಿಸುತ್ತ ಕರ್ನಾಟಕ ಸಾಮ್ರಾಜ್ಯ ಸಿಂಹಾಸನವನ್ನು ವಿರಾಜಿಸುತ್ತಿರಲಿ. ನಾನು ಸಾಮ್ರಾಜ್ಯ ಸೇವೆಯಲ್ಲಿ ದೇಹ ಸವೆಯಿಸಿ ಅದನ್ನು ಪ್ರಭಾವಶಾಲಿಯನ್ನಾಗಿ ಮಾಡಲು ಆಮರಣ ಸಾಹಸ ಮಾಡುವೆನು. ಯುವರಾಜನು ರಾಜಧಾನಿಯ ರಕ್ಷಣೆಗಾಗಿ ಇಲ್ಲಿಯೇ ಇರಲಿ. ದಂಡಯಾತ್ರೆಗೆ ಅವರಿಗೆ ಪ್ರತಿಯಾಗಿ ನಾನು ಹೊರಡುವೆನು."

ವಿಕ್ರಮಾದಿತ್ಯನು ಹೀಗೆ ಹೇಳುತ್ತಿರುವಾಗ ಸೇವಕನೊಬ್ಬನು ಕೈಜೋಡಿಸಿ ಮೊದಲನೆಯ ಸೋಮೇಶ್ವರನನ್ನು ಕುರಿತು– "ಮಹಾಪ್ರಭುಗಳೆ, ಪಾನುಂಗಲ್ಲಿನ ಸೋಯಿಮರಸನ ಕಡೆಯಿಂದ ದೂತನೊಬ್ಬನು ಬಂದಿರುವನು."

ಸೋಮೇಶ್ವರನು ದೂತನನ್ನು ಒಳಗೆ ಬಿಡಲು ದ್ವಾರಪಾಲಕರಿಗೆ ತನ್ನ ಆಜ್ಞೆಯನ್ನು ತಿಳಿಸಲು ಆ ಸೇವಕನಿಗೆ ಆಜ್ಞಾಪಿಸಿದನು. ಸ್ವಲ್ಪ ವೇಳೆಯಲ್ಲಿ ಸೋಯಿಮರಸನ ದೂತನು ಅಲ್ಲಿಗೆ ಬಂದು ಅರಸನಿಗೆ ಅಭಿವಂದನೆ ಮಾಡಿ– "ಜೀಯಾ, ಕಂಚಿಯ ಅರಸನ ಹಾವಳಿ ಮಿತಿಮೀರಿದೆ. ನಾಗ

ರಿಕರ ಸಂಪತ್ತು ಸೂರೆಗೊಳ್ಳುತ್ತಿದೆ; ಬೆಳೆ ಹಾಳಾಗುತ್ತಲಿವೆ. ಬಸದಿಗಳು ನಾಶವಾಗುತ್ತಲಿವೆ. ಅವನು ವಾಯುವೇಗದಿಂದ ಊರುಗಳನ್ನೂ, ಪಟ್ಟಣ ಗಳನ್ನೂ ಸುಲಿಯುತ್ತ ಈಗಾಗಲೆ ಅಣ್ಣೀಗೇರಿಯ ನಾಡನ್ನು ಸಮೀಪಿಸಿರು ವನು. ಕಂಚಿಯರಸನ ಸೈನ್ಯಕ್ಕೆ ಚಾವುಂಡರಾಯರಸರ ಸೈನ್ಯವು ಈಡಾಗ ಲಿಲ್ಲ; ನಮ್ಮ ಅರಸರ ಸೈನ್ಯವು ದಿಕ್ಕಾಪಾಲಾಯಿತು. ಎಲ್ಲ ಮಂಡಲೇಶ್ವ ರರೂ ತಮ್ಮ ಬರುವಿಕೆಯನ್ನು ಚಾತಕದಂತೆ ಎದುರು ನೋಡುತ್ತಲಿರುವರು.

ರಾಜೇಂದ್ರದೇವನು ಊರುಗಳನ್ನು ಸುಲಿಯುತ್ತಿದ್ದುದಲ್ಲದೆ, ಬಸದಿ ಗಳನ್ನು ನಾಶಮಾಡಿ ಧರ್ಮದಮೇಲೆಯೂ ದಾಳಿತಂದನೆಂದು ಆಹವ ಮಲ್ಲನು ಅತಿರೇಕವಾಗಿ ಉರವಣಿಸಿದನು. ಆಗ ಅವನು ಸಂತಾಪದ ಭರ ದಲ್ಲಿ– "ರೂಪಭಟ್ಟಯ್ಯನವರೆ, ರಾಜೇಂದ್ರದೇವನ ಪುಂಡಾಟಿಕೆಯನ್ನು ಕೇಳಿದಿರಾ ? ಧರ್ಮದಮೇಲೆ ಕೂಡ ದಾಳಿಮಾಡಿದಂತಹ ಈ ನರಪಶು ವಿಗೆ ಯಾವ ಶಾಸನ ವಿಧಿಸಬೇಕು ?"

"ಮಹಾರಾಜರೆ! ಧರ್ಮದಮೇಲೆ ದಾಳಿಮಾಡುವಂತಹನಿಗೆ ದೇಹಾಂತ ಪ್ರಾಯಶ್ಚಿತ್ತವೇ ಶಾಸನವು!" ಎಂದು ರೂಪಭಟ್ಟಯ್ಯನು ಸಂತಾಪದಿಂದ ಉದ್ಗಾರ ತೆಗೆದನು.

ರೂಪಭಟ್ಟಯ್ಯನು ಹೀಗೆ ಹೇಳಿದಕೂಡಲೆ ಸೋಮೇಶ್ವರ ಸಾರ್ವ ಭೌಮನು ಕ್ರೋಧವಾಣಿಯಿಂದ– "ಉನ್ಮತ್ತನಾದ ರಾಜೇಂದ್ರದೇವನ ತಲೆಬುರುಡಿಯನ್ನು ಉರುಳಿಸದೆ ನಾನು ರಾಜಧಾನಿಯನ್ನು ಪ್ರವೇಶ ಮಾಡುವದಿಲ್ಲ. ಇದೇ ನನ್ನ ಪ್ರತಿಜ್ಞೆಯು!"

ಸಾರ್ವಭೌಮನ ಈ ವೀರಪ್ರತಿಜ್ಞೆಯನ್ನು ಕೇಳಿ ಎಲ್ಲರೂ ಆವೇಶ ಗೊಂಡರು. 'ಹೊಡೆಯುವೆವು; ಇಲ್ಲವೇ ಮಡಿಯುವೆವು.' ಎಂದು ಸೇನಾ ನಾಯಕರೂ, ಉಪಸೇನಾನಾಯಕರೂ ಗರ್ಜಿಸತೊಡಗಿದರು. ತಂದೆಯ ಈ ಪ್ರತಿಜ್ಞೆಯನ್ನು ಕೇಳಿ ವಿಕ್ರಮಾದಿತ್ಯನು ವಿಚಾರಾಬ್ಧಿಯಲ್ಲಿ ಮುಳುಗಿ ದನು. ಕಂಚಿಯ ರಾಜೇಂದ್ರದೇವನು ಕರ್ನಾಟಕ ಸಾಮ್ರಾಜ್ಯ ಶಕ್ತಿಗೆ ಈಡಾಗಲಾರನೆಂಬ ಸಂಗತಿ ಅವನಿಗೆ ಗೊತ್ತಿತ್ತು. ಆದರೆ ಅವನು ಸೋತು ಒಡಂಬಡಿಕೆಗಾಗಿ ಬಂದರೆ ಅದಕ್ಕೆ ತಂದೆಯ ಪ್ರತಿಜ್ಞೆಯಿಂದ ಅವಕಾಶ

ದೊರೆಯದಂತಾಯಿತೆಂಬದೇ ಅವನ ಯೋಚನೆಗೆ ಕಾರಣವಾಗಿತ್ತು. ಇನ್ನೊಂದು ವಿಷಯವೂ ಅವನನ್ನು ಬಾಧಿಸತೊಡಗಿತು. ರಾಜೇಂದ್ರ ದೇವನ ಸೈನ್ಯವು ಮೊದಲೇ ಪ್ರಚಂಡವಾದದ್ದಿದ್ದು, ಸುಲಿಗೆಯ ಸವಿಹಚ್ಚಿ ಅದನ್ನು ಅತಿರೇಕವಾಗಿ ಬಲಿಸಿರುವನೆಂಬ ಸಂಗತಿಯು ಅವನಿಗೆ ಗುಪ್ತ ಚಾರರಿಂದ ತಿಳಿದಿತ್ತು. ಒಮ್ಮೆ ಯುದ್ಧವಾರಂಭವಾದಮೇಲೆ ಹೊಡೆಯ ಬೇಕು, ಇಲ್ಲವೆ ಮಡಿಯಬೇಕು ಇವೆರಡರ ಹೊರತು ಅನ್ಯಮಾರ್ಗವು ತಂದೆಯ ಪ್ರತಿಜ್ಞೆಯ ಮೂಲಕ ಉಳಿಯದಹಾಗಾಯಿತೆಂಬದು ಅವನ ಮನಸ್ಸಿನ ಗೊಂದಲದ ಮತ್ತೊಂದು ಕಾರಣವಾಗಿತ್ತು. ಸದ್ಯದ ಪ್ರಸಂಗ ದಲ್ಲಿ ಇಂತಹ ಕಾರಣಗಳನ್ನು ಪ್ರಕಟಿಸುವದೆಂದರೆ ಅದೊಂದು ಹೇಡಿತನದ ಲಕ್ಷಣವೆನಿಸಬಹುದೆಂದೂ, ಕರ್ಮಚಾರಿಗಳ ಹುರುಪು ಕಡಿಮೆಯಾಗ ಬಹುದೆಂದೂ ಬಗೆದು, ಅವನು ತನ್ನ ಯಾವ ವಿಕಾರವನ್ನು ಹೊರಗೆ ಹಾಕದೆ ಗಾಂಭೀರ್ಯದಿಂದ– "ತಂದೆಯವರ ಪ್ರತಿಜ್ಞೆ ವಿರೋಚಿತ ಪ್ರತಿ ಜ್ಞೆಯು! ಅವರ ಪ್ರತಿಜ್ಞೆಯನ್ನು ಈಡೇರಿಸಲು ನಾನು ಪ್ರಾಣಪಣದಿಂದ ಹೋರಾಡುವೆನು. ಪ್ರಕೃತ ಸಮರಾಂಗಣದಲ್ಲಿ ರಾಜೇಂದ್ರದೇವನ ಇಲ್ಲವೇ ನಮ್ಮ ತಲೆಬುರುಡೆಗಳು ಉರುಳಲೇಬೇಕು."

"ಹೀಗೆ ತಲೆಬುರುಡೆಗಳನ್ನುರುಳಿಸಿಕೊಳ್ಳಲಿಕ್ಕೆ ಏನು ದೈವ ಕಾಡು ತ್ತಿರಬಹುದು! ಸಾಮ್ರಾಜ್ಯದಲ್ಲಿ ಸೈನಿಕರಿಲ್ಲವೆ? ಸೈನ್ಯವಿಲ್ಲವೆ? ಅವರನ್ನು ಯುದ್ಧಕ್ಕೆ ಕಳಿಸಿದರೆ ಸಾಗುವದಿಲ್ಲವೆ?" ಎಂದು ಇಮ್ಮಡಿ ಸೋಮೇಶ್ವರನು ತನ್ನ ಬುದ್ಧಿಯನ್ನು ಪ್ರದರ್ಶಿಸಿದನು.

"ಕುಮಾರ! ಬಾಯಿಮುಚ್ಚು. ಇಂತಹ ಸಂದರ್ಭದಲ್ಲಿ ನಿನ್ನ ಸಲಹೆ ಅನಾವಶ್ಯಕ! ನೀನು ಆಸ್ಥಾನದಲ್ಲಿ ಬಂದದ್ದೇ ತಪ್ಪು. ಹೋಗು, ಅಂತಃ ಪುರಕ್ಕೆ ಹೋಗಿ ನಿಶ್ಚಿಂತೆಯಿಂದ ವಿಶ್ರಾಂತಿಪಡೆ." ಎಂದು ಆಹವಮಲ್ಲನು ಸಂತಾಪದಿಂದ ವ್ಯಂಗೋಕ್ತಿಗಳನ್ನಾಡಿದನು.

"ತಂದೆಯವರೆ, ಇದೋ ಹೊರಟೆನು. ರಾಜಮನೆತನದಲ್ಲಿ ಹುಟ್ಟು ವದು ಸಾಮಾನ್ಯವಾದ ಸಂಗತಿಯಲ್ಲ. ಇಂತಹ ಅಮೌಲ್ಯವಾದ ಜೀವನ ವನ್ನು ಕ್ಷಣಭಂಗುರವಾಗಿ ಮಾಡಿಬಿಡುವದು ಎಲ್ಲಿಯ ಬುದ್ಧಿ ಚಾತುರ್ಯ?

ಲ್ಲಿಯ ನ್ಯಾಯ ? " ಎಂದು ಇಮ್ಮಡಿ ಸೋಮೇಶ್ವರನು ತಂದೆಗೆ ಹೇಳಿ ಲ್ಲಿಂದ ದ್ರುತಗತಿಯಲ್ಲಿ ಅಂತಃಪುರದ ದಾರೀ ಹಿಡಿದನು.

ಇಮ್ಮಡಿ ಸೋಮೇಶ್ವರನ ಈ ಅಸಹ್ಯಕರವಾದ ಭಾಷಣದಿಂದ ಹೆವಮಲ್ಲನಿಗೆ ವಿಷಾದವಾಯಿತು. ಆದರೆ ಈ ವಿಷಯುವನ್ನು ಬೆಳೆಯಿ ುವ ಸಂದರ್ಭವು ಆಗ ಇರದ್ದರಿಂದ ಅವನು ಇಮ್ಮಡಿ ಸೋಮೇಶ್ವರನನ್ನು ೋಗಗೊಟ್ಟನು. ತರುವಾಯ ಅವನು ಪಾನುಂಗಲ್ಲಿನ ದೂತನನ್ನು ುರಿತು- "ಬನವಾಸಿಯ ಚಾವುಂಡರಾಯರಸರಿಂದ ದೂತನು ಬಂದಿದ್ದನು. ೀಗನೇ ದಂಡಯಾತ್ರೆಗೆ ಹೊರಡುವೆನೆಂದು ನಾನು ಅವರಿಗೆ ಸಂದೇಶ ಳುಹಿಸಿರುವೆನು. ಈಗ ರಾಜೇಂದ್ರ ದೇವನು ಅಣ್ಣೀಗೇರಿಯ ನಾಡಿನಲ್ಲಿ ೀಡು ಬಿಟ್ಟಿರುವದರಿಂದ ನಾನು ಸಸೈನ್ಯವಾಗಿ ಅಲ್ಲಿಗೆ ಬರುವೆನು. ಈ ಂಗತಿಯನ್ನು ನೀನು ನಿಮ್ಮ ಒಡೆಯನಿಗೆ ಅರುಹು. ತಮ್ಮ ಸೈನ್ಯವನ್ನು ಜ್ಜುಗೊಳಿಸಿ ಬೇಗನೆ ನಮ್ಮ ದಂಡನ್ನು ಕೂಡಿಕೊಳ್ಳಲು ತಿಳಿಸು. ನವಾಸಿಯ ಚಾವುಂಡರಾಯರಸರೂ ಮಿಕ್ಕ ಮಂಡಲೇಶ್ವರರೂ ಅಲ್ಲಿಗೆ ರುವರು. ಅಣ್ಣೀಗೇರಿಯ ಕಾಳಗವು ಕರ್ನಾಟಕದ ಇತಿಹಾಸದಲ್ಲಿ ಚಿರ ್ಮರಣೀಯವಾಗಿ ಉಳಿಯುವಂತಹದಿರುವದರಿಂದ ಎಲ್ಲ ಮಂಡಲೇಶ್ವರರೂ ಮ್ಮ ಶಕ್ತಿ ಸರ್ವಸ್ವಗಳನ್ನು ವೆಚ್ಚಮಾಡಬೇಕೆಂಬ ನನ್ನ ಇಚ್ಛೆಯನ್ನು ೀನು ಸೋಯಮರಸರಿಗೆ ತಿಳಿಸು."

ದೂತನು ಸಾರ್ವಭೌಮನ ಸಿರೋಪ ಹೊಂದಿ ಅಲ್ಲಿಂದ ತೆರಳಿದನು. ರುವಾಯ ಸೋಮೇಶ್ವರನು ದಂಡನಾಯಕ ಉದಯಾದಿತ್ಯನನ್ನು ಕುರಿತು ಉದಯಾದಿತ್ಯರೆ, ನಾಳೆ ಬ್ರಾಹ್ಮಮುಹೂರ್ತದಲ್ಲಿಯೇ ಇಲ್ಲಿಂದ ಪಯಣ ಾಡಬೇಕು. ನೀವು ಉಪಸೇನಾಪತಿಗಳಿಗೂ ಸೈನ್ಯಕ್ಕೂ ನನ್ನ ಆಜ್ಞೆ ಓನ್ನರುಹಿರಿ. ಸಾಮ್ರಾಜ್ಯ ಸೈನ್ಯದೊಡನೆ ಕುಮಾರ ವಿಕ್ರಮಾದಿತ್ಯನೂ ೀವೂ ಹೊರಡಿರಿ. ಮಹಾಪ್ರಧಾನರು ರಾಜಧಾನಿಯ ರಕ್ಷಣೆಗೆ ಉಳಿಯಲಿ. ಣಾಂಗಣದೊಳಗಿನ ಕೊರತೆಗಳನ್ನು ಅವರು ರಾಜಧಾನಿಯಿಂದ ಪೂರೈ ುವರು."

ತರುವಾಯ ಕರಣಿಕರಿಂದ ಎಲ್ಲ ಮಂಡಲೇಶ್ವರರಿಗೆ ಆಜ್ಞಾಪತ್ರಗಳು ಬರೆಯಲ್ಪಟ್ಟವು. ಅಣ್ಣೀಗೇರಿಯ ಸಾಮ್ರಾಜ್ಯ ಯುದ್ಧಕ್ಕಾಗಿ ಎಲ್ಲರೂ ತಮ್ಮ ಬಲದೊಡನೆ ಆಗಮಿಸಬೇಕೆಂಬಾಶಯದ ಆಜ್ಞೆಯು ಎಲ್ಲ ಮಾಂಡ ಲಿಕ ಅರಸರಿಗೂ ಕಳುಹಲ್ಪಟ್ಟವು.

ಅಣ್ಣೀಗೇರಿಯ ಸಾಮ್ರಾಜ್ಯ ಕಾಳಗಕ್ಕಾಗಿ ಎಲ್ಲ ಸೇನಾಪತಿಗಳೂ, ಉಪಸೇನಾಪತಿಗಳೂ, ಸೈನಿಕರೂ ಹುರುಪುಗೊಂಡು 'ನಾ ಮುಂದೆ, ನೀ ಮುಂದೆ' ಎಂದೆನ್ನತೊಡಗಿದರು. ಕನ್ನಡ ಕಲಿಗಳ ಈ ವೀರಾವೇಶವನ್ನು ನೋಡಿ ಆಹವಮಲ್ಲನೂ, ವಿಕ್ರಮಾದಿತ್ಯನೂ ಸಂಭ್ರಮಗೊಂಡರು. ಸಭೆ ಯೊಳಗಿನ ಸೇನಾನಿಗಳ ಆವೇಶವನ್ನು ಕಂಡು ತಮಗೆ ಮಹಾ ವಿಜಯವು ಪ್ರಾಪ್ತವಾಗುವದು ಖಂಡಿತವೆಂದು ಅವರು ಹರ್ಷನಿರ್ಭರರಾದರು. ಅಣ್ಣೀ ಗೇರಿಯ ಮಹಾಯುದ್ಧದ ಬಗ್ಗೆ ಸ್ವಲ್ಪವೇಳೆ ಓಲಗದಲ್ಲಿ ಮಾತು ನಡೆದವು. ಅನಂತರ ಸಭೆಯು ವಿಸರ್ಜಿಸಲ್ಪಟ್ಟಿತು. ಎಲ್ಲರೂ ತಮ್ಮ ತಮ್ಮ ನಿವಾಸ ಗಳಿಗೆ ತೆರಳಿದರು.

ಓಲಗದಲ್ಲಿ ತನ್ನ ಅಣ್ಣನಿಂದ ಜರುಗಿದ ಹೇಡಿ ನಡುವಳಿಕೆಯ ಬಗ್ಗೆ ವಿಕ್ರಮಾದಿತ್ಯನ ಮನಸ್ಸು ಅಸಮಾಧಾನಗೊಂಡಿತ್ತು. ಇಂತಹ ವೃತ್ತಿಗೆ ಅವನು ಸೇರುತ್ತಿದ್ದಿಲ್ಲವಾದರೂ, ಅಣ್ಣನೂ ಕರ್ನಾಟಕ ಭಾವೀ ಸಮ್ರಾ ಟನೂ ಆದುದರಿಂದ ಅವನನ್ನು ದಾರಿಗೆ ತರುವದಕ್ಕಾಗಿ ಅಣ್ಣನಿಗೆ ಮೇಲಿಂದಮೇಲೆ ತಿಳಿಸಿಹೇಳುತ್ತಿದ್ದನು. ಆದರೆ ಅವನ ಮಾತುಗಳಿಂದ ಇಮ್ಮಡಿ ಸೋಮೇಶ್ವರನ ಮನಸ್ಸಿನಮೇಲೆ ಏನೂ ಪರಿಣಾಮವಾಗುತ್ತಿರ ಲಿಲ್ಲ. ಅಂದಿನ ಓಲಗದೊಳಗಿನ ಘಟನೆಯು ವಿಕ್ರಮಾದಿತ್ಯನಿಗೆ ಬಹಳೇ ಅಸಹ್ಯವೆನಿಸಿದ್ದರಿಂದ ಅಣ್ಣನ ಬುದ್ಧಿಗಾಗಿ ಮಿಡುಕುತ್ತ ತನ್ನ ಮಂದಿರಕ್ಕೆ ತೆರಳಿದನು.

# ೩ ವೀರಪತ್ನಿಯ ನಿರೋಪ

"ನಾಥ!"

"ಮತ್ತೇನು ದೇವಿ?"

"ಕಲ್ಯಾಣ ರಾಜಧಾನಿಯು ಇಂದು ಉತ್ಸಾಹದಿಂದ ತುಂಬಿಕೊಂಡಿದೆ. ಪ್ರತಿಯೊಬ್ಬ ಸೈನಿಕನೂ, ಪ್ರತಿಯೊಬ್ಬ ಸೇನಾಪತಿಯೂ ಸಂಭ್ರಮದಿಂದ ಪಯಣಸಿದ್ಧತೆ ಸಾಗಿಸಿದ್ದಾರೆ. ಇಂತಹ ಹುರುಪನ್ನು ರಾಜಧಾನಿಯಲ್ಲಿ ಕಂಡದ್ದು ನಾನು ಇದೇ ಮೊದಲನೆಯ ಬಾರಿ."

"ನಿಜವು ಪ್ರಿಯೆ!"

"ಯುವರಾಜ ಸೋಮೇಶ್ವರ ಮಹಾರಾಜರು ಇನ್ನು ಮೇಲೆ ತಾವೇ ಸಾಮ್ರಾಜ್ಯದ ಸಮ್ರಾಟರೆಂದು ಅಂತಃಪುರದಲ್ಲಿ ಗೌರವಪೂರ್ಣವಾಗಿ ಭಾಷಣ ಮಾಡುತ್ತಿದ್ದರಂತೆ. ಅವರ ಆನಂದ ಶರಧಿಯು ಮೇರೆದಪ್ಪಿ ಉಕ್ಕೇರುತ್ತಿರುವಂತೆ ಭಾಸವಾಗುವದು."

"ನಿಜ."

"ರಾಜಧಾನಿಯಲ್ಲಿ ಎಲ್ಲರೂ ಹೀಗೆ ಒಂದಿಲ್ಲೊಂದು ವಿಧವಾಗಿ ಉತ್ಸಾಹಗೊಂಡಿರುವಾಗ ನಿಮ್ಮ ವೃತ್ತಿಯು ಔದಾಸೀನ್ಯ ತಳೆದಂತೆ ಭಾಸವಾಗುವದು."

"ನಿಜವು, ನಿಜವು."

"ದಂಡಯಾತ್ರೆಗೆ ತೆರಳುವಾಗ ಇಂತಹ ಉದಾಸೀನತೆಯು ಅನುಚಿತವೆಂದು ನನ್ನ ಅಲ್ಪಮತಿಗೆ ತೋರುವದು. ನನ್ನ ಮಾತನ್ನು ತಾವು ಅಲ್ಲಗಳೆಯಲಾರಿರಿ."

"ನಿಜವು."

"ಕರ್ತೃತ್ವಶೂನ್ಯರಾದ ಸೋಮೇಶ್ವರರ ಉತ್ಸಾಹವು ಎಷ್ಟು ಅಸಮಂಜಸವೋ ಕರ್ತೃತ್ವಶಾಲಿಗಳಾದ ನಿಮ್ಮ ನಿರುತ್ಸಾಹವು ಅಷ್ಟೇ ಅಸ

ಮಂಜಸವೆಂದು ಹೇಳಿದರೆ ಈ ಮಾತಿಗೆ ನಿಮ್ಮಿಂದ ಉತ್ತರ ದೊರೆಯಲಾರದು."

"ನಿಜ."

"ನನ್ನ ಮಾತುಗಳಿಗೆ ಉತ್ತರವು ಇಷ್ಟು ಸೂತ್ರಬದ್ಧವಾಗಿಯೆ ದೊರೆಯುತಕ್ಕದ್ದೆ?

"ನಿಜ."

"ನಿಮ್ಮ ಇಂತಹ ಗುಟ್ಟೇ ನೈಜವಾದುದು; ನನ್ನ ಮಾತುಗಳೆಲ್ಲವೂ ನೈಜವಾದವುಗಳಲ್ಲ. ಪ್ರಿಯರೆ, ಇಂತಹ ಹೊಸ ಪಾಠವನ್ನು ನೀವು ಇಂದೇ ಕಲಿತು ಬಂದಹಾಗೆ ಭಾಸವಾಗುವದು."

"ನಿಜ."

"ಹಾಗಾದರೆ ನಾನು ಮಹಾಯುದ್ಧದ ಪ್ರಯಾಣ ವೇಳೆಯಲ್ಲಿ ನಿಮಗೆ ಚಿಲಕತ್ತು ತೊಡಿಸುವದಿಲ್ಲ ನೋಡಿರಿ. ಆರತಿಯನ್ನು ಸಹ ಮಾಡಲಿಕ್ಕಿಲ್ಲ!"

ಕುಮಾರ ವಿಕ್ರಮಾದಿತ್ಯನ ಪತ್ನಿಯಾದ ಸಾವಳದೇವಿಯು ಹೀಗೆ ನುಡಿದು ಸಿಟ್ಟಿನ ಅಭಿನಯಮಾಡುತ್ತ ಪಂಚದಿಂದೆದ್ದು ಅಲ್ಲಿಯೆ ಅಲೆದಾಡುತ್ತಿದ್ದ ಅರಗಿಳಿಯ ಪಂಜರದಬಳಿಗೆ ಬಂದು— "ಶುಕರಾಜಾ! ನಿನಗೆ ಆರ್ಯಪುತ್ರರಿಗಿಂತ ಹೆಚ್ಚಿನ ಮಾತುಗಳು ಬರುತ್ತಿರುವದರಿಂದ ನಾನು ನಿನ್ನೊಡನೆ ಮಾತಾಡುತ್ತ ವೇಳೆಗಳೆಯುವೆನು. ಕರ್ನಾಟಕ ಸಾಮ್ರಾಜ್ಯದ ಸಮ್ರಾಟರಾಗಲು ಯೋಗ್ಯರಾರು ಶುಕರಾಜಾ?"

"ಕುಮಾರ ವಿಕ್ರಮಾದಿತ್ಯ, ಕುಮಾರ ವಿಕ್ರಮಾದಿತ್ಯ!" ಶುಕವು ಗಂಭೀರತೆಯಿಂದ ಉತ್ತರಿಸಿತು.

"ನೋಡಿದಿರಾ; ಮೂಕಪಕ್ಷಿಗಳು ಸಹ ಆರ್ಯಪುತ್ರರಂತಹ ರಾಜಮಹಾರಾಜರಿಗಿಂತ ಹೆಚ್ಚು ಭಾಷೆಯಾಡುವಂತಹವೂ, ಹೆಚ್ಚು ಬುದ್ಧಿವಂತಿಕೆಯವೂ ಇರುತ್ತವೆ!"

ಸಾವಳದೇವಿಯ ಮಾತುಗಳನ್ನು ಕೇಳಿ ವಿಕ್ರಮಾದಿತ್ಯನ ಔದಾಸೀನ್ಯಭಾವದಲ್ಲಿಯೆ ಆನಂದಾಂಕುರವುಂಟಾಯಿತು. ಅವನು ಕುಳಿತ

ಮಂಚದಿಂದೆದ್ದು ಪತ್ನಿಯ ಬಳಿಗೆ ಹೋಗಿ ಆವಳ ಸ್ಕಂದ ಪ್ರದೇಶದಲ್ಲಿ ಕೈ ಹಾಕಿ– "ಪ್ರಿಯೆ, ಎಂತಹ ಔದಾಸೀನ್ಯದಲ್ಲಿ ಸಹ ಆನಂದವನ್ನು ನಿರ್ಮಾಣ ಮಾಡುವ ನಿನ್ನ ಕಲೆಯು ವರ್ಣನೀಯವಿರುವದು."

"ನಿಜವು."

"ಯಾವುದೊಂದು ಸಮಸ್ಯದಲ್ಲಿ ತೊಡಗಿ ಮನಸ್ಸು ದಿಙ್ಮೂಢ ವಾಗಿರುವಾಗ ಸಮಯೋಚಿತ ಮಾರ್ಗವನ್ನು ತೋರಿಸುವ ನಿನ್ನ ಬುದ್ಧಿಯು ಅಲೌಕಿಕವಿರುವದು."

"ನಿಜವು, ನಿಜವು!"

"ರಾಜಕಾರಣದಲ್ಲಿ ಸ್ತ್ರೀಯರ ಬುದ್ಧಿಯು ನಡೆಯುವದಿಲ್ಲವೆಂದು ಕೆಲವರ ಅಭಿಪ್ರಾಯವು. ಆದರೆ ನೀನು ಮಾತ್ರ ಅವರ ಅಭಿಪ್ರಾಯವನ್ನು ಪೂರ್ಣವಾಗಿ ನಿರಸ್ತಗೊಳಿಸಲು ತುಂಬಾ ಸಮರ್ಥಳಿರುವೆ."

"ನಿಜವು, ನಿಜವು, ನಿಜವು!"

"ಮುಯ್ಯಕ್ಕೆ ಮುಯ್ಯ ತೀರಿದ್ದಾದರೂ ನಿಜವೆ?" ಎಂದು ವಿಕ್ರಮಾರ್ಕನು ನುಡಿದು ಪತ್ನಿಯ ಕಪೋಲಗಳನ್ನು ಮೆಲ್ಲಗೆ ತಟ್ಟಿ ಮುಗುಳು ನಗೆ ನಕ್ಕನು. ಸಾವಳದೇವಿಯು ಗಹಗಹಿಸಿ ನಕ್ಕಳು, ಆಮೇಲೆ ವಿಕ್ರಮನೂ ಅಷ್ಟೇ ನಕ್ಕನು. ಆ ನವದಂಪತಿಗಳು ವಿನೋದಲಹರಿಯಲ್ಲಿ ಸಿಲುಕಿದರು. ವಿಕ್ರಮನು ತನ್ನ ಔದಾಸೀನ್ಯವನ್ನು ಪೂರಾ ಮರೆತನು. ಕೆಲವು ವೇಳೆಯ ಮೇಲೆ– "ಪ್ರಿಯೆ, ಮನಸ್ಸು ಉದ್ವಿಗ್ನತೆ ಹೊಂದಿದಾಗ ಅದನ್ನು ಹೋಗಲಾಡಿಸುವ ದಿವ್ಯೌಷಧವು ಎಲ್ಲಿ ದೊರೆಯುವದೆಂಬದರ ಕಲ್ಪನೆ ಇಂದು ನನಗೆ ಚೆನ್ನಾಗಿ ಉಂಟಾಯಿತು." ಎಂದು ಅವನು ನಗುತ್ತಲೆ ಪತ್ನಿಯ ಸುಂದರವಾದ ಮುಖವನ್ನು ನಿರೀಕ್ಷಿಸುತ್ತ ನುಡಿದನು.

"ದಿವ್ಯಪುರುಷರಾದ ತಮ್ಮಿಂದ ದೊರಕಿಸಿದ ಔಷಧಕ್ಕೆ ದಿವ್ಯೌಷಧವೆನ್ನುವರು. ಈ ವ್ಯಾಕರಣದ ವ್ಯಾಖ್ಯೆಯು ಸರಿಯಾಗಿರುವದು ನೋಡಿರಿ."

"ಜೋಗಮರಾಜ ಕುಮಾರಿ, ನೀನು ಮಹಾ ಚತುರಳಿರುವೆ. ಎಲ್ಲೆಲ್ಲಿಯೂ ಅಜೇಯವಾದ ನಾನು ನಿನ್ನೆದುರಿಗೆ ಜಯಪತ್ರವನ್ನು ಕೊಡಲೇಬೇಕಾಗುವದು."

" ಪರಾಭೂತರು ಒಪ್ಪಂದದ ಕಟ್ಟಳೆಗೆ ಮಾನ್ಯತೆ ಕೊಡಬೇಕು."

" ಕೊಡದಿದ್ದರೆ ಜಯಶೀಲರು ಕೇಳುವರೆಲ್ಲಿ ? "

" ಹಾಗಾದರೆ ನಮ್ಮ ಔದಾಸೀನ್ಯದ ಕಾರಣವನ್ನು ತಿಳಿಸಲು ನಿರಾಕರಿಸುವದಕ್ಕೆ ನಿಮಗೆ ಅಧಿಕಾರವು ಉಳಿಯಲಿಲ್ಲ. ಇಂದು ಓಲಗದಲ್ಲಿ ನಡೆದ ಪ್ರಸ್ತಾಪವೇನು? ನಿಮ್ಮ ಮನಸ್ಸು ವಿಷಣ್ಣವಾಗಲು ಯಾವ ಕಾರಣ ಘಟಿಸಿತು ? ಯಾವ ರಾಜ್ಯಾಧಿಕಾರವೇಕೆ, ಸಾಮ್ರಾಜ್ಯಾಧಿಕಾರವೇ ತಮ್ಮ ಕಡೆಗೆ ಬರಲಿರುವದೆಂದು ಭಾವನವರು ಈಗಾಗಲೆ ತಾಂಡವ ನಡೆಯಿಸಿದ್ದರ ಇಂಗಿತವೇನು ? ಎಲ್ಲ ಸಂಗತಿಗಳನ್ನು ಮಾಜದೆ ನನ್ನೆದುರಿಗೆ ಹೇಳದೆ ಹೋದರೆ ನಿಮ್ಮ ಮೇಲೆ ದಾಳಿಯನ್ನು ಮತ್ತೆ ಪ್ರಾರಂಭಿಸೇನು ! ಪರಾಭೂತರೂ ಜಯಶಾಲಿಗಳ ಹೇಳಿಕೆಯನ್ನು ಮನ್ನಿಸದೆ ಹೋದರೆ ಗತ್ಯಂತರ ವಿಲ್ಲವೆಂಬ ಸಂಗತಿಯು ರಾಜಕಾರಣದಲ್ಲಿ ನುರಿತ ತಮಗೆ ನಾನು ಹೇಳಲಿಕ್ಕೆ ಬೇಡ. "

"ನಿಮ್ಮ ತಂದೆಯವರಾದ ಜೋಗಮರಸರು ನಿನ್ನನ್ನು ಇಷ್ಟು ಚತುರಳನ್ನಾಗಿ ಹೀಗೆ ಮಾಡಿದರೆಂಬುದೇ ನನಗುಂಟಾದ ದೊಡ್ಡ ಸಮಸ್ಯೆ. ಉಳಿದ ಸಮಸ್ಯೆಗಳು ಹೇಗಾದರೂ ಬಿಡುವವು. ಈ ಸಮಸ್ಯೆ ಬಿಡುವದೇ ಬಹು ಕಷ್ಟವಾಗಿದೆ. "

" ಹಾ! ಮತ್ತೆ ವಿಷಯಾಂತರ ಮಾಡತೊಡಗಿದಿರಿ. ವಸ್ತುಸ್ಥಿತಿ ನಿವೇದಿಸುವದನ್ನು ನಿರಾಕರಿಸುವ ಅಧಿಕಾರ ಈಗ ನಿಮಗಿಲ್ಲ."

ಒಳ್ಳೇದು ಪ್ರಿಯೆ, ನೀನು ಬಹು ಹಟಮಾರಿ. ಎಲ್ಲವನ್ನೂ ತಿಳಿಸುವೆನು." ಎಂದು ವಿಕ್ರಮನು ನುಡಿದು, ಪತ್ನಿಯ ಹೆಗಲಮೇಲೆ ಕೈಹಾಕಿ "ಕಂಚಿಯ ರಾಜೇಂದ್ರದೇವನು ಕರ್ನಾಟಕ ಸಾಮ್ರಾಜ್ಯವನ್ನು ಹೊಕ್ಕು ಹಾವಳಿ ಮಾಡುತ್ತ ಅಣ್ಣಿಗೇರಿಯ ನಾಡಿಗೆ ಬಂದಿರುವನಷ್ಟೇ. ಅವನ ಮೇಲೆ ದಂಡೆತ್ತಿ ಹೋಗುವಬಗ್ಗೆ ಓಲಗದಲ್ಲಿ ವಿಚಾರ ನಡೆಯಿತು. ಅಣ್ಣಂದಿರಾದ ಯುವರಾಜ ಸೋಮೇಶ್ವರರು ದಂಡಯಾತ್ರೆಗೆ ಹೊರಡುವದನ್ನು ನಿರಾಕರಿಸಿದರು. ಇಷ್ಟೇ ಅಲ್ಲ, ರಾಜ್ಯ ನಿರ್ವಹಣ ಮಾಡಲು ಅಪಾತ್ರತೆಯನ್ನು ಕೂಡ ಪ್ರದರ್ಶಿಸಿಬಿಟ್ಟರು. ಅವರ ವರ್ತನದಿಂದ ತಂದೆಯವರು

ಬಹಳೇ ಖಿನ್ನರಾದರು. ರಾಜೇಂದ್ರದೇವನು ಪ್ರಚಂಡವಾದ ಸೈನ್ಯದೊಡನೆ ಯುದ್ಧಮಾಡಿ ಗೆಲ್ಲುವದು ಅಸಾಧ್ಯವೆಂದು ಯುವರಾಜರ ತಿಳುವಳಿಕೆ. 'ಚೋಳರಸನ ತಲೆಬುರುಡೆಯನ್ನು ಉರುಳಿಸುವೆನು; ಇಲ್ಲವೆ ತಲೆ ಕೊಡುವೆನು' ಎಂದು ತಂದೆಯವರು ಅಘೋರ ಪ್ರತಿಜ್ಞೆ ಮಾಡಿದರು. ತಂದೆಯವರ ಪ್ರತಿಜ್ಞೆ ಪೂರೈಸಲು ನಾನು ವಚನಬದ್ಧನಾಗಿರುವೆನು. ಈ ಘಟನೆಯ ಅರ್ಥವನ್ನು ಅವರು ಮಾಡಿರುವದೇನಂದರೆ, ರಾಜೇಂದ್ರದೇವನ ತಲೆಯನ್ನುರುಳಿಸಲು ಇವರು ಸಮರ್ಥರಾಗುವದಿಲ್ಲ; ತಲೆ ಕೊಡುವದೇ ನಿಶ್ಚಯ. ಹಿರಿಯರ ತರುವಾಯ ಸಾಮ್ರಾಜ್ಯದ ಒಡೆತನ ತಮ್ಮದೆ ಆಗುವದು. ಹಿರಿಯರ ಜೊತೆಗೆ ನಾನೂ ಧಾರಾತೀರ್ಥದಲ್ಲಿ ದೇಹವನ್ನರ್ಪಿಸುವೆನೆಂದು ಅವರ ಗ್ರಹಿಕೆಯಾಗಿಹೋಗಿರುವದರಿಂದ ನಿಷ್ಕಂಟಕವಾಗಿ ಸಾಮ್ರಾಜ್ಯವು ತಮ್ಮದೇ ಆಗುವದೆಂದು ಅವರು ಗಾಳಿಗೋಪುರ ಕಟ್ಟತೊಡಗಿರುವರು. ನಾನು ಅಣ್ಣಂದಿರೊಡನೆ ಎಷ್ಟು ನಿಷ್ಠೆಯಿಂದ ನಡೆದರೂ ಅವರು ನನ್ನನ್ನು ತಿಲಾಂಶವಾದರೂ ನಂಬಲಾರದವರಾಗಿದ್ದಾರೆ. ನನಗೆ ಯೌವರಾಜ್ಯಾಭಿಷೇಕವನ್ನು ಮಾಡಿಸಬೇಕೆಂದು ತಂದೆಯವರು ಯೋಚಿಸಿದ್ದಾರೆ. ಈ ಸಂಗತಿಯು ಹೇಗೋ ಅವರಿಗೆ ತಿಳಿದಿದೆ. ಆದುದರಿಂದ ಇತ್ತೀಚೆಗೆ ಅವರು ನನ್ನನ್ನು ಬಹಳೇ ವಕ್ರದೃಷ್ಟಿಯಿಂದ ನೋಡತೊಡಗಿರುವರು. ಅವರ ವಕ್ರದೃಷ್ಟಿಯ ಭಯವು ನನಗಿಲ್ಲ. ಆದರೆ ಗೃಹಕಲಹ ಬೇಗೆ ಹಬ್ಬಿ ಅದರಲ್ಲಿ ಸಾಮ್ರಾಜ್ಯವೆಲ್ಲಿ ಹುರುಪಳಿಸಿ ಹೋಗುವದೋ ಎಂಬ ಅಂಜಿಕೆ ನನ್ನನ್ನು ಬಾಧಿಸುವದು. ಸಾಮ್ರಾಜ್ಯದ ಒಡೆತನಕ್ಕಾಗಿ ನಾನು ಹಂಬಲಿಸುವದೇ ಇಲ್ಲ. ಸಾಮ್ರಾಜ್ಯದ ಸೇವೆ ಮಾಡುವದಕ್ಕೆ ಅವಕಾಶವು ದೊರೆತರೆ ಸಾಕೆಂದು ಅನ್ನುವ ನನ್ನಂತಹನಮೇಲೆ ಸಹ ಅಣ್ಣನವರು ವಿಪರೀತ ಭಾವನೆಯಿಂದ ವರ್ತಿಸತೊಡಗಿದ್ದು ನೋಡಿ ಖೇದವಾಗುವದು."

ವಿಕ್ರಮಾದಿತ್ಯನ ಮಾತು ಕೇಳಿ ಸಾವಳದೇವಿಯು ಸ್ವಲ್ಪವೇಳೆ ವಿಚಾರದಲ್ಲಿ ತೊಡಗಿದಳು. ಅನಂತರದಲ್ಲಿ ಅವಳು– "ನೀವು ನಿಮ್ಮ ಅಣ್ಣಂದಿರಂತೆ ಪರಪ್ರಕಾಶಕರಲ್ಲವೆಂದು ನನ್ನ ತಿಳುವಳಿಕೆ. ಕೇವಲ ವಯಸ್ಸಿನಿಂದ ಹಿರಿಯರೆಂದು ಅವರಿಗೆ ಎಷ್ಟೊಂದು ಮಾನ್ಯತೆ ಕೊಡಬೇಕು?

ಸಾಮ್ರಾಜ್ಯದ ಘನತೆಗೆ ಭಂಗ ತರುವ ಅವರಿಗೆ ಯೋಗ್ಯ ಪ್ರಾಯಶ್ಚಿತ್ತ ವಿಧಿಸಿ ಮುಂದಡಿಯಿಡುವದು ಉತ್ತಮ. ಗೃಹಕಲಹದಿಂದ ಸಾಮ್ರಾಜ್ಯಕ್ಕೆ ಧಕ್ಕೆ ಯುಂಟಾದರೆ ಚಾಲುಕ್ಯರ ಗೌರವಪೂರ್ಣ ಇತಿಹಾಸದಲ್ಲಿ ಈ ಸಂಗತಿಯು ಅತ್ಯಂತ ಕಲಂಕಪ್ರದವಾಗಿ ಪರಿಣಮಿಸಬಹುದು. ಇದು ತ್ರೇತಾಯುಗವಲ್ಲ. ರಾಮ–ಭರತರಂತಹ ಬಾಂಧವ್ಯವು ಈಗೆಲ್ಲಿ ತಲೆದೋರಬೇಕು? ಕೇವಲ ವಿಲಾಸವೇ ಆಯುಷ್ಯದ ಇತಿಕರ್ತವ್ಯವೆಂದು ಭಾವಿಸಿ ನಡೆಯತೊಡಗಿದ ಹೇಡಿ ಸೋಮೇಶ್ವರರು ಘನತೆಗೇರಿದ ಕನ್ನಡ ಸಾರ್ವಭೌಮಾಧಿಕಾರವನ್ನು ಹೊಂದಲು ಅಪಾತ್ರರು. ನಿಮ್ಮ ಪ್ರತಾಪದಿಂದ ಸಾಮ್ರಾಜ್ಯವು ಮತ್ತಿಷ್ಟು ವಿಸ್ತಾರವಾಗುತ್ತಲಿದೆ; ಹಾಗು ಅದು ನಿರ್ವೈರವಾಗುತ್ತ ನಡೆದಿದೆ. ನಿಮ್ಮ ಪ್ರತಾಪದಿಂದ ನಿಮ್ಮ ಅಣ್ಣಂದಿರಿಗೆ ಸಂತುಷ್ಟಿಯಿಲ್ಲ. ನಿಮ್ಮ ಕೀರ್ತಿಯ ಹೆಚ್ಚಳಕ್ಕೆ ಅವರು ಮತ್ಸರ ಪಡತೊಡಗುವರು. ಇಂತಹ ಹೊಟ್ಟೆಯುರುಕರನ್ನು ಸೆರೆಗೀಡುಮಾಡಿ ರಾಜ್ಯಯಂತ್ರವನ್ನು ನಿಷ್ಕಂಟಕವಾಗಿ ನಡೆಯಿಸಬಾರದೇಕೆ? ಅಣ್ಣಿಗೇರಿಯ ಕಾಳಗದಲ್ಲಿ ಸಾರ್ವಭೌಮರಾದ ಮಾವಂದಿರೂ ನೀವೂ ತಲೆಗೊಡಬೇಕೆಂದೇ ಅವರ ಹಾರೈಕೆ; ಅಷ್ಟೇಕೆ ತಲೆಗೊಡುವಿರೆಂದೇ ಅವರ ತಿಳುವಳಿಕೆ!"

"ಪ್ರಿಯೆ, ಬುದ್ಧಿಯು ಕರ್ಮಾನುಸಾರಿಣಿಯು. ನಾನು ಹೀಗೆ ತಿಳಿದಿದ್ದೇನೆ:— ತಂದೆಯವರ ತಪಾಚರಣೆಯಲ್ಲಿ ಏನಾದರೂ ಕುಂದುಂಟಾಗಿರುವದರಿಂದ ಅವರ ಉದರದಲ್ಲಿ ಇಂತಹ ಮಗನು ಜನಿಸಿದ್ದಾನೆ. "ಕೆಟ್ಟದ್ದನ್ನು ಅಟ್ಟವನೇ ಜಾಣ" ಎಂಬಂತೆ ಇದ್ದುದರಲ್ಲಿಯೇ ಸುಧಾರಣೆ ಮಾಡಿಕೊಳ್ಳಬೇಕು."

"ಓಹೋ! ಒಳ್ಳೆಯ ನೆನಪು ಮಾಡಿದಿರಿ. ಈ ವಿಷಯದಲ್ಲಿ ಕೆಲವು ಸಂಗತಿಗಳನ್ನು ಕೇಳಬೇಕೆಂದು ಬಹುದಿನಗಳಿಂದ ಆಲೋಚಿಸಿರುವೆನು. ಕೇಳಲೋ ಬೇಡವೋ ಎಂದು ಸುಮ್ಮನಿದ್ದೆನು. ಆದರೆ ಇಂದುಮಾತ್ರ ಕೇಳಿಯೇ ಬಿಡಬೇಕೆಂಬಂತಾಗಿದೆ. ಕೇಳಿದರೆ ಹೇಳುವಿರಾ? ಅತ್ತೆಯವರಾದ ಬಾಚಲದೇವಿಯವರು ಕೇಳದೆ ಹೇಳಿದರು. ಪೂರ್ಣ ಹೇಳಲಿಲ್ಲ. ಅರ್ಧಮರ್ಧ ಹೇಳಿದರು. ಹೊಳೆಯದಂತೆ ಹೇಳಿದರು. ಹೊಳೆಯುವಂತೆ

ಹೇಳಲು ಕೇಳಿದರೆ ಅದು ಹೇಳಿದರೂ ಹೊಳೆಯದೆಂದರು. ಹೇಳಿದರೆ ಹೊಳೆಯದಂತಹ ಬುದ್ಧಿಮಾಂದ್ಯವು ನನ್ನಲ್ಲಿರುವದೇ ಹೆಗೆಂಬದನ್ನು ಇಂದು ಹೇಳಿಕೇಳಿ ಒರೆಗೆ ಹಚ್ಚಬೇಕಾಗಿದೆ."

"ಏನದು ದೇವಿ?" ಕುತೂಹಲದಿಂದ ವಿಕ್ರಮಾರ್ಕನು ಕೇಳಿದನು.

"ಆರ್ಯಪುತ್ರರೇ, ನಿಮ್ಮ ತಂದೆಯವರಿಗೆ ಬಹಳ ದಿವಸ ಸಂತಾನ ಲಾಭವಾಗಲಿಲ್ಲವಂತೆ. ನಿಜವೆ?"

"ನಾನಾಗ ಹುಟ್ಟಿಯೆ ಇರಲಿಲ್ಲವೆಂದಮೇಲೆ ಈ ಬಗ್ಗೆ ಸತ್ಯವಾದ ಸಾಕ್ಷಿಯನ್ನು ಹೇಗೆ ಹೇಳಲಿ?" ಎಂದು ವಿಕ್ರಮನು ನುಡಿದು ನಕ್ಕನು.

"ಹಾಸ್ಯ ಮಾಡಬೇಡಿರಿ. ಸಂಗತಿಯನ್ನು ಕಣ್ಣಾರೆ ಕಂಡು ಹೇಳ ಬರುವಂತೆ ಕಿವಿಯಿಂದ ಕೇಳಿಯೂ ಹೇಳಲು ಬರುವದು; ಪ್ರತ್ಯಕ್ಷ ಪ್ರಮಾಣವು ಸತ್ಯವಿದ್ದಹಾಗೆ ಅನುಮಾನ ಪ್ರಮಾಣದಲ್ಲಿಯೂ ಸತ್ಯತೆಯುಂಟು."

"ಒಳ್ಳೇದು. ಕೇಳು, ನೀನು ಕೇಳುವ ಮಾತನ್ನು ಸ್ಪಷ್ಟವಾಗಿ ಕೇಳು."

"ಮಾವನವರು ತಮಗೆ ಸಂತಾನಲಾಭವಾಗಬೇಕೆಂಬ ಉದ್ದೇಶದಿಂದ ಬಲ್ಲಿಗಾವಿಯ ಶ್ರೀ ಉಮಾಮಹೇಶ್ವರನನ್ನು ಕುರಿತು ತಪಾಚರಣೆ ಮಾಡಿದರಂತೆ. ಆಗ ಆಕಾಶವಾಣಿಯು ಏನಾಯಿತು?"

"ನಿನಗೆ ಈ ಸಂಗತಿಯನ್ನು ಯಾರು ಹೇಳಿದರು?"

"ಕೊನೆಗೆ ಆಕಾಶವಾಣಿಯೇ ಏನಾಗುವದೋ ಏನೋ ಎಂದು ಅತ್ತೆಯವರು ಕೆಲವು ಪ್ರಸಂಗಗಳಲ್ಲಿ ಎರಡು ಮೂರು ಸಾರೆ ಅಂದರು. ಆಕಾಶವಾಣಿಯ ಸಂಗತಿಯೇನೆಂದು ನಾನು ವಿಚಾರಿಸಿದೆನು. ಅದನ್ನು ತೆಗೆದುಕೊಂಡು ನೀನು ಮಾಡುವದೇನೆಂದು ಅವರು ಹೇಳಲಿಲ್ಲ. ನೀವಾದರೂ ಹೇಳುವಿರೋ, ಅವರಂತೆ ಅಂದು ಬಿಡುವಿರೋ?"

"ಅಂದುಬಿಟ್ಟರೆ ಏನು ಮಾಡುವೆ?"

"ಚೋಳರಸನ ದಾಳಿ ನಾಳೆ; ನನ್ನ ದಾಳಿ ಇಂದು! ಪರಾಭೂತರಾದವರು ಒಡಂಬಡಿಕೆಯಂತೆ ನಡೆಯದಿದ್ದರೆ ನಡೆಯುವದೇ?" ಎಂದು ನಗುನಗುತ್ತ ಸಾವಳದೇವಿ ನುಡಿದಳು.

"ಪರಾಜಯಗೊಂಡವರ ಮೇಲೆ ಇಷ್ಟು ಅತ್ಯಾಚಾರವೆ? ಬಲುಮೆಯ ಒಪ್ಪಂದದಲ್ಲಿಯೇ ಸೇಡಿನ ಉತ್ಪತ್ತಿಯಾಗುತ್ತಿರುವದು ಜೋಕೆ!"

"ಪರವಿಲ್ಲ. ನಾನದಕ್ಕೆ ಎದೆಗೊಡುವೆನು" ಎಂದು ಸಾವಳದೇವಿಯು ನುಡಿದು– "ಈಗಲಾದರೂ ಹೇಳುವಿರಾ?"

"ಆಕಾಶವಾಣಿಯ ಆಶಯವು ಇಷ್ಟೇ. ಮೊದಲನೆಯ ಮಗನು ಕರ್ತವ್ಯಶೂನ್ಯನಾಗುವನು. ಎರಡನೆಯವನು ನನ್ನ ಪ್ರಾಸಾದಿಕ ಪುತ್ರನು. ಅವನು ಆಸಮುದ್ರದ ಪೃಥ್ವಿಯನ್ನಾಳಿ ರಾಮನಂತೆ ಕೀರ್ತಿಶೇಷನಾಗುವನು' ಇಷ್ಟೇ ಆ ಸಂಗತಿ. ಇದರಲ್ಲಿ ಹೇಳಲಾರದಂತಹ ಗೂಢವೇನೂ ಇಲ್ಲ. ಆದರೆ ಭವಿಷ್ಯವನ್ನು ಆದಷ್ಟು ಬಚ್ಚಿಡುವ ಪರಿಪಾಠವು ಮಾತ್ರ ಬಿದ್ದಿದೆ. ಈ ಭವಿಷ್ಯವನ್ನು ಕೇಳಿದಮಾತ್ರದಿಂದ ಮಹಾರಾಣಿಯಾಗುವೆನೆಂದು ನೀನು ಉಬ್ಬುಬ್ಬಿಮಾತ್ರ ಬೀಳಬೇಡ. ಸಾಮ್ರಾಜ್ಞಿ ಪದವನ್ನು ಹೊಂದಿದಮೇಲೆ ಬೇಕಾದಷ್ಟು ಉಬ್ಬಿದರೂ ನಡೆಯುವದು; ಹಿಗ್ಗಿದರೂ ಸಾಗುವದು."

"ನಿಮ್ಮ ಅಣ್ಣನಂತೆ ನಾನು ಭ್ರಾಂತಿಷ್ಟಳಿಲ್ಲ" ಎಂದು ಸಾವಳದೇವಿಯು ನುಡಿದು, ವಿಷಯಾಂತರಮಾಡಿ–"ಆರ್ಯಪುತ್ರರೆ, ರಾಜೇಂದ್ರದೇವನು ಒಮ್ಮೆಲೆ ಕರ್ನಾಟಕದ ನಡುಸಾಮ್ರಾಜ್ಯದಲ್ಲಿ ಬಂದು ಬಿಟ್ಟಿರುವನು. ಅವನು ಅಷ್ಟು ಬಲಾಢ್ಯನಿರುವನೆ?"

"ಅವನ ದಾಳಿ ಅಕಲ್ಪಿತವಾಗಿ ಆಗಿರುವದು. ಅಲ್ಲದೆ ಅವನು ಧರ್ಮಯುದ್ಧರತನಾಗಿರುವದಿಲ್ಲ. ನಾಗರಿಕರನ್ನು ಸುಲಿದು ಸುಲಿಗೆಯ ಹಣವನ್ನು ಆಗಿಂದಾಗ ಸೈನಿಕರಿಗೆ ಹಂಚಿಬಿಡುತ್ತಿರುವನು. ಅವನ ಈ ಪ್ರಥೆಯಿಂದ ಅವನ ಸೈನಿಕರು ಜೀವದ ಹಂಗುದೊರೆದು ಕಾದುತ್ತಲಿದ್ದಾರೆ. ಹಾಗು ದಿನದಿನಕ್ಕೆ ಅವನ ಸೈನ್ಯವೂ ಬೆಳೆಯುತ್ತ ನಡೆದಿದೆ."

"ಅಂತು ಅಣ್ಣಿಗೇರಿಯ ಕಾಳಗವು ಅತ್ಯಂತ ಪ್ರಚಂಡವಾಗಿ ಪರಿಣಮಿಸುವದೆಂದಹಾಗಾಯಿತು."

"ನಿಜವು. ಈ ಯುದ್ಧವು ಜೀವಮರಣಗಳ ಸಮಸ್ಯೆಯುಳ್ಳದ್ದು ಆಗಿದೆ. ಇಂತಹ ಮಹಾಯುದ್ಧದಲ್ಲಿ ಭಾಗವಹಿಸಲು ನೀನು ನನಗೆ ಆತ್ಮಸಂತೋಷದಿಂದ ನಿರೋಪ ಕೊಡುವೆಯಾ?"

"ಅಗತ್ಯ! ಅಗತ್ಯ!!" ಸಾವಳದೇವಿಯು ಗಾಂಭೀರ್ಯದಿಂದ– "ಆರ್ಯಪುತ್ರರೆ, ವೀರ ಕ್ಷತ್ರಿಯರು ಪರಾಕ್ರಮ ಪ್ರದರ್ಶನದ ಇಂತಹ ಸುವರ್ಣ ಸಂಧಿಯನ್ನು ಎಂದೂ ವ್ಯರ್ಥ ಹೋಗಗೊಡಬಾರದು. ವೀರರು ಕೀರ್ತಿಶೇಷರಾಗುವ ಸಂದರ್ಭವೇ ಇಂತಹದಿರುವದು. ಪ್ರತಾಪಶಾಲಿಗಳಾದ ವೀರರು ವೀರತನ ತೋರ್ಪಡಿಸುತ್ತ ಜಯಶಾಲಿಗಳಾದರೆ ಸಾಮ್ರಾಜ್ಯವನ್ನುಪಭೋಗಿಸುವರು.; ಒಂದು ವೇಳೆ ಧಾರಾತೀರ್ಥದಲ್ಲಿ ಮಡಿದರೆ ವೀರಸ್ವರ್ಗ ಹೊಂದುವರು. ಇಂತಹ ಸುಸಂಧಿಯಲ್ಲಿ ವೀರಪತ್ನಿಯರು ಪತಿಗೆ ಸ್ವಸಂತೋಷದಿಂದ ಸಿರೋಪಕೊಡದಿದ್ದರೆ ಅವರು ವೀರಪತ್ನಿಯರೆನಿಸಿಕೊಳ್ಳಲು ಅನರ್ಹರಾಗುವದಿಲ್ಲವೆ? ಒಂದು ವೇಳೆ ದೈವದುರ್ವಿಪಾಕದಿಂದ ಪತಿಗೆ ವೀರಸ್ವರ್ಗವೇ ದೊರೆತರೆ ಪರಕ್ಷಣದಲ್ಲಿ ಪತಿಶಿರೋಮಣಿಯು ಸತೀಧರ್ಮಕ್ಕುಚಿತವಾದ ಮಾರ್ಗದಿಂದ ಪತಿಸಾನಿಧ್ಯವನ್ನು ಸೇರಲು ಪ್ರಯಾಸವಾಗುವದೆ?"

"ಶಾಬಾಸ್ ವೀರಪತ್ನಿ!" ವಿಕ್ರಮಾದಿತ್ಯನು ಪತ್ನಿಯ ಬೆನ್ನುಬಡೆದು "ನೀನು ವೀರ ಕ್ಷತ್ರಿಯ ಕುಮಾರಿ! ನಿನ್ನಲ್ಲಿ ವೀರಾಂಗನೆಯರಿಗುಚಿತವಾದ ಗುಣಗಳು ಸ್ವಾಭಾವಿಕವಾಗಿ ನೆಲೆಗೊಂಡದ್ದು ನೋಡಿ ಆನಂದವಾಯಿತು."

ವಿಕ್ರಮಾದಿತ್ಯನು ಹೀಗೆ ನುಡಿಯುತ್ತಿರುವಾಗ ಸಂಗ್ರಾಮ ಪ್ರಯಾಣ ಸೂಚಕವಾದ ಭೇರಿನಿನಾದವು "ಥಂ, ಥಂ, ಥಮ್! ಧುಡುಂ ಧುಡುಂ!" ಎಂದು ಕೇಳತೊಡಗಿತು. ಆಗ ಸಾವಳಾದೇವಿಯು– "ನೋಡಿರಿ, ಈಗಾಗಲೇ ಸಂಗ್ರಾಮ ಪ್ರಯಾಣದ ಸೂಚನೆಯಾಗತೊಡಗಿತು. ಬೇಗನೇ ಪ್ರಯಾಣ ಸಿದ್ಧತೆ ನಡೆಯಲಿ. ನಾನು ಆರತಿ ಸಿದ್ಧಪಡಿಸಿಕೊಂಡು ಬರುವೆನು."

ವಿಕ್ರಮಾದಿತ್ಯನು ಪ್ರಯಾಣದ ಸಿದ್ಧತೆಗೆ ತೊಡಗಿದನು. ಬೆಳಗಿನ ಜಾವವಾಯಿತು. ಪ್ರಾಚೀದಿಶೆಯು ಅರುಣಕಾಂತಿಯಿಂದ ಪರಿಶೋಭಿತವಾಯಿತು. ಇಂತಹ ಮಂಗಲ ಸುಪ್ರಭಾತ ಸಮಯದಲ್ಲಿ ಕಲ್ಯಾಣನಗರಿಯೊಳಗೆ ಮಂಗಲವಾದ್ಯಗಳು ಮೊಳಗುತ್ತಿರುವಾಗ ಸುಮಂಗಲೆಯಾದ ಮಂಗಲಾಂಗಿಯು ಮಂಗಲ ಸೂತ್ರಧಾರಿಯಾದ ಪತಿಗೆ ಮಂಗಲಾರತಿ

ಮಾಡಿ ಮಂಗಲವಾಗಲೆಂದು ಹಾರೈಸಿ ನಿರೋಪಕೊಟ್ಟಳು. ವಿಕ್ರಮನಾದ ವಿಕ್ರಮನು ವಿಕ್ರಮ ಪ್ರದರ್ಶನಮಾಡಿ ಕಲಿವಿಕ್ರಮನೆನಿಸಿಕೊಳ್ಳುವ ಉಬ್ಬಿನಿಂದ ವಿಕ್ರಮಶಾಲಿಗಳಾದ ಕನ್ನಡಿಗರ ಪಾಳ್ಯಕ್ಕೆ ವಿಕ್ರಮೋದ್ಧತನಾಗಿ ಸಾಗಿದನು.

## ೪ ಅಣ್ಣಿಗೇರಿಯ ಕಾಳಗ

ಕಂಚಿಯರಸನಾದ ಕೋಪರ ಕೇಸರಿವರ್ಮ ರಾಜೇಂದ್ರದೇವನು ಮೈಸೂರು ಪ್ರಾಂತವನ್ನು ಹೊಕ್ಕು ಕಡೂರು ನಾಡನ್ನು ಸುಲಿದು, ಮುಂದೆ ಸಾಗಿ ಬನವಾಸಿಯ ಚಾವುಂಡರಾಯರಸನ ಪಡೆಯನ್ನು ಸಂತಲಿಗೆಯ ತ್ರೈಲೋಕ್ಯಮಲ್ಲ ವೀರ ಶಾಂತರಸನ ಪಡೆಯನ್ನೂ ಪರಾಭವಗೊಳಿಸಿ, ಪಾನುಂಗಲ್ ಮಂಡಲವನ್ನು ಹಾಳುಮಾಡುತ್ತ ಅನೇಕ ಗ್ರಾಮಗಳನ್ನೂ ಪಟ್ಟಣಗಳನ್ನೂ ಸುಲಿಯುತ್ತ, ಕೊಳ್ಳೆಯಿಡುತ್ತ, ಬೆಳೆಗಳನ್ನು ಹಾಳು ಮಾಡುತ್ತ, ಬಸದಿ ದೇವಾಲಯಗಳನ್ನು ನಾಶಗೊಳಿಸುತ್ತ ಅಣ್ಣಿಗೇರಿಯ ನೆರೆಯಲ್ಲಿ ತನ್ನ ಮಹಾ ಸೇನಾಸಾಗರದ ಬೀಡು ಬಿಟ್ಟಿದ್ದನು. ತನ್ನ ಪ್ರಚಂಡವಾದ ದಂಡಿಗೆ ಎದುರು ಯಾರೂ ಇಲ್ಲವೆಂದು ಅವನು ಬಹಳೇ ಹೆಮ್ಮೆಪಡತೊಡಗಿದ್ದನು. ಅವನ ಹೆಮ್ಮೆ ಅಯಥಾರ್ಥವಾದದ್ದಿರಲಿಲ್ಲ. ಕರ್ನಾಟಕ ಸಾಮ್ರಾಜ್ಯದ ಬಲಕ್ಕೆ ಅವನ ಬಲವು ಮಿಕ್ಕಿತ್ತೆಂದು ಹೇಳಬಹುದು. ವಿಜಯೋನ್ಮತ್ತನಾದ ಆ ಚೋಳರಸನು ಹಾಗೆಯೆ ಮುಂದೆ ಸಾಗಿ ಕರ್ನಾಟಕ ಸಾಮ್ರಾಜ್ಯದ ರಾಜಧಾನಿಯಾದ ಕಲ್ಯಾಣಪುರಿಯನ್ನು ಸುಲಿದು, ಚಾಲುಕ್ಯ ಸಿಂಹಾಸನವನ್ನು ಉಧ್ವಂಸಗೊಳಿಸಬೇಕೆಂದು ಅವನು ಮನೋರಾಜ್ಯ ಕಟ್ಟುತ್ತಲಿದ್ದನು.

ರಾಜೇಂದ್ರದೇವನು ಮಂತ್ರಿ ಸೇನಾನಾಯಕರೊಡನೆ ತನ್ನ ಶಿಬಿರದಲ್ಲಿ ಕುಳಿತು ಮಂತ್ರಾಲೋಚನೆ ಮಾಡತೊಡಗಿದ್ದನು. ಅಣ್ಣಿಗೇರಿಯ ನಾಡಿನಿಂದ ತನ್ನ ಸೈನ್ಯವನ್ನು ಎತ್ತ ಸಾಗಿಸಬೇಕೆಂದು ಅವನು ವಿಚಾರ

ವಿನಿಮಯ ನಡೆಯಿಸಿದ್ದನು. ಅಷ್ಟರಲ್ಲಿ ಕಂಚಿಯ ಪ್ರಮುಖ ಗುಪ್ತಚಾರನೊಬ್ಬನು ಅಲ್ಲಿಗೆ ಬಂದು ಚಾಲುಕ್ಯರ ಸೈನ್ಯವು ಅಣ್ಣೀಗೇರಿಯ ನಾಡನ್ನು ಸಮಿಪಿಸಿರುವದೆಂದು ತಿಳಿಸಿದನು. ಹಾಗು ಚಾಲುಕ್ಯ ಮಂಡಲೇಶ್ವರರಾದ ಬನವಾಸಿಯ ಚಾವುಂಡರಾಯರಸ, ಪಾನುಂಗಲ್ಲಿನ ಸೋಯಿಮರಸ ಸಂತಲಿಗೆಯ ತ್ರೈಲೋಕ್ಯಮಲ್ಲ, ಭುಜಬಲ ಶಾಂತರಸ, ಕೊಂಕಣದ ಜಯಕೇಶಿ, ಮಾಡೂರ ಸತ್ಯಾಶ್ರಯದದೇವ ಮೊದಲಾದ ಮಂಡಲೇಶ್ವರರು ಚಾಲುಕ್ಯರ ಸಾಮ್ರಾಜ್ಯ ಸೈನ್ಯವನ್ನು ಕೂಡಿಕೊಳ್ಳಲು ಹೊರಟಿರುವರೆಂಬ ಸಂಗತಿಯನ್ನು ನನ್ನ ಕೈಕೆಳಗಿನ ಗುಪ್ತಚಾರರು ತಿಳುಹಿಸಿರುವರೆಂದು ಅವನು ಅರಿಕೆಮಾಡಿಕೊಂಡನು. ಈ ಸಂಗತಿಯು ತಿಳಿದಕೂಡಲೇ ರಾಜೇಂದ್ರದೇವನು ತನ್ನ ಪ್ರಸ್ಥಾಪವನ್ನು ನಿಲ್ಲಿಸಿ, ಚಾಲುಕ್ಯರ ಮಹಾ ಸೈನ್ಯಕ್ಕೆ ಎದುರಾಗಲು ಯೋಗ್ಯ ಸಿದ್ಧತೆ ಮಾಡಬೇಕೆಂದು ತನ್ನ ಮಹಾ ಸೇನಾಪತಿಗೆ ಆಜ್ಞಾಪಿಸಿದನು. ಚಾಲುಕ್ಯ ಸಾಮ್ರಾಜ್ಯದ ಮುಖ್ಯ ಸೈನ್ಯವೂ ಇತರ ಮಂಡಲೇಶ್ವರರ ಸೈನ್ಯಗಳೂ ಒಟ್ಟುಗೂಡುವದರಿಂದ ಮಹಾಸಂಗ್ರಾಮವೆಸಗುವದೆಂಬ ಕಲ್ಪನೆ ರಾಜೇಂದ್ರದೇವನಿಗಾಯಿತು. ಆದರೂ ಅವನು ಅಳ್ಕೊಡೆಯಲಿಲ್ಲ. ಅವನ ಸೈನ್ಯವಾದರೂ ಅಸಾಧಾರಣವಾಗಿತ್ತು. ಅಲ್ಲದೆ ವಿಜಯದಮೇಲೆ ವಿಜಯಗಳನ್ನು ಪಡೆಯುತ್ತ ಹುರುಪುಗೊಂಡದ್ದಾಗಿತ್ತು. ಕಂಚಿಯನ್ನು ಬಿಟ್ಟು ಕರ್ನಾಟಕ ಸಾಮ್ರಾಜ್ಯವನ್ನು ಪ್ರವೇಶಿಸಿದ ಮೇಲೆ ಅದನ್ನು ಪರಾಭವಗೊಳಿಸಿದವರಾರೂ ಇರಲಿಲ್ಲ. ಹಾಗು ಎದುರಾದವರೆಲ್ಲರೂ ಪರಾಜಿತರಾಗಿ ಪಲಾಯನ ಮಾಡಿದ್ದರು. ಅನೇಕ ಪುರ-ಪಟ್ಟಣಗಳನ್ನು ಸುಲಿದುದರಿಂದ ಚೋಳದಲ್ಲಿ ಹೆಚ್ಚಾದ ಧನಸಂಚಯವೂ, ಅನ್ನಸಾಮುಗ್ರಿ ಸಂಚಯವೂ ಉಂಟಾಗಿತ್ತು. ಇಷ್ಟಾದ ಮೇಲೆ ಅವರು ಕರ್ನಾಟಕದ ಬಲಕ್ಕೆ ಸೊಪ್ಪು ಹಾಕುವರೆ? ಒಂದು ಬಲ್ಗಾಳಗವನ್ನು ಹೊಡೆದು ವಿಜಯ ದುಂದುಭಿಯನ್ನು ಕರ್ನಾಟಕ ಸಾಮ್ರಾಜ್ಯದ ತುಂಬ ಮೊಳಗಿಸಬೇಕೆಂದೂ, ಕಂಚಿಯ ರಾಜ್ಯವನ್ನು ಸಾಮ್ರಾಜ್ಯವನ್ನಾಗಿ ಮಾಡಬೇಕೆಂದೂ ತಾನು ನಿಜವಾದ ರಾಜೇಂದ್ರದೇವನೇ ಆಗಬೇಕೆಂತಲೂ ಕಂಚಿಯರಸ ರಾಜೇಂದ್ರದೇವನ ಹೆಬ್ಬಯಕೆಯಾಗಿತ್ತು.

ರಾಜೇಂದ್ರದೇವನು ಮಹಾ ಸೇನಾಪತಿಯಾದ ಶಚೀಂದ್ರದೇವ ನೊಡನೆ ಮುಂದಿನ ಸಂಗ್ರಾಮದ ಬಗ್ಗೆ ಮಾತಾಡತೊಡಗಿದನು. ತನ್ನ ಸೈನ್ಯದಲ್ಲಿ ಎಷ್ಟು ಭಾಗ ಮಾಡಬೇಕು. ಯಾವ ಭಾಗಕ್ಕೆ ಯಾರನ್ನು ಅಧಿಪತಿಯನ್ನಾಗಿ ಮಾಡಬೇಕು, ಎಷ್ಟು ಸೈನ್ಯವನ್ನು ಕಾದಿಡಬೇಕು, ಕಾದಿಟ್ಟ ಸೈನ್ಯದ ಅಧಿಪತ್ಯವನ್ನು ಯಾರ ಕಡೆಗೆ ಕೊಡಬೇಕು ಮೊದಲಾದ ಸಂಗತಿಗಳ ಬಗ್ಗೆ ವಿಚಾರ ನಡೆದು, ಗೊತ್ತುವಳಿಗಳೂ ಆದವು. ಅಷ್ಟರಲ್ಲಿ ಚಾರನೊಬ್ಬನು ಅಲ್ಲಿಗೆ ಬಂದು– "ಮಹಾರಾಜರೆ, ಚಾಲುಕ್ಯ ಸಮ್ರಾಟ ಸೋಮೇಶ್ವರ ಮಹಾರಾಜರು ಸಂತಲಿಗೆಯ ತ್ರೈಲೋಕ್ಯಮಲ್ಲ ಭುಜಬಲ ಶಾಂತರಸರನ್ನು ಶಿಷ್ಟಾಯಿಯನ್ನಾಗಿ ಕಳುಹಿಸಿರುವರು" ಎಂದು ಬಿನ್ನವಿಸಿದನು.

"ಓಹೋ! ಇನ್ನೂ ಕಾಳಗದ ಪೂರ್ವದಲ್ಲಿಯೇ ಶಾಂತಿಯಾಚನೆಗೆ ಪ್ರಾರಂಭವಾಯಿತೇನು? ಹಾಗಿದ್ದರೆ ಸೈನ್ಯವನ್ನು ರಾಜಧಾನಿಯಿಂದ ಹೊರಡಿಸುವ ಕಾರಣವೇನಿತ್ತು? ನಮ್ಮ ಮಾಂಡಲಿಕತ್ವವನ್ನೊಪ್ಪಿಕೊಂಡು ನಮ್ಮ ಸಾಮ್ರಾಜ್ಯಕ್ಕೆ ಕೆಲವು ನಾಡು ಬಿಟ್ಟುಕೊಟ್ಟಿದ್ದರೆ ತೀರುತ್ತಿತ್ತು. ಒಳ್ಳೇದು; ಶಾಂತರಸನನ್ನು ಸನ್ಮಾನದಿಂದ ಒಳಗೆ ಕರೆದುಕೊಂಡು ಬಾ." ಎಂದು ರಾಜೇಂದ್ರದೇವನು ಔದ್ಧತ್ಯತೆಯಿಂದ ಚಾರನಿಗೆ ಆಜ್ಞೆ ವಿಧಿಸಿದನು.

ಸ್ವಲ್ಪವೇಳೆಯಲ್ಲಿ ಶಾಂತರಸನು ಅಲ್ಲಿಗೆ ಬಂದನು. ರಾಜೇಂದ್ರ ದೇವನು ಅವನನ್ನು ಉಚಿತಾಸನದಲ್ಲಿ ಕುಳ್ಳಿರಿಸಿ ಜಂಭದಿಂದ– "ನೀವು ನಮಗೆ ಪರಾಭೂತರಾಗಿ ಪಲಾಯನ ಮಾಡಿದ್ದರೂ, ಈಗ ಸೋಮೇಶ್ವರ ರಿಂದ ಶಾಂತಿದೂತರಾಗಿ ಶಿಷ್ಟಾಯಿಗೆ ಬಂದಿರುವದರಿಂದ ನಾವು ನಿಮ್ಮನ್ನು ಸತ್ಕರಿಸಲೇಬೇಕು."

ರಾಜೇಂದ್ರದೇವನ ಔದ್ಧತ್ಯತೆಯ ಮಾತು ಕೇಳಿ ಶಾಂತರಸನಿಗೆ ಸಿಟ್ಟು ಬಂದಿತು. ಆದರೂ ಅದನ್ನು ಬೈಲಿಗೆಳೆಯದೆ ಶಾಂತಮನಸ್ಸಿನಿಂದ– "ಸತ್ಕಾರ ಮಾಡುವದು ಬಿಡುವದು ನಿಮ್ಮ ಶಿಷ್ಟಾಚಾರದ ಭಾವನೆಗಳನ್ನು ಅವಲಂಬಿಸಿದೆ. ನಾನು ಸಂಗರದಲ್ಲಿ ಸೋತದ್ದು ನಿಜ. ನಾನು ಸೋತಿರು ವದರಿಂದ ನೀವು ಸಾಮ್ರಾಜ್ಯವನ್ನು ಸೋಲಿಸಿದೆವೆಂದು ಭಾವಿಸಬಾರದು. ನಾನು ಯಾವ ಉದ್ದೇಶದಿಂದ ಇಲ್ಲಿಗೆ ಬಂದಿರುವೆನೆಂಬದನ್ನು ತಿಳಿದು

ಕೊಳ್ಳದೆ, ಶಾಂತಿಯಾಚನೆಗೆ ಬಂದಿರುವೆನೆಂದು ಭಾವಿಸುವದು ಶುದ್ಧ ತಪ್ಪು."

"ಶಾಂತಿಯಾಚನೆಗೆ ಬಾರದಿದ್ದುದೇ ವಿಹಿತ. ವೈದ್ಯ ಹೇಳಿದ್ದೂ ಅದೆ, ರೋಗಿ ಬಯಸಿದ್ದೂ ಅದೇ. ಒಮ್ಮೆ ಚಾಲುಕ್ಯ ಸಾಮ್ರಾಜ್ಯದೊಡನೆ ಕೈ ಗೊಟ್ಟು ಕಂಚಿಯ ಸಾಮ್ರಾಜ್ಯ ಶಕ್ತಿಯನ್ನು ಭಾರತದಲ್ಲಿ ಪ್ರಕಟಿಸ ಬೇಕಾಗಿದೆ."

"ಹೀಗೇನು? ವಿರೋಚಿತ ಭಾಷಣವು. ಇಂತಹ ಮಾತುಗಳನ್ನಾಡ ದಿದ್ದರೆ, ಕುಳಿತವರು ಹೇಗೆ ವೀರರೆನ್ನಬೇಕು? ಇರಲಿ. ಕಂಚಿಯ ಮಂಡ ಲವು ಸಾಮ್ರಾಜ್ಯವಾಗಿ ಎಷ್ಟು ನಿಮಿಷಗಳಾದವು?"

"ಇವೆಲ್ಲ ಭಾಷ್ಕಳ ಭಾಷಣಗಳು, ಶಿಷ್ಟಾಯಿಯಾಗಿ ಬಂದ ದೂತ ರಿಗೆ ಭೂಷಣವಾದವುಗಳಲ್ಲ."

"ಹೀಗಿದ್ದರೆ ಶಿಷ್ಟಾಯಿಗೆ ಬಂದ ಪ್ರತಿಸಿಧಿಯೆದುರಿಗೆ ನೀವು ನಿಮ್ಮ ವಿಕ್ರಮದ ಹಾಗು ಆಢ್ಯತೆಯ ಭಾಷ್ಕಳ ಪ್ರದರ್ಶನ ಮಾಡಬೇಕಾದ ಸಂದರ್ಭವಿರಲಿಲ್ಲ."

"ನಿಮ್ಮ ಕೆಲಸವೆಷ್ಟಿದೆಯೋ ಅಷ್ಟು ತೀರಿಸಿಕೊಂಡು ಹೋಗಿರಿ. ರಾಜಮಹಾರಾಜರ ಮಾನಕ್ಕೆ ಬಾಧೆ ಬರುವಂತಹ ಭಾಷೆಗಳು ಹೊರಟರೆ ಶಿಷ್ಟಾಯಿ ದೂತನೆಂಬದರ ಕಡೆ ಲಕ್ಷ್ಯ ಸಹ ಕೊಡದೆ ಸೆರೆಮನೆಯಲ್ಲಿರಿ ಸೇನು!"

"ಪರವಿಲ್ಲ ತಾವು ನಡೆಯಿಸಿದ ಅಧರ್ಮ ಸಂಗ್ರಾಮದ ಜೊತೆಗೆ ಇದೂ ಏಕೆ ಆಗಬಾರದು?"

"ನಾನು ಅಧರ್ಮ ಯುದ್ಧ ನಡೆಯಿಸಿರುವೆನೆ?"

"ಇದನ್ನೇ ತಿಳಿಸಲಿಕ್ಕೆ ನಾನು ಇಲ್ಲಗೆ ಬಂದದ್ದು. ಕರ್ನಾಟಕ ಸಾಮ್ರಾಟ ಆಹವಮಲ್ಲ ಸೋಮೇಶ್ವರದೇವ ಮಹಾರಾಜರು ಕಂಚಿಯ ಅರಸನು ಧರ್ಮಯುದ್ಧ ಮಾಡುವನೋ, ಅಧರ್ಮಯುದ್ಧ ಮಾಡುವನೋ ಎಂಬದನ್ನು ತಿಳಿದುಕೊಂಡು ಬರಬೇಕೆಂದು ನನ್ನನ್ನು ಕಳುಹಿಸಿದ್ದಾರೆ."

"ನಾನು ಅಧರ್ಮಯುದ್ಧ ನಡೆಯಿಸಿರುವೆನೆ? ನಾನು ನಡೆಯಿಸಿದ್ದು ಅಧರ್ಮ ಸಂಗ್ರಾಮವೆಂದು ಸಿದ್ಧಪಡಿಸದೆ ಹೋದರೆ ನೀವು ಇಲ್ಲಿಂದ

ಬಿಡುಗಡೆ ಹೊಂದಲಾರಿರಿ. ನಾನು ನಿಮ್ಮನ್ನೂ, ಬನವಾಸಿಯ ಚಾವುಂಡ ರಾಯರಸರನ್ನೂ ಪಾನುಂಗಲ್ಲಿನ ಸೋಯಿಮರಸರನ್ನೂ ಧರ್ಮಯುದ್ಧ ಮಾಡಿಯೇ ಸೋಲಿಸಿರುವೆನು."

"ಈ ಮಾತಿಗೆ ನಾನು ಒಪ್ಪುವೆನು. ಧರ್ಮಸಂಗ್ರಾಮ ಮಾಡಿರುವೆ ವೆಂದು ಹೆಮ್ಮೆ ತಳೆಯುವ ನಿಮ್ಮಂತಹ ವಿಕ್ರಮಾರ್ಜಿತ ಸತ್ವಶಾಲಿಗಳಿಂದ ಊರು ಸುಲಿಯುವದು, ಪ್ರಜೆಗಳ ಕೊಲೆ ಮಾಡುವದು, ದೇವಸ್ಥಾನ, ಬಸದಿಗಳನ್ನು ನಾಶಮಾಡುವದು, ಬೆಳೆಗಳನ್ನು ಹಾಳುಮಾಡುವದು ಮೊದಲಾದ ಕೃತ್ಯಗಳು ಘಟಿಸಬೇಕೆ? ಇವು ನಿಮ್ಮ ಧರ್ಮಯುದ್ಧದ ಅಂಗಗಳೇನು? ಸೈನ್ಯವೂ, ಸೇನಾಪತಿಯೂ, ರಾಜನೂ ಯುದ್ಧ ಮಾಡು ವಂತಹರು. ಅವರೊಡನೆ ಕಾಳಗಗೊಟ್ಟರೆ ಯಾರೂ ಅಲ್ಲಗಳೆಯುವದಿಲ್ಲ. ನಿಶ್ಶಸ್ತ್ರ ನಾಗರಿಕರು, ಬೆಳೆಗಳು, ಗುಡಿ-ಬಸದಿಗಳು ನಿಮ್ಮ ವಿಕ್ರಮ ಪ್ರದ ರ್ಶನದ ಕ್ಷೇತ್ರಗಳಲ್ಲ. ಇಂತಹ ವೃತ್ತಿಯನ್ನು ತ್ಯಜಿಸಿ, ಮುಂಬರುವ ಸಂಗ್ರಾಮದಲ್ಲಿ ಕಪಟ ನೀತಿಯನ್ನನುಸರಿಸದೆ ಧರ್ಮ ಸಂಗ್ರಾಮವೆಸಗ ಲಿಕ್ಕೆ ನಿಮ್ಮ ಸಿದ್ಧತೆಯಿರುವದೋ ಹೇಗೆಂಬದನ್ನು ತಿಳಿದುಕೊಂಡು ಬರ ಲಿಕ್ಕೆ ನಾನು ಚಕ್ರವರ್ತಿಗಳಿಂದ ಶಿಷ್ಟಾಯಿಗಾಗಿ ಬಂದಿರುವೆನು. ಈ ವಿಷಯದಲ್ಲಿ ನಿಮ್ಮ ಸ್ಪಷ್ಟವಾದ ಅಭಿಪ್ರಾಯವನ್ನು ತಿಳಿಸಿರಿ."

ಶಾಂತರಸನು ಹೀಗೆ ನುಡಿದ ಕೂಡಲೇ ರಾಜೇಂದ್ರದೇವನು ಗಹಿ ಗಹಿಸಿ ನಗತೊಡಗಿದನು. ಮಹಾಸೇನಾಪತಿ ಶಚೀಂದ್ರದೇವನೂ ಹಾಗೆಯೆ ನಕ್ಕನು; ಉಪಸೇನಾಪತಿಗಳೂ ಅಷ್ಟೇ ನಕ್ಕರು; ಉಳಿದ ಕರ್ಮಚಾರಿ ಗಳೂ ನೆನಸಿನೆನಸಿಕೊಂಡು ನಕ್ಕೇ ನಕ್ಕರು. ಒಮ್ಮೆ ನಗುವದು ಮುಗಿ ಯಿತು. ಮಾತಿಗೆ ಮೊದಲಾಯಿತು ಕಂಚಿಯರಸನಿಂದ.

"ನಗುವು ,ಮನುಷ್ಯನ ಸ್ವಭಾವಜನ್ಯವಾದುದು, ಅದಕ್ಕಾಗಿ ಶಿಷ್ಟಾಯಿ ದೂತರು ಏನೂ ಭಾವಿಸಕೂಡದು" ಎಂದು ರಾಜೇಂದ್ರದೇವನು ಡೌಲಿನಿಂದ ನುಡಿದು— "ವಿಕ್ರಮಶಾಲಿಗಳಾದವರು ಮುಂದೆ ಬಂದು ಯುದ್ಧಮಾಡಿ ತಮ್ಮ ಪರಾಕ್ರಮ ಪ್ರದರ್ಶನ ಮಾಡದೆ 'ಹಾಗೆ-ಹೀಗೆ'

ಎಂದು ತಿಳಿಸುವದರಲ್ಲಿ ಯಾವ ಪೌರುಷವಿದೆ? ಬಾಹುಬಲದಲ್ಲಿ ಶಕ್ತಿಯು ಎಷ್ಟಾದರೂ ಇದ್ದರೆ ಯುದ್ಧಮಾಡಿ ಶತ್ರು ಜಯಹೊಂದಿ ಪ್ರಜಾಪೀಡೆ ಯನ್ನು ಪರಿಹರಿಸಬೇಕು; ಅಂತಹ ಕಲಿತನವಿಲ್ಲದಿದ್ದರೆ ಶರಣು ಬಂದು ಮಾಂಡಲಿಕತ್ವವನ್ನು ಒಪ್ಪಬೇಕು. 'ಶರಣೆಂದವರಿಗೆ ಮರಣವಿಲ್ಲ' ಎಂಬ ಕನ್ನಡ ನಾಣ್ನುಡಿ ಕನ್ನಡಿಗರೆಂದು ಜಂಬ ಬಡೆಯುವ ಕನ್ನಡ ಸಾಮ್ರಾಟ ನಿಗೇ ಗೊತ್ತಿಲ್ಲವೆಂದಮೇಲೆ ನಗದೆ ಹೇಗೆ ಇರಬೇಕು?"

"ನಗಿರಿ, ನಗಿರಿ, ಹೊಟ್ಟೆ ಹಿಡಿಸಲಾರದಷ್ಟು ನಗಿರಿ. ನಗುವಕಾಲ ವಿರುವಾಗ ನಗದೆ ಇರುವದಾದರೂ ಹೇಗೆ? ನಿಮ್ಮ ನಗೆಗಳು ನಿಮ್ಮ ಮಾತುಗಳಿಗಿಂತ ಹೆಚ್ಚಿನ ಅಭಿಪ್ರಾಯವನ್ನು ನನಗೆ ಮೊದಲೇ ತಿಳಿಸಿರು ವವು. ಮರಣ ಬೇಕಾದವರಿಗೆ ಶರಣು ಏಕೆ ಬೇಕು? ಭಾವೀ ಸಂಗ್ರಾ ಮವು ಇಬ್ಬರು ಅರಸರಲ್ಲೊಬ್ಬರನ್ನು ಬಲಿ ತೆಗೆದುಕೊಂಡೇ ನಿಲ್ಲುವದು. ರಾಜೇಂದ್ರದೇವ, ನಿಮ್ಮ ಅಭಿಪ್ರಾಯವು ತಿಳಿಯಿತು. ಇನ್ನು ನನಗೆ ನಿರೋಪ ಕೊಡಿರಿ."

"ದಯಮಾಡಿಸಿರಿ!" ಎಂದು ರಾಜೇಂದ್ರದೇವನು ಆಥ್ಯತೆಯಿಂದ ನುಡಿದನು. ಕೂಡಲೇ ಶಾಂತರಸನು ಶಿಬಿರದಿಂದ ಹೊರಬಿದ್ದು ತೆರಳಿದನು.

ಶಾಂತರಸನು ಹೋದಮೇಲೆ ರಾಜೇಂದ್ರದೇವನು ಶಾಂತರಸನ ಶಿಷ್ಟಾಯಿಯ ಬಗ್ಗೆ ಕೆಲವು ವೇಳೆ ವಿನೋದ ಮಾಡಿದರು. ತರುವಾಯ ಅವನು ಸಂಗ್ರಾಮದ ವ್ಯವಸ್ಥೆಯ ಬಗ್ಗೆ ಮಾತಾಡಿ ಅಂದಿನ ಓಲಗವನ್ನು ವಿಸರ್ಜಿಸಿದನು.

ಮಾರನೆಯ ದಿನವೆ ಸಂಗ್ರಾಮಕ್ಕೆ ಮೊದಲಾಯಿತು. ಚಾಲುಕ್ಯ ಸೇನಾಸಾಗರಕ್ಕೂ ಕಂಚಿಯ ಸೈನ್ಯಸಮುದ್ರಕ್ಕೂ ಕಡುತರವಾದ ಕಾಳಗ ವೆಸಗಿತು. ಎರಡೂ ನಿಟ್ಟಿನವರು ತಮ್ಮ ತಮ್ಮ ಸೈನ್ಯದಲ್ಲಿ ಪಳಕಗಳನ್ನು ಏರ್ಪಡಿಸಿ ಯುದ್ಧ ಮಾಡಲಾರಂಭಿಸಿದರು. ಎರಡೂ ದಂಡಿನ ಕಲಿತನ ಕ್ಕೇನೂ ಕುಂದಿದ್ದಿಲ್ಲ. ವಿಜಯಲಕ್ಷ್ಮಿಯು ಯಾರ ಕೊರಳಲ್ಲಿ ಮಾಲೆ ಹಾಕಬೇಕೆಂಬದನ್ನು ನಿರ್ಧಾರ ಮಾಡಲಾರದವಳಾಗಿದ್ದಳು. ಹೆಣಗಳು

ರಾಶಿರಾಶಿಯಾಗಿ ಬಿದ್ದವು! ನೆತ್ತರವು ಸರವುಗಟ್ಟಿ ಹರಿಯಿತು! ರಣಭೂಮಿಯು ತನ್ನ ವಿಕ್ರಾಳ ಸ್ವರೂಪವನ್ನು ಪ್ರದರ್ಶಿಸುತ್ತ ಭಯಾನಕವಾಗಿ ತೋರಹತ್ತಿತು. ಅಸಂಖ್ಯ ವೀರರು ಎರಡೂ ನಿಟ್ಟಿನವರೂ ರಣಭೂಮಿಗೆ ಮೈಗೊಟ್ಟು ವೀರಸ್ವರ್ಗವನ್ನು ಹೊಂದಿದರು. ಕಂಚಿಯರಸನು ತನ್ನ ಕಲಿತನವನ್ನು ಪ್ರದರ್ಶಿಸಿ, ವೈರಿಗಳನ್ನು ಧೃತಿಗುಂದಿಸಬೇಕೆಂಬ ಬುದ್ಧಿಯಿಂದ ತನ್ನ ಪಡೆಯೊಳಗೆ ಕೆಲವು ಪಥಕಗಳನ್ನು ನಿರ್ಮಾಣ ಮಾಡಿ ಅವುಗಳನ್ನು ಊರು ಸುಲಿಯಲು ಕಳುಹಿಸಿಕೊಟ್ಟನು. ಅವನು ಈ ಕೃತ್ಯದಿಂದ ಆಹವಮಲ್ಲ ಸೋಮೇಶ್ವರನ ಹಾಗೂ ಕುಮಾರ ವೀರವಿಕ್ರಮಾದಿತ್ಯನ ಸಂತಾಪವು ಮಿತಿಮೀರಿತು. ಅವರು ಕಂಚಿಯ ಸೈನ್ಯ ಸದೆಬಡೆಯಲು ಅನೇಕ ಯುಕ್ತಿಗಳನ್ನು ಉಪಯೋಗಿಸತೊಡಗಿದರು. ಇಷ್ಟಾದರೂ ಉಭಯ ಬಲಗಳು ಸಮಾನವಾಗಿಯೆ ಉಳಿದವು. ಚಾಲುಕ್ಯ ಸೇನಾಪತಿಗಳೂ ಕಂಚಿಯುವರನ್ನು ಪರಾಭವಗೊಳಿಸಲು ಆಥಟದಿಂದ ಕಾದಿದರು. ಕನ್ನಡಿಗರು ತಮ್ಮ ಕಲಿತನವನ್ನು ಒಳಿತಾಗಿ ತೋರ್ಪಡಿಸಿದರು. ಎಷ್ಟು ಬಗೆಯಿಂದ ಯುದ್ಧ ಮಾಡಿದರೂ ಕಂಚಿಯ ಸೈನ್ಯವು ಒಂದು ಬೆರಳು ಸಹ ಹಿಂದಡಿಯಿಡಲಿಲ್ಲ. ಅಧರ್ಮಯುದ್ಧ ಮಾಡುವ ರಾಜೇಂದ್ರದೇವನ ತಲೆಬುರುಡೆಯುರುಳಿಸುವೆನೆಂದು ಮಾಡಿದ ಪ್ರತಿಜ್ಞೆಯು ವ್ಯರ್ಥವಾಗುವ ಸಮಯ ಬಂದಿತೆಂದು ಆಹವಮಲ್ಲ ಸೋಮೇಶ್ವರನು ಯೋಚನೆಗೊಳಗಾದನು. ಕೊನೆಗೆ ಕಂಚಿಯ ಸೇನಾಸಾಗರವನ್ನು ಹೊಕ್ಕು ಆತ್ಮಾರ್ಪಣೆ ಮಾಡಬೇಕೆಂಬ ಯೋಚನೆ ಸಹ ಅವನಲ್ಲಿ ಮೂಡಿಹೋಯಿತು. ಅವನು ಕುಮಾರ ವಿಕ್ರಮಾದಿತ್ಯನೆದುರಿನಲ್ಲಿ ಈ ಪ್ರಸ್ತಾಪವನ್ನೆತ್ತಿದನು. ಆದರೆ ಆ ವೀರವರನು ತಂದೆಗೆ ಧೈರ್ಯವುಂಟಾಗುವಹಾಗೆ ಆಶ್ವಾಸನೆಯಿತ್ತನು.

ಮರುದಿನ ಯುದ್ಧದಲ್ಲಿ ವಿಕ್ರಮಾದಿತ್ಯನು ಅಗ್ರೇಸರನಾಗಿ ತನ್ನ ಸೈನ್ಯದಲ್ಲಿ ಚಮತ್ಕಾರಿಕ ವ್ಯೂಹ ರಚನೆಮಾಡಿ ದಾಳಿಯ ಸಂಕೇತವನ್ನು ಸಹ ಗೊತ್ತು ಮಾಡಿದನು. ಅವನ ಈ ಹೊಸ ಪದ್ಧತಿಯ ದಾಳಿಯು ಒಳ್ಳೆಯ ಪರಿಣಾಮಕಾರಿಯಾಯಿತು. ಈ ದಾಳಿಯಿಂದ ಕನ್ನಡಿಗರ ಸೈನ್ಯ ನಾಶವು ಬಹಳವಾದರೂ ಫಲವು ಅನುಕೂಲವಾಗಿ ಪರಿಣಮಿಸಿತು. ಕನ್ನಡ ಸೇನೆಯ ದಾಳಿಯಿಂದ ಕಂಚಿಯ ಸೈನ್ಯವು ಇಬ್ಭಾಗವಾಯಿತು. ದೊಡ್ಡ

ಭಾಗವು ಮಹಾಸೇನಾಪತಿ ಶಚೀಂದ್ರದೇವನಿದ್ದಕಡೆಗಾಯಿತು. ರಾಜೇಂದ್ರ ದೇವನ ಶಿಬಿರದ ಕಡೆಗೆ ಅಲ್ಪಸಂಖ್ಯಾಕ ಸೈನ್ಯವು ಉಳಿಯಿತು. ಈ ಘಟನೆಯಾದೊಡನೆಯೆ ವಿಕ್ರಮಾದಿತ್ಯನು ಕಾಯ್ದಿಟ್ಟ ದಳದೊಳಗಿನ ಕೆಲವು ನಾಮಾಂಕಿತ ಯೋಧರೊಡನೆ ರಾಜೇಂದ್ರದೇವನ ಪಡೆಯಮೇಲೆ ಬಿದ್ದನು. ಅಭೂತಪೂರ್ವವಾದ ಈ ಘಟನೆಯಿಂದ ರಾಜೇಂದ್ರದೇವನು ಬೆಚ್ಚಿದನು; ಬೆದರಿದನು.; ಚಿತ್ತದೊಳಗಿನ ಕಲಿತನವು ಮಾಯವಾಯಿತು. ಮನದೊಳಗಿನ ಹೆಮ್ಮೆ ಹರಿಯಿತು. ಸಂಧಾನಕ್ಕಾಗಿ ಪ್ರತಿನಿಧಿಯನ್ನು ಕಳುಹಿಸಬೇಕೆಂಬ ಅವಸ್ಥೆ ಪ್ರಾಪ್ತವಾಯಿತು; ಅವಕಾಶ ದೊರೆಯಲಿಲ್ಲ. ಕಲಿವಿಕ್ರಮಾದಿತ್ಯನು ತನ್ನ ದಂಡಿನೊಡನೆ ವಿದ್ಯುದ್ವೇಗದಿಂದ ಸಾಗಿ ರಾಜೇಂದ್ರದೇವನ ಮೇಲೆ ಬಿದ್ದನು. ಸ್ವಲ್ಪವೇಳೆ ಯುದ್ಧ ನಡೆಯುವಷ್ಟ ರಲ್ಲಿ ವಿಕ್ರಮನ ವಿಜಯಿ ಖಡ್ಗವು ಚೋಳರಸ ರಾಜೇಂದ್ರದೇವನ ಶಿರ ವನ್ನು ಹಾರಿಸಿತು! ವೈರಿಯು ಇಳೆಗುರುಳಿದನು. ವಿಕ್ರಮಾರ್ಕನ ಸೈನ್ಯ ದಲ್ಲಿ ವಿಜಯನಿನಾದವೆದ್ದಿತು. ವಿಜಯದುಂದುಭಿಗಳು ಮೊಳಗತೊಡಗಿದವು ವಿಕ್ರಮನು ರಾಜೇಂದ್ರದೇವನ ಶಿರವನ್ನು ಬರ್ಚಿಯ ತುದಿಗೆ ಚುಚ್ಚಿ ರಣ ಭೂಮಿಯಲ್ಲಿ ಮೆರೆಯಿಸಿದನು. ಒಡೆಯನು ಮಡಿದ ವಾರ್ತೆಯು ಹಾ ಹಾ ಅನ್ನುವಷ್ಟರಲ್ಲಿ ಕಂಚಿಯ ಸೈನ್ಯದಲ್ಲೆಲ್ಲ ಪಸರಿಸಿತು. ಕೂಡಲೆ ಶತ್ರು ಸೇನೆಯು ಎದೆಗುಂದಿತು. ಇನ್ನು ತಮ್ಮ ಪಾಡು ಒಳಿತಾಗುವದಿಲ್ಲವೆಂದು ಕಾಲಿಗೆ ಬುದ್ಧಿ ಹೇಳಿತು. ಚದುರುತ್ತಿರುವ ಸೈನ್ಯವನ್ನು ಒಂದುಗೂಡಿ ಸುವದಕ್ಕಾಗಿ ಮಹಾಸೇನಾಪತಿ ಶಚೀಂದ್ರದೇವನು ಮಾಡಿದ ಪ್ರಯತ್ನವು ನಿಷ್ಫಲವಾಯಿತು. ಇನ್ನು ಚಾಲುಕ್ಯ ಸೇನಾಸಾಗರದ ಎದುರಿಗೆ ನಿಂತರೆ ಸರ್ವನಾಶವಾಗುವದೆಂದು ಬಗೆದು ಅವನು ಅಳಿದುಳಿದ ಸೈನ್ಯದೊಡನೆ ಕಂಚಿಯ ದಿಕ್ಕಿಗೆ ಅಭಿಮುಖನಾದನು. ಅವನು ಓಟವನ್ನು ಬಲಗೊಳಿಸು ವದೇ ಕರ್ತವ್ಯವಾಗಿತ್ತು. ಯಾಕಂದರೆ ಸೈನ್ಯವು ಕರ್ನಾಟಕ ಸಾಮ್ರಾ ಜ್ಯದ ಮಧ್ಯದಲ್ಲಿ ಸಿಲುಕಿತ್ತು. ಆದ್ದರಿಂದ ಅವನ ಪಲಾಯನವು ಅಷ್ಟು ರಭಸವುಳ್ಳದ್ದಾಯಿತು.

ಓಟದ ಭರದಲ್ಲಿ ಚೋಳ ಸೈನಿಕರಿಗೆ ಏನನ್ನೂ ಒಯ್ಯಲಿಕ್ಕಾಗಲಿಲ್ಲ. ದೇಹದೊಳಗಿನ ಪ್ರಾಣವೊಂದುಳಿದರೆ ಅವರಿಗೆ ಸಾಕಾಗಿತ್ತು. ಚಾಲುಕ್ಯ

ಸೈನ್ಯವು ಚೋಳರನ್ನು ಬಹುದೂರ ಬೆನ್ನಟ್ಟಿತು. ಇಷ್ಟುದಿನ ಕರ್ನಾಟಕ ಸಾಮ್ರಾಜ್ಯದಲ್ಲಿ ಸುಲಿಗೆ ಮಾಡಿ ದೊರಕಿಸಿದ ಸಂಪತ್ತು ಚಾಲುಕ್ಯರಿಗೆ ತಿರುಗಿ ದೊರೆಯಿತಲ್ಲದೆ, ಕಂಚಿಯುವರ ಸಂಪತ್ತೂ ಕೈವಶವಾಯಿತು. ರಾಜೇಂದ್ರದೇವನ ಸೈನ್ಯದೊಳಗಿನ ಸಾವಿರಾರು ಆನೆ-ಕುದುರೆಗಳು ವಿಕ್ರಮಾದಿತ್ಯನ ಸ್ವಾಧೀನವಾದವು. ಈ ಮೇರೆಗೆ ಮಹಾವಿಜಯವನ್ನು ಸಂಪಾದಿಸಿದ ವಿಕ್ರಮಾದಿತ್ಯನು ತನ್ನ ವೀರ ಸೇನೆಯೊಡನೆ ಆಹವಮಲ್ಲ ಸೋಮೇಶ್ವರನಿಗೆ ಭೆಟ್ಟಿಯಾಗಿ ಅಭಿವಂದನೆ ಮಾಡಿದನು. ಬರ್ಚಿಯ ತುದಿಗಿದ್ದ ರಾಜೇಂದ್ರದೇವನ ಶಿರವನ್ನು ನೋಡಿ ಸೋಮೇಶ್ವರನು— "ಶಾಬಾಸ್! ವೀರ ಕುಮಾರಾ, ನೀನೇ ನನ್ನ ಹೆಸರನ್ನುಳಿಸುವ ವೀರ ಪುತ್ರನು!"ಎಂದು ಧನ್ಯೋದ್ಗಾರ ತೆಗೆದನು.

ವಿಜಯಿಗಳಾದ ವೀರ ಕನ್ನಡ ಸೈನಿಕರಿಗೆ ಪಾರಿತೋಷಕವು ಹಂಚಲ್ಪಟ್ಟಿತು. ಚೋಳರಿಂದುಂಟಾದ ನಷ್ಟಕ್ಕಾಗಿ ವಿಕ್ರಮಾದಿತ್ಯನು ಅಲ್ಲಲ್ಲಿ ಪರಿಹಾರ ದ್ರವ್ಯವನ್ನು ಕಳುಹಿಸಿದನು. ಗುಡಿ-ಬಸದಿಗಳ ಪುನರುದ್ಧಾರ ಧನವು ಕಳುಹಿಸಲ್ಪಟ್ಟಿತು. ಎಲ್ಲೆಲ್ಲಿಯ ಬೆಳೆಗಳು ನಾಶವಾಗಿವೆಯೋ ಅಲ್ಲಲ್ಲಿಯ ಪ್ರಜೆಗಳಿಗೆ ಕಂದಾಯ ಬಿಡುಗಡೆಯ ಆಜ್ಞೆಯು ಹೊರಟಿತು. ಇಷ್ಟೆಲ್ಲ ವ್ಯವಸ್ಥೆಯಾದ ಮೇಲೆ ಸೋಮೇಶ್ವರನು ಸೈನ್ಯದ ತಳ ಕಿತ್ತುವ ಯೋಜನೆ ಮಾಡಿದನು. ಚೋಳರಿಂದುಂಟಾದ ಅನವಸ್ಥೆ ದೂರಾಗುವವರೆಗೆ ವಿಕ್ರಮಾದಿತ್ಯನು ಬನವಾಸಿ ಗಂಗುನಾಡುಗಳಲ್ಲಿರಬೇಕೆಂದು ಗೊತ್ತು ಮಾಡಿದನು.

ವಿಕ್ರಮಾದಿತ್ಯನು ತಂದೆಯ ಆಜ್ಞೆಯನ್ನು ಶಿರಸಾವಹಿಸಿ, ಕಂಚಿಯುವರ ಹಾವಳಿಯಿಂದುಂಟಾದ ದುರವಸ್ಥೆ ದೂರಾದ ಮೇಲೆ ತಾನು ಕಂಚಿಯವರೆಗೆ ದಂಡೆತ್ತಿ ಹೋಗಿ ಸೇಡಿಗೆ ಸೇಡು ತೀರಿಸಿಕೊಂಡು ಬರುವೆನೆಂದು ತಿಳಿಸಿದನು. ಮಗನ ಮಾತಿಗೆ ಸೋಮೇಶ್ವರನು ಒಪ್ಪಿದನು. ಬಹು ಸೈನ್ಯವನ್ನು ಮಗನ ವಶಕ್ಕೆ ಕೊಟ್ಟು, ಉಳಿದ ಸೇನೆಯೊಡನೆ ಅವನು ಕಲ್ಯಾಣನಗರಿಗೆ ತೆರಳಿದನು. ಎಲ್ಲ ಮಂಡಲೇಶ್ವರರು ಸಾರ್ವಭೌಮನ ಆಜ್ಞೆಹೊಂದಿ ತಮ್ಮ ತಮ್ಮ ರಾಜಧಾನಿಗಳಿಗೆ ಹೊರಟರು.

ವಿಕ್ರಮಾದಿತ್ಯನು ಕಂಚಿಯುವರೆಗೆ ದಂಡೆತ್ತಿ ಹೋಗಿ ಮುಯ್ಯಕ್ಕೆ ಮುಯ್ಯ ತೀರಿಸಿಕೊಂಡು ಅಲ್ಲಿಯ ಅರಸನಿಂದ ಹೇರಳ ಕಪ್ಪವನ್ನೆತ್ತಿ ಕೇರಳ ರಾಜ್ಯವನ್ನು ನುಗ್ಗಿದನು. ಅಲ್ಲಿಯೂ ಮಹಾ ವಿಜಯವನ್ನು ಸಂಪಾದಿಸಿ, ದಿಗ್ವಿಜಯಕ್ಕಾಗಿ ಮುಂದೆ ಸಾಗಿದನು. ವೀರ ವಿಕ್ರಮನು ಶತ್ರುರಾಜರನ್ನು ಸೋಲಿಸಿ ಚಾಲುಕ್ಯ ಸಾಮ್ರಾಜ್ಯವನ್ನು ನಿರ್ವೈರವನ್ನಾಗಿ ಮಾಡಿದನು. ತರುವಾಯ ಅವನು ಅಗಣಿತವಾದ ಸಂಪತ್ತಿನೊಡನೆ ಕಲ್ಯಾಣ ರಾಜಧಾನಿಯನ್ನು ತಲುಪಿದನು. ಮಗನ ಮಹಾ ವಿಜಯದಿಂದ ಸೋಮೇಶ್ವರನು ಸ್ವಾನಂದ ಸಾಮ್ರಾಜ್ಯದಲ್ಲಿ ಮುಳುಗಿದನು.

---

## ೫ ಮಹಾನುಭಾವ ವಿಕ್ರಮಾದಿತ್ಯ !

ಅಣ್ಣೀಗೇರಿಯ ಮಹಾಯುದ್ಧದಲ್ಲಿ ಕನ್ನಡಿಗರು ಮಹಾ ವಿಜಯವನ್ನು ಹೊಂದಿದ್ದಕ್ಕೆ ಕಳವಳಪಡುವ ಪ್ರಾಣಿಯೆಂದರೆ ಇಡೀ ಕರ್ನಾಟಕ ಸಾಮ್ರಾಜ್ಯದಲ್ಲಿ ಒಂದೇ ಒಂದಾಗಿತ್ತು. ಆ ಪ್ರಾಣಿಯೆಂದರೆ ಸಾಮ್ರಾಜ್ಯದ ಹೊರಗಿನದಾಗಿರದೆ ಸಾಮ್ರಾಜ್ಯಕ್ಕೆ ಸಂಬಂಧ ಪಟ್ಟದ್ದೂ ಸಾಮ್ರಾಜ್ಯಾಧಿಕಾರ ಹೊಂದಲರ್ಹವಾದದ್ದೂ ಆಗಿತ್ತು. ಅದು ಯಾವುದೆಂದರೆ ಕರ್ನಾಟಕ ಸಾಮ್ರಾಜ್ಯದ ಭಾವೀ ಸಾರ್ವಭೌಮ ಇಮ್ಮಡಿ ಸೋಮೇಶ್ವರ! ಇಮ್ಮಡಿ ಸೋಮೇಶ್ವರನಿಗೆ ಅವನ ತಂದೆಯೂ, ವಿಕ್ರಮಾದಿತ್ಯನೂ ಈಗ ವೈರಿಯಂತೆ ತೋರತೊಡಗಿದ್ದರು. ತಾನು ಪಟ್ಟಬಾಧ್ಯನಿದ್ದರೂ ವಿಕ್ರಮನಿಗೆ ಯೌವರಾಜ್ಯಾಭಿಷೇಕ ಮಾಡಿಸುವ ಹಂಬಲವು ತಂದೆಯಲ್ಲಿ ಹುಟ್ಟಿದ್ದರಿಂದ ಅವನು ವೈರಿಯಂತೆ ಇವನಿಗೆ ತೋರಲಾರಂಭಿಸಿದ್ದನು. ವಿಕ್ರಮಾದಿತ್ಯನು ವೀರಾಗ್ರಣಿಯೆಂದು ಹೆಸರುವಾಸಿಯಾದುದರಿಂದಲೇ ತಂದೆಯು ಮನಸ್ಸನ್ನು ಈ ರೀತಿ ಪರಿವರ್ತನೆ ಮಾಡಲು ಕಾರಣೀಭೂತನಾದುದರಿಂದ ಅವನೂ ಅರಿಯಾಗಿಯೇ ತೋರಹತ್ತಿದನು. ಈ ವೈರಿದ್ವಯರು ಅಣ್ಣಿಗೇರಿಯ ಕಾಳಗದಲ್ಲಿ ಮೈಗೂಡುವರೆಂದು ಅವನ ಗ್ರಹಿಕೆಯಾಗಿತ್ತು. ಆದರೆ ಅವನ ದುರ್ದೈವವೂ ಕನ್ನಡಿಗರ ಸುದೈವವೂ ಹಾಗೆ ಮಾಡಗೊಡ

ಲಿಲ್ಲ. ಆದುದರಿಂದಲೇ ಅವನ ಮನಸ್ಸು ಕಳವಳಪಡತೊಡಗಿತ್ತು. ವಿಕ್ರಮಾದಿತ್ಯನು ಕಂಚಿಯವರೆಗೆ ದಂಡೆತ್ತಿ ಹೋಗಿ ಅನೇಕ ಅರಸರನ್ನು ಪರಾಭವಗೊಳಿಸಿ, ಕರ್ನಾಟಕ ಸಾಮ್ರಾಜ್ಯವನ್ನು ನಿರ್ವೈರವನ್ನಾಗಿ ಮಾಡಿ ಹೇರಳವಾದ ಕಪ್ಪ-ಕಾಣಿಕೆಗಳನ್ನು ತಂದಮೇಲೆ ಸಂತುಷ್ಟನಾದ ಸೋಮೇಶ್ವರ ಸಾರ್ವಭೌಮನು ಅವನಿಗೆ ಯೌವರಾಜ್ಯಾಭಿಷೇಕ ಸಮಾರಂಭವನ್ನು ಹಮ್ಮಿದ್ದರಿಂದ ಇಮ್ಮಡಿ ಸೋಮೇಶ್ವರ ತಲೆ ಕೆಟ್ಟು ಹೋದಂತಾಗಿತ್ತು. ವಿಕ್ರಮನ ಯೌವರಾಜ್ಯಾಭಿಷೇಕ ಸಮಾರಂಭವನ್ನು ಹಾಳುಗೆಡವಲು ಏನು ಉಪಾಯ ಮಾಡಬೇಕೆಂದು ಇಮ್ಮಡಿ ಸೋಮೇಶ್ವರನು ಯೋಚಿಸತೊಡಗಿದ್ದನು.

ಸೋಮೇಶ್ವರನು ಅಂತಃಪುರದಲ್ಲಿ ರಾಣಿಯಾದ ಅಂಬಿಕಾದೇವಿಯೊಡನೆ ಮಾತಾಡುತ್ತ ಕುಳಿತಿದ್ದನು. ಅಂಬಿಕಾದೇವಿಯು ಅತ್ಯಂತ ಸಾತ್ವಿಕ ವೃತ್ತಿಯವಳು. ಪತಿಯ ಮನೋವೃತ್ತಿಗಾಗಿ ಅವಳು ನೊಂದುಕೊಳ್ಳುತ್ತಿದ್ದಳು. ಪತಿಯಲ್ಲಿಯ ವಿಷಮ ಭಾವವನ್ನು ಹೋಗಲಾಡಿಸುವದಕ್ಕೆ ಅವಳು ಆಗಿಂದಾಗ ಸಮಯೋಚಿತ ಪ್ರಯತ್ನ ಮಾಡುತ್ತಿದ್ದಳು. ಅವಳ ಪ್ರಯತ್ನಕ್ಕೆ ಯಶಸ್ಸು ದೊರೆಯುತ್ತಿರಲಿಲ್ಲ. ಆದರೂ ಅವಳು ಭಗ್ನಮನೋರಥಳಾಗದೆ ಪತಿಗೆ ಸಮಯೋಚಿತ ಉಪದೇಶ ಮಾಡುವದನ್ನು ಬಿಡುತ್ತಿರಲಿಲ್ಲ. ಸಾರ್ವಭೌಮ ಮೊದಲನೆಯ ಸೋಮೇಶ್ವರನು ವಿಕ್ರಮನಿಗೆ ಯೌವರಾಜ್ಯ ಪಟ್ಟಾಭಿಷೇಕ ಮಾಡಿಸುವ ಉಪಕ್ರಮವನ್ನು ನಡೆಯಿದ್ದನ್ನು ನೋಡಿ ಕೆರಳಿದ ಇಮ್ಮಡಿ ಸೋಮೇಶ್ವರನು ತಂದೆಯ ಕಾರ್ಯವನ್ನು ಹದಗೆಡಿಸಬೇಕೆಂಬ ಸಾಹಸದಲ್ಲಿದ್ದುದು ಅಂಬಿಕಾದೇವಿಗೆ ಗೊತ್ತಾದ್ದರಿಂದ ಆ ವಿಷಯದಲ್ಲಿ ಪತಿಯ ಮನಸ್ಸನ್ನು ತಿರುಗಿಸಬೇಕೆಂದು ಅವಳು ಯೋಚಿಸಿಕೊಂಡಳು. ಇದೇ ವಿಷಯದಲ್ಲಿ ಆ ದಂಪತಿಗಳು ವಾದವಿವಾದ ಮಾಡುತ್ತ ಕುಳಿತಿದ್ದಳು.

"ಪ್ರಿಯೆ, ಧರ್ಮವಂತ ರಾಜರೆಂದು ಹೆಸರುವಾಸಿಗಳಾದ ತಂದೆಯವರಲ್ಲಿ ಈ ವಿಧದ ವೈಷಮ್ಯವೆ? ಇದನ್ನು ನಾನು ಹೇಗೆ ಸಹನಮಾಡಲಿ? ಹಿರಿಯನಾದ ನಾನು ಪಟ್ಟಬಾಧ್ಯನಿರಲು ಚಿಕ್ಕವನಾದ ವಿಕ್ರಮನಿಗೆ ಯೌವ

ರಾಜ್ಯ ಪಟ್ಟಬಂಧ ಮಹೋತ್ಸವ ಮಾಡಿಸಬೇಕೆನ್ನುವ ಅವರಿಗೆ ಏನನ್ನ ಬೇಕು? ನಾನು ಅವರ ಕಾರ್ಯಕ್ಕೆ ವಿಘ್ನ ತರಲು ಸಾಧ್ಯವಾದ ಮಟ್ಟಿಗೂ ಸಾಹಸ ಮಾಡದೆ ಬಿಡಲಾರೆನು."

"ಬೇಡ, ಪಿತೃದ್ರೋಹ ಮಾಡುವದು ಬೇಡ. ಮಾತಾ ಪಿತೃಗಳ ಮನೋಭಂಗ ಮಾಡುವದು ಮಹಾ ಪಾತಕವು. ವಿಕ್ರಮಾದಿತ್ಯರಿಗೆ ಯುವರಾಜ ಪದವಿಯನ್ನು ಕೊಡತೊಡಗಿರುವದರ ಉದ್ದೇಶವು ನನ್ನಂತೆ ನಿಮಗೂ ಗೊತ್ತಿದೆ. ನೀವು ಪ್ರತಾಪಶಾಲಿಗಳಾಗಿರದ್ದೇ ನೀವು ನಿಮ್ಮ ಅಧಿ ಕಾರವನ್ನು ಕಳಕೊಂಡದ್ದರ ಕಾರಣವು. ರಾಜ್ಯ ಲಕ್ಷ್ಮಿಯು ಕರ್ತೃತ್ವ ಶಾಲಿಯ ಕೊರಳಲ್ಲಿ ಮಾಲೆ ಹಾಕುವಳು. ಕೇವಲ ವಿಲಾಸ ಭೋಗಗಳೇ ರಾಜನ ಪ್ರಾಮುಖ್ಯ ಕರ್ತವ್ಯಗಳಲ್ಲ. ಘನತೆ ಹೊಂದಿದ ಈ ಕರ್ನಾಟಕ ಸಾಮ್ರಾಜ್ಯವನ್ನಾಳಲು ವಿಕ್ರಮಾದಿತ್ಯರೇ ಯೋಗ್ಯರೆಂಬ ಮಾತು ನನ್ನಂತಹ ಪಾಮರ ಬುದ್ಧಿಯ ಅಬಲೆಗೆ ಸಹ ಗೋಚರವಾಗುತ್ತಿರುವಾಗ ಮಹಾ ರಾಜರು ಅದನ್ನು ನಿಮಗೆ ಹೇಗೆ ಒಪ್ಪಿಸುವರು?"

"ಪ್ರಿಯೆ, ನಿನೂ ನನ್ನ ವಿರೋಧಿಯಾಗಲು ಹವಣಿಸುತ್ತಿರುವಂತೆ ಭಾಸವಾಗುವದು."

"ನೀವು ಹಾಗೆ ತಿಳಿದುಕೊಳ್ಳುವದೇ ತಪ್ಪಾಗಿದೆ. ಮಾವಂದಿರಾಗಲಿ ಮೈದುನ ವಿಕ್ರಮಾದಿತ್ಯರಾಗಲಿ ಇನ್ನುಳಿದ ಸಾಮ್ರಾಜ್ಯ ಕರ್ಮಚಾರಿಗಳೇ ಆಗಲಿ ನಿಮ್ಮ ಗುಣಸ್ವಭಾವಗಳನ್ನು ನೋಡಿಯೇ ತಿರಸ್ಕರಿಸುತ್ತಿರುವರಲ್ಲದೆ ಅದಕ್ಕೆ ಮಿಕ್ಕ ಕಾರಣಗಳಿಲ್ಲ. ರಾಜ್ಯವೆಂಬುದು ಹಂಸತೂಲಿಕಾತಲ್ಪವಲ್ಲ; ಮುಳ್ಳುಹಾಸಿಗೆ. ವೈರಿಗಳನ್ನು ನಾಶಗೊಳಿಸಬೇಕು; ಪ್ರಜಾರಂಜನಕಾರಿ ಯಾಗಿರಬೇಕು; ಸಾಮ್ರಾಜ್ಯ ರಕ್ಷಣೆಗಾಗಿ ಆತ್ಮಬಲಿದಾನ ಮಾಡಲು ಸಹ ಸಿದ್ಧರಾಗಿರಬೇಕು. ಅಂತಹರು ರಾಜ್ಯ ಸೂತ್ರಗಳನ್ನು ಕೈಕೊಳ್ಳಲಿಕ್ಕೆ ಅರ್ಹರು. ನಿಮ್ಮ ವೃತ್ತಿ ಹಾಗಿಲ್ಲ. ನೀವು ಗೌರವಕ್ಕಾಗಿ ರಾಜ್ಯ ಸೂತ್ರ ಗಳನ್ನು ತೆಗೆದುಕೊಳ್ಳಬೇಕೆನ್ನುವವರು. ಯುದ್ಧದಂತಹ ಸಂದರ್ಭಗಳಲ್ಲಿ ಬುದ್ಧಿಪೂರ್ವಕವಾಗಿ ವೈತಪ್ಪಿಸಿಕೊಳ್ಳಲು ಸಾಹಸ ಮಾಡುವಂತಹರು. ವಸ್ತುಸ್ಥಿತಿಯು ಹೀಗಿದ್ದಮೇಲೆ ನಿಮ್ಮಂತಹರಿಗೆ ಸಾಮ್ರಾಜ್ಯಾಧಿಕಾರದ ಮಾನವು ಹೇಗೆ ದೊರೆಯಬೇಕು?

"ಯಾವನಿಗೆ ಯುದ್ಧ ಮಾಡುವ ಚಟವು ಅದೆಯೋ ಅವನು ಮಾಡಲಿ. ಸೈನ್ಯವಿಲ್ಲವೆ ? ಸೇನಾಪತಿಯಿಲ್ಲವೆ? ಮಂಡಲೇಶ್ವರ ಮಹಾ ಮಂಡಲೇಶ್ವರರಿಲ್ಲವೆ ? ಇಷ್ಟಿದ್ದು ವ್ಯರ್ಥವಾಗಿ ಸಾಯುವ ಸಾಹಸವನ್ನೇಕೆ ಮಾಡಬೇಕು ? ಈ ಸಾರೆ ತಂದೆಯವರೂ ವಿಕ್ರಮನೂ ಪಾರಾಗಿ ಬಂದ ದ್ದೆಂದರೆ ಅವರ ಸುದೈವವೇ ಸರಿ. ಒಂದು ವೇಳೆ ಗತಿಸಿದ್ದರೆ ಅವರುಕ್ಕೆಯಾವ ಪುರುಷಾರ್ಥವನ್ನು ಸಾಧಿಸಿದಂತಾಗುತ್ತಿತ್ತು ? ಸಾರ್ವಭೌಮರಾದವರು ಇಂತಹ ಗಂಡಾಂತರದಲ್ಲಿ ತಮ್ಮ ಪ್ರಾಣಗಳನ್ನು ದೂಡುವದು ಶುದ್ಧ ತಪ್ಪು. ರಾಜಕಾರಣದಲ್ಲಿಯೂ ಸಂಗ್ರಾಮದಂತಹ ಕಾರ್ಯಗಳಲ್ಲಿಯೂ ರಾಜ್ಯ ಚಾಲಕರು ಕೇವಲ ಸಲಹೆಗಾರರಾಗಿರಬೇಕಲ್ಲದೆ, ಜೀವ-ಮರಣ ಸಮಸ್ಯೆಗಳಂತಹ ವಿಷಯಗಳಲ್ಲಿ ಉಪದ್ವ್ಯಾಪ ಮಾಡಹೋಗಬಾರದು."

"ಈ ಹೊಸ ರಾಜ್ಯ ನೀತಿಯನ್ನು ನಾನು ಇಂದೇ ಹೊಸದಾಗಿ ನಿಮ್ಮ ಬಾಯಿಯಿಂದ ಕೇಳಿದೆನು. ಈ ಬಗೆಯ ಭಾಷೆಯು ಅಂತಃಪುರ ದಲ್ಲಿ ಅದರಲ್ಲಿ ನಿಮ್ಮ ಅರ್ಧಾಂಗಿಯೆದುರಿಗೆ ಮಾತ್ರ ಹೊರಟಿತೆಂದು ಒಂದು ವೇಳೆ ಚಂದ ಕಾಣಬಹುದು. ಉಳಿದೆಡೆಯಲ್ಲಿ ಅರಿತು-ಮರೆತು ಹೀಗೆ ಆಡ ಹೋದೀರಿ! ಒಂದು ವೇಳೆ ಆಡಿದರೆ ನಗೆಗೀಡಾಗಿ ಬಿಟ್ಟೀರಿ!"

"ಪ್ರಿಯೆ, ನಿನ್ನ ಅಭಿಪ್ರಾಯವೇನಿದೆ ಸ್ಪಷ್ಟ ಹೇಳು. ನೀನೂ ಇತರ ರಂತೆ ನನ್ನ ವಿರೋಧಿಯೂ, ನನ್ನ ವಿರೋಧಿಗಳ ಪಕ್ಷಪಾತಿಯೂ ಆಗ ಬೇಕೆಂದು ಬಯಸುತ್ತಿರುವೆಯೇನು ?"

"ಪ್ರಾಣನಾಥ! ಹಾಗೆ ಭಾವಿಸಕೂಡದು. ನೀವು ಹೇಗಿದ್ದರೂ ನನ್ನ ಪಂಚಪ್ರಾಣರು. ನಿಮ್ಮ ನಡವಳಿಕೆ ಯಾವ ವಿಧದ್ದಿದ್ದರೂ ನನಗೆ ಪೂಜ್ಯರು ವಂದನೀಯರು. ನಿಮ್ಮ ಅಕಲ್ಯಾಣವನ್ನೆಂದಿಗೂ ನಾನು ಬಯಸು ವದಿಲ್ಲ. ಎಂತಹ ಅವಸ್ಥೆಯಲ್ಲಿ ಕೂಡ ನಾನು ನಿಮ್ಮ ಪಕ್ಷಪಾತಿಯೆ. ಸಾಮ್ರಾಜ್ಯ ಸಿಂಹಾಸನಕ್ಕೆ ಸ್ಥೈರ್ಯವುಂಟಾಗುವದಕ್ಕಾಗಿಯೂ, ಸಾಮ್ರಾ ಜ್ಯ ವೈಭವದ ಅಭಿವೃದ್ಧಿಗಾಗಿಯೂ ಮಾವಂದಿರು ಮಾಡುತ್ತಿರುವ ಯೋಜನೆಗಳು ಸರಿಯಾದವುಗಳಾಗಿರುವಾಗ ಅವುಗಳನ್ನು ಯಾರು ವಿರೋ

ಧಿಸುವರು? ನಿಮಗೆ ಸಾಮ್ರಾಜ್ಯ ಸಿಂಹಾಸನವು ದೊರೆಯಬೇಕಾಗಿದ್ದರೆ ಸದ್ಯದ ಯೌವರಾಜ್ಯ ಪದವನ್ನು ನೀವು ಸಾಧಿಸಬೇಕಾದರೆ ಒಂದು ಉಪಾಯವು ಮಾತ್ರ ಉಂಟು."

"ಆದಾವ ಉಪಾಯವು ಪ್ರಿಯೆ?"

"ನೀವು ನಿಮ್ಮ ಬಂಧುಗಳಾದ ವಿಕ್ರಮಾದಿತ್ಯರ ಮನವೊಲಿಸಿ, ಅವರನ್ನು ಯೌವರಾಜ್ಯಪದವನ್ನು ಸ್ವೀಕರಿಸದ ಹಾಗೆ ಉಪದೇಶಿಸಬೇಕು. ಹೀಗೆ ಮಾಡಿದರೆ ನಿಮ್ಮ ಮನೋದಯವು ಈಡೇರುವದು."

"ಪ್ರಿಯೆ! ನೀನು ನನ್ನ ವಿರೋಧಿಗಳ ಪಕ್ಷಪಾತಿಯಲ್ಲವೆಂಬ ಸಂಗತಿಯು ಈಗ ನನ್ನ ಮನದಟ್ಟಾಯಿತು. ನೀನಂದಂತೆ ವಿಕ್ರಮನ ಮನಸ್ಸನ್ನು ತಿರುಗಿಸಿ ಬಿಟ್ಟರೆ ಎಲ್ಲವೂ ಸುಸೂತ್ರವಾಗಿ ನನ್ನ ಮನೋದಯವು ಸಿದ್ಧಿಸುವದು. ವಿಕ್ರಮನನ್ನು ಇಲ್ಲಿಗೆ ಕರೆಯಿಸುವೆನು. ಅವನು ಇದುವರೆಗೂ ನನ್ನ ಮಾತನ್ನು ದುರ್ಲಕ್ಷಿಸಿಲ್ಲ. ಜನ್ಮಸಿದ್ಧವಾದ ನನ್ನ ಅಧಿಕಾರವನ್ನು ಸೆಳೆಯಕೂಡದೆಂದು ಅವನಿಗೆ ತಿಳಿಸುವೆನು. ಹಿಂದೆಯೊಮ್ಮೆ ಈ ವಿಷಯವಾಗಿ ಪ್ರಸ್ತಾಪ ನಡೆದಾಗ ಅವನು ನನಗನುಕೂಲವಾಗಿ ಅಭಿಪ್ರಾಯಿವಿತ್ತಿದ್ದನು. ಈಗಾದರೂ ಅವನು ನನ್ನ ಇಚ್ಛೆಯಂತೆ ವರ್ತಿಸದೆ ಇರಲಿಕ್ಕಿಲ್ಲ."

ಇಮ್ಮಡಿ ಸೋಮೇಶ್ವರನು ಹೀಗೆ ನುಡಿದು, ವಿಕ್ರಮಾದಿತ್ಯನನ್ನು ಕರೆಯುವದಕ್ಕಾಗಿ ದೂತನನ್ನು ಕಳುಹಿಸಿದನು. ಸ್ವಲ್ಪ ವೇಳೆಯಲ್ಲಿ ವಿಕ್ರಮಾದಿತ್ಯನು ಅಲ್ಲಿಗೆ ಬಂದು ಅಣ್ಣನಿಗೆ ಅಭಿವಾದನೆ ಮಾಡಿ ಅಲ್ಲಿಯೆ ಇದ್ದ ಒಂದು ಆಸನದ ಮೇಲೆ ಕುಳಿತನು. ತರುವಾಯ ಸೋಮೇಶ್ವರನು– "ಸಹೋದರಾ, ನಾನು ನಿನ್ನನ್ನು ಒಂದು ಸೂಕ್ಷ್ಮ ವಿಷಯದ ಬಗ್ಗೆ ವಿಚಾರ ಮಾಡಬೇಕೆಂದು ಕರೆಯಿಸಿರುವೆನು. ನೀನು ನನಗೆ ನಿನ್ನ ನಿಜವಾದ ಅಭಿಪ್ರಾಯವನ್ನು ತಿಳಿಸಬೇಕು. ನಿನ್ನ ಅಭಿಪ್ರಾಯವು ಮರೆಮೋಸದ್ದಿರಬಾರದೆಂದು ನನ್ನ ಇಚ್ಛೆಯಿದೆ."

"ಅಣ್ಣಾ!" ವಿಕ್ರಮಾದಿತ್ಯನು ಸ್ಪಷ್ಟವಾದ ವಾಣಿಯಿಂದ– "ನಿಮಗೆ ಮರೆಮೋಸ ಮಾಡುವಂತಹ ಪ್ರಸಂಗವೇನಿದೆ? ನಿಮ್ಮೊಡನೆ ಹಾಗೆ ನಡೆಯುವ ಇಚ್ಛೆ ನನ್ನದಿಲ್ಲ. ನೀವು ಕೇಳುವದನ್ನು ನಿಶ್ಶಂಕೆಯಿಂದ ಕೇಳಿರಿ."

" ತಂದೆಯವರು ಪಟ್ಟಬಾಧ್ಯನಾದ ನನ್ನನ್ನು ಬದಿಗಿರಿಸಿ ನಿನಗೆ ಯೌವರಾಜ್ಯಾಧಿಕಾರ ಕೊಡಬೇಕೆಂದು ಸಾಹಸ ನಡೆಯಿಸಿರುವರು. ಈ ಘಟನೆಯಿಂದ ನಿನಗೆ ಗೌರವ ದೊರೆತರೂ ನಿನ್ನ ಅಗ್ರಜನಾದ ನನ್ನ ಗೌರವ ಮಾತ್ರ ನಷ್ಟವಾಗುವದು. ಈ ಬಗೆಯು ನಿನಗೆ ಸಮ್ಮತವಿರುವದೇ ಹೇಗೆ?"

" ಸಮ್ಮತವಿಲ್ಲ. ಆದರೆ ತಂದೆಯವರ ಯೋಜನೆಗೆ ಅಡ್ಡ ಬರಲು ನನಗೆ ಧೈರ್ಯ ಸಾಲದಾಗಿದೆ. ಕೇವಲ ಮನಸ್ಸಿನಿಂದ ಹಿರಿಯನು ಹಿರಿಯ ನಲ್ಲ. ಸಾಮ್ರಾಜ್ಯ ಭಾರವನ್ನು ವಹಿಸಲು ಅರ್ಹನಾದವನಿಗೆ ಯೌವ ರಾಜ್ಯ ಪದವಿಯನ್ನು ಕೊಡಬೇಕಾಗುವದು.' ಮೊದಲಾದ ಸಂಗತಿಗಳನ್ನು ಅವರು ಸಮರ್ಥಿಸುತ್ತಿರುವರು. ಸಾಮ್ರಾಜ್ಯದ ರಕ್ಷಣೆಗಾಗಿ ಮನಸ್ಸಿನ ವಿರುದ್ಧವಾಗಿಯಾದರೂ ಈ ಕಾರ್ಯ ಮಾಡಲೇ ಬೇಕಾಗಿರುವದೆಂದು ಅವರು ಅನ್ನುತ್ತಾರೆ. ಅವರ ನಿಶ್ಚಯದ ಮುಂದೆ ನನ್ನ ಆಟ ನಡೆಯದಾ ಗಿದೆ. ಪಟ್ಟಬಾಧ್ಯರಾದ ನಿಮಗೆ ಸ್ವಾಮ್ರಾಜ್ಯಾಧಿಕಾರವು ದೊರೆಯ ಬೇಕೆಂದು ನಾನು ಮನಃಪೂರ್ವಕವಾಗಿ ಬಯಸುವೆನು."

" ಹಾಗೆ ನಿನ್ನ ಇಚ್ಛೆಯಿದ್ದರೆ ನೀನು ಸಾಮ್ರಾಜ್ಯಾಧಿಕಾರಿಯಾದ ನನ್ನ ಪ್ರತಿನಿಧಿಯಾಗಿ ರಾಜ್ಯಯಂತ್ರ ಸಾಗಿಸಲು ಬರುವದಿಲ್ಲವೇ ?"

" ಬರುವದು. ನೀವು ಹಾಗೆ ವಚನಬದ್ಧರಾದರೆ ಎಲ್ಲವೂ ಬರುವದು"

" ನಾನು ಏನೆಂದು ವಚನ ಕೊಡಬೇಕು ?"

" ಸಾಮ್ರಾಜ್ಯಕ್ಕೆ ಧಕ್ಕೆ ಹತ್ತುವಂತಹ ಕೃತ್ಯಗಳನ್ನು ಮಾಡುವದಿಲ್ಲ ವೆಂದೂ, ಪ್ರತಿನಿಧಿಯಾದ ನನ್ನ ವಿರೋಧಿಯಾಗುವದಿಲ್ಲವೆಂದೂ, ಸಾಮ್ರಾ ಜ್ಯದ ವ್ಯವಹಾರ ಸಾಗಿಸಲು ನನಗೆ ಪೂರ್ಣ ಸ್ವಾತಂತ್ರ್ಯವಿರುವದೆಂದೂ ವಚನ ಕೊಟ್ಟರೆ ಎಲ್ಲವೂ ಸುಸೂತ್ರವಾಗುವದು. ಭರತನು ಶ್ರೀರಾಮನ ಪಾದುಕೆಗಳ ಪ್ರತಿನಿಧಿಯಾಗಿ ಸಾಕೇತ ಸಾಮ್ರಾಜ್ಯವನ್ನಾಳಿದ ಹಾಗೆ, ನಾನು ನಿಮ್ಮ ಪ್ರತಿನಿಧಿಯಾಗಿ ಕರ್ನಾಟಕ ಸಾಮ್ರಾಜ್ಯವನ್ನಾಳುವೆನು. ನಾನೇ ಸಾಮ್ರಾಟನಾಗಬೇಕೆಂಬ ಹಂಬಲವು ನನ್ನಲ್ಲಿ ತಿಲಾಂಶವಾದರೂ ಇಲ್ಲ. ನಾನು ಹೇಳಿದ ಮೇರೆಗೆ ನೀವು ನನಗೆ ವಚನ ಕೊಡಬೇಕು.

ಕೊಟ್ಟ ವಚನವನ್ನು ಆಮರಣವಾಗಿ ಪಾಲಿಸಬೇಕು. ನೀವು ನಿಮ್ಮ ವಚನಗಳನ್ನು ಎಂದು ಮುರಿಯುವಿರೋ ಅಂದಿಗೆ ನಿಮ್ಮ ಸಾಮ್ರಾಜ್ಯಾಧಿಕಾರವು ಅಳಿಯಿತೆಂಬದನ್ನು ಮಾತ್ರ ನೆನಪಿನಲ್ಲಿರಿಸಿರಿ. ಹೀಗೆ ವಚನ ಕೊಡಲು ನಿಮ್ಮ ಸಿದ್ಧತೆಯಿದ್ದರೆ ನಿಮಗೆ ಯೌವರಾಜಾಭಿಷೇಕ ಮಾಡಿಸಬೇಕೆಂದು ನಾನು ತಂದೆಯವರಿಗೆ ಒತ್ತಾಯಪಡಿಸುವೆನು."

ಸೋಮೇಶ್ವರನು ಗೊಂದಲದಲ್ಲಿ ಬಿದ್ದನು. ಪಟ್ಟಬಾಧ್ಯನಾದ ತನಗೆ ಯೌವರಾಜ್ಯಪದ ದೊರೆಯುವಾಗ ತಾನೇಕೆ ವಚನಬದ್ಧನಾಗಬೇಕೆಂದು ಅವನು ಯೋಚಿಸತೊಡಗಿದನು. ಅವನಿಗೆ ಆ ಸಮಸ್ಯೆ ಬಗೆಹರಿಯಲಿಲ್ಲ. ಅವನು ತನ್ನ ಪತ್ನಿಯ ಮುಖವನ್ನು ನಿರೀಕ್ಷಿಸತೊಡಗಿದನು. ಪತಿಯು ಗೊಂದಲಕ್ಕೊಳಗಾದ ಸಂಗತಿಯು ಅಂಬಿಕಾದೇವಿಗೆ ತಿಳಿಯಿತು. ಆಗ ಅವಳು– "ರಾಜಕುಮಾರ ವಿಕ್ರಮಾದಿತ್ಯ ರಾಜರು ಸ್ವಾರ್ಥಕ್ಕಾಗಿ ಯಾವುದನ್ನೂ ಹೇಳಿಲ್ಲ. ಮುಂದೆ ನಿಮ್ಮಿಂದ ಸಾಮ್ರಾಜ್ಯಕ್ಕೆ ದಕ್ಕೆಯಾಗಬಾರದೆಂಬ ಉದ್ದೇಶದಿಂದ ಅವರು ನಿಮ್ಮನ್ನು ವಚನಬದ್ಧರನ್ನಾಗಿ ಮಾಡುತ್ತಿರುವರು. ಅವರ ಅಭಿಪ್ರಾಯದಂತೆ ನಡೆಯಲಿಕ್ಕೆ ಏನೂ ಅಡ್ಡಿಯಿಲ್ಲ. ಅವರು ನಿಮ್ಮನ್ನು ಸಾರ್ವಭೌಮರೆಂದು ಭಾವಿಸಿ, ನಿಮ್ಮ ಪ್ರತಿನಿಧಿಗಳಾಗಿ ರಾಜ್ಯವಾಳಲಿಕ್ಕೆ ಸಿದ್ಧರಿರುವರು. ನಿಮ್ಮಿಂದ ಅಪಾಯಕರ ಪ್ರಸಂಗ ಘಟಿಸುವವರೆಗೆ ನಿಮ್ಮ ಸಾರ್ವಭೌಮ ಸಿಂಹಾಸನವು ನಿಮಗಾಗಿ ಉಳಿಯಲಿಕ್ಕೆ ಯಾವ ವ್ಯತ್ಯಯವೂ ಇಲ್ಲ. ನೀವು ನಿಮ್ಮ ತಮ್ಮಂದಿರಿಗೆ ವಚನಕೊಡಲು ಅನುಮಾನಮಾಡುವ ಕಾರಣವಿಲ್ಲ."

ಅಂಬಿಕಾದೇವಿಯು ಹೀಗೆ ನುಡಿದಮೇಲೆ ಇಮ್ಮಡಿ ಸೋಮೇಶ್ವರನು ವಿಕ್ರಮಾದಿತ್ಯನಿಗೆ ಅವನ ಹೇಳಿಕೆಯ ಮೇರೆಗೆ ವಚನಕೊಟ್ಟನು. ಮಾರನೆಯ ದಿನದ ಓಲಗದಲ್ಲಿ ಈ ವಿಷಯದ ಅರೆದಾಟ ನಡೆಯುವದಿರುವದರಿಂದ ಆ ಸಂಧಿಯಲ್ಲಿ ಬರಬೇಕೆಂದು ಅಣ್ಣನಿಗೆ ವಿಕ್ರಮಾದಿತ್ಯನು ಸೂಚನೆ ಕೊಟ್ಟನು.

ಸಹೋದರರಿಬ್ಬರು ಹೀಗೆ ವಚನಬದ್ಧರಾದ ಗುಪ್ತ ಸಂಗತಿಯನ್ನು ಅಂಬಿಕಾದೇವಿಯು ಅತ್ತೆಯಾದ ಬಾಚಲದೇವಿಗೆ ಅರುಹಿದಳು. ಅವಳು

ಮಹಾನುಭಾವನಾದ ಕುಮಾರ ವಿಕ್ರಮನನ್ನು ಮನಸ್ವಿಯಾಗಿ ಕೊಂಡಾಡಿದಳು. ಹಿರಿಯ ಮಗನಾದ ಸೋಮೇಶ್ವರನಿಗೇ ಯೌವರಾಜ್ಯಪದವು ದೊರೆಯುವದೆಂದು ಅವಳು ಅತ್ಯಂತ ಸಂಭ್ರಮಗೊಂಡಳು.

## ೬. ಯೌವರಾಜ್ಯಾಭಿಷೇಕ

ಆಹವಮಲ್ಲ ಸೋಮೇಶ್ವರನು ಮಂತ್ರಣಾಗಾರದಲ್ಲಿ ಕುಳಿತಿದ್ದನು. ಮಹಾಪ್ರಧಾನ ರೂಪಭಟ್ಟಯ್ಯನೂ ಮಹಾ ಸೇನಾಪತಿ ಉದಯಾದಿತ್ಯನೂ ಯೌವರಾಜ್ಯಕಾಂಕ್ಷಿ ಎರಡನೆಯ ಸೋಮೇಶ್ವರನೂ ದಿವ್ಯ ಪ್ರತಾಪನಿಧಿ ವಿಕ್ರಮಾದಿತ್ಯನೂ ತಮ್ಮ ತಮ್ಮ ಆಸನಗಳಲ್ಲಿ ಕುಳಿತಿದ್ದರು. ಅಂದು ಯೌವರಾಜ್ಯ ಪಟ್ಟವನ್ನು ಯಾರಿಗೆ ಕೊಡಬೇಕೆಂಬ ವಿಷಯವಾಗಿ ಅರೆದಾಟ ನಡೆದಿದ್ದಿತು. ತನಗೆ ಯುವರಾಜ ಪದವು ದೊರೆಯುವದೇ ಧರ್ಮಶಾಸ್ತ್ರವಿಹಿತವಾದ ಮಾತೆಂದು ಎರಡನೆಯ ಸೋಮೇಶ್ವರನು ಪ್ರತಿಪಾದಿಸತೊಡಗಿದ್ದನು. ರೂಪಭಟ್ಟಯ್ಯ ಹಾಗು ಉದಯಾದಿತ್ಯರು ಹಿರಿಯನಿಗೆ ಪಟ್ಟವು ದೊರೆಯುವದು ನ್ಯಾಯವಾದದ್ದೆಂದು ಅನ್ನುತ್ತಿದ್ದರು. ಸೋಮೇಶ್ವರ ಮಹಾರಾಜನು ಮಾತ್ರ ಅಪಾತ್ರನಾದ ಅವನಿಗೆ ಯೌವರಾಜ್ಯಾಭಿಷೇಕ ಮಾಡಿಸಲು ಸಿದ್ಧನಾಗಲಾರನೆಂದು ಸ್ಪಷ್ಟವಾಗಿ ಹೇಳಿ ಎಲ್ಲರನ್ನು ತಣ್ಣಗೆ ಮಾಡಿಬಿಟ್ಟನು. ಇಮ್ಮಡಿ ಸೋಮೇಶ್ವರನು ಮನಸ್ಸಿನಲ್ಲಿ ಒಂದೇಸವನೇ ಕುದಿಯ ತೊಡಗಿದನು. ಅವನು ದೀನ ಮುಖದವನಾಗಿ ಒಮ್ಮೆ ವಿಕ್ರಮಾದಿತ್ಯನ ಕಡೆಗೆ ನೋಡಿದನು. ಅಣ್ಣನ ಮುಖಮುದ್ರೆಯನ್ನು ನೋಡಿ, ವಿಕ್ರಮನ ಕರಳು ಕರಗಿತು. ಆಗ ಅವನು ತಂದೆಯನ್ನು ಕುರಿತು: “ ತಂದೆಯವರೆ, ತಮ್ಮ ಇಚ್ಛೆಯಂತೆ ನಡೆಯಲು ಯಾರೂ ಹಿಂದೆಮುಂದೆ ನೋಡುವದಿಲ್ಲ. ಆದರೆ ನನ್ನದೊಂದು ವಿಜ್ಞಪ್ತಿಯುಂಟು. ನನ್ನ ಮತವು ತಮಗೆ ಸಮಂಜಸವೆನಿಸುವದೋ ಇಲ್ಲವೊ ಹೇಳಲಾರೆನು. ಆದರೆ ಆ

ಮಾತನ್ನು ಪ್ರಕಟಿಸದೆ ಉಳಿಯುವದು ನನ್ನಿಂದಾಗಲೊಲ್ಲದು. ತಾವು ಆಜ್ಞೆಯಿತ್ತರೆ ನನ್ನ ಮತವನ್ನು ಪ್ರಕಟಿಸುವ ಧೈರ್ಯ ಮಾಡುವೆನು."

"ವಿಕ್ರಮಾದಿತ್ಯ! ನಿನ್ನ ಮನೋಗತವನ್ನು ನಾನು ತಿಳಿಯದೆ ಇಲ್ಲ. ನಿನ್ನ ಭ್ರಾತೃಭಾವನೆಯು ಅದ್ವಿತೀಯವಿದೆ. ನೀನು ನಿನ್ನ ಭಾವನೆಗನು ಸಾರವಾಗಿ ಮತಕೊಡುವೆಯೆಂಬದನ್ನು ನಾನು ಬಲ್ಲೆನು. ಆದರೆ ಅಪಾತ್ರನಾದ ಸೋಮೇಶ್ವರನ ಕೈಯಲ್ಲಿ ರಾಜ್ಯ ಸೂತ್ರಗಳು ಬಂದರೆ, ಅವನು ಕೆಲವು ದಿನಗಳಲ್ಲಿಯೇ ಸಾಮ್ರಾಜ್ಯವನ್ನು ಅವನತಿಗೀಡುಮಾಡುವನೆಂಬದು ನಿಸ್ಸಂದೇಹವು. ಇನ್ನೊಂದು ವಿಧವಾಗಿ ನೀನು ಹೇಳಬಹುದು ನಾಮಮಾತ್ರಕ್ಕೆ ಸೋಮೇಶ್ವರನಿಗೆ ಅಭಿಷೇಕ ಮಾಡಿಸಬೇಕೆಂದೂ, ರಾಜ್ಯಸೂತ್ರಗಳನ್ನು ಕೈಯಲ್ಲಿ ತೆಗೆದುಕೊಂಡು ಸಾಮ್ರಾಜ್ಯದ ರಕ್ಷಣೆ ಮಾಡುವೆನೆಂದೂ ನೀನು ಅನ್ನಬಹುದು. ಹಾಗೆ ಕಾರ್ಯ ನಡೆಯುವದು ಬಹಳೇ ಜಡವಾಗುವದು. ಯಾವನು ರಾಜ್ಯಪಟ್ಟಾಭಿಷೇಕ ಮಾಡಿಸಿಕೊಳ್ಳುವನೋ ಅವನಕಡೆಗೆ ರಾಜ್ಯಸೂತ್ರಗಳಿರದಿದ್ದರೂ ಅವನ ವಿಷಯವಾಗಿ ಸಾಮ್ರಾಜ್ಯದೊಳಗಿನ ಬಹು ಜನರು ಭಕ್ತಿಯುತರಾಗುವರು. ಈ ಜನರ ಒಲವಿನ ಲಾಭಹೊಂದಿ, ಅವಿವೇಕಿಯಾದ ರಾಜನು ಅನೇಕ ಅನುಚಿತಗಳನ್ನೆಸಗಬಹುದಾದ ಭಯವೂ ಇದೆ. ಇಮ್ಮಡಿ ಸೋಮೇಶ್ವರನು ಎಂತಹ ಕೆಲಸಗಳನ್ನು ಮಾಡಲೂ ಹೇಸುವದಿಲ್ಲ. ಆದ್ದರಿಂದ ನೀನು ಭ್ರಾತೃಭಾವನೆಗೆ ಮಹತ್ವಕೊಡದೆ ನನ್ನ ಮಾತನ್ನು ನಡೆಯಿಸಬೇಕೆಂದು ಇಚ್ಛಿಸುವೆನು. ನಿನ್ನಿಂದಲೇ ಸಾಮ್ರಾಜ್ಯವು ಸ್ಥೈರ್ಯಗೊಳ್ಳಬೇಕು; ನಿನ್ನಿಂದಲೆ ಅಭ್ಯುದಯ ಹೊಂದಬೇಕು; ನಿನ್ನಿಂದಲೇ ಅದು ವೈಭವಗಿರಿಯ ಅತ್ಯುನ್ನತ ಶಿಖರವನ್ನೇರಬೇಕು. ಚಾಲುಕ್ಯರ ವೈಭವವೆಂದರೆ ಕನ್ನಡಿಗರ ಸುವರ್ಣ ಯುಗವು. ಚಾಲುಕ್ಯರ ವೈಭವವು ಕನ್ನಡಿಗರನ್ನು ಸ್ವಾನಂದ ಸಾಮ್ರಾಜ್ಯದಲ್ಲಿ ಲೋಲಾಡಿಸುವ ಸಾಧನವು; ಚಾಲುಕ್ಯರ ವೈಭವವೇ ನಿಖಿಲ ಭಾರತದ ವೈಭವವು! ವೈಭವಶಾಲಿಯಾದ ಕರ್ನಾಟಕ ಸಾಮ್ರಾಜ್ಯವನ್ನು ವೈಭವಶಾಲಿಯನ್ನಾಗಿ ಮಾಡಲು ನಿನ್ನಂತಹ ದಿವ್ಯ ಪ್ರತಾಪಶಾಲಿಯು ಇರಲಾಗಿ ಕರ್ತವ್ಯಶೂನ್ಯನಾದವನಿಗೆ ಚಾಲುಕ್ಯರ ಸಾಮ್ರಾಜ್ಯ ಸಿಂಹಾಸನವನ್ನು ಎಂದಿಗೂ ಅರ್ಪಿಸಲಾರೆನು."

ಆಹವಮಲ್ಲ ಸೋಮೇಶ್ವರನು ಹೀಗೆ ನುಡಿದ ಕೂಡಲೆ ಎಲ್ಲರೂ ವಿಸ್ಮಿತರಾದರು. ಸೋಮೇಶ್ವರನಿಗೆ ಎದೆ ಎದೆ ಬಡೆದುಕೊಳ್ಳುವಂತಾಯಿತು. ವಿಕ್ರಮಾದಿತ್ಯನು ಯೋಚನೆಗೊಳಗಾದನು. ಯಾಕಂದರೆ ಅವನು ವಚನಬದ್ಧನಾಗಿದ್ದನು. ಅದಕ್ಕಾಗಿಯೆ ಬಹಳೇ ತೊಡಕಿನಲ್ಲಿ ಸಿಕ್ಕನು. ಇತ್ತ ತಂದೆಯ ಆಜ್ಞೆ; ಅತ್ತ ಅಣ್ಣನಿಗೆ ಕೊಟ್ಟ ವಚನ ಇವೆರಡೂ ಅವನಿಗೆ ಅಷ್ಟೇ ಮಹತ್ವದವಾಗಿದ್ದವು. ಕೆಲವು ವೇಳೆಯವರೆಗೆ ವಿಚಾರಿಸಿ, ಅವನು ಆಹವಮಲ್ಲನನ್ನು ಕುರಿತು— "ತಂದೆಯವರೆ, ನೀವು ಸಾಮ್ರಾಜ್ಯದಯೋಚನೆಬಿಡಿರಿ. ಅಣ್ಣಂದಿರಿಂದ ಸಾಮ್ರಾಜ್ಯಕ್ಕೆ ದಕ್ಕೆ ಹತ್ತುವ ಕೃತ್ಯಗಳು ಘಟಿಸಿದರೆ ಆಗಿಂದಾಗ ಅವರನ್ನು ಸಿಂಹಾಸನದಿಂದೆಳೆದು ರಾಜ್ಯಸೂತ್ರಗಳನ್ನೆಲ್ಲ ಕೈಯಲ್ಲಿ ತೆಗೆದುಕೊಂಡು, ಸಾಮ್ರಾಜ್ಯ ರಕ್ಷಣೆ ಮಾಡುವೆನು."

"ವಿಕ್ರಮ! ನೀನು ಸರಳನು. ಸರಳರಿಗೆ ಕುಟಿಲನೀತಿಯ ಮರ್ಮವು ತಿಳಿಯದು. ಅಣ್ಣನೆಂಬ ಭಾವನೆಯಿಂದ ನೀನು ತೋರಿಸುತ್ತಿರುವ ಪ್ರೇಮ–ಭಕ್ತಿಗಳ ದುರುಪಯೋಗವಾಗುವದು ನಿಶ್ಚಯವು. ಈ ಸೋಮೇಶ್ವರನು ತನ್ನ ಮಾರ್ಗದಲ್ಲಿ ದೊಡ್ಡ ಎಡರಾದ ನಿನ್ನನ್ನು ಸಹ ನಾಶಗೊಳಿಸಲು ಹಿಂದೆಮುಂದೆ ನೋಡಲಾರನು. ಅವನ ಸ್ವಭಾವದ ಪರೀಕ್ಷೆ ನಿನಗಿಂತಲೂ ನನಗೆ ಚನ್ನಾಗಿದೆ."

"ತಂದೆಯವರೆ, ನಾನು ಎಲ್ಲವನ್ನೂ ಸಹಿಸಲು ಹಾಗು ಎಲ್ಲ ಕೃತ್ಯಗಳ ಪ್ರತಿಕಾರ ಮಾಡಲು ಸಿದ್ಧನಿರುವೆನು. ನೀವು ನನ್ನ ಮಾತಿನಲ್ಲಿ ವಿಶ್ವಾಸವಿಡಿರಿ. ಸಾಮ್ರಾಜ್ಯ ರಕ್ಷಣೆಗಾಗಿ ನಾನು ಎಂತಹ ತ್ಯಾಗವನ್ನು ಮಾಡಲು ಸಿದ್ಧನಿರುವೆನೆಂಬ ಸಂಗತಿ ತಮಗೆ ಗೊತ್ತಿದೆ. ನೀವು ಪಟ್ಟಬಾಧ್ಯರಾದ ನನ್ನ ಈ ಅಣ್ಣಂದಿರಿಗೆ ಯೌವರಾಜ್ಯಾಭಿಷೇಕ ಮಾಡಿಸಿ, ನಿಮ್ಮ ಶೇಷಾಯುಷ್ಯವನ್ನು ನಿಶ್ಚಿಂತೆಯಿಂದ ಕಳೆಯಿರಿ. ನಾನಿದ್ದೇನೆ; ಅಣ್ಣಂದಿರಿದ್ದಾರೆ; ಸಿಂಹಾಸನವಿದೆ; ಸಾಮ್ರಾಜ್ಯವಿದೆ. ನೀವು ಅಣ್ಣಂದಿರಿಗೆ ಪಟ್ಟಾಭಿಷೇಕ ಮಾಡಿಸಿದರೂ ನಾನು ರಾಜ್ಯಸೂತ್ರಗಳನ್ನು ಕೈಯಲ್ಲಿ

ತೆಗೆದುಕೊಂಡು ಅವನ ಪ್ರತಿನಿಧಿಯವಗಿ ರಾಜ್ಯ ಕಾರ್ಯ ಸಾಗಿಸುವೆನು. ತಾವು ನಿಮ್ಮ ಈ ಮಗನ ಅಪ್ಪೇಕ್ಷೆಯನ್ನು ನೆರವೇರಿಸಲೇಬೇಕು."

ಸೋಮೇಶ್ವರ ಮಹಾರಾಜನು ನಿರುಪಾಯನಾದನು. ಆಗ ಅವನು ಮಂತ್ರಿಯಾದ ರೂಪಭಟ್ಟಯ್ಯನನ್ನೊಮ್ಮೆ ಮಹಾ ಸೇನಾನಿಯಾದ ಉದ ಯಾದಿತ್ಯನನ್ನೊಮ್ಮೆ ನಿರೀಕ್ಷಿಸಿದನು. ಆಗ ಅವರು ವಿಕ್ರಮಾದಿತ್ಯನ ಮಾತುಗಳಿಗೇ ಬೆಂಬಲಕೊಟ್ಟರು. ಕೂಡಲೆ ಮಹಾರಾಜನು ಇಮ್ಮಡಿ ಸೋಮೇಶ್ವರನಿಗೆ ಯೌವರಾಜ್ಯಾಭಿಷೇಕ ಮಾಡಿಸುವದಕ್ಕೆ ಒಪ್ಪಿಗೆ ಕೊಟ್ಟನು. ಓಲಗದಲ್ಲಿ ಜಯಜಯಕಾರಧ್ವನಿಯಾಯಿತು. ಇಮ್ಮಡಿ ಸೋಮೇಶ್ವರನ ಆನಂದವು ಮೇರೆದಪ್ಪಿತು. ಅವನು ತನ್ನ ಬಂಧುವಿನ ಮಹಾನುಭಾವತೆಯನ್ನು ಮನಸ್ವಿಯಾಗಿ ಹೊಗಳಿದನು.

ಯೌವರಾಜ್ಯಾಭಿಷೇಕದ ಸಿದ್ಧತೆ ಹೇಗೆ ಹೇಗೆ ಮಾಡಬೇಕೆಂಬ ಬಗ್ಗೆ ವಿಚಾರ-ವಿನಿಮಯ ನಡೆಯಿತು. ಸ್ವಲ್ಪ ವೇಳೆ ವಿಚಾರ ನಡೆಯು ವಷ್ಟರಲ್ಲಿ ಮಾಳುವೆಯರ ಅರಸನಾದ ಭೋಜರಾಜನಿಂದ ಪ್ರತಿನಿಧಿ ಬಂದಿರುವನೆಂದು ಪ್ರತಿಹಾರಿಯು ಆಹವಮಲ್ಲ ಸೋಮೇಶ್ವರ ಮಹಾ ರಾಜನಿಗೆ ಬಿನ್ನವಿಸಿದನು. ಧಾರಾನಗರದಿಂದ ಬಂದ ಪ್ರತಿನಿಧಿಯನ್ನು ಒಳಗೆ ಕರೆದುಕೊಂಡು ಬರಲಿಕ್ಕೆ ಆಜ್ಞೆಯಾಯಿತು. ಸ್ವಲ್ಪ ವೇಳೆ ಯಲ್ಲಿಯೇ ಅವನು ಒಳಗೆ ಬಂದನು. ಚಕ್ರವರ್ತಿಯು ಪ್ರತಿನಿಧಿಗೆ ಸ್ವಾಗತಮಾಡಿ ತಕ್ಕ ಸ್ಥಳದಲ್ಲಿ ಕುಳ್ಳಿರಿಸಿ, ಆಗಮನದ ಕಾರಣವನ್ನು ವಿಚಾರಿಸಿದನು.

"ಕರ್ನಾಟಕ ಸಮ್ರಾಟರೆ!" ಭೋಜರಾಜನ ಪ್ರತಿನಿಧಿಯು ವಿನ ಯದಿಂದಲೂ ಸೌಮ್ಯವಾಗಿಯೂ— "ಭೋಜ ಮಹಾರಾಜರ ಮೇಲೆ ಮಹಾ ವಿಪತ್ತು ಪ್ರಾಪ್ತವಾಗಿದೆ. ಅವರಿಗೊದಗಿದ ವಿಪತ್ತನ್ನು ಪರಿಹರಿ ಸಲು ನಿಖಿಲ ಭಾರತದಲ್ಲಿ ತಮ್ಮ ಹೊರತು ಯಾರಿಗೂ ಸಾಧ್ಯವಿಲ್ಲ. ಗುರ್ಜರಾಧಿಪತಿಯು ಮಾಳವ ರಾಜ್ಯದ ಮೇಲೆ ಭೀಕರವಾದ ದಾಳಿ ಮಾಡಿರುವನು. ಅವನ ದಾಳಿಗೆ ಮಾಳವ ರಾಜ್ಯವು ಕಂಪಾಯಮಾನ ವಾಗತೊಡಗಿದೆ. ಅವನು ತನ್ನ ಬಲಸರ್ವಸ್ವದೊಡನೆ ಆಗಮಿಸಿರುವ

ದಲ್ಲದೆ, ಉತ್ತರಾಪಥದೊಳಗಿನ ಅನೇಕ ರಾಜ ಮಹಾರಾಜರ ಸಹಾಯ ಪಡೆದಿರುವನು. ಅವನು ಕೆಲವು ದಿನಗಳಲ್ಲಿ ಮಾಳವರ ರಾಜಧಾನಿಯಾದ ಧಾರಾನಗರಿಯನ್ನು ಸಹ ಮುತ್ತುವ ಸಂಭವವಿದೆ. ನೀವು ನಮ್ಮ ಮಹಾರಾಜರಿಗೆ ಬೆಂಬಲವಾದರೆ ಅವರ ಸಿಂಹಾಸನವು ಅವರಿಗೆ ಉಳಿಯುವದು. ಹಾಗೆ ಮಾಡದೆ ಹೋದರೆ ನಿಮ್ಮ ಸ್ನೇಹಾಂಕಿತರಾದ ಭೋಜ ಮಹಾರಾಜರು ರಾಜ್ಯಭ್ರಷ್ಟತೆ ಹೊಂದಿ ವನವಾಸಿಗಳಾಗಬೇಕಾಗುವದು. ”

ಧಾರಾನಗರಿಯ ಪ್ರತಿನಿಧಿಯ ಮಾತು ಕೇಳಿ, ಸೋಮೇಶ್ವರನು ವಿಚಾರಕ್ಕೊಳಗಾದನು. ಗುರ್ಜರಾಧಿಪತಿಯ ಬಲವೆಷ್ಟಿದೆ, ಅವನೊಡನೆ ಸಂಗ್ರಾಮವನ್ನು ಪ್ರಾರಂಭಿಸುವದು ಅನಿಷ್ಟಕಾರಕವಾಗುವದೋ ಹೇಗೆ, ಭೋಜನು ತೋರಿಸುವ ಸ್ನೇಹವು ಚಿರವಾದದ್ದಾಗಿರುವದೇ ಅಥವಾ ಕೇವಲ ಕಾರ್ಯಸಾಧನೆಯ ಮಟ್ಟಿಗಿರುವದೇ ಮೊದಲಾದ ವಿಚಾರಗಳು ಅವನಲ್ಲಿ ಉದಯವಾದವು. ಆಗ ಅವನು ಈ ವಿಷಯದಲ್ಲಿ ತನ್ನ ಎರಡನೆಯ ಮಗನಾದ ಆರನೆಯ ವಿಕ್ರಮಾದಿತ್ಯನ ಸಲಹೆ ಕೇಳಿದನು. ಆಗ ವಿಕ್ರಮಾದಿತ್ಯನು ಗಾಂಭೀರ್ಯದಿಂದ— “ತಂದೆಯವರೆ, ತಮ್ಮ ಮನಸ್ಸಿನಲ್ಲಿ ಯಾವ ವಿಧದ ಶಂಕೆಗಳು ಉತ್ಪನ್ನವಾಗಿರುವವೆಂಬದು ನನಗೆ ತಿಳಿದಿದೆ. ಮಾಳವೆಯರು ಮೊದಲಿನಿಂದಲೂ ಕರ್ನಾಟಕದ ಶತ್ರುಗಳೆಂಬದು ನಿಜ. ಆದರೆ ಗೋದಾವರಿ ಕಾಳಗದಲ್ಲಿ ಭೋಜರಾಜನೂ ಚೇದಿಯ ಕರ್ಣರಾಜರೂ ಪರಾಭವ ಹೊಂದಿ, ತಮ್ಮ ಮಾಂಡಲಿಕತ್ವವನ್ನೊಪ್ಪಿ ಒಡಂಬಡಿಕೆ ಮಾಡಿಕೊಂಡಾಗಿನಿಂದ ಅವರು ಪ್ರತ್ಯಕ್ಷವಾಗಿ ನಮ್ಮ ವೈರ ತಳೆಯಿಸಿಲ್ಲವೆಂಬ ಮಾತು ನಿಸ್ಸಂದೇಹ. ಈಗ ಭೋಜರಾಜನು ನಮ್ಮ ಮಾಂಡಲಿಕ ಅರಸರಿರುವರು. ಪ್ರತಿವರ್ಷ ಕಪ್ಪಕೊಡುತ್ತಿರುವರು. ನಮ್ಮ ಸಾರ್ವಭೌಮತ್ವವನ್ನೊಪ್ಪಿದವರು ತಮಗೊದಗಿದ ವಿಪತ್ತನ್ನು ಪರಿಹರಿಸಬೇಕೆಂದು ಮೊರೆ ಹೊಕ್ಕಾಗ ಅವರನ್ನು ತಿರಸ್ಕರಿಸುವದು ನನಗೆ ಯೋಗ್ಯ ಕಾಣುವದಿಲ್ಲ. ಅನೇಕ ರಾಜರಿಂದ ಸಹಾಯ ಪಡೆದು ಪ್ರಬಲನಾದ ಗುರ್ಜರಾಧಿಪತಿಯ ಪಾರಿಪತ್ಯ ಮಾಡದೆ ಹೋದರೆ ಅವನು ಇನ್ನಷ್ಟು

ಪ್ರಬಲನಾಗಿ ಕರ್ನಾಟಕ ಸಾಮ್ರಾಜ್ಯಕ್ಕೆ ಧಕ್ಕೆ ಕೊಡಬಹುದು. ನಮ್ಮ ಸಾಮ್ರಾಜ್ಯದ ತಲೆಗಿಂಬಿಗಿದ್ದ ಮಾಳವೆಯರಿಗೆ ನೆರವು ಕೊಡುವದರಿಂದ ಅವರ ರಕ್ಷಣೆಯಾಗುವದಲ್ಲದೆ ನಮ್ಮ ಸಾಮ್ರಾಜ್ಯದ ರಕ್ಷಣೆಯೂ ಆಗುವದು. ಆದುದರಿಂದ ನಾವು ಮೊರೆಹೊಕ್ಕವರಾದ ಭೋಜರಾಜರ ವಿನಂತಿಯನ್ನು ಮನ್ನಿಸಲೇಬೇಕು. ಸಾರ್ವಭೌಮ ರಾಜರು ತಮ್ಮ ಕೈಕೆಳಗಿನ ಸಾಮಂತರಾಜರ ರಕ್ಷಣೆಯ ಭಾರವನ್ನು ವಹಿಸಲೇಬೇಕು. ''

ವಿಕ್ರಮಾದಿತ್ಯನು ಹೀಗೆ ಹೇಳಿದಮೇಲೆ ಸೋಮೇಶ್ವರನ ಅನುಮಾನಗಳು ಬಹುಮಟ್ಟಿಗೆ ದೂರವಾದವು. ಅನಂತರದಲ್ಲಿ ಅವನು ತನ್ನ ಮಂತ್ರಿಯಾದ ರೂಪಭಟ್ಟಮನನ್ನು ಕುರಿತು— '' ಮಹಾಮಂತ್ರಿಗಳೆ, ಕುಮಾರ ವಿಕ್ರಮಾದಿತ್ಯನ ಮಾತುಗಳು ಸರಿಯಾದವುಗಳಿರುವವೆ ? ''

" ಮಹಾರಾಜರೆ, ಕುಮಾರರ ಮಾತುಗಳು ಅಕ್ಷರಶಃ ನಿಜವಿರುವವು. ಭೋಜರಾಜರಿಗೆ ಸಹಾಯ ಮಾಡುವದು ನಮ್ಮ ಕರ್ತವ್ಯವೇ ಆಗಿದೆ. ಹಿಂದೆ ಪ್ರತಿಜ್ಞಾಬದ್ಧರಾದಾಗಿನಿಂದ ಅವರು ಕರ್ನಾಟಕದೊಡನೆ ಸ್ನೇಹದಿಂದಲೇ ಇರುವರು. ''

'' ಇನ್ನೊಂದು ವಿಷಯ. '' ಮಹಾಸೇನಾಪತಿ ಉದಯಾದಿತ್ಯನು— '' ಈಗ ಸೋಮೇಶ್ವರ ಮಹಾರಾಜರಿಗೆ ಯೌವರಾಜ್ಯಾಭಿಷೇಕ ಸಮಾರಂಭವಾಗಲಿದೆ. ಇಂತಹ ಸಮಯದಲ್ಲಿ ಭೋಜಮಹಾರಾಜರಿಗೆ ನೆರವಾಗಲು ಅವಕಾಶವೆಲ್ಲಿದೆ ? "

'' ಇದ್ದುದರಲ್ಲಿಯೆ ಅವಕಾಶ ದೊರಗಿಸಿಕೊಂಡು ಸಹಾಯ ಮಾಡಬೇಕು. '' ಎಂದು ಸೋಮೇಶ್ವರ ಮಹಾರಾಜನು ಹೇಳಿ ಮಾಳವೆಯರ ರಾಜಪ್ರತಿನಿಧಿಗೆ— " ನೀವು ಯೌವರಾಜ್ಯಪಟ್ಟಬಂಧ ಮಹೋತ್ಸವವನ್ನು ನೆರವೇರಿಸಿಕೊಂಡೇ ಪಯಣ ಮಾಡಿರಿ. ಸಮಾರಂಭವು ಒಂದೇ ವಾರದಲ್ಲಿ ಪೂರೈಸಲ್ಪಡುವದು. ವಿಕ್ರಮಾದಿತ್ಯನನ್ನು ದಂಡಯಾತ್ರೆಗಾಗಿ ಕಳುಹಿಸುವೆನು. ನಾನೇ ಬರುತ್ತಿದ್ದೆನು; ಆದರೆ ಇಬ್ಬರು ಮಕ್ಕಳಿಗೆ ಸಾಮ್ರಾಜ್ಯವನ್ನೊಪ್ಪಿಸಿ, ನನ್ನ ಮೇಲಿನ ಭಾರವನ್ನು ಕಡಿಮೆ ಮಾಡಿಕೊಳ್ಳಬೇಕೆಂದು ನನ್ನ ಉತ್ಕಟೇಚ್ಛೆಯಿದೆ. ಆದುದರಿಂದ ನಾನು ಬಹುಶಃ

ದಂಡಯಾತ್ರೆಯನ್ನು ಕೈಕೊಳ್ಳುವದಿಲ್ಲ. ಸಾಮ್ರಾಜ್ಯದ ಹೊರಗಿನ ಕೆಲಸಗಳಿಗಂತು ನಾನು ಮುಂದೆ ಕೈಹಾಕುವದೇ ಇಲ್ಲ. ನೀವು ಒಂದುವಾರ ಇಲ್ಲಿ ಉಳಿದು ಇಮ್ಮಡಿ ಸೋಮೇಶ್ವರನ ಪಟ್ಟಾಭಿಷೇಕ ಮಹೋತ್ಸವದಲ್ಲಿ ಭಾಗವಹಿಸಿರಿ. ಯೌವ ರಾಜ್ಯಾಭಿಷೇಕದ ಮಾರನೆಯ ದಿನವೇ ಮಾಳವೆಯ ಕಡೆಗೆ ಪ್ರಯಾಣವು. ”

ಸೋಮೇಶ್ವರ ಮಹಾರಾಜನ ಇಚ್ಛೆಯಂತೆ ಭೋಜರಾಜನ ಪ್ರತಿನಿಧಿಯು ನಡೆಯಲೇಬೇಕಾಯಿತು. ಅನಂತರದಲ್ಲಿ ಯೌವರಾಜ್ಯಾಭಿಷೇಕದ ಬಗ್ಗೆ ವಿಚಾರ ನಡೆದು ಅಂದಿನ ಸಭೆಯು ಮುಕ್ತಾಯವಾಯಿತು.

ಸುಮುಹೂರ್ತದಲ್ಲಿ ಕರ್ನಾಟಕ ಸಾಮ್ರಾಜ್ಯದ ಮುಖ್ಯ ರಾಜಧಾನಿಯಾದ ಕಲ್ಯಾಣ ನಗರಿಯಲ್ಲಿ ಯುವರಾಜ ಮೊದಲನೆಯ ಸೋಮೇಶ್ವರನ ಯೌವರಾಜ್ಯಪಟ್ಟ ಬಂಧಮಹೋತ್ಸವವು ನೇರವೇರಲ್ಪಟ್ಟಿತು. ಅಭೂತಪೂರ್ವವಾದ ಆ ಸಮಾರಂಭದಲ್ಲಿ ಸೋಮೇಶ್ವರ ಮಹಾರಾಜನು ಅನೇಕ ದಾನಧರ್ಮಗಳನ್ನು ಕೊಟ್ಟನು. ದೇವಾಲಯ ಬಸದಿಗಳಿಗೆ ಭೂಮಿಗಳು ದಾನಕೊಡಲ್ಪಟ್ಟವು. ಯಾಚಕರು ಸಂತುಷ್ಟಿಗೊಳಿಸಲ್ಪಟ್ಟರು. ಈ ಸಮಾರಂಭವನ್ನು ನೋಡಿ ಮಾಳವೆಯ ಪ್ರತಿನಿಧಿಯು ಬೆರಗಾದನು. ಕನ್ನಡಿಗರು ಎಷ್ಟು ಶೂರರೋ ಅಷ್ಟೇ ಉದಾರರೂ ಉತ್ಸವಪ್ರಿಯರೂ ಇರುವರೆಂಬದನ್ನು ಅವನು ಮನಗಂಡನು.

ಯೌವ ರಾಜ್ಯಾಭಿಷೇಕವು ಮುಗಿದೊಡನೆಯೆ ಸೋಮೇಶ್ವರ ಮಹಾರಾಜನು ಯುವರಾಜ ಸೋಮೇಶ್ವರನಿಗೆ ರಾಜಕಾರಣದ ಉಪದೇಶವನ್ನು ಮಾಡಿದನು. ತರುವಾಯ ವಿಕ್ರಮಾದಿತ್ಯನನ್ನೂ ಉದಯಾದಿತ್ಯ ಮಹಾಸೇನಾಪತಿಯನ್ನೂ ಮಾಳವೆಯರ ರಸಭೋಜರಾಜನ ಸಹಾಯಕ್ಕಾಗಿ ಹೇರಳ ದಂಡಿನೊಡನೆ ಕಳುಹಿದನು. ಮುಂದೆ ರಾಜಕಾರಣದಲ್ಲಿ ತಾನು ಬಹಳವಾಗಿ ತೊಡಕಿಕೊಂಡಿರಬಾರದೆಂದು ಅವನ ಮನಸ್ಸಾಯಿತು. ಕೂಡಲೆ ರೂಪಭಟ್ಟಯ್ಯ ಮಹಾಪ್ರಧಾನಿಯನ್ನು ಇಮ್ಮಡಿ ಸೋಮೇಶ್ವರನ ಸಹಾಯಕ್ಕೆಂದು ರಾಜಧಾನಿಯಲ್ಲಿ ಬಿಟ್ಟು, ತನ್ನ ತಂಗಿಯ ಗಂಡನಾದ

ಮುಮ್ಮಡಿ ಭಿಲ್ಲಮದೇವನೊಡನೆ ಸಾಮ್ರಾಜ್ಯದಲ್ಲಿ ಸುಖಸಂಚಾರಕ್ಕಾಗಿ ತೆರಳಿದನು. ಅವನು ತಂಗಿಯ ಊರಾದ ನಂದಿನಗರದಲ್ಲಿ ಕೆಲದಿನ ವಾಸ ವಾಗಿದ್ದನು. ಅನಂತರದಲ್ಲಿ ಅವನು ತನ್ನ ಭಾವಮೈದುನನಾದ ಭಿಲ್ಲಮ ದೇವನನ್ನು ಅಲ್ಲಿಯೇ ಬಿಟ್ಟು ದಕ್ಷಿಣ ಕರ್ನಾಟಕದಲ್ಲಿ ಸಂಚಾರ ಮಾಡುವ ದಕ್ಕಾಗಿ ಪಯಣ ಮಾಡಿದನು. ಆಗ ಅವನ ಜೊತೆಯಲ್ಲಿ ಪಟ್ಟ ಮಹಿಷಿ ಬಾಚಲದೇವಿಯೂ ಎರಡನೆಯವಳಾದ ಚಂದ್ರಿಕಾದೇವಿಯೂ ಇದ್ದಳು. ಕೇತಲದೇವಿಯರಸಿಯ ಮಗನಾದ ಕೀರ್ತಿವರ್ಮನೂ ಜೊತೆಯಲ್ಲಿಯೆ ಇದ್ದನು.

ಸೋಮೇಶ್ವರನ ಸಂಚಾರವು ಸುಖಸಂಚಾರವಾಗಿದ್ದರೂ ಸಾಮ್ರಾಜ್ಯದ ಆಳಿಕೆಯನ್ನು ಸರಿಗೊಳಿಸುವದನ್ನೂ ಉನ್ಮತ್ತ ಮಂಡಲೇಶ್ವರರನ್ನು ಹಣ್ಣಿಗೆ ತರುವದನ್ನೂ ಬಿಟ್ಟಿರಲಿಲ್ಲ. ಕಲ್ಯಾಣದಲ್ಲಿಯ ಯುವರಾಜನ ಆಳಿಕೆಯನ್ನು ತಿಳಿದುಕೊಳ್ಳಲಿಕ್ಕೂ, ಉತ್ತರಾಪಥಕ್ಕೆ ದಂಡಯಾತ್ರೆ ಕೈಕೊಂಡುಹೋದ ವಿಕ್ರಮಾದಿತ್ಯನ ಸಮಾಚಾರವನ್ನರಿತುಕೊಳ್ಳುವದಕ್ಕೂ ಅವನು ಗುಪ್ತಚಾರರನ್ನು ನಿಯಮಿಸಿದ್ದನು. ಸೋಮೇಶ್ವರ ಮಹಾ ರಾಜನು ಪುಲಿಗಿರಿ ಅಣ್ಣಿಗೇರಿ ಪ್ರಾಂತಗಳಲ್ಲಿ ತಿರುಗಾಡಿ ಇನ್ನು ಕಲ್ಯಾಣ ವನ್ನು ಸೇರಬೇಕೆನ್ನುವಷ್ಟರಲ್ಲಿ ಚೋಳರಸನು ಮಲೆತುಸಿಂತು ಕರ್ನಾಟ ಕದ ಮೇಲೆ ದಾಳಿಮಾಡತೊಡಗಿರುವನೆಂಬ ಸುದ್ದಿಯು ಹತ್ತಿತ್ತು. ಕೂಡಲೆ ಅವನು ರಾಜಧಾನಿಗೆ ಪಯಣ ಬಳೆಯಿಸುವದನ್ನು ನಿಲ್ಲಿಸಿ, ಚೋಳ ರಾಜರ ಕಡೆಗೆ ತನ್ನ ಪ್ರತಿನಿಧಿಯನ್ನು ಕಳುಹಿಸಿದನು. ಶಾಂತಿಯನ್ನು ನಷ್ಟಪಡಿಸಿದರೆ ಸಂಗ್ರಾಮಕ್ಕೆ ಸಿದ್ಧವಾಗಬೇಕೆಂದು ಅವನು ಕಂಚಿಯರಸ ನಿಗೆ ತಿಳಿಸಿದನು.

▼

# ೭. ಜಲಸಮಾಧಿ !

ಆಹವಮಲ್ಲ ಸೋಮೇಶ್ವರ ಮಹಾರಾಜನು ಸುಖಸಂಚಾರಮಾಡುತ್ತ ಪುಲಿಗಿರಿಯಲ್ಲಿ ಬೀಡುಬಿಟ್ಟಿದ್ದನು. ಆ ಪುರಾತನ ನಗರಿಯಲ್ಲಿ ಚೋಳರಸನಾದ ರಾಜೇಂದ್ರದೇವನು ಬಹಳೇ ಹಾವಳಿ ಮಾಡಿದ್ದನು. ಎಷ್ಟೋ ದೇವಾಲಯಗಳು ವಿಧ್ವಂಸವಾಗಿದ್ದವು ಎಷ್ಟೋ ಬಸದಿಗಳು ನೆಲಸಮವಾಗಿದ್ದವು. ಪ್ರಾಚೀನ ನಗರವಾದ ಪುಲಿಗಿರಿಯ ಅವಸ್ಥೆಯನ್ನು ನೋಡಿ ಸೋಮೇಶ್ವರನು ಮರುಗಿದನು. ಅವನು ಅಲ್ಲಿಯ ಪ್ರಾಚೀನ ಕಟ್ಟಡಗಳ ಜೀರ್ಣೋದ್ಧಾರ ಮಾಡಲು ಮನಸ್ಸು ಮಾಡಿದನು. ಅವನು ಕೆಲವುದಿನ ಅಲ್ಲಿಯೇ ನಿಂತು ಎಲ್ಲ ಕಟ್ಟಡಗಳನ್ನು ಸರಿಪಡಿಸಿ ಮೊದಲಿನಹಾಗೆಯೆ ಕಂಗೊಳಿಸುವಂತೆ ಮಾಡಿದನು.

ಸೋಮೇಶ್ವರ ಮಹಾರಾಜನು ಹೀಗೆ ಸುಖಸಂಕಥಾ ವಿನೋದದಲ್ಲಿ ಕಾಲಕಳೆಯುತ್ತಿದ್ದರೂ ರಾಜಕಾರಣವನ್ನು ತೀರ ದುರ್ಲಕ್ಷಿಸಿದ್ದಿಲ್ಲ. ಪುಲಗಿರಿಯಲ್ಲಿರುವಾಗ ಅವನು ಚೋಳರಸರ ದಾಳಿಯ ಸುದ್ದಿಯನ್ನು ಕೇಳಿ ಅಲ್ಲಿಗೆ ತನ್ನ ರಾಯಭಾರಿಯನ್ನು ಕಳುಹಿ, ಕರ್ನಾಟಕ ಸಾಮ್ರಾಜ್ಯದಲ್ಲಿ ದಾಳಿ ಮಾಡದಹಾಗೆ ಎಚ್ಚರಿಕೆ ಕೊಟ್ಟನು. ಸ್ವಲ್ಪ ಕಾಲದ ಹಿಂದೆ ಅಣ್ಣಿಗೇರಿಯ ಕಾಳಗದಿಂದ ಸೋಮೇಶ್ವರ ಮಹಾರಾಜನ ಪರಾಕ್ರಮವು ಅತ್ಯಂತ ವಿಖ್ಯಾತಿಗೊಂಡಿತ್ತು. ರಾಯಭಾರಿಯು ಚೋಳರಸನಿಗೆ ಬುದ್ಧಿವಾದ ಹೇಳಿ ಅವನನ್ನು ಸರ್ವನಾಶಪಥದಿಂದ ಹಿಂದಿರುಗಿಸಿದನು. ರಾಯಭಾರಿಯು ಅನುಕೂಲವಾದ ವಾರ್ತೆಯನ್ನು ತಂದೊಡನೆಯೆ ಸೋಮೇಶ್ವರನು ಸಂಭ್ರಮಗೊಂಡನು. ಅವನು ಪ್ರಾಚೀನವಾದ ಪುಲಿಗಿರಿಯನ್ನು ಅನೇಕ ಸುಂದರವಾದ ಕಟ್ಟಡಗಳನ್ನು ಕಟ್ಟಿಸಿ ಸಿಂಗರಿಸುವದರಲ್ಲಿ ತೊಡಗಿದನು.

ಆಹವಮಲ್ಲ ಮೊದಲನೆಯ ಸೋಮೇಶ್ವರನು ಪುಲಿಗಿರಿಯ ಶ್ರೀ. ಸೋಮನಾಥನ ದೇವಾಲಯದ ಮಧ್ಯರಂಗದಲ್ಲಿ ತನ್ನ ಮಂತ್ರಣಾಗಾರ

ವನ್ನು ಏರ್ಪಡಿಸಿಕೊಂಡಿದ್ದನು. ಅಲ್ಲಿ ಅವನು ತನ್ನ ಐದನೆಯ ಹೆಂಡತಿ ಕೇಚಲದೇವಿಯ ಮಗನಾದ ಕೀರ್ತಿವರ್ಮನೊಡನೆ ಮಾತಾಡುತ್ತ ಕುಳಿತಿದ್ದನು. ಕೀರ್ತಿವರ್ಮನು ಆಗ ಬಾಲಕನು. ಅವನಿಗೆ ಅಭ್ಯಾಸ ಮಾಡಿಸಲು ಒಬ್ಬ ಪಂಡಿತನನ್ನು ಅವನು ಜೊತೆಯಲ್ಲಿ ತೆಗೆದುಕೊಂಡಿದ್ದನು. ಕೀರ್ತಿವರ್ಮನ ವಿದ್ಯಾಭ್ಯಾಸವು ಎಲ್ಲಿಯವರೆಗೆ ಬಂದಿದೆ, ಅವನ ಒಲವು ಯಾವ ವಿದ್ಯೆಯಕಡೆಗಿದೆ ಮೊದಲಾದ ಸಂಗತಿಗಳನ್ನು ತಿಳಿದುಕೊಳ್ಳುವದಕ್ಕಾಗಿ ಅವನು ಮಗನನ್ನು ಮಂತ್ರಣಾಗಾರಕ್ಕೆ ಕರೆದಿದ್ದನು. ಮಗನ ಲಕ್ಷ್ಯವು ಸಂಸ್ಕೃತ ವಿದ್ಯಾಭ್ಯಾಸದ ಕಡೆಗೂ ವೈದ್ಯ-ಶಾಸ್ತ್ರವಿಷಯವನ್ನು ತಿಳಿದುಕೊಳ್ಳುವದರ ಕಡೆಗೂ ಇದ್ದುದನ್ನು ಮನಗಂಡು, ಅವನು ಆ ವಿಧದ ಶಿಕ್ಷಣ ದೊರೆಯುವಂತೆ ಏರ್ಪಾಟು ಮಾಡಬೇಕೆಂದು ಮನಸ್ಸು ಮಾಡಿದನು. ಸೋಮೇಶ್ವರ ಮಹಾರಾಜನು ಮಗನ ಸಂಗಡ ಮಾತನಾಡುತ್ತ ಕುಳಿತಾಗ ದ್ವಾರಪಾಲಕನು ಅಲ್ಲಿಗೆ ಬಂದು ಅಭಿವಾದನೆ ಮಾಡಿ— “ಜೀಯಾ, ಉತ್ತರಾಪಥದಿಂದ ದೂತನು ಬಂದಿರುವನು. ಅವನನ್ನು ವಿಕ್ರಮಾದಿತ್ಯ ಮಹಾರಾಜರು ಕಳುಹಿಸಿರುವರಂತೆ” ಎಂದು ಬಿನ್ನವಿಸಿದನು.

ವಿಕ್ರಮಾದಿತ್ಯನ ದೂತನನ್ನು ಆಹವಮಲ್ಲ ಸೋಮೇಶ್ವರನು ಒಳಗೆ ಕರೆಯಿಸಿದನು. ಅನಂತರದಲ್ಲಿ ಉತ್ತರಾಪಥದ ವಿಜಯವಾರ್ತೆಯ ಸಂಗತಿಯ ಬಗ್ಗೆ ಅವನನ್ನು ವಿಚಾರಿಸಿದನು. ಆಗ ದೂತನು ಆಹವಮಲ್ಲ ಸೋಮೇಶ್ವರ ಮಹಾರಾಜನನ್ನು ಕುರಿತು— “ಮಹಾರಾಜರೇ, ಆಲಿಸಬೇಕು. ಪ್ರಭು ವಿಕ್ರಮಾಂಕದೇವ ಮಹಾರಾಜರು ಮಾಡಿದ ಸಾಹಸ ಕಾರ್ಯಗಳನ್ನು ಬಣ್ಣಿಸುವದು ಆದಿಶೇಷನಿಗೆ ಕೂಡ ಅಸಾಧ್ಯವಾಗಿದೆ. ಹೀಗಿದ್ದಮೇಲೆ ನನ್ನಂತಹ ಪಾಮರನ ಪಾಡೇನು? ಆದರೂ ನನ್ನ ಬುದ್ಧಿಗೆ ತೋಚಿದಷ್ಟು ಶ್ರುತಗೊಳಿಸುವೆನು. ಪ್ರಭುಗಳು ತಮ್ಮ ನಿರೋಪ ಹೊಂದಿ ಮಾಳವೆಯರಸನಾದ ಭೋಜರಾಜನಿಗೆ ನೆರವಾಗಿ, ಗುರ್ಜರಾಧಿಪತಿಯನ್ನು ಸದೆಬಡೆದು ಮಾಳವವನ್ನು ನಿರ್ವೈರವನ್ನಾಗಿ ಮಾಡಿದ ಸಂಗತಿಯನ್ನು ನೀವು ಕೇಳಿರಿರುವಿರಿ. ಈ ಸಾಹಸವನ್ನು ನೋಡಿದೊಡನೆಯೇ ಉತ್ತರಾಪಥದ ರಾಜಮಹಾರಾಜರು ಎದೆಯೊಡೆದರು.

ಐವತ್ತು ವರ್ಷದ ವಯಸ್ಸಿನ ಕನ್ನಡ ವೀರನ ಪ್ರತಾಪವು ಅವರನ್ನು ಬೆರಗುಗೊಳಿಸಿತು. ಎಷ್ಟೋ ರಾಜಮಹಾರಾಜರು ಪ್ರಭುಗಳ ಸನ್ನಿಧಿಗೆ ಬಂದು ತಾವಾಗಿ ಕಾಣಿಕೆಯರ್ಪಿಸಿ ಸ್ನೇಹ ಬೆಳಿಸಲು ಪ್ರಾರಂಭಿಸಿದರು. ನಮ್ಮ ಮಹಾರಾಜರ ಮನಸ್ಸಿನಲ್ಲಿ ಉತ್ತರ ದಿಗ್ವಿಜಯ ಮಾಡಬೇಕೆಂಬ ಕುತೂಹಲವಂತು ಇದ್ದೇ ಇದ್ದಿತು. ಆದರೆ ಉತ್ತರ ದೇಶದವರ ಈ ಅಕಲ್ಪಿತ ಸ್ನೇಹಸಂಬಂಧವು ಅವರ ಆಕಾಂಕ್ಷೆಯನ್ನು ಬಲಪಡಿಸಿತು. ಅವರು ಕೆಲದಿನ ಭೋಜರಾಜನ ಆತಿಥ್ಯವನ್ನು ಹೊಂದಿದರು. ತರುವಾಯ ಅವನಿಂದ ಅಮೋಘವಾದ ಕಾಣಿಕೆ ಹೊಂದಿ ಕನೋಜವನ್ನು ಮುತ್ತಲು ಸಾಗಿದರು. ಕಾನ್ಯಕುಬ್ಜದ ಅರಸು ಮನೆತನಕ್ಕೆ ಕರ್ನಾಟಕದವರೆಂದರೆ ಹಾವಿಗೆ ಗರುಡನನ್ನು ತೋರಿಸಿದಂತೆ ಆಗುತ್ತಿರುವದು. ನಿಮ್ಮ ಪೂರ್ವಜರಾದ ಇಮ್ಮಡಿ ಪುಲಿಕೇಶಿ ಮಹಾರಾಜರು ಹರ್ಷವರ್ಧನ ಸಾರ್ವಭೌಮನನ್ನು ರೇವಾನದಿಯ ಕಾಳಗದಲ್ಲಿ ಪೂರ್ಣವಾಗಿ ಪರಾಭವಗೊಳಿಸಿದ್ದೇ ಅವರು ಬೆದರುವ ಕಾರಣವಾಗಿದ್ದಿತು. ಮೂರು-ನಾಲ್ಕು ಶತಮಾನ ಕಳೆದಿದ್ದರೂ ಕಾನ್ಯಕುಬ್ಜದವರು ಕನ್ನಡಿಗರ ಕಲಿತನವನ್ನು ಮರೆತಿಲ್ಲ. ಇಮ್ಮಡಿ ಪುಲಿಕೇಶಿ ಮಹಾರಾಜನು ಸಾರ್ವಭೌಮ ಹರ್ಷವರ್ಧನನನ್ನು ಗೋದಾವರಿಯ ಕಾಳಗದಲ್ಲಿ ಪರಾಭವಗೊಳಿಸಿದ್ದರೆ, ಅವನ ವಂಶಜನು ರಾಜಧಾನಿಯವರೆಗೆ ದಂಡೆತ್ತಿ ಬಂದು ಪುಲಿಕೇಶಿ ಮಹಾರಾಜನಿಗಿಂತ ಹೆಚ್ಚಿನ ಮೇಲ್ಮೆಯನ್ನು ತೋರಿಸಿದನೆಂದು ಕನೋಜದ ರಾಜನು ಬೆದರಿದನು. ಶರಣಾಗತನಾಗಿ ಕಪ್ಪಕಾಣಿಕೆ ಕೊಡಬೇಕೆಂದು ಅವನು ಯೋಚಿಸಿದ್ದನು. ಆದರೆ ನಮ್ಮ ಪ್ರಭುಗಳ ಮಿಂಚಿನ ವೇಗದ ದಾಳಿಯಿಂದ ಅವನ ಮನೋರಥವು ಈಡೇರಲಿಲ್ಲ. ಅವನು ರಾಜಧಾನಿಯನ್ನು ಬಿಟ್ಟು ಪಲಾಯನ ಮಾಡಿದನು. ನಮ್ಮ ಪ್ರಭುಗಳು ರಾಜಧಾನಿಯನ್ನು ಪ್ರವೇಶಿಸಿ ಪ್ರಜಾಜನರಿಗೆ ಏನೂ ತೊಂದರೆಕೊಡದೆ ರಾಜಭಾಂಡಾರವನ್ನಷ್ಟು ಸುಲಿದುಕೊಂಡು, ಮಹಾವೀರ ಚಂದ್ರದೇವ ಸೇನಾಪತಿಗಳಿಗೆ ಅಲ್ಲಿಯ ಆಧಿಪತ್ಯವನ್ನೊಪ್ಪಿಸಿದರು. ಕಾನ್ಯಕುಬ್ಜದಲ್ಲಿ ಒಂದುವಾರ ಇದ್ದು ಅಲ್ಲಿಂದ ವಂಗದೇಶಕ್ಕೆ ವಿಜಯಯಾತ್ರೆಗಾಗಿ ತೆರಳಿದರು. ಅವರು ತಮ್ಮ ಘನವಾದ ಪರಾಕ್ರಮದಿಂದ ಬಂಗಾಲ ಬಿಹಾರ ನೇಪಾಳ ದೇಶಗಳನ್ನು ವಶಪಡಿಸಿ

ಕೊಂಡು ಅಲ್ಲಿ ನನ್ನಿಯದೇವ ದಂಡನಾಯಕರನ್ನು ಒಡೆಯರನ್ನಾಗಿ ನಿಯಮಿಸಿದ್ದಾರೆ. ಇಪ್ಪತ್ತು ವರ್ಷದ ವಯಸ್ಸಿನ ಕನ್ನಡ ಸಾರ್ವಭೌಮರ ಈ ಪ್ರತಾಪದಿಂದ ಉತ್ತರಾಪಥದ ಜನರು ಬೆರಗಾಗಿದ್ದಾರೆ. ವಿಕ್ರಮಾಂಕ ಮಹಾರಾಜರು ತಮ್ಮ ಈ ಉತ್ತರಾಪಥದ ವಿಜಯಯಾತ್ರೆಯನ್ನು ಪೂರೈಸಿ ಕೊಂಡು ಇದೀಗ ವಿಂಧ್ಯಾಚಲವನ್ನು ದಾಟಿ ರೇವಾತೀರಕ್ಕೆ ಬಂದಿರುವರು. ದಕ್ಷಿಣ ದೇಶದ ವಿಜಯ ಯಾತ್ರೆಯನ್ನು ಮುಗಿಸಿಕೊಂಡು ರಾಜಧಾನಿಗೆ ಬರಬೇಕೆಂದು ಅವರ ಸಂಕಲ್ಪವಿದೆ. ಜೀಯಾ! ಉಮಾಮಹೇಶ್ವರ ವರಪುತ್ರರಾದ ವಿಕ್ರಮಾಂಕ ದೇವ ಪ್ರಭುಗಳು ಚಾಲುಕ್ಯರ ವೈಭವವನ್ನು ಕಲ್ಪನಾತೀತವಾಗಿ ಬೆಳೆಯಿಸಿದರು. ಕರ್ನಾಟಕ ಸಾಮ್ರಾಜ್ಯ ಧ್ವಜವನ್ನು ಅಖಿಲಭಾರತದಲ್ಲಿ ಉಡ್ಡಾಣಗೊಳಿಸಿ ಭರತಖಂಡದಲ್ಲಿ ಕನ್ನಡಿಗರ ಸಾರ್ವ ಭೌಮತ್ವವನ್ನು ನೆಲೆಗೊಳಿಸಿದರು. ಇಂತಹ ಪ್ರತಾಪಶಾಲಿಗಳಾದ ಪ್ರಭು ಗಳಿಗೂ, ಅಂತಹ ಪುತ್ರರರನ್ನು ಪಡೆದ ತಮಗೂ ಭಾರತೀಯರು ಅನಂತ ಧನ್ಯವಾದನೆಗಳನ್ನರ್ಪಿಸತೊಡಗಿದ್ದಾರೆ. ಇಷ್ಟೇ ನನ್ನ ಸಂದೇಶವು."

ದೂತನ ಸಂದೇಶವನ್ನು ಕೇಳಿ ಸೋಮೇಶ್ವರನು ಆನಂದ ಶರಧಿಯಲ್ಲಿ ಮುಳುಗಿದನು. ಅವನು ತನ್ನ ಮಂತ್ರಿ ಸೇನಾಪತಿಗಳನ್ನೂ ಕರೆಯಿಸಿ ಸೋಮನಾಥ ದೇವಾಲಯದ ಮಧ್ಯರಂಗದಲ್ಲಿ ಸಭೆಸೆರೆಯಿಸಿ, ತನ್ನ ಕುಮಾರ ವಿಕ್ರಮಾದಿತ್ಯನು ಮಾಡಿದ ಅಭೂತ ಪೂರ್ವವಾದ ದಿಗ್ವಿಜಯದ ವೃತ್ತಾಂತವನ್ನು ಯಥಾಸ್ಥಿತವಾಗಿ ತಿಳಿಸಿದನು. ಈ ಸಂಗತಿಯನ್ನು ಕೇಳಿ ಬಾಚಲದೇವಿ ಕೇತಲದೇವಿ ಮೊದಲಾದ ಅರಸಿಯರೂ ವಿಕ್ರಮಾಂಕನ ಪತ್ನಿಯಾದ ಸಾವಳದೇವಿಯೂ ರಾಜಕರ್ಮಚಾರಿಗಳೂ ಸ್ವರ್ಗೀಯ ಆನಂದವನ್ನು ತಳೆದರು. ಈ ಮಹಾವಿಜಯದ ನಿಮಿತ್ತವಾಗಿ ಪುಲಿಗಿರಿ ಯಲ್ಲಿ ಮಹೋತ್ಸವವು ನೆರವೇರಿಸಲ್ಪಟ್ಟಿತು. ಬಡಜನರಿಗೆ ಹಾಗೂ ಯಾಚಕರಿಗೆ ಧನಸಹಾಯ ಮಾಡಲ್ಪಟ್ಟಿತು. ಲಕ್ಷ್ಮಣಲಿಂಗ ಸೋಮ ನಾಥ ಮೊದಲಾದ ದೇವಾಲಯಗಳಲ್ಲಿ ಮಹಾಭಿಷೇಕ ನಡೆದು ಅನ್ನ ಸಂತರ್ಪಣೆ ಮಾಡಲಾಯಿತು. ಬಸದಿಗಳಲ್ಲಿಯೂ ಉತ್ಸವವು ನಡೆಯಿತು. ಅಲ್ಲಿಯ ಜೈನ ಯತಿಗಳ ಇಷ್ಟಾನುಸಾರ ಯಾಚಕ ಸಂತುಷ್ಟಿಯಾಯಿತು.

ಪುಲಿಗಿರಿಯಲ್ಲಿ ಈ ಮೇರೆಗೆ ಮಹೋತ್ಸವವು ಮುಗಿಯುತ್ತಲೇ ಆಹವಮಲ್ಲ ಸೋಮೇಶ್ವರನು ಅನಾರೋಗ್ಯತೆ ಹೊಂದಿದನು. ಅವನು ವಿಷಮಜ್ವರಪೀಡಿತನಾಗಿ ಬಹಳೇ ಶ್ರಮಪಡತೊಡಗಿದನು. ಕರ್ನಾಟಕ ದೊಳಗಿನ ಅನೇಕ ನಾಮಾಂಕಿತ ವೈದ್ಯರು ಔಷಧ ಕೊಟ್ಟರು. ಆದರೆ ಜ್ವರದ ಪರಿಣಾಮವು ಕಡಿಮೆಯಾಗದೆ ದಿನದಿನಕ್ಕೆ ಅಭಿವೃದ್ಧಿ ಹೊಂದುತ್ತ ನಡೆಯಿತು. ಕೂಡಲೆ ಅವನು ಕಲ್ಯಾಣಕ್ಕೆ ಈ ಸುದ್ದಿಯನ್ನು ಕಳುಹಿಸಿ ದನು. ವಿಕ್ರಮನು ಎಲ್ಲಿರುವನೆಂಬದೂ, ಅವನು ಎಷ್ಟುದೂರದಲ್ಲಿರುವ ನೆಂಬದೂ ಗೊತ್ತಾಗದೆ ಹೋದುದರಿಂದ ಅವನನ್ನು ಹುಡುಕಲು ಇಬ್ಬರು ಅಶ್ವಾರೋಹಿಗಳನ್ನು ಉತ್ತರಾಪಥದ ಕಡೆಗೆ ಕಳುಹಿಸಿ, ದಂಡಯಾತ್ರೆ ನಿಲ್ಲಿಸಿ ಹೊರಟು ಬರಬೇಕೆಂಬ ಸಂದೇಶ ಕಳುಹಿಸಿದನು. ತನ್ನ ತಂಗಿಯಾದ ಅವ್ವಲದೇವಿಗೂ ಬೀಗನಾದ ಮೂರನೆಯ ಭಿಲ್ಲಮದೇವನಿಗೂ ತಾನು ಪ್ರಾಣಾಂತಿಕವಾದ ಬೇನೆಯಲ್ಲಿರುವೆನೆಂಬ ಸುದ್ದಿಯನ್ನು ತಿಳಿಸಿದನು. ಕೆಲದಿನಗಳಲ್ಲಿ ಎಲ್ಲ ಪರಿವಾರವೂ ಕೂಡಿತು; ಆದರೆ ದೂರದಲ್ಲಿದ್ದ ವಿಕ್ರಮಾ ದಿತ್ಯನಿಗೆಮಾತ್ರ ಇದುವರೆಗೂ ಸೋಮೇಶ್ವರ ಮಹಾರಾಜನ ಅನಾರೋಗ್ಯ ತೆಯ ವಾರ್ತೆ ತಗಲಲಿಲ್ಲ. ತನ್ನ ಪ್ರೀತಿಯ ಪ್ರತಾಪಶಾಲಿ ಪುತ್ರನು ತನ್ನ ಅಂತ್ಯಕಾಲಕ್ಕೊದಗಲಿಲ್ಲೆಂದು ಅವನು ವ್ಯಸನಬಟ್ಟನು. ಹಿರಿಯ ಮಗನಾದ ಸೋಮೇಶ್ವರನು ಕಲ್ಯಾಣದಲ್ಲಿಯೆ ಉಳಿದುದಕ್ಕಾಗಿ ಅವನಿಗೆ ವ್ಯಸನವೆನಿಸಲಿಲ್ಲ. ಆದರೆ ವಿಕ್ರಮಾದಿತ್ಯನು ಬರಬೇಕೆಂದು ಅವನ ಇಚ್ಛೆ ಇತ್ತು. ಈ ಇಚ್ಛೆ ಅಸಾಧ್ಯವಿದ್ದುದರಿಂದ ಅವನು ನಿರಾಶೆಗೊಳ್ಳ ಬೇಕಾಯಿತು. ಮಹಾರಾಜನ ಜ್ವರದ ಆಳತೆಯು ಬಹುಮಟ್ಟಿಗೆ ಬೆಳೆ ದುದರಿಂದ ಆ ತಾಪವನ್ನು ಸಹಿಸುವದು ಅಸಾಧ್ಯವಾಗತೊಡಗಿತು. ಆಗ ಅವನು ತನ್ನ ಪತ್ನಿ ಸೂಸೆ ಮಂತ್ರಿ ಸೇನಾನಾಯಕರನ್ನು ಕರೆದು— "ನನ್ನ ಇಹಲೋಕದ ಯಾತ್ರೆ ಪೂರೈಸುವ ಕಾಲ ತೀರ ಸಮೀಪಿಸಿದಂತೆ ತೋರುವದು. ತುಂಗಭದ್ರೆಗೆ ನನ್ನ ದೇಹಾರ್ಪಣೆ ಮಾಡಬೇಕೆಂಬ ಇಚ್ಛೆ ಇದೆ. ನನ್ನನ್ನು ಅಲ್ಲಿಗೆ ಕರೆದೊಯ್ಯಬೇಕು" ಎಂದು ತಿಳಿಸಿದನು.

ಮೂರನೆಯ ದಿನವೇ ಚಾಲುಕ್ಯ ರಾಜಪರಿವಾರವು ತುಂಗಭದ್ರಾ ತೀರದಲ್ಲಿದ್ದ ಕುರುವತ್ತಿಗೆ ಸಾಗಿತು. ಒಂದೇ ಪಯಣದಲ್ಲಿ ಅದು ಪುಲಿ

ಗಿರಿಯಿಂದ ಕುರುವತ್ತಿಯನ್ನು ತಲುಪಿತು. ಮೂರನೆಯ ದಿನ ಆಹವಮಲ್ಲ ಸೋಮೇಶ್ವರನು ಎಲ್ಲ ಹೆಂಡಿರು ಮಕ್ಕಳನ್ನೂ ಬೀಗನನ್ನೂ ಮಂತ್ರಿ ಸೇನಾಪತಿಗಳನ್ನೂ ಕರೆದು, ತಾನು ಜಲಸಮಾಧಿ ಹೊಂದುವೆನೆಂದು ತಿಳಿಸಿದನು. ಸಾರ್ವಭೌಮನ ಈ ವಿಚಾರವನ್ನು ಕೇಳಿ ಎಲ್ಲರೂ ಮರುಗಿದರು. ಅವರು ನಾನಾಪರಿಯಾಗಿ ಅರಸನಿಗೆ ಬೇಡಿಕೊಂಡರು. ಆದರೆ ಅವನ ವಿನಂತಿ ನಿರರ್ಥಕವಾಯಿತು. ಸೋಮೇಶ್ವರ ಮಹಾರಾಜನು ತನ್ನ ಹಟಬಿಡಲಿಲ್ಲ. ಪ್ರಾಣಾಂತಿಕವಾದ ಜ್ವರದ ತಾಪ ಸಹಿಸುತ್ತ ಜೀವಿಸಿರುವದಕ್ಕಿಂತ ಪ್ರಾಣತ್ಯಾಗ ಮಾಡುವದೇ ಲೇಸೆಂದು ಅವನು ಎಲ್ಲರಿಗೂ ಸ್ಪಷ್ಟವಾಗಿ ಹೇಳಿದನು. ವಿಕ್ರಮಾದಿತ್ಯನು ಆಗಮಿಸುವವರೆಗಾದರೂ ಜಲಸಮಾಧಿ ತೆಗೆದುಕೊಳ್ಳಬಾರದೆಂದು ಬಾಚಲದೇವಿಯು ಪತಿಗೆ ತಿಳಿಸಿದಳು. ಅರಸನು ಅವಳ ಮಾತನ್ನು ಮನ್ನಿಸಲಿಲ್ಲ. ಎಲ್ಲಿದ್ದರೂ ವಿಕ್ರಮಾದಿತ್ಯ ಕುಮಾರನಿಗೆ ತನ್ನ ಶುಭಾಶೀರ್ವಾದವಿದೆಯೆಂದು ಹೇಳಿ,ಮೂರನೆಯ ದಿನವೆ ಜಲಸಮಾಧಿ ಹೊಂದುವ ತನ್ನ ನಿಶ್ಚಿತವನ್ನು ತಿಳಿಸಿದನು.

ಸೋಮೇಶ್ವರ ಮಹಾರಾಜನು ಜಲಸಮಾಧಿ ಹೊಂದುವನೆಂಬ ಸುದ್ದಿಯು ಹಾಹಾ ಅನ್ನುವಷ್ಟರಲ್ಲಿ ಆ ಭಾಗದಲ್ಲೆಲ್ಲ ಪಸರಿಸಿತು. ಸುತ್ತುಮುತ್ತಲಿನ ಹಳ್ಳಿ ಪಟ್ಟಣಗಳ ಜನರು ತಂಡ ತಂಡವಾಗಿ ಕುರುವತ್ತಿಗೆ ಬರತೊಡಗಿದರು. ಬೆಳಗಾಗುವಷ್ಟರಲ್ಲಿ ಲಕ್ಷಗಟ್ಟಲೇ ಜನಸಮುದಾಯವು ನದೀ ತೀರದಗುಂಟ ಕೂಡಿತು. ರಾಜನು ಬೆಳಗಿನ ಸ್ನಾನ ಮಾಡಿ ಧಾರ್ಮಿಕ ವಿಧಿಗಳನ್ನೆಲ್ಲ ಮುಗಿಸಿಕೊಂಡನು. ಅನಂತರ ಪಲ್ಲಕ್ಕಿಯಲ್ಲಿ ಕುಳಿತು ನದೀ ತೀರಕ್ಕೆ ಬಂದನು. ಅಲ್ಲಿ ಯಾಚಕರಿಗೂ ಬ್ರಾಹ್ಮಣರಿಗೂ ತನ್ನ ಕೈಮುಟ್ಟಿ ಮನದಣಿ ದಾನ ಮಾಡಿದನು. ವಿದ್ಯಾವಂತರಿಗೂ ದೀನರಿಗೂ ನೆರವುಕೊಡುವಂತಹ ಹಾಗು ಪ್ರಜೆಗಳನ್ನು ಮಕ್ಕಳೋಪಾದಿಯಲ್ಲಿ ಪಾಲನೆ ಮಾಡುವಂತಹ ರಾಜನು ತಮ್ಮ ಕಣ್ಮರೆಯಾಗಿ ಹೋಗುವನೆಂದು ಎಲ್ಲರೂ ಮರಮರನೆ ಮರುಗಿದರು. ರಾಜಪರಿವಾರದ ದುಃಖಕ್ಕಂತು ಮೇರೆಯಿದ್ದಿಲ್ಲ. ಎಲ್ಲರ ಕಣ್ಣುಗಳಲ್ಲಿ ದುಃಖಾಶ್ರುಗಳು ಧಾರೆಗಟ್ಟಿ ಸುರಿಯುತ್ತಿದ್ದವು. ಜನರು ದುಃಖದಗ್ಧರಾಗುತ್ತಿರುವದನ್ನು ಕಂಡು ರಾಜನು ಎಲ್ಲರನ್ನೂ ಸಂತುಷ್ಟಗೊಳಿಸುವದಕ್ಕಾಗಿ–"ನನ್ನ ಪ್ರೀತಿಯ ಪ್ರಜಾಜನರೆ, ನೀವು ನನ್ನ ವಿಯೋಗ

ಕ್ಕಾಗಿ ಚಿಂತಿಸಬೇಡಿರಿ. ನಾನು ಜ್ವರದ ತಾಪವನ್ನು ತಾಳಲಾರದೆ ಜಲ ಸಮಾಧಿ ಹೊಂದುತ್ತಿರುವೆನು. ನನ್ನ ಇಹಲೋಕದ ಕರ್ತವ್ಯಗಳೇನೂ ಉಳಿದಿಲ್ಲ. ನಿಮ್ಮೆಲ್ಲರನ್ನೂ ನನಗಿಂತಲೂ ಹೆಚ್ಚಾದ ಕನಿಕರದಿಂದ ಕಾಯಲು ವಿಕ್ರಮಾಂಕದೇವನು– ಭಾವೀ ಸಾರ್ವಭೌಮ ಸೋಮೇಶ್ವರ ಮಹಾರಾಜರ ಪ್ರತಿನಿಧಿಯು– ಸದೈವ ತತ್ಪರನಿರುವನು" ಎಂದು ಹೇಳಿ, ತನ್ನ ರಾಣಿಯರನ್ನು ಕುರಿತು— "ನನಗೆ ಜೀವನವು ತಾಪದಾಯಕ ನಾಗಿರುವಾಗ ನೀವು ನನ್ನ ಸಲುವಾಗಿ ವ್ಯಥೆಮಾಡುತ್ತ ನನ್ನ ತಪ್ತಾಂತರ ವನ್ನು ಮತ್ತಿಷ್ಟು ತಪಿಸಬೇಡಿರಿ. ನೀವೆಲ್ಲರೂ ಸ್ವರ್ಗದ ದಾರಿಯನ್ನು ಹಿಡಿಯುವ ನನಗೆ ಸಂತೋಷದಿಂದ ಸಿರೋಪ ಕೊಡಿರಿ. ಮಹಾಪವಿತ್ರ ಳಾದ ತುಂಗಭದ್ರಾ ದೇವಿಯ ಉದರದಲ್ಲಿ ಪ್ರವೇಶ ಮಾಡಿ ಮುಕ್ತಿ ಹೊಂದುವ ಭಾಗ್ಯ ನನಗೊದಗುತ್ತಿರಲು ನೀವು ಕಳವಳಪಡಬೇಕೆ? ನೀವು ನನಗೆ ಸಂತೋಷದಿಂದ ಸಿರೋಪ ಕೊಡಿರಿ."

ಸೋಮೇಶ್ವರ ಮಹಾರಾಜನು ತನ್ನ ಮಕ್ಕಳಾದ ಜಯಸಿಂಹ ಕೀರ್ತಿ ವರ್ಮ ವಿಷ್ಣುವರ್ಧನ ಮೊದಲಾದವರಿಗೆ ಕೊನೆಯ ಉಪದೇಶ ಹೇಳಿ, ಅಣ್ಣನಾದ ವಿಕ್ರಮಾದಿತ್ಯನೊಡನೆ ಸಹಕರಿಸಿ ಸಾಮ್ರಾಜ್ಯದ ಅಭ್ಯುದಯ ಮಾಡುತ್ತ ಅದರ ವೈಭವವನ್ನು ಆಸೇತು ಹಿಮಾಚಲದವರೆಗೆ ಬೆಳಗು ವಂತೆ ಮಾಡಬೇಕೆಂದು ತಿಳಿಸಿದನು.

ತರುವಾಯ ಆಹವಮಲ್ಲ ಸೋಮೇಶ್ವರನು ದೇವರ ನಾಮಸ್ಮರಣೆ ಮಾಡುತ್ತ ತುಂಗಭದ್ರಾ ನದಿಯನ್ನು ಪ್ರವೇಶಿಸಿದನು. ನಡುಮಟ ನೀರಲ್ಲಿ ನಿಂತ ಸೂರ್ಯನಿಗೆ ನಮಸ್ಕಾರ ಮಾಡಿ ದೇವನಾಮಸಂಕೀರ್ತನೆಮಾಡುತ್ತ ಮತ್ತೆ ಮುಂದೆ ಸಾಗಿದನು. ಕುತ್ತಿಗೆಮಟ ನೀರಲ್ಲಿ ಹೋದೊಡನೆಯೇ "ಹರಹರ ಮಹಾದೇವ! ಜಯ ತುಂಗಭದ್ರೆ!" ಎಂದು ಗರ್ಜಿಸಿ, ಸುತ್ತಲೂ ತನ್ನ ಪರಿವಾರದವರನ್ನೂ ಪ್ರಜೆಗಳನ್ನೂ ಕೊನೆಯದಾಗಿ ನಿರೀಕ್ಷಿಸಿ ನೀರಿನಲ್ಲಿ ಮುಳುಗಿದನು. ಕರ್ನಾಟಕ ಸಾರ್ವಭೌಮನ ದೇಹವು ಪಾವನಕರಳಾದ ತುಂಗಭದ್ರೆಯ ಉದರವನ್ನು ಸೇರಿತು! ಜನಸಮು ದಾಯವು ನದಿಯಂತೆ ಕಣ್ಣೀರಿನ ಪ್ರವಾಹ ಹರಿಸುತ್ತ ಅಲ್ಲಿಂದ ತೆರಳಿತು!

# ೮. ನೆಮ್ಮದಿಯ ಗುಟ್ಟು

ಇಂದು ದಿವ್ಯ ಪ್ರತಾಪನಿಧಿಯಾದ ವಿಕ್ರಮಾದಿತ್ಯನ ಮನಸ್ಸು ಅತ್ಯಂತ ವ್ಯಗ್ರವಾಗಿತ್ತು. ಅಪ್ರತಿಹತ ಪ್ರಭಾವದಿಂದ ಸಾಮ್ರಾಜ್ಯದಲ್ಲಿಯ ಪುಂಡ ಪಾಳಯಗಾರರನ್ನೂ ಮಂಡಲೇಶ್ವರ ಮಹಾಮಂಡಲೇಶ್ವರರನ್ನೂ ದಂಡಿಸಿ ಎಲ್ಲೆಡೆಯಲ್ಲಿಯೂ ಶಾಂತಿಸ್ಥಾಪನೆ ಮಾಡಿ ಚಾಲುಕ್ಯ ಸಾಮ್ರಾಜ್ಯ ವನ್ನು ಸುಸ್ಥಿರ ಸುವ್ಯವಸ್ಥಿತವನ್ನಾಗಿ ಮಾಡಿದ ಅವನು ಈಗ ದೊಡ್ಡ ಅಪಮಾನಕ್ಕೆ ಈಡಾಗಿದ್ದನು. ಅಪಮಾನಶಿಖಿಯಿಂದ ಅವನ ಹೃದಯವು ಬೆಂದುಬೆಂಡಾಗತೊಡಗಿತ್ತು. ಅವನಿಗೆ ಅಪಮಾನವು ಅಸಹನೀಯ ವಾಗಿತ್ತು. ಈ ಅಪಮಾನದ ಸೇಡು ತೀರಿಸಿಕೊಳ್ಳುವದೇನು ಅವನಿಗೆ ಅಸಾಧ್ಯವಿರಲಿಲ್ಲ. ಆದರೆ ಅಂತಹ ಕೃತ್ಯಗಳನ್ನಾಚರಿಸದೆ ಸಾಮ್ರಾಜ್ಯದ ವರ್ಚಸ್ಸಿಗೂ ಗೌರವಕ್ಕೂ ಬಾಧೆಯುಂಟಾಗುವದಲ್ಲದೆ ಒಳಜಗಳವು ತಲೆಯೆತ್ತಿ ಸಾಮ್ರಾಜ್ಯದ ಅವನತಿಗೆ ಕಾರಣವಾಗಬಹುದೆಂದು ಅವನು ಬಹುಪರಿಯಾಗಿ ಮಿಡುಕತೊಡಗಿದ್ದನು. ಕುಶಾಗ್ರ ಬುದ್ಧಿಯವನೂ ರಾಜ ಕಾರಣ ಪಟುವೂ ಆದ ಅವನಿಗೆ ಮುಂದಿನ ಮಾರ್ಗವೇ ತೋಚದಂತಾಗಿ ಅಂಧನಂತೆ ಅವಸ್ಥೆ ಹೊಂದಿದ್ದನು.

ವಿಕ್ರಮಾದಿತ್ಯನು ತನ್ನ ಮಂದಿರದ ಅಟ್ಟಾಲಿಕೆಯ ಮೇಲೆ ಕುಳಿತಿದ್ದ ನು. ಅವನ ಸಿರಿಯರಸಿಯಾದ ಸಾವಳದೇವಿಯು ಬಳಿಯಲ್ಲಿದ್ದಳು. ಪತಿಯ ಮನಸ್ಸಿನ ಕ್ಲೇಶದ ಕಾರಣವು ಸಾವಳ ದೇವಿಗೆ ಹೊಳೆಯದಿರಲಿಲ್ಲ. ಅವಳು ಪತಿಯನ್ನು ಕುರಿತು—"ನಾಥ! ಇಂದು ನಿಮ್ಮ ಮನಸ್ಸು ಈ ಪರಿಯಾಗಿ ಉದ್ವಿಗ್ನವಾಗಿರುವದೇಕೆ? ನೀವು ವರ್ಧಮಾನ ವಿಜಯಶಾಲಿ ಗಳು. ನಿಮ್ಮ ವಿಜಯದಿಂದ ಸಾಮ್ರಾಜ್ಯವು ಘನತೆಹೊಂದಿ ವೈಭವಗಿರಿಯ ಅತ್ಯುಚ್ಚಶಿಖರವನ್ನೇರಿರುವದು. ನಿಮ್ಮ ಕೀರ್ತಿ ಭರತಖಂಡದ ತುಂಬ ಪಸರಿಸಿದೆ. ಇಂತಹ ಸ್ವಾನಂದಪರಿಸ್ಥಿತಿಯಲ್ಲಿ ನೀವು ವಿಷಣ್ಣ ಚಿತ್ತ ರಾಗಿರುವದೇಕೆ?"

" ಪ್ರಿಯೆ, ನೀನು ಹೇಳಿದಂತೆ ನನ್ನ ಮನಸ್ಸು ಉದ್ವಿಗ್ನಗೊಂಡದ್ದು ನಿಜ. ಚಾಲುಕ್ಯ ಸಾಮ್ರಾಜ್ಯದ ಕೀರ್ತಿವೈಭವಗಳು ದಿಗಂತಗಳಲ್ಲಿ ವ್ಯಾಪಿಸಿವೆ. ಸಾಮ್ರಾಜ್ಯವು ನಿರ್ವೈರವಾಗಿದೆ. ಪುಣ್ಯಶ್ಲೋಕಿ ಪೂರ್ವಜರಾದ ಇಮ್ಮಡಿ ಪುಲಿಕೇಶಿ ಮಹಾರಾಜರಂತೆ ಚಾಲುಕ್ಯರ ವರ್ಚಸ್ಸು ಉತ್ತರಾಪಥದಲ್ಲಿ ನೆಲೆಗೊಂಡಿದೆ. ಕರ್ನಾಟಕ ಸಾಮ್ರಾಜ್ಯವು ಜಗತ್ತಿನಲ್ಲಿ ಮೇಲ್ಮೆಗೊಂಡು ಮೆರೆಯುತ್ತಿದೆ. ವಸ್ತುಸ್ಥಿತಿಯು ಹೀಗಿದ್ದರೂ ಈ ಎಲ್ಲ ಎಣಿಕೆಗಳನ್ನೂ ಈ ಎಲ್ಲ ಪರಿಸ್ಥಿತಿಯನ್ನೂ ಬಯಲು ಮಾಡುವಂತಹ ಗೃಹಕಲಹದ ಬೇಗೆಯೊಂದು ತಲೆಯತ್ತತೊಡಗಿರುವ ಮೂಲಕ ಮನಸ್ಸು ಅತ್ಯಂತ ವ್ಯಾಕುಲಗೊಂಡಿದೆ. ಆ ದ ಕ್ಕಾ ಗಿ ಯೆ ನಾನು ದಿಙ್ಮೂಢನಾಗಿರುವೆನು. "

" ನಾಥರೆ, ಗೃಹಕಲಹವೆ ? ಗೃಹದಲ್ಲಿ ನಿಮ್ಮ ವಿರುದ್ಧವಾಗಿ ಕಲಹವೆಬ್ಬಿಸುವ ಎದೆ ಯಾರಿಗಿದೆ ? "

" ಎದೆಗಾರಿಕೆ ನಡೆದಿದೆ. ಸೋಮೇಶ್ವರ ಸಾರ್ವಭೌಮನೇ ಈ ಎದೆಗಾರಿಕೆ ಮಾಡತೊಡಗಿದ್ದಾನೆ. "

" ಅವನ ಮನೋಗತವೇನಿರುವದು ? "

" ಸೋಮೇಶ್ವರ ಮಹಾರಾಜನು ನನ್ನ ವಿಜಯದಿಂದ ಮತ್ಸರಪಡಲಾರಂಭಿಸಿರುವನು. ತಾನು ಸಮ್ರಾಟನಿದ್ದರೂ, ಸಾಮ್ರಾಜ್ಯದಲ್ಲಿ ತನ್ನ ಕೀರ್ತಿಯು ಎಷ್ಟೂ ಬೆಳೆಯದೆ ನನ್ನ ಕೀರ್ತಿಯೆ ಬೆಳೆಯುತೊಡಗಿದ್ದಕ್ಕಾಗಿ ಅವನು ಮತ್ಸರಪಡತೊಡಗಿರುವನು. ಅವನು ನನ್ನ ಶಕ್ತಿಸಂಚಯುವನ್ನು ನಾಶಮಾಡಬೇಕೆಂಬ ಉದ್ದೇಶದಿಂದ ನನ್ನ ವಶದಲ್ಲಿದ್ದ ಬನವಾಸಿ ಮಹಾಮಂಡಲವನ್ನು ಕಿತ್ತುಕೊಂಡು ನೊಳಂಬವಾಟಿ ಮಂಡಲಕ್ಕೆ ನನ್ನನ್ನು ಅಧಿಪತಿಯನ್ನಾಗಿ ಮಾಡಿರುವನು. ಈ ವಿಷಯುವಾಗಿ ಇಂದು ಓಲಗದಲ್ಲಿ ಬಹಳೇ ಅರೆದಾಟವು ನಡೆಯಿತು. ಮಹಾಮಂತ್ರಿ ರೂಪಭಟ್ಟಯ್ಯ, ಮಹಾಸೇನಾಪತಿ ಉದಯಾದಿತ್ಯ ಮೊದಲಾದ ವೃದ್ಧ ಹಾಗು ಅನುಭವಿಕ

ರಾಜನಿಷ್ಠರು ಹೇಳಿದ ಮಾತುಗಳನ್ನು ಅವನು ಪೂರಾ ಅಲ್ಲಗಳೆದಿರುವನು. ಅಣ್ಣನ ಈ ವಿಧದ ವೃತ್ತಿಗಾಗಿ ಏನು ಉಪಾಯ ಮಾಡಬೇಕೆಂಬುದೇ ತೋಚದಹಾಗಾಗಿ ವ್ಯಶನಪಡುತ್ತಿರುವೆನು. ”

“ ನಿಮ್ಮಂತಹರು ಈ ವಿಧದ ಯೋಚನೆಗೊಳಗಾಗಬೇಕೆ ? ನೀವು ಒಂದು ಸಂಗತಿಯನ್ನು ಬದಿಗಿರಿಸಿದರೆ ಎಲ್ಲ ವ್ಯಸನವೂ ದೂರಾಗುವದು.”

“ ಯಾವ ಸಂಗತಿ ? ”

“ ನಿಮ್ಮಲ್ಲಿ ವಾಸವಾಗಿದ್ದ ಬಂಧು ಪ್ರೇಮವು ನಿಮ್ಮನ್ನು ಹಣ್ಣು ಮಾಡುತ್ತಲಿದೆ; ಅದೇ ಸಾಮ್ರಾಜ್ಯವನ್ನು ನಾಶಗೊಳಿಸುವಂತಹ ಪರಿಸ್ಥಿತಿಯನ್ನು ಉತ್ಪನ್ನಮಾಡತೊಡಗಿದೆ. ಪ್ರಜಾಹಿತ ಘಾತಕಿಯೂ ಸ್ವಾರ್ಥಿಯೂ ವಿಲಾಸಿಯೂ ಕರ್ತವ್ಯಶೂನ್ಯನೂ ಆದ ನಿಮ್ಮ ಅಣ್ಣನನ್ನು ನೀವು ಸಿಂಹಾಸನದಿಂದ ತಳ್ಳಲೇಬೇಕು. ನಿಮ್ಮ ಕರ್ತವ್ಯ ಪ್ರಭಾವದಿಂದ ಅವನು ಸಾಮ್ರಾಜ್ಯ ಸಿಂಹಾಸನದ ಮೇಲೆ ಮೆರೆಯುತ್ತಿರುವನು. ರಾಜವೈಭವ ಭೋಗಿಸುತ್ತಿರುವನು. ಮಾವಂದಿರಾದ ಆಹವಮಲ್ಲ ಸೋಮೇಶ್ವರರು ಹೇಳುತ್ತಿದ್ದಂತೆ ನಿಮ್ಮಣ್ಣನು ಅಪಾತ್ರನಿರುವನು. ಅವನಲ್ಲ ಮನುಷ್ಯತ್ವವೇ ಇಲ್ಲ. ದಿಗ್ವಿಜಯ ಮಾಡಿ ಕಪ್ಪ-ಕಾಣಿಕೆ ತಂದ ದಿನವೊಂದು ಮಾತ್ರ ನಿಮ್ಮ ಮೇಲೆ ಅವನು ಪ್ರೇಮತೋರಿಸುವಂತೆ ನಟಿಸುವನು. ಮಾರನೆಯ ದಿನ ಮತ್ತೆ ಅದೇ ಬುದ್ಧಿ; ಅದೇ ನಡತೆ. ನೀವು ಅಣ್ಣನ ಮೇಲೆ ತೋರಿಸುತ್ತಿರುವ ಅನುರಾಗವು ಸಾಮ್ರಾಜ್ಯವನ್ನು ಹಾಳುಮಾಡುತ್ತಿದೆ. ನಿಮ್ಮ ಪ್ರತಾಪದ ಫಲವನ್ನು ನಷ್ಟಪಡಿಸುತ್ತದೆ. ನಿಮ್ಮಂತಹ ರಾಜಕಾರಣ ಧುರಂಧರರಿಗೆ ಹೆಚ್ಚಾಗಿ ಹೇಳಬೇಕೆನ್ನುವಂತಿಲ್ಲ. ನಿಮ್ಮಲ್ಲಿ ಭಾಷ್ಕಳ, ಬಂಧುಪ್ರೇಮವೊಂದು ವಾಸಿಸುತ್ತಿರುವ ಮೂಲಕ ನೀವು ತೇಜೋಹೀನರಾಗತೊಡಗಿರುವಿರಿ. ಸಾಮ್ರಾಜ್ಯ ವಿಸ್ತಾರ ಮಾಡಿ, ಉತ್ತರಾಪಥದಲ್ಲಿ ಸಹ ರಣದುಂದುಭಿ ಮೊಳಗಿಸಿ ವಿಜಯಧ್ವಜ ನಿಲ್ಲಿಸಿ, ಅಲ್ಲಿ ನಿಮ್ಮ ಮಾಂಡಲಿಕರನ್ನು ನಿರ್ಮಾಣಮಾಡಿ ಇಡೀ ಭಾರತವನ್ನು ಏಕಛತ್ರದ ಕೆಳಗೆ ತೆಗೆದುಕೊಳ್ಳುವಂತಹ ಮಹಾ ಪ್ರತಾಪನಿಧಿಗಳಾದ ನಿಮ್ಮ ಕೈಯಲ್ಲಿ

ಯಃಕಶ್ಚಿತ ಬನವಾಸಿ ಮಂಡಲವು ಕೂಡ ಇರಬಾರದೆಂದು ನಿಮ್ಮ ಅಣ್ಣನ ಪ್ರಯತ್ನವಿದ್ದ ಮೇಲೆ ಇದಕ್ಕಿಂತ ಹೆಚ್ಚು ತೇಜೋಹಾನಿಯು ಇನ್ನಾವದರಲ್ಲಿ ಇದೆ ? ”

“ ನೀನು ಹೇಳುವದೆಲ್ಲವೂ ನನಗೆ ತಿಳಿಯುವದಿಲ್ಲವೆಂತಲ್ಲ. ಎಲ್ಲವೂ ತಿಳಿದಿದೆ. ತಂದೆಯವರು ನಿರ್ಯಾಣಹೊಂದಿ ಕೆಲವು ದಿನಗಳಲ್ಲಿಯೆ ಗೃಹಕಲಹದ ಬೇಗೆ ಹಬ್ಬಿತೆಂಬ ಅಪಕೀರ್ತಿಯು ಉಂಟಾಗಬಾರದೆಂದು ಎಲ್ಲ ಅಪಮಾನಗಳನ್ನೂ ಸಹನ ಮಾಡಿಕೊಳ್ಳುತ್ತಿರುವೆನು. ಮೊದಲು ಬನವಾಸಿ ಪ್ರಾಂತವನ್ನು ನನ್ನ ಸ್ವಾಧೀನಪಡಿಸಿ, ಅನಂತರದಲ್ಲಿ ನೊಳಂಬ ವಾಡಿಯನ್ನು ಕೊಟ್ಟು ಬನವಾಸಿಯನ್ನು ಲಕ್ಷ್ಮರಸನಿಗೆ ಕೊಡಬೇಕೆಂದು ಅಣ್ಣನು ಯೋಚಿಸಿರುವನು. ಇಷ್ಟರಲ್ಲಿಯೇ ಏನಾದರೂ ಸಾಹಸ ಮಾಡ ಬೇಕೆಂದಿದ್ದೆನು. ಆದರೆ ವೃದ್ಧ ಮಂತ್ರಿಗಳಾದ ರೂಪಭಟ್ಟಯ್ಯ ಮೊದ ಲಾದವರ ಮಧ್ಯಸ್ತಿಕೆಯು ಇನ್ನೂ ಪೂರ್ತಿಯಾಗಿರಲಿಲ್ಲ. ಆದರಿಂದ ನಿರಾಶೆಯ ಉತ್ತರವು ಬಂದ ಮೇಲೆ ಬಂಧುಪ್ರೇಮವನ್ನು ಬದಿಗಿರಿಸಿ, ಸಾಮ್ರಾಜ್ಯದ ಹಿತಕ್ಕಾಗಿ ಶಸ್ತ್ರಧಾರಿಯಾಗುವ ಪ್ರಸಂಗವು ಬಂದೇ ಬರುವದು. ”

“ ನಾಥರೆ, ಸಾಮ್ರಾಜ್ಯಕ್ಕೆ ದಕ್ಕೆ ತಗಲಿದ ಮೇಲೆ ಉಪಾಯ ಕೈ ಕೊಳ್ಳುವದಕ್ಕಿಂತ, ಈಗಲೇ ಈ ವಿಷಯದಲ್ಲಿ ಜಾಗ್ರತೆಗೊಂಡರೆ ಒಳಿ ತಲ್ಲವೆ ? ”

“ ಪ್ರಿಯೆ, ವಿಷಯವು ಸೂಕ್ಷ್ಮವಿದೆ. ಬುದ್ಧಿಪೂರ್ವಕವಾಗಿ ನಾವು ಯಾವ ಪಾತಕವನ್ನೂ ಮಾಡಕೂಡದು. ಪಟ್ಟಬಾಧ್ಯನಾದವನನ್ನು ಬದಿ ಗಿರಿಸಿ ನಾನು ಸಿಂಹಾಸನಾರೂಢನಾದರೆ ರಾಜ್ಯಲಾಲಸೆಗಾಗಿ ಹೀಗೆ ಮಾಡಿದೆನೆಂದು ಜನರು ಅನ್ನತೊಡಗುವರು. ತಂದೆಯವರು ನಿನಗೆ ಯೌವರಾಜ್ಯಾಭಿಷೇಕ ಮಾಡಿಸಬೇಕೆಂದು ಸಿದ್ಧವಾದಾಗ, ನಾನು ಬಂಧು ಪ್ರೇಮದಿಂದಲೂ, ಬಾಧ್ಯರಿಗೆ ಬಾಧ್ಯತೆ ದೊರೆಯಬೇಕೆಂಬ ಇಚ್ಛೆ ಯಿಂದಲೂ ಅವರ ಮನಸ್ಸಿನ ವಿರುದ್ಧವಾಗಿ ನಡೆದು ಅಣ್ಣನಿಗೆ ಯೌವ ರಾಜ್ಯಾಭಿಷೇಕ ಮಾಡಿಸಿರುವೆನು. ಹೀಗಿರಲು ಈಗ ಒಂದು ಸಣ್ಣ

ಕಾರಣಕ್ಕಾಗಿ ಅವನನ್ನು ಸಿಂಹಾಸನದಿಂದ ಚ್ಯುತಿಗೊಳಿಸಿದರೆ ಕೆಲವು ಜನರಾದರೂ ನನಗೆ ಅಪಕೀರ್ತಿ ಕೊಡಬಹುದು. ಭಾವೀಕಾಲದಲ್ಲಿ ನನ್ನ ವಿರುದ್ಧವಾದ ಇತಿಹಾಸಕ್ಕೆ ಕುಂದು ಪ್ರಾಪ್ತವಾಗಬಹುದು. ಅಪರಾಧಕ್ಕೂ ಕ್ಷಮೆಯಿದೆ. ಪಾಪಕ್ಕೂ ಪರಿಮಿತಿಯಿದೆ. ಅವೆರಡೂ ಮೀರಿದಪ್ಪಿದವೆಂದರೆ ಆಗಬೇಕಾದ ಕಾರ್ಯವು ಯಾರೂ ಪ್ರೇರೇಪಿಸದಿದ್ದರೂ ಆಗಿಯೇತೀರುವದು. ನಾಳಿನ ಸಭೆಯಲ್ಲಿ ಎಲ್ಲ ಮಾತುಗಳ ತೀರ್ಮಾನವಾಗಬೇಕಾಗಿದೆ. ಇಂದು ಶಿಷ್ಟಾಯಿಗಾಗಿ ರೂಪಭಟ್ಟಯ್ಯ ಉದಯಾದಿತ್ಯರು ಭುವನೈಕ ಮಲ್ಲನೆಂಬ ಬಿರುದು ಇಟ್ಟುಕೊಂಡಿದ್ದ ಇಮ್ಮಡಿ ಸೋಮೇಶ್ವರ ರಾಜನ ಕಡೆಗೆ ಹೋಗಿರುವರು."

"ವಿಕ್ರಮಾರ್ಜಿತ ಸತ್ವಶಾಲಿಗಳಾದ ನೀವು ಯಾವ ಪೌರುಷವೂ ಇಲ್ಲದ ಅಣ್ಣನ ಎದುರಿಗೆ 'ದೇಹಿ' ಎನ್ನಬೇಕಾಯಿತೆ? ದೈವ ದುರ್ವಿಲಾಸ!"

ಸಾವಳ ದೇವಿಯು ಹೀಗೆ ನುಡಿದು ನಿಟ್ಟುಸಿರುಬಿಟ್ಟಳು. ಪತ್ನಿಯ ಔದಾಸೀನ್ಯ ಪೂರ್ಣವಾದ ಉದ್ಗಾರವನ್ನು ಕೇಳಿ ವಿಕ್ರಮಾದಿತ್ಯನು ನಸು ನಗುತ್ತ—"ಪ್ರಿಯೆ. ಉದಾಸೀನಳಾಗಬೇಡ. ವೈಭವವು ವಿಕ್ರಮವು ದೈವಾಯುಕ್ತವಾದವುಗಳು. ದೇವರ ಅನುಗ್ರಹದಿಂದಲೆ ನನ್ನಲ್ಲಿ ವಿಕ್ರಮವು ನೆಲೆಗೊಂಡಿದೆ; ಅದೇ ದೇವತಾನುಗ್ರಹದಿಂದ ಅಣ್ಣನಿಗೆ ರಾಜ್ಯವೈಭವ ಲಭಿಸಿದೆ. ವೈಭವವು ವಿಕ್ರಮದ ಪಡಿನೆಳಲು. ಕೇವಲ ವೈಭವದ ಸೆಳವಿಗೆ ಸಿಲುಕಿ ಉನ್ಮಾರ್ಗಗಾಮಿಯಾದ ಪ್ರತಾಪಹೀನ ಸಮ್ರಾಟನನ್ನು ರಾಜ್ಯ ಲಕ್ಷ್ಮಿಯು ತೊರೆಯುವಳು. ಯಾವುದಕ್ಕೂ ಕಾಲಬೇಕು. ಕಾಲಪ್ರತೀಕ್ಷೆ ಮಾಡುವದು ವಿಹಿತವು. ಏನೋ ದೈವವಶಾತ್ ಅಣ್ಣನಲ್ಲಿ ಸದ್ಬುದ್ಧಿಯು ಉದಯಿಸಿದರೆ ಸಾಮ್ರಾಜ್ಯದ ಕಲ್ಯಾಣವಾಗುವದು. ಒಂದುವೇಳೆ ಅವನು ಪ್ರಜಾಹಿಂಸಕನಾದರೆ,ಸಾಮ್ರಾಜ್ಯ ನಾಶಕ್ಕೆ ಕಾರಣೀಭೂತನಾದರೆ ಅವನು ಸಿಂಹಾಸನವನ್ನು ಹೊಂದಿರಲಾರನು. ಸದ್ಯದ ಅವನ ಸ್ಥಿತಿಯನ್ನು ಅವ ಲೋಕಿಸಿದರೆ ಸುಲಕ್ಷಣವು ತೋರುವದಿಲ್ಲ. ಅವನು ನನ್ನನ್ನಂತು ತೀರ ಉಪೇಕ್ಷಿಸಿರುವನು. ನನ್ನ ಮಾತು ಒತ್ತಟ್ಟಿಗಿರಲಿ, ಅನುಭವಿಕರೂ

ವಯೋವೃದ್ಧರೂ ಆದ ಮಂತ್ರಿ ಸೇನಾನಾಯಕರ ಮಾನಕ್ಷಿತಿ ಮಾಡತೊಡಗಿರುವನು. ಪ್ರಜಾಪೀಡೆಯೂ ಸಾಗಿದೆ. ಬಂಧುಗಳ ಉಪಕೃತಿಯನ್ನು ಲಕ್ಷಿಸದೆ ತನ್ನ ಸುಕೃತಿಯಿಂದಲೇ ಚಾಲುಕ್ಯರ ವೈಭವವು ತನ್ನ ಹಸ್ತಗತವಾಗಿದೆಯೆಂದು ಭಾವಿಸಿ ಮನಸೋಕ್ತವಾಗಿ ಆಚರಿಸಹತ್ತಿರುವನು. ಲಕ್ಷ್ಮರಸ ಬಲದೇವಯ್ಯ ಕೇಶವಾದಿತ್ಯ ಮೊದಲಾದ ಜಡಸ್ವಾರ್ಥಿ ಕರ್ಮಚಾರಿಗಳು ಈಗ ಅವನ ಹಸ್ತಕರಾಗಿರುವಂತೆ ತೋರುವದು. ಸದ್ಯದ ಎಲ್ಲ ದೃಶ್ಯಗಳನ್ನು ಅವಲೋಕಿಸಿದರೆ ರಾಜ್ಯಲಕ್ಷ್ಮಿಯನ್ನು ವಶದಲ್ಲಿರಿಸಿಕೊಳ್ಳುವ ಭಾಗ್ಯವು ಅಣ್ಣನಿಗಿಲ್ಲವೆಂಬ ಸೂಚನೆಗಳು ಕಂಡು ಬರುವವು. ಏನೇ ಇರಲಿ. ಶಿಷ್ಯಾಯಿಯ ಕೆಲಸ ಪೂರ್ತಿಯಾಗುವವರೆಗೆ ನಾನು ಏನನ್ನೂ ಯೋಚಿಸುವದಿಲ್ಲ; ಯಾವ ಕೃತ್ಯಗಳನ್ನೂ ಮಾಡುವದಿಲ್ಲ.''

''ಇದು ತ್ರೇತಾಯುಗವಲ್ಲ; ಕಲಿಯುಗವು. ರಾಮ ಭರತರಂತಹ ಬಂಧು ಸ್ನೇಹವು ಈಗೆಲ್ಲಿ ತಲೆದೋರಬೇಕು? ಮಾವಂದಿರ ಕಾಲಕ್ಕಿದ್ದ ಚಾಲುಕ್ಯ ಸಾಮ್ರಾಜ್ಯವನ್ನು ಇಮ್ಮಡಿಗೊಳಿಸಿ ಅದನ್ನು ನಿರ್ವೈರವನ್ನಾಗಿ ಮಾಡಿ ಉತ್ತರಾಪಥದಲ್ಲಿ ಮಾಂಡಲಿಕ ರಾಜ್ಯವನ್ನು ನಿರ್ಮಾಣಗೊಳಿಸಿದ ದಿವ್ಯ ಪ್ರತಾಪನಿಧಿಗಳಾದ ನೀವು ಸಾಮ್ರಾಜ್ಯಾಧಿಕಾರವನ್ನಲ್ಲ, ಒಂದು ಮಂಡಲವನ್ನು ಅದೂ ಪಟ್ಟದತ್ತವಾದ ಬನವಾಸಿ ಮಂಡಲವನ್ನು ಬೇಡಿದರೆ ಅದನ್ನು ಕೊಡುವ ಇಚ್ಛೆಯಿಲ್ಲದ ಅಣ್ಣನ ವಿಷಯವಾಗಿ ನಿಮ್ಮಲ್ಲಿ ಭ್ರಾತೃಭಾವನೆಯೇಕೆ ಜಾಗ್ರತವಿರಬೇಕೆಂಬದರ ಮರ್ಮವೇ ನನಗೆ ತೋಚದಾಗಿದೆ. ನಿಮ್ಮ ಅವಸ್ಥೆಯೇ ಹೀಗಾಗಿರುವಾಗ ವಿಷ್ಣುವರ್ಧನ–ಜಯಸಿಂಹರ ಪಾಡೇನು?''

ಸಾವಳದೇವಿಯು ಹೀಗೆ ನುಡಿಯುತ್ತಿರುವಾಗ ಭುವನೈಕಮಲ್ಲ ಸೋಮೇಶ್ವರನ ಪಟ್ಟದರಸಿಯಾದ ಅಂಬಿಕಾದೇವಿಯು ಅಲ್ಲಿಗೆ ಬಂದಳು. ಸಾವಳದೇವಿಯು ಅವಳನ್ನು ಸನ್ಮಾನಿಸಿ ಬಳಿಯಲ್ಲಿ ಕುಳ್ಳಿರಿಸಿಕೊಂಡು ಅಕಸ್ಮಿಕವಾದ ಆಗಮನದ ಕಾರಣವನ್ನು ವಿಚಾರಿಸಿದಳು. ಅಂಬಿಕಾದೇವಿಯು ಬಂದದ್ದು ನೋಡಿ ವಿಕ್ರಮಾದಿತ್ಯನೂ ಬೆರಗಾಗಿದ್ದನು. ಅತ್ತಿಗೆಯ

ಬರುವಿಕೆಯ ಕಾರಣವನ್ನು ತಿಳಿದುಕೊಳ್ಳಲು ಅವನೂ ಆತುರನಾಗಿ ಕುಳಿತಿದ್ದನು.

"ಒಂದು ವಿಷಯವನ್ನು ತಿಳಿಸಲು ನಾನು ಇಲ್ಲಿಗೆ ಬಂದಿರುವೆನು. ನಾಳೆಯ ಓಲಗದಲ್ಲಿ ಮಹಾರಾಜರು ಬನವಾಸಿಯ ಮಂಡಲವನ್ನು ವಿಕ್ರಮಾದಿತ್ಯ ಮಹಾರಾಜರಿಗೆ ಕೊಡದೆ ಹೋದರೆ, ಒಮ್ಮೆಲೆ ಪ್ರತಿಕ್ರಿಯೆಯು ಜರುಗಬಾರದೆಂದೂ ಮುಂದೆ ಒಂದೆರಡುದಿನಗಳಮಟ್ಟಿಗಾದರೂ ತಾಟಸ್ಥ್ಯ ಹೊಂದಿರಬೇಕೆಂದೂ ತಿಳಿಸಲು ಬಂದಿರುವೆನು. ನಾನು ಮಹಾರಾಜರಿಗೆ ಸಂಧಿ ದೊರೆತಾಗ ಯೋಗ್ಯವಾದುದನ್ನೇ ಸೂಚಿಸುತ್ತಲಿರುವೆನು. ಅವರ ಬುದ್ಧಿಯೇ ಪರಪ್ರಕಾಶಿತ ಬುದ್ಧಿ. ಅದರಲ್ಲಿ ಅವರಿಗೆ ಒಬ್ಬಿಬ್ಬರು ದುರುಪದೇಶಕರು ಕೂಡಿರುವದರಿಂದ ಮತ್ತಷ್ಟು ವಿವೇಕಶೂನ್ಯರಾಗಿದ್ದಾರೆ." ಎಂದು ಅಂಬಿಕಾದೇವಿಯು ಸಾವಳದೇವಿಗೆ ಹೇಳಿ—"ಮೈದುನರಾಯರೆ, ನನ್ನ ಅಭಿಪ್ರಾಯದಂತೆ ನಡೆಯಲು ನಿಮ್ಮ ಮನಸ್ಸು ಒಪ್ಪುವುದೇ ? ನಾನು ನಿಮ್ಮ ಯೋಗ್ಯತೆಯನ್ನು ಚೆನ್ನಾಗಿ ಅರಿತಿರುವ ಮೂಲಕ ನಿಮಗೆ ಹೆಚ್ಚಾಗಿ ಹೇಳುವ ಅಧಿಕಾರ ನನ್ನದಲ್ಲ"

"ಅತ್ತಿಗೆಯವರೆ, ಬನವಾಸಿ ಮಂಡಲವು ನನಗೆ ದೊರೆಯಲಿ, ದೊರೆಯದಿರಲಿ, ಈಗಲೆ ಪ್ರತಿಕ್ರಿಯೆಯನ್ನು ಪ್ರಾರಂಭಿಸಲು ನಾನು ಸಿದ್ಧನಿಲ್ಲ. ನಾನು ಕಾಲ ನಿರೀಕ್ಷಣೆಮಾಡಿಯೇ ಯಾವುದೊಂದನ್ನು ಅವಲಂಬಿಸುವೆನು. ನಿಮ್ಮಲ್ಲಿದ್ದಷ್ಟು ಸದ್ಬುದ್ಧಿಯು ಅಣ್ಣನಲ್ಲಿ ಇರದೆ ಹೋದುದು ನಮ್ಮ ದುರ್ದೈವ! ಭವಿತವ್ಯವನ್ನು ತಪ್ಪಿಸುವದು ಯಾರಿಂದಲೂ ಆಗದು. ನೀವು ನಿಶ್ಚಿಂತೆಯಿಂದ ನಿಮ್ಮ ಸದಸದ್ವಿವೇಕ ಬುದ್ಧಿಗೆ ತೋಚಿದಂತೆ ಕಾರ್ಯ ಮಾಡಿರಿ. ನಾನು ನಿಮ್ಮ ಅಲ್ಪವಾದ ಇಚ್ಛೆಯನ್ನು ಈಡೇರಿಸಲು ಸಿದ್ಧನಿದ್ದೇನೆ. ಆದರೆ ನಾನು ನಿಮಗೆ ಒಂದು ಮಾತನ್ನು ತಿಳಿಸಬಯಸುತ್ತೇನೆ:—ಅಣ್ಣನಲ್ಲಿ ಹುಟ್ಟಿದ ವಿಪರೀತ ಬುದ್ಧಿಯನ್ನು ಹೋಗಲಾಡಿಸಲು ಕೆಲಮಟ್ಟಿಗಾದರೂ ನೀವು ಸಮರ್ಥರಿರುವಿರಿ. ಉಳಿದವರಿಗೆ ಈ ಮಾತು ಸಾಧ್ಯವೆನಿಸಲಾರದೆಂದು *ತೋರುವದು. ಈ ಕಾರ್ಯ ಮಾಡಿದಷ್ಟು ನಿಮಗೆ ಸುಖವು ಲಭಿಸುವದು. ನಿಮ್ಮ ಪತಿರಾಜನು ತನ್ನ ಆಯುಷ್ಯ

ವನ್ನು ಸುಖಮಯ ಮಾಡಿಕೊಳ್ಳಬೇಕಾಗಿದ್ದರೆ, ರಾಜ್ಯವೈಭವವನ್ನು ಆಯುಷ್ಯದ ತುಂಬ ಅನುಭವಿಸಬೇಕಾಗಿದ್ದರೆ ನೀವು ಈ ಕಾರ್ಯವನ್ನು ಮಾಡಬೇಕು. ನಿಮ್ಮಿಂದಲೂ ಯಾವ ಕಾರ್ಯವೂ ಆಗದೆ ಹೋದರೆ ವಿನಾಶಕಾಲಕ್ಕೆ ವಿಪರೀತಬುದ್ಧಿ ಯೆಂದು ತಿಳಿಯುವ ಪ್ರಸಂಗ ಬರುವದು."

"ಮೈದುನರಾಯರೆ!" ಅಂಬಿಕಾದೇವಿಯು ಕಣ್ತುಂಬ ನೀರುತಂದು ಗದ್ಗದವಾಣಿಯಿಂದ— "ನಾನು ಸಾಹಸಮಾಡುವಷ್ಟು ಮಾಡುವೆನು. ಆರ್ಯಪುತ್ರರ ಈಗಿನ ಬುದ್ಧಿಯು ಬಹುಮಟ್ಟಿಗೆ ಸ್ಥಿತ್ಯಂತರ ಹೊಂದಲಾರದೆಂದು ತೋರುವದು; ಹೊಂದಿದರೂ ಅದರಲ್ಲಿ ಸ್ಥಿರ ಉಳಿಯದು. ನನಗೆ ತಿಳಿದಮಟ್ಟಿಗೆ ಹೇಳಬೇಕಾದರೆ, ಅವರ ಅದೃಷ್ಟದಲ್ಲಿ ಸ್ಥಿರವಾದ ರಾಜ್ಯಭೋಗವನ್ನನುಭವಿಸುವ ಯೋಗವಿಲ್ಲ."

"ದೈವೇಚ್ಛೆ!"

ವಿಕ್ರಮಾಂಕನು ಹೀಗೆ ನುಡಿದಮೇಲೆ ಸಾವಳದೇವಿಯು ಕನಿಕರ ದಿಂದ ಅಂಬಿಕಾದೇವಿಗೆ—"ಅಕ್ಕಾ, ನೀವು ದುಃಖಿತರಾಗಬೇಡಿರಿ. ತಂದೆಯವರಿಂದ ದೊರೆಯುತ್ತಲಿದ್ದ ಯೌವರಾಜ್ಯವನ್ನೂ, ವಿಕ್ರಮಾರ್ಜಿತ ಸಾಮ್ರಾಜ್ಯಾಧಿಕಾರವನ್ನು ಧರ್ಮಬುದ್ಧಿಯಿಂದಲೂ ಬಂಧುಪ್ರೇಮದಿಂ-ದಲೂ ಅಣ್ಣಂದಿರಿಗೆ ಒಪ್ಪಿಸಿ, ಕೇವಲ ನೆಮ್ಮದಿಯುಳಿದರೆ ಸಾಕೆಂಬ ಅತ್ಯುಚ್ಚ ಭಾವನೆಯಿಂದ ಮೊದಲಿನಿಂದ ಇದ್ದ ಬನವಾಸಿ ಮಂಡಲವೊಂದನ್ನು ಕೊಟ್ಟರೆ ಸಾಕೆಂದು ಉಚ್ಚ ಭಾವನೆಯಿಂದ ನಡೆಯುವ ನಿನ್ನ ಮೈದುನರು ಸಹಸಾ ಉನ್ಮಾರ್ಗಗಾಮಿಗಳಾಗಲಾರರೆಂದು ನಾನು ನಿಮಗೆ ಅಭಯವೀಯುವೆನು."

"ನಿಮ್ಮಲ್ಲಿರುವಂತಹ ವಿವೇಕ ಬುದ್ಧಿಯು ಸೋಮೇಶ್ವರ ಮಹಾರಾಜನಲ್ಲಿದ್ದರೆ ಕರ್ನಾಟಕ ಸಾಮ್ರಾಜ್ಯವು ಇನ್ನೂ ಹೆಚ್ಚಾಗಿ ಪ್ರಭಾವಶಾಲಿಯಾಗುತ್ತಿದ್ದಿತು." ಎಂದು ವಿಕ್ರಮಾದಿತ್ಯನು ನುಡಿದು, ಅಂಬಿಕಾದೇವಿಯನ್ನು ಕುರಿತು-"ಅತ್ತಿಗೆಯವರೇ, ನೀವು ನಿಶ್ಚಿಂತೆಯುಳ್ಳವರಾಗಿರಬೇಕು. ಎಲ್ಲಿಯವರೆಗೆ ನನ್ನ ಮಾನಕ್ಕೆ ಬಾಧೆಯುಂಟಾಗಿರುವದಿಲ್ಲವೋ, ಎಲ್ಲಿಯ

ವರೆಗೆ ಸಾಮ್ರಾಜ್ಯಕ್ಕೆ ಧಕ್ಕೆಹತ್ತುವಂತಹ ಘಟನೆಗಳು ನಡೆಯುವದಿಲ್ಲವೋ ಎಲ್ಲಿಯವರೆಗೆ ಪ್ರಜಾಪೀಡೆ ಇರುವದಿಲ್ಲವೋ ಅಲ್ಲಿಯವರೆಗೆ ಸೋಮೇಶ್ವರ ಭುವನೈಕಮಲ್ಲನ ರಾಜವೈಭವಕ್ಕೆ ಗಂಡಾಂತರವಿಲ್ಲೆಂದು ನಾನು ನಿಮಗೆ ಖಂಡಿತವಾಗಿ ಹೇಳುವೆನು."

ವಿಕ್ರಮಾಂಕನ ಮಾತುಗಳಿಂದ ಅಂಬಿಕಾದೇವಿಗೆ ಕೆಲ ಮಟ್ಟಿಗೆ ಸಮಾಧಾನವೆನಿಸಿತು. ಬನವಾಸಿ ಮಂಡಲವೊಂದು ವಿಕ್ರಮಾದಿತ್ಯನ ಸ್ವಾಧೀನವಾಯಿತೆಂದರೆ ಕಲಹವು ಸದ್ಯಕ್ಕಂತು ಇಲ್ಲದಂತಾಗುವದೆಂದು ಮನಸಿನಲ್ಲಿ ಸಮಾಧಾನಹೊಂದಿ, ಸಾವಳದೇವಿಯು ಹಾಗು ವಿಕ್ರಮಾದಿತ್ಯನ ನಿರೋಪಹೊಂದಿ ಅವಳು ತನ್ನ ಮಂದಿರಕ್ಕೆ ತೆರಳಿದಳು.

## ೯. ಭುವನೈಕಮಲ್ಲನ ಓಲಗದಲ್ಲಿ

"ಭುವನೈಕಮಲ್ಲ ಮಹಾರಾಜಾಧಿರಾಜ ಸೋಮೇಶ್ವರ ಮಹಾರಾಜ ಕರ್ನಾಟಕ ಸಾರ್ವಭೌಮ ಭೋಪರಾಕ!"

ವಂದಿಗಳು ತಾರಸ್ವರದಲ್ಲಿ ಇಮ್ಮಡಿ ಸೋಮೇಶ್ವರನ ಬಿರುದಾವಳಿಯನ್ನು ಸಾರಿದರು. ಸೋಮೇಶ್ವರನು ಚಾಲುಕ್ಯರ ಸಾಮ್ರಾಜ್ಯದ ಸಿಂಹಾಸದ ಮೇಲೆ ಕುಳಿತು ತಲೆದೂಗತೊಡಗಿದ್ದನು. ವಂದಿಗಳ ಧ್ವನಿ ಪ್ರತಿಧ್ವನಿಗಳ ಸದ್ದು ಅಡಗಿದ ಮೇಲೆ ಸೋಮೇಶ್ವರನು ಮಂತ್ರಿ ಸೇನಾನಾಯಕರನ್ನು ಕುರಿತು–" ಚಾಲುಕ್ಯರ ವೈಭವ ಪೂರ್ಣವಾದ ಸಾಮ್ರಾಜ್ಯವು ಬಾಧ್ಯತೆಯುಳ್ಳ ನನ್ನ ಹಸ್ತಗತವಾದುದು ನನ್ನ ಸುದೈವದಿಂದಲೇ ಎನ್ನಬೇಕು. ಈ ನನ್ನ ತಮ್ಮ ವಿಕ್ರಮಾದಿತ್ಯನು ಎಷ್ಟಾದರೂ ಪೌರುಷವನ್ನು ತೋರಿಸಬಹುದೆಂಬ ಮಾತನ್ನು ನಾನು ಅಲ್ಲಗಳೆಯುವದಿಲ್ಲ. ಯಾವ

ನೊಬ್ಬನು ಪೌರುಷ ತೋರಿಸುವನೆಂದು ಆವನಿಗೆ ಸಾಮ್ರಾಜ್ಯವನ್ನೇ ಒಪ್ಪಿಸುವ ಯೋಚನೆ ಮಾಡುವದು ಎಷ್ಟು ಅನ್ಯಾಯವೆಂಬುದನ್ನು ಸಭಿಕರೇ ತಿಳಿದುಕೊಳ್ಳತಕ್ಕದ್ದು. ನನ್ನ ಈ ಮಾತನ್ನು ಕೇಳಿ ನನ್ನನ್ನು ಪಿತೃದ್ರೋಹಿಯೆಂದು ಭಾವಿಸಕೂಡದು. ನನ್ನ ತಂದೆಯವರ ಬುದ್ಧಿಯು ಭಾವನಾಪ್ರಧಾನವಾಗಿತ್ತೆಂಬ ಮಾತನ್ನು ಯಾರಾದರೂ ಒಪ್ಪಲಿಕ್ಕೆ ಬೇಕು. ಯಾವಕಾರಣದಿಂದಲೋ ಅವರು ವಿಕ್ರಮಾದಿತ್ಯನಿಗೆ ಯೌವರಾಜ್ಯಾಭಿಷೇಕ ಮಾಡಿಸಬೇಕೆಂದು ಯೋಚಿಸಿದ್ದರು. ಈ ಮಾತು ಅನ್ಯಾಯವೆಂದು ವಿಕ್ರಮನೇ ಒಪ್ಪಿಕೊಂಡಿರುವಾಗ ಈ ಬಗ್ಗೆ ಬೇರೊಬ್ಬರ ಅಭಿಪ್ರಾಯ ತಿಳಿದುಕೊಳ್ಳಬೇಕಾದುದಿಲ್ಲ. ಪಟ್ಟಬಾಧ್ಯನಾದ ನನಗೆ ಪಟ್ಟದೊರೆತರೂ ನಾನು ತಮ್ಮಂದಿರ ಉಪಕಾರ ಹೊತ್ತು ಅವರು ಹೇಳಿದಹಾಗೆ ಕೇಳಬೇಕಾಗಿದೆ! ವಿಕ್ರಮನಿಗೆ ಮೊದಲು ಬನವಾಸಿ ಮಂಡಲವು ಕೊಡಲ್ಪಟ್ಟಿತ್ತು. ಆದರೆ ಅದನ್ನೇ ಕೊನೆಯವರೆಗೆ ಇಟ್ಟುಕೊಂಡಿರಬೇಕೆಂದು ಹಟಹಿಡಿದರೆ ಯಾರು ಕೇಳುವರು ? ಎಲ್ಲರೂ ಹೇಳಿಗ ಹಾಗೆ ಕೇಳುತ್ತ ಹೋದರೆ ಸಮ್ರಾಟನ ಮಾನವು ಮಾರಿಹೋಗಲಿಕ್ಕಿಲ್ಲವೇ ? ನಾನು ಹಿರಿಯನು, ಪಟ್ಟಬಾಧ್ಯನು, ನಾನು ಕೊಟ್ಟಷ್ಟು ಇತರರು ತೆಗೆದುಕೊಂಡು ಸಾಮ್ರಾಜ್ಯ ಸೇವೆ ಮಾಡಬೇಕು. ಪರಾಕ್ರಮ ತೋರಿಸಿದೆವೆಂದು ಹೇಳಿದರೆ ಯಾರು ಆ ಭಾರ ಹೊರಬೇಕು ? ಸಾಮ್ರಾಜ್ಯದ ಉಪ್ಪುಂಡಮೇಲೆ ಸೇವೆ ಸಲ್ಲಿಸುವದು ಧರ್ಮವೇ ಆಗಿದೆ. ಮಹಾರಾಜನು ಸಾಮ್ರಾಜ್ಯ ವೈಭವ ಭೋಗಿಸುವನೆಂದು ದೂತನು ಅದನ್ನೇ ಅಪೇಕ್ಷಿಸಿದರೆ ಹೇಗೆ ? ಇನ್ನು ಈ ವಿಷಯದಲ್ಲಿ ಹೆಚ್ಚಿನ ಆರೆದಾಟಮಾಡುವ ಇಚ್ಛೆ ನನ್ನದಿಲ್ಲ. ಜಯಸಿಂಹ ವಿಷ್ಣುವರ್ಧನ ವಿಕ್ರಮಾದಿತ್ಯ ಈ ಮೂವರಿಗೂ ಒಂದೊಂದು ಮಂಡಲ ಕೊಡಲಿಕ್ಕೆ ಬೇಕಾಗಿದೆ. ಬನವಾಸಿ ಮಂಡಲವೊಂದನ್ನು ಬಿಟ್ಟು ಉಳಿದ ಯಾವ ಮಂಡಲಗಳನ್ನಾದರೂ ಕೇಳಿಕೊಂಡರೆ ಕೊಡಲು ನನ್ನ ಇಚ್ಛೆಯುಂಟು. ಆದರೆ ತಂದೆಯವರ ಕಾಲದಿಂದ ರಾಜಕಾರಣದಲ್ಲಿ ನುರಿತ ಹಾಗು ಚಾಲುಕ್ಯ ಸಾಮ್ರಾಜ್ಯ ಸೇವೆಯನ್ನು ನಿಷ್ಠೆಯಿಂದ ಮಾಡಿದ ರೂಪಭಟ್ಟಯ್ಯ ಮಹಾಪ್ರಧಾನರ ಇಚ್ಛೆಯಿದ್ದಹಾಗೆ ನಡೆಯಲು ನಾನು ಸಿದ್ಧನಿರುವೆನು."

ಸೋಮೇಶ್ವರನು ಹೀಗೆ ನುಡಿದ ಮೇಲೆ ರೂಪಭಟ್ಟಯ್ಯನು ತನ್ನ ಆಸನದಿಂದೆದ್ದು ಅಭಿವಾದನೆಮಾಡಿ—"ಮಹಾರಾಜರೆ, ನನ್ನ ಸೇವೆಯ ಪರಿಸಮಾಪ್ತಿಕಾಲವು ಸಮೀಪಿಸಿದೆ. ದಿವಂಗತ ದೆಹಮುಲ್ಲ ಸೋಮೇಶ್ವರ ಮಹಾರಾಜರ ಕಾಲದಿಂದಲೂ ನಾನು ಒಳಿತನ್ನೇ ಕಂಡಿರುವೆನು. ಆಮರಣವಾಗಿ ನಾನು ಕರ್ನಾಟಕ ಸಾಮ್ರಾಜ್ಯದ ಒಳಿತನ್ನೇ ಕಾಣ ಬಯಸುವೆನು. ಕುಮಾರ ವಿಕ್ರಮಾರ್ಕ ಮಹಾರಾಜರಂತಹ ವಿಕ್ರಮಾನ್ವಿತರ ವಿಕ್ರಮದಿಂದ ಕರ್ನಾಟಕ ಸಾಮಾಜ್ಯವು ವೈಭವಗಿರಿಯ ಅತ್ಯುಚ್ಚ ಶಿಖರವನ್ನೇರಿತೆಂಬ ಮಾತಿನಲ್ಲಿ ವಾದವಿಲ್ಲ. ನೀವು ಪಟ್ಟದ ಬಾಧ್ಯರಿರುವ ಮೂಲಕ ಅವರು ನಿಮ್ಮ ಸಿಂಹಾಸನದ ಅಪೇಕ್ಷೆ ಮಾಡುದಿಲ್ಲ. ಅವರು ಹಿರಿಯ ಮಹಾರಾಜರ ಆಳಿಕೆಯಲ್ಲಿ ಕೂಡ ಬನವಾಸಿ ಮಂಡಲದ ಆಧಿಪತ್ಯ ವಹಿಸಿದ್ದರೂ ಈಗಲಾದರೂ ಅವರು ಬೇಡುತ್ತಿರುವದು ಹೆಚ್ಚಿನದೇನೂ ಇಲ್ಲ. ಅದೇ ಬನವಾಸಿ ಮಂಡಲವು ಅಪರಿಚ್ಛಿತ ವಸ್ತುವಾಗಿದೆ. ಇಡೀ ಸಾಮ್ರಾಜ್ಯ ಭಾರ ನಿರ್ವಹಿಸುವ ಅಖಂಡ ಸಾಹಸಿಗಳಾದ ತೇಜೋನಿಧಿ ವಿಕ್ರಮಾಂಕ ಮಹಾರಾಜರಿಗೆ ಅವರ ಅತ್ಯಲ್ಪವಾದ ಬೇಡಿಕೆ ದಯಪಾಲಿಸಿ, ಅವನ ಸಹಕಾರ ಸೌಹಾರ್ದತೆಗಳನ್ನು ಗಳಿಸುವದು ಶ್ರೇಯಸ್ಕರವಲ್ಲವೆ? ನಿಮ್ಮ ನಿಮ್ಮೊಳಗೆ ಮುನಿಸು ಮುಯ್ಯ ಬುದ್ಧಿಗಳು ನಿರಸ್ತವಾಗಲು ನೀವು ದೊಡ್ಡ ಸಾಹಸ ಇಲ್ಲವೆ ತ್ಯಾಗಮಾಡಬೇಕೆಂಬಂತಿರುವದಿಲ್ಲ. ವಿಕ್ರಮಾಂಕ ಮಹಾರಾಜರು ಸಂಪಾದಿಸಿದ ರಾಜ್ಯದಲ್ಲಿಯ ಕೆಲವಂಶವು ಬನವಾಸಿ ಮಂಡಲವು. ವಿಚಾರ ಮಾಡಿ ನೋಡಿರಿ. ನಿರ್ಮಲಾಂತಃಕರಣವುಳ್ಳವರಾಗಿರಿ. ವಿಕ್ರಮಾದಿತ್ಯರ ಪ್ರಭಾವದಿಂದ ಸಾಮ್ರಾಜ್ಯವು ಇಂದಿನ ಅಭ್ಯುದಯದ ಸ್ಥಿತಿಗೆ ತಲುಪಿರುವದೆಂದು ಹೇಳಿದರೆ ಅದನ್ನು ನೀವು ಒಪ್ಪಲೇಬೇಕು. ಸದ್ಯದ ಸಾಮ್ರಾಜ್ಯವು ನಿರ್ವೈರವಾಗಿ ಬಾಳಲಿಕ್ಕೂ ಅದು ಇನ್ನೂ ಉನ್ನತಾವಸ್ಥೆಯನ್ನು ಹೊಂದಲಿಕ್ಕೂ ನಿಮಗೆ ಅವರ ನೆರವು ಬೇಕೇಬೇಕು. ಎಷ್ಟು ವಿಧದಿಂದ ವಿಚಾರಿಸಿದರೂ ನಿವು ನಿಮ್ಮ ತಮ್ಮಂದಿರ ಸಹಕಾರವನ್ನು ಹೊಂದಿಯೇತೀರಬೇಕು. ಅವರ ನೆರವಿಲ್ಲದೆ ಸಾಮ್ರಾಜ್ಯಾಧಿಕಾರ ಸಾಗಿಸುವದು ಅಸಾಧ್ಯವೆಂದು ಹೇಳದೆ ಇರಲಾರೆನು."

ಸಾಮ್ರಾಜ್ಯಸಿಂಹಾಸನದ ಏಕನಿಷ್ಠ ಸೇವಕನಾದ ರೂಪಭಟ್ಟಯ್ಯನು ಹೀಗೆ ಮಾತಾಡಿ ತನ್ನ ಸ್ಥಾನದಲ್ಲಿ ಕುಳಿತನು. ಅವನ ಮಾತು ಕೇಳಿ ಸೋಮೇಶ್ವರನು ನಸುನಕ್ಕನು. ಅವನು ನಗುವನ್ನು ಮುಗಿಸಿ– "ಪ್ರಧಾನಾಮಾತ್ಯರೆ, ಚಾಲುಕ್ಯ ಸಾಮ್ರಾಜ್ಯವು ಅಭ್ಯುದಯ ಹೊಂದಲು ವಿಕ್ರಮಾದಿತ್ಯನು ಕಾರಣವೆಂದು ನೀವು ಹೇಳುವಿರಿ. ನಿಮ್ಮ ಮಾತಿನಲ್ಲಿ ಏನೂ ಹುರುಳಿಲ್ಲ. ಎಲ್ಲ ಕಾರ್ಯಗಳು ಪರಮಾತ್ಮನ ಇಚ್ಛೆಯಂತೆ ನಡೆಯುವವು. ನಾನಾಗಲಿ, ವಿಕ್ರಮಾದಿತ್ಯನಾಗಲಿ ನಿಮಿತ್ತಮಾತ್ರರು. ಹಿರಿಯ ಮಹಾರಾಜರು ನನಗೆ ಸಾಮ್ರಾಜ್ಯಾಧಿಕಾರ ಕೊಡಬಾರದೆಂದು ಯೋಚಿಸಿದ್ದು, ನಿಮ್ಮೆಲ್ಲರಿಗೆ ಗೊತ್ತಿಲ್ಲದೆ ಇಲ್ಲ. ಹೀಗಿದ್ದರೂ ನನಗೆ ಆ ಅಧಿಕಾರ ದೊರೆಯಿತು. ವಿಕ್ರಮಾದಿತ್ಯನು ಪ್ರತಿಷ್ಠೆಗಾಗಿ ದಂಡಯಾತ್ರೆ ಕೈಕೊಂಡು ವಿಜಯಸಂಪಾದನೆ ಮಾಡಿದ್ದು ನಿಜ. ಈ ಕೆಲಸವು ಸಾಮ್ರಾಜ್ಯ ಶಕ್ತಿಯಿಂದ ನೆರವೇರಿತೆಂದು ಹೇಳದೆ ಕೇವಲ ವಿಕ್ರಮನ ಪ್ರಭಾವದಿಂದಾಯಿತೆಂದು ಹೇಳುವದು ತುಂಬಾ ಹಾಸ್ಯಾಸ್ಪದ ಸಂಗತಿ. ಕರ್ನಾಟಕ ಸಾಮ್ರಾಜ್ಯದಲ್ಲಿ ವಿಕ್ರಮನ ಹೊರತು ಶೂರರೇ ಇಲ್ಲವೇನು ? ನನ್ನ ತರುಣ ಸೇನಾಪತಿಗಳಾದ ಕೇಶವಾದಿತ್ಯರು ಸಾಮಾನ್ಯರಿರುವರೆ ? ಮಂಡಲೇಶ್ವರರಾದ ಲಕ್ಷ್ಮರಸರು ಪ್ರತಿಭಾಸಂಪನ್ನರಿಲ್ಲವೇ ? ಭಾವೀ ಪ್ರಧಾನಾಮಾತ್ಯರಾದ ಬಲದೇವಯ್ಯನವರು ನಿಮಗಿಂತ ಕಡಿಮೆ ತರಗತಿಯ ಬುದ್ಧಿಶಾಲಿಗಳಿಲ್ಲವೆಂದು ನಾನು ನಿರಾಂತಕವಾಗಿ ಹೇಳಬಲ್ಲೆನು. ಪರಮಾತ್ಮನ ಅನುಗ್ರಹದಿಂದ ಸಾಮ್ರಾಜ್ಯಕ್ಕೆ ಎಲ್ಲ ಅನುಕೂಲತೆಗಳುಂಟು. ಆದರೆ ನನ್ನ ಬಂಧುಗಳೇ ಶತ್ರುಗಳೋಪಾದಿಯಲ್ಲಿ ಕಾಡುತ್ತಿರುವದೊಂದು ದುರ್ದೈವದ ಸಂಗತಿ. ನಾನು ನನ್ನ ತಮ್ಮಂದಿರ ಈ ವೃತ್ತಿಗೆ ಬೆದರುವೆನೆಂದು ಯಾರೂ ಭಾವಿಸಕೂಡದು. ನಾನು ಅವರಿಗೆ ಏನಾದರೂ ದಯಪಾಲಿಸುತ್ತಿದ್ದರೆ ಅದು ನನ್ನ ಬಂಧುಭಾವನೆಯ ದ್ಯೋತಕವೆಂದು ಭಾವಿಸತಕ್ಕದ್ದು. ನಾನು ಬನವಾಸಿಯ ಮಂಡಲವನ್ನು ನೊಳಂಬವಾಡಿ ಸಿಂದವಾಡಿಗೆಗಳನ್ನೂ ನನ್ನ ಬಂಧುಗಳಸಲುವಾಗಿ ದಯಪಾಲಿಸಿರುವೆನು. ಈ ಮಂಡಲಗಳನ್ನು ವಿಕ್ರಮಾದಿತ್ಯ, ವಿಷ್ಣುವರ್ಧನ ವಿಜಯಾದಿತ್ಯ, ಜಯಸಿಂಹ ಇವರು ತಮ್ಮಲ್ಲಿ ತಮಗೆ ಬೇಕಾದಹಾಗೆ ಹಂಚಿಕೊಳ್ಳಲಿ. ನಾನು

ಯಾರೊಬ್ಬರ ಅಂಜಿಕೆಗಾಗಿ ಹೀಗೆ ದಯದೋರಿಲ್ಲ. ನನ್ನ ತಮ್ಮಂದಿರು ನಡೆಯಿಸಿದ ಹಾವಳಿಗೆ ಏನನ್ನೂ ಕೊಡಬಾರದೆಂದು ಯೋಚಿಸಿದ್ದೆನು. ಆದರೆ ನನ್ನ ಬಂಧುಪ್ರೇಮವು ನನ್ನನ್ನು ಹಾಗೆ ಮಾಡಗೊಡಲಿಲ್ಲ. ಅಂತೆಯೆ ನಾನು ಅವರ ಇಚ್ಛೆಯಂತೆ ನಡೆಯಬೇಕಾಗಿದೆ."

ಭುವನೈಕಮಲ್ಲ ಇಮ್ಮಡಿ ಸೋಮೇಶ್ವರನು ಹೀಗೆ ಮಾತಾಡಿದ ಮೇಲೆ ಲಕ್ಷ್ಮರಸರು—"ಭುವನೈಕಮಲ್ಲ ಸೋಮೇಶ್ವರ ಮಹಾರಾಜರ ಮಹಾನುಭಾವತೆ ಪ್ರಶಂಸನೀಯವು. ಅವರ ಈ ಬಂಧುಪ್ರೇಮವನ್ನು ನೋಡಿಯೆ ನಾನು ಸ್ವಾರ್ಥತ್ಯಾಗ ಮಾಡಿರುವೆನು; ಅಪಮಾನವನ್ನು ನುಂಗಿಕೊಂಡಿರುವೆನು. ಬನವಾಸಿ ಮಂಡಲವು ಮಹಾರಾಜರಿಂದ ನನಗೆ ಕೊಡಲ್ಪಟ್ಟಿತು. ವಿಕ್ರಮಾದಿತ್ಯ ಮಹಾರಾಜರಿಗೆ ಅದೇ ಬೇಕಾಯಿತು. ಏನೂಪರವಿಲ್ಲ. ಭುವನೈಕಮಲ್ಲರ ಸಂತೋಷವೇ ನನ್ನ ಸಂತೋಷ ನನಗೆ ಬನವಾಸಿಯಾದರೂ ಅಷ್ಟೇ ಬೆಳ್ವೊಲ ಪುಲಿಗಿರಿಗಳಾದರೂ ಅಷ್ಟೇ. ಮುಖ್ಯ ರಾಜಮನೆತನಕ್ಕೆ ಸಂಬಂಧಿಸಿದವರು ಸಂತುಷ್ಟರಾಗಿ ಸಾಮ್ರಾಜ್ಯದ ಹಿತಚಿಂತಕರಾಗಿ ಉಳಿದರೆ ಸಾಕು."

ಲಕ್ಷ್ಮರಸನ ಹಾಗು ಸೋಮೇಶ್ವರನ ಮಾತುಗಳನ್ನು ಕೇಳಿ ವಿಜಯ ಸಿಂಹನು ಸಂತಪ್ತನಾದನು. ಅವನು ಎದ್ದುನಿಂತು ಸಂತಪ್ತವಾಣಿ ಯಿಂದ—"ಲಕ್ಷ್ಮರಸರೆ, ನೀವು ದೊಡ್ಡಮನಸ್ಸು ಮಾಡಿದ್ದೇ ದೊಡ್ಡದು. ಯಾಕಂದರೆ ನೀವು ಈಗ ರಾಜನ ಅನುಗ್ರಹ ಪಾತ್ರರಿರುವಿರಿ. ರಾಜ್ಯ ಬಾಧ್ಯರಾದವರಿಗಿಂತ ಹೆಚ್ಚಿನ ಬಾಧ್ಯತೆ ಮರ್ಯಾದೆಗಳು ನಿಮಗೆ ಲಭಿಸಿರುವವು. ಅಂತೆಯೆ ಹೀಗೆ ಮಾತಾಡಿದ್ದು ಭೂಷಣವೆನಿಸಿತು." ಎಂದು ಲಕ್ಷ್ಮರಸನಿಗೆ ಹೇಳಿ, ಸೋಮೇಶ್ವರನನ್ನು ಕುರಿತು—"ಅಣ್ಣಾ, ನಾವು ನಿಮ್ಮಲ್ಲಿ ಭಿಕ್ಷೆಗಾಗಿ ಬಂದಿಲ್ಲ. ಬಾಧ್ಯತೆಯುಳ್ಳವರಾಗಿರುವ ಮೂಲಕ ಬಂದಿರುವೆವು. ನೀವು ಬಂಧು ಪ್ರೇಮಕ್ಕೊಳಪಟ್ಟು ಏನನ್ನು ಕೊಡುವದು ಬೇಕಿಲ್ಲ. ಬಾಧ್ಯತೆಯ ಪ್ರಶ್ನೆಯಿರಲು ದಯಾದಾಕ್ಷಿಣ್ಯದ ಮಾತು ಇಲ್ಲಿ ಬೇಡ. ನೀವು ಕೊಡದೆ ಹೋದರೆ ನಾವು ನಮ್ಮ ಸಾಮರ್ಥ್ಯದಿಂದ ಬೇಕಾದದ್ದನ್ನು ತೆಗೆದುಕೊಳ್ಳಲು ಸಿದ್ಧರಿರುವೆವು."

ಜಯಸಿಂಹನು ಹೀಗೆ ನುಡಿದಮೇಲೆ ವಿಕ್ರಮಾದಿತ್ಯನು ಶಾಂತಸ್ವರದಿಂದ—“ ಜಯಸಿಂಹ, ಇದು ಅಸಮಯ. ಅಣ್ಣಂದಿರು ನಮಗೆ ದಯಪಾಲಿಸಿದ್ದು ಅವರ ಘನವಂತಿಕೆಯೆಂದು ಭಾವಿಸಬೇಕು. ಕರ್ನಾಟಕ ಸಾಮ್ರಾಜ್ಯದ ಕೀರ್ತಿಗೌರವಗಳ ಕಡೆಗೆ ಲಕ್ಷ್ಯಗೊಟ್ಟು ನಾವು ಎಲ್ಲವನ್ನೂ ಸಹಿಸಬೇಕು. ಒಳಜಗಳವು ನಮ್ಮನ್ನೂ ಹಾಗೂ ನಮ್ಮ ಸಾಮ್ರಾಜ್ಯವನ್ನೂ ನಷ್ಟಪಡಿಸುವದು. ಪಟ್ಟಬಾಧ್ಯರಾದ ಅಣ್ಣಂದಿರು ಸಾಮ್ರಾಜ್ಯವನ್ನು ನೆಮ್ಮದಿಯಾಗಿ ಆಳಿ ಪ್ರಜಾರಂಜನಕಾರಿಗಳಾಗಲಿ. ರಾಜನು ಎಲ್ಲಿಯವರೆಗೆ ಪ್ರಜೆಗಳಿಗೆ ಬೇಕೋ ಅಲ್ಲಿಯವರೆಗೆ ನಮಗೂ ಬೇಕು. ನಾನಾಗಲಿ, ನೀನಾಗಲಿ, ಈ ಸೋಮೇಶ್ವರ ಮಹಾರಾಜರಾಗಲಿ ಒಮ್ಮೆ ಪ್ರಜಾಕ್ಷೋಭೆಗೀಡಾದರೆ ನಮಗೆ ನಮ್ಮ ರಾಜ್ಯಾಧಿಕಾರವು ಎಂದೂ ಉಳಿಯಲಾರದು. ಸಾಧ್ಯವಾದಮಟ್ಟಿಗೆ ನಾವು ನಮ್ಮ ಹಾನಿ ಮಾಡಿಕೊಂಡಾದರೂ ಒಳ ಜಗಳಗಳನ್ನು ನಿಲ್ಲಿಸಬೇಕು; ಪರಸ್ಪರ ದ್ವೇಷಾಸೂಯೆಗಳನ್ನು ತೊರೆಯಬೇಕು. ಕರ್ನಾಟಕದ ಶಕ್ತಿಯನ್ನು ಸಂಘಟಿಸಿ ದಕ್ಷಿಣಪಥಕದಲ್ಲೆಲ್ಲ ಕರ್ನಾಟಕ ಸಾಮ್ರಾಜ್ಯವನ್ನು ಪ್ರಸ್ಥಾಪಿಸಿ, ಉತ್ತರಾಪಥದಲ್ಲಿ ಕರ್ನಾಟಕ ಧ್ವಜವು ಉಡ್ಡಾಣಗೈಯುವಂತೆ ಮಾಡಬೇಕು. ಕೇವಲ ವಿಲಾಸವು ರಾಜನ ಇತಿಕರ್ತವ್ಯವಲ್ಲ. ತನ್ನ ದೇಹವನ್ನು ಹೇರಳವಾದ ಆಭೂಷಣಗಳಿಂದ ಭೂಷಿಸಿಕೊಂಡಮಾತ್ರದಿಂದ ಅವನಿಗೆ ರಾಜತ್ವವು ಪ್ರಾಪ್ತವಾಗುವದಿಲ್ಲ. ಯಾವನು ರಾಜಿಸುವನೊ ಅವನೇ ರಾಜನು; ಯಾವನು ಪ್ರಜಾನುರಾಗಕ್ಕೆ ಪಾತ್ರನೋ ಅವನೇ ಜನಪತಿಯು; ಯಾವನು ಸ್ವದೇಶಕ್ಕಾಗಿ ಸ್ವಧರ್ಮಕ್ಕಾಗಿ ಸ್ವಜನಕ್ಕಾಗಿ ದೇಹ ಸವೆಯಿಸುವನೋ ಅವನೇ ನಿಜವಾದ ಭೂವರನು. ರಾಜ್ಯದ ರಾಜನು ಪ್ರಜೆಗಳ ದಾಸನು. ಶ್ರೀ ರಾಮಚಂದ್ರದೇವನು ಒಬ್ಬ ರಜಕನ ಅಪವಾದಕ್ಕೆ ಅಂಜಿ ಜಗನ್ಮಾತೆ ಸೀತಾದೇವಿಯನ್ನು ವನಕ್ಕೆ ಕಳುಹಿದನು. ಈ ಉದಾಹರಣೆಯಿಂದ ನಾವು ಚನ್ನಾಗಿ ಬೋಧೆ ತೆಗೆದುಕೊಳ್ಳಬೇಕು. ನನ್ನ ಮಾತುಗಳನ್ನು ಸಿಂಹಾಸನಾರೂಢವಾಗಿರುವ ನನ್ನ ಅಗ್ರಜರು ಸಹ ನೆನಪಿಡಬೇಕು. ಉತ್ತರಾಪಥದಲ್ಲಿಯ ಅರಸರು ಕೇವಲ ವಿಲಾಸಿಗಳಾಗಿರುವರು. ಅವರಲ್ಲಿ ಒಳಜಗಳಗಳು ದಕ್ಷಿಣಕ್ಕಿಂತ ಹೆಚ್ಚಾಗಿ ತುಂಬಿ ತುಳುಕುತ್ತಿರುವವು.

ಅವರ ಈ ದುರ್ಗುಣಗಳ ಮೂಲಕ ಅವರಲ್ಲಿಯ ಕ್ಷಾತ್ರತೇಜವು ಮಂದ ವಾಗತೊಡಗಿದೆ. ಅವರ ತ್ಯಾಗವು ನಿರರ್ಥಕವಾಗತೊಡಗಿದೆ. ಅಫಗಾನಿಸ್ಥಾನದ ಸುಲತಾನ ಮಹಮ್ಮದನಂತಹನು ಉತ್ತರಾಪಥದಮೇಲೆ ಹದಿನೇಳುಸಾರೆ ದಾಳಿಮಾಡಿ ವಿಜಯಿಯಾಗಿ ಅಪಾರ ಸಂಪತ್ತನ್ನು ಹೇರಿಕೊಂಡು ಹೋದುದಲ್ಲದೆ, ಎಷ್ಟೋ ಪವಿತ್ರ ದೇವಸ್ಥಾನಗಳನ್ನೂ ದೇವತಾ ಮೂರ್ತಿಗಳನ್ನೂ ವಿಧ್ವಸ್ತ ಗೊಳಿಸಿದನು. ಈ ಸಂಗತಿಯಿಂದ ಉತ್ತರಾಪಥದವರಷ್ಟೇಅಲ್ಲ, ನಾನೂ ನಾಚಬೇಕು. ನಮ್ಮ ಪವಿತ್ರ ದೇವತೆಗಳಮೇಲೆ ಗದಾಪ್ರಹಾರವಾದರೆ ನಮ್ಮ ಧರ್ಮದಮೇಲೆ ಗದಾಪ್ರಹಾರವಾದಂತಲ್ಲವೆ ? ಎರಡುಸಾವಿರ ಮೈಲು ವಿಶಾಲವಾದ ಭಾರತವರ್ಷವನ್ನು ಒಬ್ಬ ಸುಲಿಗೆಗಾರನು ಪ್ರವೇಶಿಸುವದೆಂದರೇನು, ಕೆಲ ಸಹಸ್ರ ದಂಡಾಳುಗಳೊಡನೆ ಬೇಕುಬೇಕಾದಲ್ಲಿ ತಿರುಗಾಡುವದೆಂದರೇನು, ಅಸಂಖ್ಯಾಕ ಕ್ಷಾತ್ರರಾಜರು ಯುದ್ಧ ಮಾಡಿದರೂ ಅವರ ಪಾಲಿಗೆ ಅಪಯಶವೇ ದೊರೆಯುವದೆಂದರೇನು! ಈ ಉದಾಹರಣೆಗಳಿಂದ ನಾವು ಚನ್ನಾಗಿ ಪಾಠಕಲಿಯಬೇಕು. ನಾವು ನಮ್ಮ ನಡವಳಿಕೆ ತಿದ್ದಬೇಕು. ಜಡಸ್ವಾರ್ಥದ ಬೆನ್ನು ಹತ್ತಬಾರದು. ಒಳಜಗಳಗಳನ್ನು ಮರೆಯಬೇಕು. ಪರೋತ್ಕರ್ಷಕ್ಕಾಗಿ ಅಸೂಯೆ ಪಡಬಾರದು. ನೀತಿ ವಿಚಾರಗಳನ್ನು ಮರೆಯಲಾಗದು. ಬಾಹುದಂಡದಲ್ಲಿ ಪ್ರತಾಪವಿದ್ದರೆ ದಿಗ್ವಿಜಯ ಮಾಡಿ, ಭಾರತೇಶ್ವರರಾಗ ಬಹುದು; ಜಗದೀಶ್ವರರಾಗಬಹುದು. ಅಂತಃಕಲಹಗಳನ್ನು ಮಾತ್ರ ನಾವು ಮರೆಯಬೇಕು. ಕರ್ನಾಟಕಕ್ಕೆ ಪರಕೀಯರು ದಾಳಿ ಮಾಡಿದಾಗ ನಾವೆಲ್ಲರೂ ಒಂದಾಗಬೇಕು. ಉತ್ತರಾಪಥದರು ದಕ್ಷಿಣದಮೇಲೆ ದಾಳಿ ಮಾಡಿದಾಗ ದಕ್ಷಿಣಾಪಥದವರೆಲ್ಲರೂ ಒಟ್ಟಾಗಬೇಕು. ಭಾರತದಮೇಲೆ ಭಾರತದ ಹೊರಗಿನವರು ದಾಳಿ ಮಾಡಿದಾಗ ನಿಖಿಲ ಭಾರತವೇ ಒಂದುಗೂಡಬೇಕು. ಒಟ್ಟಿನಮೇಲೆ ನಾನು ಹೇಳುವದೇನಂದರೆ, ಕೇವಲ ಜಡ ಸ್ವಾರ್ಥದ ಬೆನ್ನುಹತ್ತಿ ಇತರರ ಬಾಧ್ಯತೆಯನ್ನು ಯಾರೂ ಮುಳುಗಿಸಕೂಡದು. ಹಿಂದಕ್ಕೆ ಹಿರಿಯ ಮಹಾರಾಜರು ನನಗೆ ಯೌವರಾಜ್ಯಾಭಿಷೇಕ ಮಾಡಲು ಯತ್ನಿಸಿದಾಗ ನಾನು ಯಾವ ವಿಧದಿಂದ ನಡೆದೆನೆಂಬದನ್ನು ಈಗ ಹೇಳಬೇಕಾಗಿಲ್ಲ. ಆಗ ಇದೇ ಸಿಂಹಾಸನಾಧಿಷ್ಠಿತ ಮಹಾ

ರಾಜ ಭುವನೈಕಮಲ್ಲನು ನನ್ನ ವಿಷಯವಾಗಿ ಹೇಗೆ ಕೃತಜ್ಞತೆಯುಳ್ಳವರಾಗಿದ್ದರೆಂಬ ಸಂಗತಿಯನ್ನು ಈಗ ತಿಳಿಸುವದು ಉಳಿದಿಲ್ಲ. ಯಾಕಂದರೆ ಆ ಕಾಲವು ದೂರಹೋಗಿ ನವಯುಗವು ತೋರಿದೆ. ಈ ನವಯುಗದ ವೈಚಿತ್ರವೇ ಬೇರೆಯಾಗಿರುವ ಮೂಲಕ ಹಿಂದಿನದನ್ನು ತೋಡಿಕೊಳ್ಳ ಹತ್ತಿದರೆ ಅದು ನಿರರ್ಥಕವಾಗುವದು. ಹಿಂದಿನದನ್ನು ತೋಡಿಕೊಂಡು ಸ್ವಾರ್ಥಸಾಧನೆ ಮಾಡಿಕೊಳ್ಳಬೇಕೆಂದು ನಾನು ಇಚ್ಛಿಸುವದಿಲ್ಲ. ನಾನು ಸಿಂಹಾಸನವನ್ನೇರಲು ಇಚ್ಛಿಸುವದಿಲ್ಲ. ಹಾಗೆ ಇಚ್ಛೆಯುಳ್ಳವನಾದರೆ ನನಗೆ ಹೆಚ್ಚು ಅವಕಾಶವುಕೂಡ ಹಿಡಿಯುವದಿಲ್ಲ. ನನ್ನ ಧ್ಯೇಯವು ಹಾಗಿಲ್ಲ. ಸೋಮೇಶ್ವರ ಮಹಾರಾಜರು ಸಿಂಹಾಸನದ ಅಧಿಪತಿಗಳಾಗಿ ಬಾಳಬೇಕು; ಆಳಬೇಕು; ನಾನು ಸಿಂಹಾಸನದ ಹಾಗು ಪ್ರಜೆಗಳ ಆಳಾಗಿ ಬಾಳಬೇಕು. ಈ ನನ್ನ ಸಂಕಲ್ಪವು ದೃಢವಾಗುವಂತೆ ಮಾಡುವ ಭಾರವು ಈ ಭುವನೈಕಮಲ್ಲರಕಡೆಗಿದೆ."

ವಿಕ್ರಮಾರ್ಕನು ಗಾಂಭೀರ್ಯದಿಂದಾಡಿದ ಭಾಷಣವು ಎಲ್ಲ ಸಭಿಕರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮಕಾರಿಯಾಯಿತು. ವೃದ್ಧ ಪ್ರಧಾನಾಮಾತ್ಯ ರೂಪಭಟ್ಟಯ್ಯನು ಅವನ ಭಾಷಣದಿಂದ ಅತ್ಯಂತ ಸಂಭ್ರಮಗೊಂಡನು. ಅವನು ಸೋಮೇಶ್ವರನನ್ನು ಕುರಿತು, "ಮಹಾರಾಜರೆ, ದಿವ್ಯ ಪ್ರತಾಪನಿಧಿಗಳಾದ ವಿಕ್ರಮಾಂಕ ಮಹಾರಾಜರ ಧ್ಯೇಯದ ಕಲ್ಪನೆ ನಿಮಗಾಯಿತೆ ? ಅವರ ಉದಾತ್ತ ವಿಚಾರಗಳು ನಿಮಗೆ ಹೊಳೆದವೆ ? ನನ್ನಂತಹ ವೃದ್ಧರೂ ಕೂಡ ಅವರ ಅಭಿಪ್ರಾಯವನ್ನು ಲಾಲಿಸಬೇಕು; ಅವರ ನಡವಳಿಕೆಯ ಅನುಸರಣ ಮಾಡಬೇಕು. ನೀವು ನಿಮ್ಮ ತಮ್ಮಂದಿರಾದ ವಿಕ್ರಮಾಂಕರ ಹಾಗೆ ಸುವಿಚಾರಿಗಳಾದರೆ ಸುಖವಾಗಿ ಬಾಳುವಿರಿ. ನಾನು ವೃದ್ಧನಾಗಿರುವೆನು. ನನ್ನಿಂದ ಮಂತ್ರಾಲೋಚನೆಯ ಕಾರ್ಯ ನೆರವೇರದು. ನಿಮಗೆ ನನ್ನ ಅಗತ್ಯವೂ ಇಲ್ಲ. ತರುಣ ಅಮಾತ್ಯ ಸೇನಾನಾಯಕರು ನಿಮ್ಮ ಕೈಕೆಳಗೆ ಬಂದಿರುವರು. ಇಂದಿನಿಂದಲೇ ನಾನು ನಿಮ್ಮ ನಿರೋಪ ಹೊಂದುವೆನು. ಮಹಾಸೇನಾಪತಿ ಉದಯಾದಿತ್ಯರು ಕಾರ್ಯನಿರ್ವಹಣ ಶಕ್ತಿಯಿಲ್ಲದವರಾಗಿ ಮನೆಹಿಡಿದು ಬಹಳೇ

ದಿನಗಳಾದವು. ಅವರಿಗಿಂತ ಹಿರಿಯನಾದ ನಾನು ಎಷ್ಟು ದಿನ ಕೆಲಸ ನಡೆಯಿಸಬೇಕು. ನೀವು ವಿಕ್ರಮಾದಿತ್ಯಮಹಾರಾಜರ ಸಹಾಯ ಸಹಾನುಭೂತಿಗಳನ್ನು ಹೊಂದಿ, ಅವರ ಮೇಲೆ ಸಾಮ್ರಾಜ್ಯದಾಡಳಿತದ ಭಾರ ಹಾಕಿ ಅವರ ಅನುಮತಿಯಂತೆ ನಡೆಯುವದು ಹಿತಾವಹವು; ಸಾಮ್ರಾಜ್ಯದ ಅಭ್ಯುದಯಕ್ಕೆ ಸಾಧನೀಭೂತವು. ರಾಜ್ಯನಿರ್ವಹಣವೆಂದರೆ ಸುಖಾನುಭವ ಕಾಲಹರಣವಲ್ಲ. ರಾಜಮಂದಿರವೆಂದರೆ ವಿಲಾಸಮಂದಿರವಲ್ಲ. ವಿಕ್ರಮಾದಿತ್ರ ಮಹಾರಾಜರು ಎಲ್ಲ ವಿಷಯವನ್ನು ತಮ್ಮ ಗಂಭೀರವಾದ ಭಾಷೆಯಲ್ಲಿ ಹೇಳಿರುವಮೂಲಕ ಮತ್ತೆ ನಾನು ಅವುಗಳನ್ನೆತ್ತಲಾರೆನು. ಸಾಮ್ರಾಜ್ಯದ ಕೀರ್ತಿಗೌರವಗಳು ಉಳಿಯುವಂತೆ ನಡೆಯುವದು ಭುವನೈಕಮಲ್ಲ ಸೋಮೇಶ್ವರ ಮಹಾರಾಜರ ಕರ್ತವ್ಯವಾಗಿದೆ. ಅವರು ತಮ್ಮ ಬಿರುದಾವಳಿಗೆ ತಕ್ಕಂತೆ ಭುವನೈಕಮಲ್ಲರಾಗುವಂತೆ ಉಮಾಮಹೇಶ್ವರನು ಕರುಣಿಸಬೇಕೆಂದು ಬೇಡಿಕೊಂಡು ನಾನು ಮಹಾರಾಜರ ನಿರೋಪ ಬೇಡಿಕೊಳ್ಳುವೆನು."

"ನಿಮ್ಮಂತಹ ವೃದ್ಧರ ಅಗತ್ಯವಿಲ್ಲ. ನಿಮಗೆ ನಿರೋಪಕೊಟ್ಟಿರುವೆನು." ಎಂದು ಸೋಮೇಶ್ವರನು ಗರ್ವೋದ್ಧತನಾಗಿ ನುಡಿದನು.

"ಇದು ಓಲಗವಾಗಿಲ್ಲ; ಉಪದೇಶಪಾಠಕಲಿಯುವ ಗುರುಕುಲವಾಗಿ ಪರಿಣಮಿಸಿದೆ." ಎಂದು ಲಕ್ಷ್ಮರಸನು ಉಪಹಾಸಾತ್ಮಕವಾಗಿ ಮಾತಾಡಿದನು.

"ಪ್ರತ್ಯಕ್ಷ ರಾಜರೇ ಸಮರಾಂಗಣದಲ್ಲಿ ದುಮುಕುವ ಹಿಂದಿನ ಕಾಲವೀಗಿಲ್ಲ. ರಾಜರು ತಾವು ಸ್ವೇಚ್ಛೆಯಾಗಿ ವಿಲಾಸದಲ್ಲಿರಲಿ. ಸಾಮ್ರಾಜ್ಯವನ್ನು ಕಾಯಲು ಅದನ್ನು ಅಭಿವೃದ್ಧಿಗೊಳಿಸಲು ನಮ್ಮಂತಹ ಸೇನಾಪತಿಗಳೂ ಮೂರಮಂಡಲೇಶ್ವರರೂ ಇಲ್ಲವೆ ? ಕಾಲಪರಿಸ್ಥಿತಿಗೆ ಸರಿಯಾಗಿ ಇರಬೇಕು; ಅಷ್ಟೇ." ಮಹಾಸೇನಾಧಿಪತಿ ಕೇಶವಾದಿತ್ಯನು ಆವೇಶದಿಂದ ಹೇಳಿದನು.

"ಹಳೆಯ ತಲೆಹೋಗಿ ಹೊಸತಲೆ ತಲೆಯೆತ್ತಿವೆ. ವಿಕ್ರಮಾದಿತ್ಯರು ಹೊಸತಲೆಯವರಾಗಿದ್ದರೂ ಹಳೇತಲೆಯ ರೂಢಿಯನ್ನು ಬಿಟ್ಟಿಲ್ಲ. ಅಂತೆಯೆ ಒಬ್ಬ ಸಾಮಾನ್ಯ ಸೈನಿಕನ ಹಾಗೆ ರಣದಲ್ಲಿ ದುಮುಕುತ್ತಾರೆ.

ಅವರವರ ಇಚ್ಛೆ. ಆದರೂ ಈ ಹಳೆಯ ರೂಢಿಯು ಮಾತ್ರ ಇನ್ನು ಮೇಲೆ ಕರ್ನಾಟಕ ಸಾಮ್ರಾಜ್ಯದಲ್ಲಿ ಉಳಿಯಲಾರದು. ಪಲ್ಲಕ್ಕಿಯಲ್ಲಿ ಕುಳಿತುಕೊಳ್ಳುವವರೇ ಅದನ್ನು ಹೊರಲು ಮುಂದಾದರೆ ಅದು ನಗೆಗೀಡಾದ ಮಾತಾಗುವದಿಲ್ಲವೆ ? " ಎಂದು ಬಲವದೇವಯ್ಯ ಪ್ರಧಾನಾಮಾತ್ಯನು ಗಹಿಗಹಿಸಿ ನಗುತ್ತನುಡಿದನು.

ಓಲಗದವರ ಮಾತು ಕೇಳಿ ವಿಕ್ರಮಾದಿತ್ಯನು ಸಂತಪ್ತನಾದನು— ಈ ವೇಳೆಯಲ್ಲಿ ಹೆಚ್ಚು ಮಾತು ಬೆಳೆಯಿಸುವದರಿಂದ ಪ್ರಯೋಜನವಾಗುವದಿಲ್ಲೆಂದು ನೆನೆದು— " ಕರ್ನಾಟಕ ಸಾಮ್ರಾಜ್ಯಕ್ಕೆ ಏನೋ ಕೇಡುಗಾಲ ಪ್ರಾಪ್ತವಾಗಲಿದೆ! " ಎಂದು ನುಡಿದು, ಸಭೆಯಿಂದೆದ್ದನು. ಕೂಡಲೇ ವಿಷ್ಣುವರ್ಧನ ವಿಜಯಾದಿತ್ಯನೂ ಜಯಸಿಂಹನೂ ರೂಪಭಟ್ಟಯ್ಯನೂ ತಮ್ಮ ಸ್ಥಳದಿಂದೆದ್ದರು.

" ಓಹೋ ! ಮಹಾಪ್ರಧಾನ ಮಹಾಸೇನಾಗತಿಗಳ ಭಾಷಣದಿಂದ ಅವಮಾನವಾಯಿತೇನು ? ಒಳ್ಳೇದು, ದಯಮಾಡಿಸಿರಿ! " ಎಂದು ಸೋಮೇಶ್ವರನು ನಗುತ್ತಲೆ ನುಡಿದನು.

ವಿಕ್ರಮಾದಿತ್ಯ ಮೊದಲಾದವರು ಸೋಮೇಶ್ವರನ ಮಾತಿಗೆ ಉತ್ತರ ಕೊಡದೆ ಅಲ್ಲಿಂದ ಹೊರಟರು. ತರುವಾಯ ಓಲಗದಲ್ಲಿ ಹೊರಟು ಹೋದವರ ವಿಷಯವಾಗಿ ಟೀಕಾತ್ಮಕ ಭಾಷಣಗಳು ಕೆಲವು ವೇಳೆ ಜರುಗಿದವು. ಅನಂತರದಲ್ಲಿ ಸಭೆಯ ವಿಸರ್ಜನೆಯಾಯಿತು. ವಂದಿಗಳ ಜಯಜಯಕಾರ ಧ್ವನಿಯಲ್ಲಿಯೆ ಭುವನೈಕಮಲ್ಲ ಸೋಮೇಶ್ವರನು ಓಲಗದ ಸಭೆಯಿಂದ ಹೊರಹೊರಟು ಅರಮನೆಗೆ ತೆರಳಿದನು. ಕರ್ಮಚಾರಿಗಳೂ ತಮ್ಮ ತಮ್ಮ ನಿವಾಸಗಳಿಗೆ ತೆರಳಿದರು.

## ೧೦ ಮೋಹವನ್ನು ಬಿಡಿರಿ!

ವಿಕ್ರಮಾದಿತ್ಯನು ಸೋಮೇಶ್ವರನಿಂದ ಸಂಪಾದಿಸಿದ ಬನವಾಸಿ ಸಿಂದಿಗಿ ನೊಣಂಬವಾಡಿಗಳ ಮಂಡಲದಲ್ಲಿ ಎರುಡ ಭಾಗಗಳನ್ನು ಕಲ್ಪಿಸಿ. ಬನವಾಸಿ ಮಂಡಲವನ್ನು ವಿಷ್ಣುವರ್ಧನ ವಿಜಯಾದಿತ್ಯನ ಕಡೆಗೂ, ಸಿಂದಿಗಿ ನೊಣಂಬವಾಡಿಗಳ ಒಡೆತನವನ್ನು ಜಯಸಿಂಹನ ಕಡೆಗೂ ಒಪ್ಪಿಸಿ ತಾನು ಎರಡೂ ಮಂಡಲಗಳ ಮೇಲ್ವಿಚಾರಕನಾಗಿ ಬಲ್ಲಿಗಾವೆಯಲ್ಲಿಯೂ, ಬನವಾಸಿಯಲ್ಲಿಯೂ ಇರತೊಡಗಿದನು. ಇವನು ತನ್ನ ಅಣ್ಣನಾದ ಸೋಮೇಶ್ವರನ ಆಳಿಕೆಯ ನಿರೀಕ್ಷಣೆಯನ್ನೂ ಮಾಡುತ್ತಿದ್ದನು. ವೈರಿಗಳ ಚಲನವಲನದ ಕಡೆಗೂ ಲಕ್ಷ್ಯಗೊಡುತ್ತಿದ್ದನು. ಮಂತ್ರಿಯಾದ ಪದ್ಮನಾಭಯ್ಯನೂ, ದಂಡನಾಯಕನಾದ ಅನಂತಪಾಲಯ್ಯನೂ ಇವನಿಗೆ ಚನ್ನಾಗಿ ನೆರವಾಗುತ್ತಿದ್ದರು. ಹೀಗೆ ಕೆಲದಿನ ಕಳೆಯುವಷ್ಟರಲ್ಲಿ ಅವನ ತಮ್ಮನಾದ ವಿಷ್ಣುವರ್ಧನ ವಿಜಯಾದಿತ್ಯನು ಮರಣ ಹೊಂದಿದನು. ವಿಕ್ರಮಾದಿತ್ಯನಿಗೆ ಅವನ ಮರಣದಿಂದ ಕಡುವ್ಯಸನವಾಯಿತು. ವಿಷ್ಣುವರ್ಧನನು ರಾಜಕಾರಣದಲ್ಲಿ ವಿಕ್ರಮಾದಿತ್ಯನಿಗೆ ಬಹಳೇ ಅನುಕೂಲವಾಗಿದ್ದನು. ಆದುದರಿಂದ ಇವನ ಮರಣವು ವಿಕ್ರಮಾದಿತ್ಯನಿಗೆ ದುಃಖಪ್ರದವಾಗಿ ಪರಿಣಮಿಸಿತು. ವಿಷ್ಣುವರ್ಧನನು ಮರಣ ಹೊಂದಿದ ಮೇಲೆ ಬನವಾಸಿಯ ರಾಜ್ಯದ ಆಡಳಿತವನ್ನು ತನ್ನ ಕಡೆಗೆ ಇರಿಸಿಕೊಂಡನು.

ಮುಂದೆ ಎರಡನೇ ಸೋಮೇಶ್ವರನು ನಿರಂಕುಶನೂ, ಅತಿಗರ್ವಿಯೂ ಮನಸ್ವಿಯೂ, ಕಠೋರ ಹೃದಯುದವನೂ ಆದುದರಿಂದ ಸಾಮ್ರಾಜ್ಯದಲ್ಲಿ ಅಸಂತೋಷವು ಉತ್ಪನ್ನವಾಯಿತು. ತಾನು ಸಾಮ್ರಾಟನಿದ್ದರೂ, ಸಾಮ್ರಾಜ್ಯದಲ್ಲಿ ವಿಕ್ರಮಾದಿತ್ಯನ ವರ್ಚಸ್ಸವು ಉಳಿದುದರಿಂದಲೂ, ಓಲಗದಲ್ಲಿ ಬಹುಜನ ಕರ್ಮಚಾರಿಗಳು ವಿಕ್ರಮಾದಿತ್ಯನ ಪಕ್ಷಪಾತಿಗಳೇ ಆದುದರಿಂದಲೂ ಅವನ ತಲೆ ಕೆಟ್ಟಿತು. ವಿಕ್ರಮನ ಪಕ್ಷಪಾತಿಗಳಾಗಿದ್ದವರನ್ನು

ಅವನು ಕೆಲಸದಿಂದ ತಳ್ಳಿದನು. ಸ್ವಾರ್ಥಿಗಳಾದ ಅಧಿಕಾರಿಗಳು ಓಲಗದಲ್ಲಿ ತುಂಬಿದರು. ಅತ್ಯಾಚಾರದ ಆಳಿಕೆಯು ಪ್ರಾರಂಭವಾಯಿತು. ವಿಕ್ರಮಾದಿತ್ಯನು ಅಣ್ಣನ ಈ ಆಳಿಕೆಯಿಂದ ತಪ್ತನಾದನು. ಅವನು ತನ್ನ ಅಣ್ಣನಿಗೊಂದು ಉಪದೇಶಪರ ಪತ್ರ ಬರೆದು, ನಡವಳಿಕೆಯನ್ನು ಸುಧಾರಿಸಿಕೊಳ್ಳಲು ವಿನಯದಿಂದ ಬೇಡಿಕೊಂಡನು. ಮತ್ತೊಮ್ಮೆ ತನ್ನೊಬ್ಬ ರಾಯಭಾರಿಯನ್ನು ಕಲ್ಯಾಣಕ್ಕೆ ಕಳುಹಿದನು. ವಿಕ್ರಮನ ಈ ಕೃತ್ಯಗಳಿಂದ ಸೋಮೇಶ್ವರನ ವೃತ್ತಿಯು ಸ್ಥಿತ್ಯಂತರ ಹೊಂದಲಿಲ್ಲ. ಅವನು ವಿಕ್ರಮನ ಮೇಲೆ ಮತ್ತಷ್ಟು ರೇಗಿದನು. ಇದೇ ಅವಸ್ಥೆಯದ ಕೆಲದಿನಗಳು ಕಳೆದವು. ತನ್ನ ಅಣ್ಣನಮೇಲೆ ಶಸ್ತ್ರವನ್ನೆತ್ತುವ ಪ್ರಸಂಗವೇ ಬಂದು ಒದಗಿತೆಂದು ವಿಕ್ರಮಾದಿತ್ಯನು ಬಹುಪರಿಯಾಗಿ ಮಿಡುಕತೊಡಗಿದನು. ಕಲ್ಯಾಣದ ಮೇಲೆ ದಂಡೆತ್ತಿ ಹೋಗಿ ಸೋಮೇಶ್ವರನನ್ನು ಪಟ್ಟದಿಂದ ತಳ್ಳಿಬಿಡಬೇಕೆಂದು ಅವನ ಮಂತ್ರಿ-ಸೇನಾನಾಯಕರು ಒತ್ತಾಯ ಮಾಡತೊಡಗಿದ್ದರು. ವಿಕ್ರಮಾದಿತ್ಯನು ಹೇಗೆ ಮಾಡಬೇಕು, ಏನು ಮಾಡಬೇಕು ಎಂಬ ವಿಚಾರದಲ್ಲಿರುವಾಗ ಅಣ್ಣನಿಂದ ಅವನಿಗೆ ಒಂದು ಪತ್ರವು ಬಂದಿತು. ಮಹಾಮಂತ್ರಿಯಾದ ಬಲದೇವಯ್ಯನೇ ಆ ಪತ್ರವನ್ನು ತಂದಿದ್ದನು.

ಸೋಮೇಶ್ವರನು ವಿಕ್ರಮಾದಿತ್ಯನಿಗೆ ಬರೆದ ಪತ್ರವು ಒಳ್ಳೆಯ ಸರಳತನದ್ದಿದ್ದಿತು. ಇಷ್ಟುದಿನ ತನ್ನಿಂದ ಘಟಿಸಿದ ಪ್ರಮಾದಗಳ ಬಗ್ಗೆ ಅವನು ಪತ್ರದಲ್ಲಿ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿ. ಮುಂದಿನ ವ್ಯವಸ್ಥೆಯ ಬಗ್ಗೆ ಸಲಹೆಕೊಡಲು ಜಯಸಿಂಹನನ್ನು ಕರೆದುಕೊಂಡು ಹೊರಟು ಬರಬೇಕೆಂದು ಅವನು ವಿಕ್ರಮಾದಿತ್ಯನಿಗೆ ತಿಳಿಸಿದ್ದನು. ಪತ್ರವನ್ನೋದಿ ವಿಕ್ರಮಾದಿತ್ಯನು ಸಂಭ್ರಮಗೊಂಡನು. ತನ್ನ ಅಣ್ಣನಿಗೆ ಈಗಲಾದರೂ ಸದ್ಬುದ್ಧಿಯು ಉದಯವಾಯಿತೆಂದು ಅವನು ಮನದಲ್ಲಿ ಅಂದುಕೊಂಡು, ಆಗಿಂದಾಗ ಜಯಸಿಂಹನನ್ನು ಕಲ್ಯಾಣಕ್ಕೆ ಕರೆತರುವ ಬಗ್ಗೆ ದೂತನನ್ನು ಕಳುಹಿದನು.

ವಿಕ್ರಮಾದಿತ್ಯನು ತನ್ನ ಅಣ್ಣನ ಪತ್ರದ ಮೇರೆಗೆ ಕಲ್ಯಾಣಕ್ಕೆ ಹೊರಡಲು ಸಿದ್ಧನಾದನು. ಸೋಮೇಶ್ವರನು ಅತ್ಯಂತ ವಿನಯಶಾಲಿ

ಯಾಗಿ ಪತ್ರ ಕಳುಹಿಸಿದ್ದನ್ನು ನೋಡಿ ಅವನ ಅರಸಿಯಾದ ಸಾವಳದೇವಿಯ ಮನಸ್ಸು ಸಂದೇಹಪಡತೊಡಗಿತು. ಯಾವನಲ್ಲಿ ಕರ್ತೃತ್ವವು ಇಲ್ಲವೋ ಅಂತಹನಲ್ಲಿ ಮೋಸಗಾರಿಕೆಯಿರುವದೆಂಬ ಸಂಗತಿ ಅವಳಿಗೆ ತಿಳಿದಿತ್ತು. ಕಠೋರನೂ, ಅಹಂಕಾರಿಯೂ ಆದ ಸೋಮೇಶ್ವರನು ಒಮ್ಮೆಲೆ ಈ ಬಗೆಯಾಗಿ ಮೃದುತ್ವ ಹೊಂದಿದ್ದೂ, ಪತ್ರವನ್ನು ದೂತನೊಡನೆ ಕಳುಹಿಸದೆ ಮಹಾಮಂತ್ರಿಯೊಡನೆ ಕಳುಹಿಸಿದ್ದೂ ಅವಳಲ್ಲಿ ಸಂದೇಹವನ್ನುಂಟುಮಾಡಿದವು. ತನ್ನ ಮನೋದಯವನ್ನು ಪತಿಯ ಸಮ್ಮುಖದಲ್ಲಿ ಪ್ರಕಟ ಮಾಡಬೇಕೆಂದು ಅವಳು ಮನಸ್ಸು ಮಾಡಿದಳು.

ಮಾರನೆಯ ದಿನ ಸಾವಳದೇವಿಯು ಪತಿಯನ್ನು ಕುರಿತು — "ನೀವು ಅಣ್ಣನ ಪತ್ರವನ್ನೋದಿ ಏನು ತಿಳಿದುಕೊಂಡಿರಿ?"

"ಯಾಕೆ? ನಿನಗೆ ಅರ್ಥವಾಗಲಿಲ್ಲವೇನು?"

"ತೋರುವ ಅರ್ಥ ಬೇರೆ; ಇರುವ ಅರ್ಥ ಬೇರೆ. ನೀವು ಸೋಮೇಶ್ವರರ ಸಹೋದರರಿದ್ದರೂ ಅವರ ಸ್ವಭಾವವು ಗೊತ್ತಾಗದ್ದು ನೋಡಿ ವಿಸ್ಮಯವೆನಿಸುವದು. ಸೋಮೇಶ್ವರನು ನಿಮ್ಮನ್ನು ಮಾಯಾಜಾಲದಲ್ಲಿ ಸಿಲುಕಿಸಿ ನಾಶಮಾಡಲು ಹೊಂಚು ಹಾಕಿರುವರೆಂದು ನನಗೆ ತೋರುವದು. ನನ್ನ ಅನುಮಾನವನ್ನು ನೀವು ನಂಬಿರಿ."

ವಿಕ್ರಮಾದಿತ್ಯನು ರಾಜಕಾರಣಪಟುವೇನೋ ನಿಜ. ಆದರೆ ಅಣ್ಣ-ತಮ್ಮಂದಿರ ವಿಷಯವಾಗಿ ಅವನ ವಿಶ್ವಾಸ ಬಹಳ. ಈ ವಿಶ್ವಾಸವೇ ಅವನನ್ನು ತೊಂದರೆಗೀಡುಮಾಡುತ್ತಿತ್ತು. ಸೋಮೇಶ್ವರನ ಪತ್ರದಿಂದ ಅವನಿಗೆ ಈ ಬಗೆಯ ಅನುಮಾನವು ಹುಟ್ಟಲೇ ಇಲ್ಲ. ಆಲಸಿಯೂ, ವಿಲಾಸಿಯೂ ಆದ ಅವನಿಗೆ ರಾಜ್ಯ ನಿರ್ವಹಣವು ನೀಗದಂತಾಗಿದೆಯೆಂದು ಅವನು ಅರ್ಥಮಾಡಿಕೊಂಡಿದ್ದನು. ತನ್ನ ರಾಣಿಯು ಹೀಗೆ ಅನುಮಾನ ತೋರಿಸಿದೊಡನೆಯೆ ಅವನ ಮನಸ್ಸಿನಲ್ಲಿಯೂ ತುಸುಮಟ್ಟಿಗೆ ಸಂಶಯವು ಉತ್ಪನ್ನವಾಯಿತು. ಆಗ ಅವನು ಮಹಾಮಂತ್ರಿಯಾದ ಬಲದೇವಯ್ಯನನ್ನು ಕರೆಯಿಸಿ ಈ ಮಾತಿನ ಪರಿಷ್ಕಾರ ಮಾಡಿಕೊಳ್ಳಬೇಕೆಂದು ವಿಚಾರಿಸಿ, ಮಂತ್ರಿಯು ಇಳಿದುಕೊಂಡ ಮಂದಿರಕ್ಕೆ ದೂತನನ್ನು ಕಳುಹಿಸಿದನು.

ಬಲದೇವಯ್ಯನು ವಿಕ್ರಮಾರ್ಕನ ಅರಮನೆಗೆ ಬಂದನು. ವಿಕ್ರಮಾರ್ಕನು ಮಂತ್ರಿಯನ್ನು ಸನ್ಮಾನಿಸಿ ತಕ್ಕ ಸ್ಥಳದಲ್ಲಿ ಕುಳ್ಳಿರಿಸಿ ಬಳಿಕ– "ಮಹಾಪ್ರಧಾನರೆ, ನಾನು ಅಣ್ಣಂದಿರ ನಿರೋಪದ ಮೇರೆಗೆ ನಾಳೆ ನಿಮ್ಮೊಡನೆ ಕಲ್ಯಾಣಕ್ಕೆ ಹೊರಡಲು ಸಿದ್ಧನಾಗಿರುವೆನು. ಅಣ್ಣಂದಿರಲ್ಲಿ ಒಮ್ಮೆಲೆ ಹೀಗೆ ಗುಣಪರಿವರ್ತನೆ ಹೊಂದಬೇಕಾದರೆ ಅಂತರ್ಯದಲ್ಲಿ ಏನೋ ಗೂಢವಿರಲಿಕ್ಕೇಬೇಕೆಂದು ನನಗೆ ಅನುಮಾನವುಂಟಾಗಿದೆ. ಒಬ್ಬ ದೂತನೊಡನೆ ಪತ್ರ ಕಳುಹಿಸಿದ್ದರೂ ಸಾಗುತ್ತಿತ್ತು. ಹೀಗಿದ್ದು ನಿಮ್ಮಂತ ಮಹಾಮಂತ್ರಿಗಳನ್ನು ದೂತನನ್ನು ಮಾಡಿ ಕಳುಹಿದ್ದೂ ಒಂದು ವಿಧದ ಸಂದೇಹಕ್ಕೆ ಆಸ್ಪದವಾಗಿದೆ. ನೀವು ಸೋಮೇಶ್ವರರ ಮಹಾಮಂತ್ರಿಗಳಿರುವ ಮೂಲಕ ಅವರ ಗಹನ ಗೂಢವನ್ನು ಪ್ರಕಟಿಸಲಾರಿರೆಂಬುದು ನನಗೆ ತಿಳಿದಿದೆ. ನನ್ನ ಅಣ್ಣಂದಿರಿಂದ ಕಪಟ ವ್ಯೂಹವು ರಚಿಸಲ್ಪಟ್ಟಿದ್ದು ನಿಮಗೆ ತಿಳಿದಿದ್ದರೆ ತಿಳಿಸುವ ಮನಸ್ಸು ಮಾಡುವಿರಾ? ನೀವು ನಿಮ್ಮ ಅಂತರಾತ್ಮನನ್ನು ಸ್ಮರಿಸಿ ಸತ್ಯವನ್ನೇ ಹೇಳಿರಿ. ನೀವು ಅಸತ್ಯವಾದಿಗಳಾದರೆ ಮಾತ್ರ ಅದರ ಫಲವನ್ನುಣ್ಣಬೇಕಾಗಬಹದು."

ಬಲದೇವಯ್ಯನು ವಿಕ್ರಮಾದಿತ್ಯನ ಮಾತುಗಳನ್ನು ಕೇಳಿ ವಿಸ್ಮಯಗೊಂಡನು. ನಿಜವಾಗಿ ಸೋಮೇಶ್ವರನ ಕಾರಸ್ಥಾನ ಗಂಧವಾರ್ತೆಯು ಭಲದೇವಯ್ಯನಿಗೆ ಗೊತ್ತಿರಲಿಲ್ಲ. ಕಾರಸ್ಥಾನವು ಬಹಳೇ ಗುಪ್ತವಾಗಿ ರಚಿಸಲ್ಪಟ್ಟಿದ್ದುದರಿಂದ ಸೋಮೇಶ್ವರನ ಒಬ್ಬಿಬ್ಬರು ಕುಹಕ ಹಸ್ತಕರ ಹೊರತು ಮಿಕ್ಕವರಿಗೆ ಈ ಸಂಗತಿ ತಿಳಿದಿರಲಿಲ್ಲ. ಉದ್ವಿಗ್ನಮನಸ್ಕನಾದ ವಿಕ್ರಮನು ದೂತನನ್ನು ಕಳುಹಿಸಿದರೆ ಬರಲಾರನೆಂಬ ನೆವ ಮುಂದೆ ಮಾಡಿ, ಇಲ್ಲದ್ದೊಂದು ಹೇಳಿ ಬಲದೇವಯ್ಯನನ್ನು ಅವನು ಕಳುಹಿಸಿದ್ದನು. ಅಣ್ಣ-ತಮ್ಮಂದಿರ ಮಿಲನವಾಗುವ ಯೋಗವಿದ್ದರೆ ಆಗಲೆಂದು ತಿಳಿದು, ಮಾನಾಪಮಾನದ ಹಾಗೂ ಗೌರವದ ಕಡೆಗೆ ಲಕ್ಷ್ಯಗೊಡದೆ ಬಲದೇವಯ್ಯನು ಬನವಾಸಿಗೆ ಬಂದಿದ್ದನು. ಬಲದೇವಯ್ಯನು ಸೋಮೇಶ್ವರನ ಪಕ್ಷಪಾತಿಯೇನೋ ನಿಜ; ಆದರೆ ವಿಕ್ರಮನ ದ್ವೇಷಿಯಿರಲಿಲ್ಲ. ಮರೆ-ಮೋಸಮಾಡಿ ವಿಕ್ರಮನಂತಹ ದಿವ್ಯ ಪ್ರತಾಪನಿಧಿಗೆ ತೊಂದರೆ ಕೊಡುವ

ಇಚ್ಛೆಯೂ ಅವನಿಗಿರಲಿಲ್ಲ. ಪಟ್ಟಬಾಧ್ಯನಾದ ಸೋಮೇಶ್ವರ ಮಹಾರಾಜನ ಇಚ್ಛೆಯನ್ನು ಸ್ವಲ್ಪವೂ ಬಿಡದೆ ಎಲ್ಲರೂ ಅನುಸರಿಸಬೇಕೆಂದು ಇವನ ಅಭಿಪ್ರಾಯವಿತ್ತು. ಅಂತೆಯೇ ಇವನು ಮಂಡಲಗಳ ವಿಭಾಗ ಕಾಲಕ್ಕೆ ಸೋಮೇಶ್ವರನ ಪಕ್ಷಗಟ್ಟಿದ್ದನು. ಸಾಮ್ರಾಜ್ಯದಲ್ಲಿ ನೆಮ್ಮದಿಯು ಉಂಟಾಗಲಿಕ್ಕೂ ಅದರ ಬೆಳವಣಿಗೆಗೂ ವಿಕ್ರಮಾದಿತ್ಯನ ಆವಶ್ಯಕತೆಯು ಉಂಟೆಂದು ಸೋಮೇಶ್ವರನು ಬಲದೇವಯ್ಯನಿಗೆ ತಿಳಿಸಿ, ವಿಕ್ರಮನನ್ನು ಕರೆತರಲು ಅವನನ್ನು ಕಳುಹಿಸಿದ್ದನು. ಸೋಮೇಶ್ವರನಲ್ಲಿ ಮಂತ್ರಿಯು ಮೊದಲಿನಂತೆ ನಂಬಿಗೆಯಿಟ್ಟಿರಲಿಲ್ಲ. ಸೋಮೇಶ್ವರನ ದುರಹಂಕಾರ, ದುರಾಗ್ರಹ, ಛಲನೆಯ ಆಳಿಕೆ, ಮಿತಿಮೀರಿದ ವಿಲಾಸಲೋಲುಪತೆ, ಕರ್ತವ್ಯಶೂನ್ಯತೆ, ಪರಾಕ್ರಮಹೀನತೆ ಮೊದಲಾದ ದುರ್ಗುಣಗಳಿಗಾಗಿ ಅವನು ಬೇಸತ್ತಿದ್ದನು. ಸೋಮೇಶ್ವರನಿಗಿಂತ ವಿಕ್ರಮಾದಿತ್ಯನೇ ರಾಜ್ಯಾಧಿಕಾರಿಯಾದರೆ ಲೇಸಾಗುವದೆಂದು ಅವನು ಅನ್ನುತ್ತಿದ್ದನು. ಕೊನೆಗೆ ಸೋಮೇಶ್ವರನು ಎಲ್ಲ ರಾಜ್ಯ ಸೂತ್ರಗಳನ್ನು ವಿಕ್ರಮಾಂಕನಿಗೊಪ್ಪಿಸಿ ತಾನು ಹೆಸರಿಗೆ ಸಾಮ್ರಾಟನಾಗಿದ್ದು ಯಥೇಷ್ಟವಾಗಿ ಸುಖೋಪಭೋಗಗಳನ್ನು ಹೊಂದಲೆಂದು ಅವರ ಅಭಿಪ್ರಾಯವಿದ್ದಿತು. ಈ ವಿಷಯವನ್ನು ಅವನು ಸೋಮೇಶ್ವರನೆದುರಿನಲ್ಲಿ ಎಷ್ಟೋಬಾರಿ ತೆಗೆದಿದ್ದನು. ತನ್ನ ಈ ಅಭಿಪ್ರಾಯಕ್ಕೆ ಒಪ್ಪಿಯೇ ವಿಕ್ರಮಾದಿತ್ಯನನ್ನು ಕರೆಯಿಸುವ ಮನಸ್ಸು ಮಾಡಿರುವನೆಂದು ಮಂತ್ರಿಯ ತಿಳುವಳಿಕೆಯಾಗಿತ್ತು. ಈಗ ವಿಕ್ರಮನ ಅನುಮಾನವು ನಿಜವೇನೋ ಎಂಬ ಭಾವನೆಯು ಸ್ವಲ್ಪಮಟ್ಟಿಗಾದರೂ ಅವನಲ್ಲಿ ಉತ್ಪನ್ನವಾಯಿತು. ಆಗ ಅವನು ವಿಕ್ರಮಾದಿತ್ಯನನ್ನು ಕುರಿತು— "ಮಹಾರಾಜರೆ, ಸೋಮೇಶ್ವರ ಮಹಾರಾಜರು ಒಂದು ವೇಳೆ ಸಂಚು ನಡೆಯಿಸಿದ್ದರೆ ಅದರ ಗಂಧವಾರ್ತೆ ನನಗೆ ಗೊತ್ತಿಲ್ಲವೆಂದು ನನ್ನ ಅಂತರಾತ್ಮನನ್ನು ಸ್ಮರಿಸಿ ಹೇಳುವೆನು. ನೀವು ತಿಳಿದುಕೊಂಡಂಥ ಅನುಮಾನವು ಹುಟ್ಟುತ್ತಿದ್ದರೂ ಅದನ್ನು ಕೇವಲ ಸತ್ಯವೆಂದು ತಿಳಿದು ನಡೆಯಲಿಕ್ಕೆ ನನ್ನ ಮನಸ್ಸು ಒಪ್ಪದು. ಸಂಚಿನ ಸಂಗತಿ ಅಸತ್ಯವಿದ್ದು, ನಿಜವಾದ ಸೌಹಾರ್ದತೆಯಿಂದ ನಿಮ್ಮನ್ನು ಕರೆಯಿಸಿದ್ದಾಗಿದ್ದರೆ, ನೀವು ಇಲ್ಲದ ಅನುಮಾನ ತೆಗೆದುಕೊಂಡದ್ದು ಸಾಮ್ರಾಜ್ಯಕ್ಕೆ ಅಹಿತಕಾರಿಯಾಗಬಹುದು

ರಾಜಬಂಧುಗಳಾದ ನಿಮ್ಮೆಲ್ಲರ ಮಿಲನವು ಚಾಲುಕ್ಯರ ವೈಭವವೃದ್ಧಿಗೆ ಕಾರಣೀಭೂತವಾಗುವದೆಂದು ನನ್ನ ಮತ. ಒಂದು ವೇಳೆ ಸಂಚೇ ಸತ್ಯವಾಗಿದ್ದರೆ ಆ ಸಂಚು ನಿಮ್ಮನ್ನೇನು ಮಾಡಬಲ್ಲದು. ಅಂತಹ ಸಮಯವು ಪ್ರಾಪ್ತವಾದರೇ ಆದರೆ ನಿಮ್ಮನ್ನು ಕಲ್ಯಾಣಪುರಿಯಿಂದ ದಾಟಿಸಿ, ಸುರಕ್ಷಿತ ಸ್ಥಳಕ್ಕೆ ಕಳಿಸುವಮಟ್ಟಿಗೆ ಭಾರವು ನನ್ನದಿದೆ. ಸೇನಾಪತಿಗಳಾದ ಕೇಶವಾದಿತ್ಯರು ಕೂಡ ನನ್ನ ಹೊರತಿಲ್ಲ. ಮಿಕ್ಕ ಒಬ್ಬಿಬ್ಬರು ನಿಮ್ಮ ವಿರೋಧಿಗಳೂ ಸೋಮೇಶ್ವರರ ಬಾಲ ಬಡೆಯುವವರೂ ಇರಬಹುದು. ಯಾರಿಂದಲೂ ನಿಮ್ಮ ಕೂದಲು ಕೊಂಕದಹಾಗೆ ನೋಡಿಕೊಳ್ಳುವದು ನನ್ನನ್ನು ಕೂಡಿದೆ. ಹೊರಗೆ ಬಂದ ಮೇಲೆ ನೀವು ಸ್ವಯಂ ಶೂರರೇ ಇರುವಿರಿ. ಮುಂದೆ ಹೇಗೆ ಹೇಗೆ ಯೋಜನೆ ಮಾಡಬೇಕೆಂಬದನ್ನು ನಾನು ನಿಮಗೆ ತಿಳಿಸಬೇಕೆಂಬಂತೇನೂ ಇಲ್ಲ."

"ಮಹಾಪ್ರಧಾನರೆ, ಅಣ್ಣತಮ್ಮಂದಿರ ವಿಷಯವಾಗಿ ಇವರು ಅಕೃತ್ರಿಮ ಪ್ರೇಮವುಳ್ಳವರಿರುವ ಮೂಲಕ ಅವರ ಮರೆ-ಮೋಸಗಳನ್ನು ಗುರುತಿಸದೆ ಹೋಗುವರು. ಈ ವಿಷಯವಾಗಿ ನೀವು ಜಾಗ್ರತರಾಗಿರಬೇಕು." ಸಾವಳದೇವಿಯು ಮಂತ್ರಿಗೆ ಸೂಚಿಸಿದಳು.

"ಮಹಾರಾಣಿಯವರೆ, ನೀವು ಈ ವಿಷಯದಲ್ಲಿ ನಿಶ್ಚಿಂತರಾಗಿರಬೇಕು. ಚಾಲುಕ್ಯ ಸಾಮ್ರಾಜ್ಯದ ರಾಜ್ಯಸೂತ್ರಗಳು ಇಂದಿನ ಮಿತಿಯವರೆಗೂ ನನ್ನ ಕೈಯಲ್ಲಿ ಬಹುಮಟ್ಟಿಗೆ ಉಂಟು. ವಿಕ್ರಮಾದಿತ್ಯ ಮಹಾರಾಜರಿಗೂ, ಜಯಸಿಂಹ ಮಹಾರಾಜರಿಗೂ ಸೋಮೇಶ್ವರ ಮಹಾರಾಜರಿಂದ ಅಪಾಯ ಸಂಭವಿಸುವ ಚಿಹ್ನ ತೋರಿದರೆ ನಾನು ಆಗಿಂದಾಗ ಇಬ್ಬರನ್ನೂ ಪಾರುಮಾಡುವೆನು. ನಾನು ಮಂತ್ರಿಪದದಿಂದ ಚ್ಯುತನಾದರೂ ಈ ಕಾರ್ಯ ನೆರವೇರಿಸದೆ ಬಿಡಲಾರೆನು."

ಬಲದೇವಯ್ಯನ ಆಶ್ವಾಸನೆಯಿಂದ ವಿಕ್ರಮಾದಿತ್ಯನಿಗೂ, ಸಾವಳದೇವಿಗೂ ಸಮಾಧಾನವೆನಿಸಿತು. ತರುವಾಯ ಸಾವಳದೇವಿಯು ವಿಕ್ರಮಾದಿತ್ಯನನ್ನು ಕುರಿತು– "ನೀವು ಜೋತೆಯಲ್ಲಿ ಸಂರಕ್ಷಕ ದಳವನ್ನು ಕಿಗೆದುಕೊಂಡು ಹೋಗುವದು ವಿಹಿತವೆನಿಸುವದು."

"ಮಹಾರಾಣಿಯವರೆ, ನೀವು ಏನೂ ಯೋಚಿಸಕೂಡದು. ಮಹಾರಾಜರ ಸಂರಕ್ಷಣೆಯ ಮಟ್ಟಿಗೆ ನಾನು ದಳವನ್ನು ಒದಗಿಸಿ ಕೊಡುವೆನು. ಪರಿಚಾರಕರ ಹೊರತು ಬೇರೆ ಸೈನಿಕರನ್ನು ಜೊತೆಯಲ್ಲಿ ತರುವ ಕಾರಣವಿಲ್ಲ. ಮಹಾ ದಂಡನಾಯಕರಾದ ಕೇಶವಾದಿತ್ಯರು ಸೋಮೇಶ್ವರ ಮಹಾರಾಜರಿಗಿಂತ ಹೆಚ್ಚಾಗಿ ನನ್ನಲ್ಲಿ ವಿಶ್ವಾಸವುಳ್ಳವರಿದ್ದಾರೆ. ನೀವು ಏನೂ ಚಿಂತೆ ಮಾಡಬೇಡಿರಿ. ಸೋಮೇಶ್ವರ ಮಹಾರಾಜರ ಅತ್ಯಾಚಾರಿಯಾದ ಆಳಿಕೆಗೆ ಪ್ರಜೆಗಳು ಬೇಸತ್ತಿದ್ದಾರೆ. ಓಲಗದ ಜನರೂ ಪೌರವರೊ ಈ ಮಹಾರಾಜರನ್ನು ಇಚ್ಛಿಸುತ್ತಿದ್ದಾರೆ. ಅಲ್ಪಸಂಖ್ಯಾಕ ಸ್ವಾರ್ಥಿಗಳು ಸೋಮೇಶ್ವರ ಮಹಾರಾಜರ ಬೆನ್ನು ಹತ್ತಿದರೆ ಅವರಿಂದ ಆಗುವದೇನು? ಈಗ ಅವರಿಗೆ ಬಹುಮತವಿಲ್ಲ. ಅನ್ಯಾಯದ ಆಳಿಕೆಯಿಂದ ಇಂಥ ಪರಿಸ್ಥಿತಿಯು ಉತ್ಪನ್ನವಾಗುವದು ಸ್ವಾಭಾವಿಕ. ನಿಜವನ್ನೇ ಹೇಳಬೇಕಾದರೆ ಕರ್ನಾಟಕ ಸಾಮ್ರಾಜ್ಯದಲ್ಲಿ ಅರಾಜಕತೆಯುಂಟಾಗಿದೆ. ಚಾಲುಕ್ಯ ಸಾರ್ವಭೌಮರ ಯಶಶ್ಚಂದ್ರನಿಗೆ ಸೋಮೇಶ್ವರ ಮಹಾರಾಜರು ರಾಹುರೂಪಿಗಳಾಗಿ ಪರಿಣಮಿಸಿರುವರು."

ಬಲದೇವಯ್ಯನ ನುಡಿಗಳನ್ನು ಕೇಳಿ ವಿಕ್ರಮಾದಿತ್ಯನ ಮನಸ್ಸು ಕಳವಳಿಸಿತು. ಅವನು ಖಿನ್ನನಾಗಿ ವಿಚಾರಿಸುತ್ತ ಕುಳಿತನು. ಆಗ ಸಾವಳದೇವಿಯು– "ಆರ್ಯಪುತ್ರರೆ, ಸಾಮ್ರಾಜ್ಯವು ನಷ್ಟಪ್ರಾಯವಾಗುವವರೆಗೆ ನಿಮ್ಮ ಬಂಧು ಪ್ರೇಮದ ಪರಾಕಾಷ್ಠೆಯೇ? ನೀವು ಮೋಹಬಿಡಿರಿ; ಕರ್ತವ್ಯತತ್ಪರರಾಗಿರಿ. ನಿಮ್ಮ ಸಹನಶೀಲತೆಯು ಇನ್ನು ಮೇಲೆ ಘೋರ ಪರಿಣಾಮವನ್ನುಂಟುಮಾಡುವದು."

"ಕಲ್ಯಾಣದಿಂದ ಬಂದಮೇಲೆ ಮುಂದಿನ ವಿಚಾರ!" ವಿಕ್ರಮಾದಿತ್ಯನು ಹೀಗೆ ನುಡಿದು ದೀರ್ಘವಿಶ್ವಾಸ ಬಿಟ್ಟನು.

# ೧೧ ಕೃಷ್ಣಕಾರಸ್ಥಾನ!

ಕಲ್ಯಾಣ ನಗರದಲ್ಲಿ ಇಂದು ದೊಡ್ಡ ಸಮಾರಂಭ. ಇಮ್ಮಡಿ ಸೋಮೇಶ್ವರನು ತನ್ನ ಬಂಧುಗಳಾದ ವಿಕ್ರಮಾದಿತ್ಯ ಜಯಸಿಂಹರ ಸಲುವಾಗಿ ಸಂತೋಷಕೂಟವನ್ನೇರ್ಪಡಿಸಿ, ತನ್ನ ಭರತ ಬಂಧು ಪ್ರೇಮ ಪ್ರದರ್ಶನದ ಆಡಂಬರವನ್ನು ಹೂಡಿದ್ದನು. ಓಲಗದ ಅಧಿಕಾರಿಗಳೂ, ಕರ್ಮಚಾರಿಗಳೂ ಸಂತೋಷ ಕೂಟದಲ್ಲಿ ಭಾಗವಹಿಸಿದ್ದರು. ಸೋಮೇಶ್ವರ ಮಹಾರಾಜನು ತನ್ನ ಬಂದು ದ್ರೋಹವನ್ನು ಮರೆತು ಈ ಬಗೆಯಾಗಿ ಬಂಧು ಪ್ರೇಮ ಪ್ರದರ್ಶನ ಮಾಡಿದ್ದನ್ನು ನೋಡಿ, ರಾಜಧಾನಿಯೊಳಗಿನ ಪ್ರಜಾಜನರೂ, ಓಲಗದ ಅಧಿಕಾರಿಗಳೂ ಸಂಭ್ರಮಗೊಂಡು ಚಾಲುಕ್ಯರ ವೈಭವವು ಪರಮಾವಧಿ ಘನತೆಗೇರುವ ಸುವರ್ಣ ಸಂಧಿಯ ಕಾಲವು ಪ್ರಾಪ್ತವಾಯಿತೆಂದು ಅನ್ನತೊಡಗಿದ್ದರು. ಸಂತೋಷ ಕೂಟದ ಸಮಾರಂಭ ಮುಗಿದ ಮೇಲೆ ಸೋಮೇಶ್ವರನು ಓಲಗ ನೆರೆಯಿಸಿ, ವಿಕ್ರಮಾದಿತ್ಯನು ಇಡೀ ಸಾಮ್ರಾಜ್ಯದ ಮೇಲ್ವಿಚಾರಣೆ ಮಾಡತಕ್ಕದ್ದೆಂದೂ, ಜಯಸಿಂಹನು ಅವನಿಗೆ ಸಹಾಯಕನಾಗಿ ಬನವಾಸಿ ಮಂಡಲವನ್ನು ಆಳಬೇಕೆಂದೂ, ಹೇಳಿದನು. ಕರ್ನಾಟಕ ಸಾಮ್ರಾಜ್ಯದ ಒಡೆತನವು ತನ್ನದಿದ್ದರೂ, ಎಲ್ಲ ವ್ಯವಸ್ಥೆಯು ವಿಕ್ರಮಾದಿತ್ಯನ ನೇತೃತ್ವದಲ್ಲಿರುವದೆಂದೂ ಪ್ರಕಟಿಸಿದನು. ಒಟ್ಟಿನಮೇಲೆ ರಾಜ್ಯ ಸೂತ್ರಗಳು ವಿಕ್ರಮಾದಿತ್ಯನ ಕಡೆಗೆ, ರಾಜ್ಯ ಸಿಂಹಾಸನವು ಮಾತ್ರ ತನ್ನ ಕಡೆಗೆ ಎಂಬುದನ್ನು ಅವನು ಓಲಗದವರಿಗೆ ತಿಳಿಸಿ ಹೇಳಿದನು. ಸೋಮೇಶ್ವರನ ಈ ಉದಾರತನವು ಸಭಿಕರನ್ನು ಅಚ್ಚರಿಗೊಳಿಸಿದ್ದರಲ್ಲಿ ಸೋಜಿಗವಲ್ಲ. ಆದರೆ ಒಂದು ವಿಧದ ಕಲ್ಪನೆ ಉಂಟಾಗುವದಕ್ಕೆ ಮಾತ್ರ ಅವಕಾಶವಿದ್ದಿತು. ಸೋಮೇಶ್ವರನ ಅತ್ಯಾಚಾರಿಯಾದ ಆಳಿಕೆಯು ಪ್ರಜೆಗಳನ್ನು ಅಸಂತುಷ್ಟಗೊಳಿಸಿತ್ತು. ಸಾಮ್ರಾಜ್ಯದಲ್ಲಿ ಹುಟ್ಟಿದ ಈ ಅಸಂತೋಷಾಗ್ನಿಯು ತನ್ನ ಸಿಂಹಾಸನಕ್ಕೆ ಕೇಡುಂಟುಮಾಡದಿರಲಾರದೆಂಬ ಭೀತಿಯು ಅವನಿಗುಂಟಾ

ಗಿರುವದೆಂದು ಜನರು ಸೋಮೇಶ್ವರನ ನಡುವಳಿಕೆಯ ಅರ್ಥ ಮಾಡಿಕೊಂಡರು. ಕೆಲವರಿಗೆ ಇನ್ನೊಂದು ವಿಧವಾದ ಅರ್ಥವಾಗುತ್ತಿದ್ದಿತು. ಕರ್ತವ್ಯಹೀನನೂ ವಿಲಾಸಿಯೂ ಆದ ಅವನಿಂದ ಸಾಮ್ರಾಜ್ಯ ನಿರ್ವಹಣವಾಗದೆ ಹೋದ ಮೂಲಕ ಮಂಡಲೇಶ್ವರರು ಸ್ವೇಚ್ಛೆಯಿಂದ ವರ್ತಿಸುವ ಚಿಹ್ನ ತೋರುತ್ತಿದ್ದುದರಿಂದಲೂ, ವಿಕ್ರಮಾನ್ವಿತನಾದ ವಿಕ್ರಮಾದಿತ್ಯನ ಸಹಾಯ ಸಹಾನುಭೂತಿಗಳನ್ನು ಹೊಂದದೆ ಹೋದರೆ ತನ್ನ ಆಳಿಕೆಯು ಸ್ಥಿರವಾಗದೆಂದು ಕಲ್ಪಿಸಿದ್ದರಿಂದಲೂ ಈ ವಿಧವಾಗಿ ಅವನು ಆಚರಿಸತೊಡಗಿರುವನೆಂದು ಹಲವರ ವಿಚಾರವಾಯಿತು. ಒಟ್ಟಿನ ಮೇಲೆ ಸೋಮೇಶ್ವರನ ಈ ಸಂತೋಷ ಕೂಟವೂ ಸಭೆಯೂ ನಿರ್ಮಲಾಂತಃಕರಣಪೂರಿತವಾದುದಲ್ಲವೆಂಬ ಮಾತನ್ನು ಎಲ್ಲರೂ ಅರಿತಿದ್ದರು. ಆದರೆ ವಸ್ತುಸ್ಥಿತಿಯು ಮಾತ್ರ ಇವೆಲ್ಲವುಗಳನ್ನೂ ಮೀರಿ ಮತ್ತೊಂದು ಬೇರೆ ವಿಧವಾಗಿ ತಲೆಯೆತ್ತುತ್ತಿತ್ತು. ಅದೂ ಅತ್ಯಂತ ಗುಪ್ತವಾಗಿ ಹೊಂಚು ಹಾಕತೊಡಗಿತ್ತು. ಸೋಮೇಶ್ವರ ಭುವನೈಕ ಮಲ್ಲನು ಎಲ್ಲರ ವಿಚಾರರಕ್ಕೂ ನಿಲುಕದಂತಹ ಮತ್ತೊಂದು ಬಗೆಯ ಯಾವ ಸಾಧನವನ್ನು ಸಾಧಿಸಬೇಕೆಂದಿರಬಹುದು ?

. ಸಂಧ್ಯಾಸಮಯವಾಗಿತ್ತು. ಸಂತೋಷಕೂಟದ ಸವಿಯೂಟವನ್ನು ಉಂಡು, ಓಲಗದ ಸವಿಮಾತುಗಳನ್ನು ಕೇಳಿ ತುಷ್ಟರಾದ ಪೌರವ ಪ್ರಮುಖರೂ, ಕರ್ಮಚಾರಿಗಳೂ ಸಭಾಗೃಹದಿಂದ ಹೊರಬಿದ್ದು ತಮ್ಮ ತಮ್ಮ ನಿವಾಸಗಳಿಗೆ ತೆರಳತೊಡಗಿದ್ದರು. ಮಹಾಮಂತ್ರಿ ಬಲದೇವಯ್ಯನು ತನ್ನ ಮಂದಿರವನ್ನು ಸೇರಿ, ಅಟ್ಟಾಲಿಕೆಯನ್ನೇರಿ ಅಲ್ಲಿದ್ದ ಮಂಚದ ಮೇಲೆ ಶಯನಮಾಡಿ ವಿಚಾರ ಸಾಗರದಲ್ಲಿ ಮುಳುಗಿದನು. ಅಂದಿನ ಓಲಗದ ಘಟನೆಗಳಿಂದ ಎಲ್ಲರೂ ಸಂತೋಷದಲ್ಲಿದ್ದರೂ ಈ ಪ್ರಧಾನಮಾತ್ಯನ ಮನಸ್ಸು ಯಾಕೋ ಔದಾಸೀನ್ಯತೆಯ ಲಹರಿಗಳಿಂದೊಡಗೂಡಿದ್ದಾಗಿದ್ದಿತು. ಅವನು ವಿಚಾರಿಸುತ್ತ ಸ್ವಲ್ಪ ವೇಳೆ ಒರಗಿರುವಾಗ ದೂತನು ಅಲ್ಲಿಗೆ ಬಂದು, ಸೇವಾನಿವೃತ್ತ ಪ್ರಧಾನಮಾತ್ಯ ರೂಪಭಟ್ಟಯ್ಯನವರ ಆಗಮನವಾಗಿದೆಯೆಂದು ಬಿನ್ನವಿಸಿದನು. ನಿವೃತ್ತಾಮಾತ್ಯನ ಅಕಲ್ಪಿತ

ವಾದ ಆಗಮನವು ಬಲದೇವಯ್ಯನನ್ನು ಮತ್ತಿಷ್ಟು ವಿಚಾರದಲ್ಲಿ ಕೆಡಹಿತು ಅವನು ಮಂಚದಿಂದೆದ್ದು ಕುಳಿತು, ರೂಪಭಟ್ಟಯ್ಯನನ್ನು ಒಳಗೆ ಕಳಿಸಲು ಚಾರನಿಗೆ ಆಜ್ಞಾಪಿಸಿದನು. ಸ್ವಲ್ಪ ವೇಳೆಯಲ್ಲಿ ಅವನು ಅಟ್ಟಾಲಿಕೆ ಯನ್ನೇರಿ ಬಂದನು. ಬಲದೇವಯ್ಯನು ಅವನನ್ನು ಸನ್ಮಾನಿಸಿ ತಕ್ಕ ಸ್ಥಳ ದಲ್ಲಿ ಕುಳ್ಳಿರಿಸಿದ ಬಳಿಕ– "ಅಮಾತ್ಯರೆ, ಇಂದು ತಮ್ಮ ಅಕಲ್ಪಿತವಾದ ಆಗಮನದಿಂದ ಸಾನಂದಾಶ್ಚರ್ಯವಾಗಿದೆ"

"ಸಹಜವಿದೆ" ಎಂದಿಷ್ಟೇ ರೂಪಭಟ್ಟಯ್ಯನು ನುಡಿದು– "ಹರ್ಷ ಪೂರ್ವಕವಾದ ಸಮಾರಂಭಗಳು ಪೂರ್ತಿಯಾದವೇ?"

"ಎಲ್ಲವೂ ಸುಸೂತ್ರವಾಗಿ ನೆರವೇರಿದವು"

"ಹರ್ಷಪೂರ್ಣವಾದ ಕಾರ್ಯಗಳು ಮುಗಿದಂತಾದವು, ಇನ್ನು ಮೇಲೆ ದುಃಖಾವೇಗಪೂರ್ಣವಾದ ಘಟನೆಗಳು ಸಾಗಬಹುದಲ್ಲವೇ?"

ರೂಪಭಟ್ಟಯ್ಯನ ಈ ಮಾತುಗಳಿಂದ ಬಲದೇವಯ್ಯನು ಮತ್ತಿಷ್ಟು ಗೊಂದಲದಲ್ಲಿ ಬಿದ್ದನು. ಅವನು ಕುತೂಹಲದಿಂದ– "ರೂಪಭಟ್ಟಯ್ಯ ನವರೆ, ನೀವು ವಯೋವೃದ್ಧರು; ಜ್ಞಾನವೃದ್ಧರು; ಚಾಲುಕ್ಯ ಸಾಮ್ರಾ ಜ್ಯದ ಏಕನಿಷ್ಠ ಸೇವಕರು. ನಿಮ್ಮನ್ನು ಯಾವ ವಿಧದಲ್ಲಿಯೂ ಹೋಲದೇ ಇದ್ದ ನಾನು ನಿಮ್ಮ ಮಾತಿನೊಳಗಿನ ಗಹನ ಗೂಢವನ್ನು ಗುರುತಿಸಲಾರ ದವನಾಗಿರುವೆನು."

"ವೃತ್ತಿ ಅಷ್ಟು ಸಾತ್ವಿಕವಲ್ಲ; ತಾಮಸವೂ ಅಲ್ಲ; ರಾಜಸವಾಗಿದೆ. ಆದರೂ ಸಾಮ್ರಾಜ್ಯ ಘಾತಿಯು ನಿಮ್ಮಿಂದ ಘಟಿಸಲಾರದೆಂದು ಬಗೆದು ಅದೇ ವಿಶ್ವಾಸದಿಂದ ಇಲ್ಲಿಗೆ ಬಂದಿರುವೆನು. ಇಂದಿನ ಸೇವೆ ಬಹು ಮಟ್ಟಿಗೆ ನನ್ನ ಮಹತ್ವದ ಹಾಗೂ ಕೊನೆಯ ಸೇವೆಯಾಗಿ ಪರಿಣಮಿಸ ಬಹುದಾಗಿದೆ."

"ಅಮಾತ್ಯರೆ, ನಾನು ದಿಙ್ಮೂಢನಾದೆನು. ಹೇಳತಕ್ಕ ಮಾತು ಗಳನ್ನು ಸ್ಪಷ್ಟವಾಗಿ ತಿಳಿಸಿದರೂ ತಿಳಿಯಬಾರದಂತಹ ಮತಿಭ್ರಮೆಯು ಉಂಟಾದ ಪರಿಸ್ಥಿತಿಯಲ್ಲಿ ನನಗೆ ಇಂತಹ ಮಾರ್ಮಿಕ ಭಾಷೆಯ ಮರ್ಮದ ಬೋಧೆಯಾಗುವದು ದುಸ್ತರವಾಗಿದೆ."

"ನಿಮ್ಮನ್ನು ಹೆಚ್ಚಾದ ಗೊಂದಲದಲ್ಲಿ ತೊಡಗಿಸುವ ಇಚ್ಛೆ ನನ್ನದಿಲ್ಲ. ನಾನು ನಿಮಗೆ ಕೇಳುವದೊಂದೇ ಮಾತು. ಸೋಮೇಶ್ವರರ ಇಂದಿನ ಸಂತೋಷ ಕೂಟವು ನಿಜವಾದ ಸಂತುಷ್ಟಿಯ ಚಿಹ್ನವನ್ನು ಪ್ರದರ್ಶಿಸುವಂತಹದೆ? ಅದರ ಅಂತರಂಗದಲ್ಲಿ ಬೇರೊಂದು ವಿಕಾರವು ತುಂಬಿಕೊಳ್ಳದೆ ಇರುವದೆ?"

"ನಿರ್ಮಲಾಂತಃಕರಣದ ಚಿಹ್ನಗಳು ಇಂದಿನ ಸಂತೋಷ ಕೂಟದಲ್ಲಿ ಬಾಹಿರಂಗಿಕವಾಗಿ ತೋರುತ್ತಿದ್ದರೂ ಅಂತರಂಗವು ಮಾತ್ರ ಆ ಸ್ಥಿತಿಯಲ್ಲಿಲ್ಲವೆಂದು ಅನುಮಾನ ಮಾಡಲಿಕ್ಕೆ ಬರುವಹಾಗಿದೆ. ಆದರೆ ಆ ಅನುಮಾನವನ್ನು ದೃಢಪಡಿಸಲು ಸಾಧನಗಳೇ ದೊರೆಯದೆ ಹೋಗಿವೆ. ಅಂತೆಯೇ ನನ್ನ ಮನಸ್ಸು ವಿಚಾರ ಸಾಗರದಲ್ಲಿ ಮುಳುಗಿದೆ."

"ನಿಮಗೆ ಈ ಸಮಸ್ಯೆಯ ನಿರ್ಣಯವು ಎಂದಾಗಬಹುದು?"

"ನಾಳೆ ಈ ವಿಷಯದಲ್ಲಿ ಆಳವಾಗಿ ವಿಚಾರಿಸುವೆನು."

"ತಾವು ನಾಳೆ ಆಳವಾಗಿ ವಿಚಾರಿಸುವಷ್ಟರಲ್ಲಿ ಇಂದೇ ರಾತ್ರಿ ಆ ಸಮಸ್ಯೆಯು ಬಗೆಹರಿದು ಹೋಗುವದು."

"ಹೀಗೆಂದರೇನು ಅಮಾತ್ಯರೆ?"

"ಸೋಮೇಶ್ವರರು ನಡೆಯಿಸಿದ ಕೃಷ್ಣ ಕಾರಸ್ಥಾನದ ಗಂಧವಾರ್ತೆಯು ಪ್ರಧಾನಾಮಾತ್ಯರಾದ ನಿಮಗೆ ತಿಳಿಯದೆ ಇರುವದು ಅತ್ಯಂತ ದುಃಖದ ಹಾಗೂ ಲಾಂಛನಾಸ್ಪದವಾದ ಸಂಗತಿಯಾಗಿದೆ."

"ಸೋಮೇಶ್ವರ ಮಹಾರಾಜರು ಯಾವ ಕಾರಸ್ಥಾನವನ್ನು ರಚಿಸಿರುವರು?"

"ಕನ್ನಡಿಗರ ಸಾಮ್ರಾಜ್ಯವನ್ನು ಕಣ್ಮರೆ ಮಾಡುವ ಕಾರಸ್ಥಾನ! ಕನ್ನಡ ರವಿಯನ್ನು ಅಸ್ತಗೊಳಿಸುವ ಕಾರಸ್ಥಾನವನ್ನು!! ಚಾಲುಕ್ಯರ ವೈಭವವನ್ನು ಮಣ್ಣುಪಾಲು ಮಾಡುವ ಕೃಷ್ಣಕಾರಸ್ಥಾನವನ್ನು!!!"

"ಸ್ಪಷ್ಟವಾಗಿ ಹೇಳಿರಿ, ಅಮಾತ್ಯವರ್ಯರೆ?"

" ಇಂದು ರಾತ್ರಿ ವಿಕ್ರಮಾದಿತ್ಯ ಜಯಸಿಂಹರನ್ನು ಮೋಸದಿಂದ ಸೆರೆಹಿಡಿಯುವ ಗುಪ್ತಕಾರಸ್ಥಾನವು ನಡೆದಿದೆ."

ಬಲದೇವಯ್ಯನು ಬೆಚ್ಚಿಬಿದ್ದನು. ಅವನು ರೂಪಭಟ್ಟಯ್ಯನ ಮುಖವನ್ನು ಹುಳುಹುಳು ನೋಡತೊಡಗಿದನು. ಅವನು ಬೆರಗಿನ ಹಾಗು ಅಂಜಿಕೆಯ ಧ್ವನಿಯಲ್ಲಿಯೇ– " ರೂಪಭಟ್ಟಯ್ಯನವರೆ, ಈ ಸಂಗತಿಯು ನಿಜವಿದ್ದರೆ ನನ್ನ ಅಮಾತ್ಯಪದದ ಆಳಿಕೆಗೆ ಧಿಃಕಾರವು! "

" ಬಲದೇವಯ್ಯನವರೆ, ನೀವು ಈ ವಿಷಯದಲ್ಲಿ ಸುದೀರ್ಘವಾಗಿ ಯೋಚಿಸಿಲ್ಲ. ನಿಮಗೆ ತೆರೆಯ ಮರೆಯಲ್ಲಿ ನಡೆದ ಕೃಷ್ಣಕಾರ್ಯಗಳ ಗಂಧವಾರ್ತೆ ತಗಲಿಲ್ಲ. ಇನ್ನೂ ಅವಕಾಶವಿದೆ. ಇನ್ನೂ ಸಾಮ್ರಾಜ್ಯ ವನ್ನೂ, ಸಾಮ್ರಾಜ್ಯ ಸೂರ್ಯನನ್ನೂ, ಸಾಮ್ರಾಜ್ಯ ವೈಭವವನ್ನೂ ಬಾಳಿ ಬದುಕುವಂತೆ ಮಾಡಲು ಅವಕಾಶವಿದೆ. ವಿಕ್ರಮಾಂಕ ಮಹಾ ರಾಜರನ್ನು ಬನವಾಸಿಯಿಂದ ಕರೆತರುವಾಗ ಅವರಿಗೆ ಅಭಯದ ಆಶ್ವಾಸನೆ ನಿಮ್ಮಿಂದ ದೊರೆತಿದೆ. ಆ ಆಶ್ವಾಸನೆಯನ್ನು ನೆನಪಿನಲ್ಲಿ ತಂದು, ನೀವು ಸೋಮೇಶ್ವರರ ಕಾರಸ್ಥಾನವನ್ನು ಮಣ್ಣುಗೂಡಿಸುವ ಸಾಹಸ ಮಾಡಿದರೆ ಬೇಗನೇ ನೆರವೇರುವಂತಿದೆ."

" ಈ ವಿಷಯದಲ್ಲಿ ಇನ್ನು ತಾವು ಯೋಚಿಸಕೂಡದು. ಮಧ್ಯರಾತ್ರಿ ಯೊಳಗಾಗಿ ವಿಕ್ರಮಾಂಕ ಮಹಾರಾಜರನ್ನೂ, ಜಯಸಿಂಹ ಮಹಾರಾಜ ರನ್ನೂ ರಾಜಧಾನಿಯಿಂದ ಪಾರುಮಾಡಿ ಸುರಕ್ಷಿತ ಸ್ಥಳಕ್ಕೆ ಕಳುಹಿಸುವೆನು"

" ಜಾಗ್ರತೆಯಿಂದ ಕಾರ್ಯ ಮಾಡಿರಿ. ನೀವೂ ರಾಜದ್ರೋಹಕ್ಕೆ ಪಾತ್ರವಾಗದ ಹಾಗೆ ಕಾರ್ಯ ಈಡೇರಿಸಿರಿ."

" ನನಗೆ ಈಗ ಯಾವುದರ ಪರಿವೆಯೂ ಇಲ್ಲ" ಎಂದು ಬಲದೇ ವಯ್ಯನು ನುಡಿದು– " ಅಮಾತ್ಯರೆ, ನಿಮಗೆ ಈ ವಾರ್ತೆಯು ಹೇಗೆ ತಿಳಿಯಿತು? ತಿಳಿದ ವಾರ್ತೆಯು ನಿಜವೆಂದು ಗ್ರಹಿಸಲಿಕ್ಕಾದರೂ ಯೋಗ್ಯ ಪ್ರಮಾಣಗಳುಂಟೇ ಹೇಗೆ?"

" ಸತ್ಯ ಪ್ರಮಾಣಗಳುಂಟು. ನಾನು ಸೋಮೇಶ್ವರರ ಆಚರಣೆ ಯಿಂದ ಶಂಕಾಗ್ರಸ್ತನಾಗಿದ್ದೆನು. ಈ ವಿಷಯದಲ್ಲಿ ಆಳವಾದ ಶೋಧನೆ

ನಡೆಯಿಸಿದಾಗ ನನಗೆ ಕೃಷ್ಣಕಾರಸ್ಥಾನದ ಗಂಧವು ಗೊತ್ತಾಯಿತು. ಸೋಮೇಶ್ವರರ ಪಟ್ಟಮಹಿಷಿಯೂ, ಸಾಧ್ವಿ ಶಿರೋಮಣಿಯೂ ಆದ ಅಂಬಿಕಾದೇವಿಯು ನನಗೆ ಈ ಸಂಗತಿಯನ್ನು ತಿಳಿಸಿರುವಳು. ಪತಿಯ ಕೃಷ್ಣಕಾರಸ್ಥಾನವು ಚಾಲುಕ್ಯ ಸಾಮ್ರಾಜ್ಯವನ್ನು ನಾಶಗೊಳಿಸುವಂತಹ ದೆಂಬದು ಗೊತ್ತಾದುದರಿಂದ ಅವಳು ಪತಿಕ್ಷೋಭೆಯ ಪರಿವೆ ಕೂಡ ಹಿಡಿ ಯದೆ ನನಗೆ ಎಲ್ಲ ಸಂಗತಿ ತಿಳಿಸಿರುವಳು. ಆದರೆ ಗುಪ್ತವಾಗಿ ನಡೆಯುವ ಕಾರಸ್ಥಾನವನ್ನು ಗುಪ್ತರೀತಿಯಿಂದಲೇ ನಾಶಗೊಳಿಸಬೇಕು. ಯಾರ ತಲೆಯ ಮೇಲೆಯೂ ಅಪವಾದ ಶಿಖಿಯು ಕುಳಿತುಕೊಳ್ಳದಹಾಗೆ ಕಾರ್ಯ ಸಾಧನೆ ಮಾಡಬೇಕು.'' ಎಂದು ರೂಪಭಟ್ಟಯ್ಯನು ಬಲದೇವಯ್ಯನಿಗೆ ಹೇಳಿದನು. ಅನಂತರ ಕೆಲವು ವೇಳೆ ಮಾತುಕತೆಗಳು ಸಾಗಿದವು. ತರು ವಾಯ ರೂಪಭಟ್ಟಯ್ಯನು ಬಲದೇವಯ್ಯನ ನಿರೋಪ ಹೊಂದಿ ಅವನ ಮಂದಿರದಿಂದ ಹೊರಗೆ ತೆರಳಿದನು.

ಓಲಗದ ಕಾರ್ಯ ಸಮಾಪ್ತಿಯಾದಮೇಲೆ ಸೋಮೇಶ್ವರನು ತನ್ನ ಬಂಧುಗಳನ್ನಿಬ್ಬರನ್ನೂ ತನ್ನ ಅರಮನೆಗೆ ಕರೆತಂದನು. ಅವರಲ್ಲಿ ಸ್ವಲ್ಪ ವೇಳೆ ಮಾತುಕತೆಗಳು ಸಾಗಿದವು. ಅಲ್ಲಿಯೇ ಕುಳಿತ ಅಂಬಿಕಾದೇವಿಯ ಮನಸ್ಸಿಗೆ ಮಾತ್ರ ಈ ಮಾತುಗಳಿಂದ ಸೊಗಸಾಗಲಿಲ್ಲ. ಅವಳು ಪತಿಯ ಸಮ್ಮುಖದಲ್ಲಿ ಗಹನ ಗೂಢದ ವಿಚಾರಗಳ ಗಂಧವು ಗೊತ್ತಿಲ್ಲದವರ ಹಾಗೆ ನಟಿಸುತ್ತ ಮಾತಾಡತೊಡಗಿದ್ದಳು. ವಿಕ್ರಮಾದಿತ್ಯನೂ ಜಯಸಿಂಹನೂ ವಿಲಕ್ಷಣವಾದ ಬಂಧು ಪ್ರೇಮದ ಆ ಸ್ವಾದವನ್ನು ಅನುಭವಿಸಿದ್ದು ಅಂದೇ ಮೊದಲು, ಅಂದೇ ಕಡೆ!

ಕೆಲವು ಹೊತ್ತು ಸವಿಮಾತು ನಡೆದ ಬಳಿಕ ವಿಕ್ರಮಾದಿತ್ಯ ಜಯ ಸಿಂಹರು ಅಣ್ಣನ ನಿರೋಪ ಹೊಂದಿ ಎದ್ದರು. ಆಗ ಅಂಬಿಕಾದೇವಿಯು ಮೈದುನಂದರಿಗೆ–"ಎಲ್ಲವೂ ರುಚಿಯಾಯಿತು; ಸವಿಯಾಯಿತು. ಸವಿಯು ಕನಸಾಗಬಾರದು. ರಾತ್ರಿಯಾಗಿದೆ. ರಾತ್ರಿ ಕಂಡಬಾವಿಯಲ್ಲಿ ಹಗಲು ಬೀಳಬಾರದು. ಜಾಗ್ರತೆಯಿಂದ ವರ್ತಿಸಿದರೆ ಚಾಲುಕ್ಯರ ಅಭ್ಯುದಯ ವಾದಮೇಲೆ ಆದರ ವೈಭವವು ಉಂಟಾಗತಕ್ಕದ್ದೇ. ಪಂಜರವು ವಿಕ್ರಮಾ ರ್ಜಿತ ಸತ್ವಶಾಲಿಯಾದ ಮೃಗೇಂದ್ರನನ್ನು ಕೂಡ ಸತ್ವಗೆಡಿಸುವದು. ಪಂಜ

ರವು ಬಂಧನವು. ಬಂಧನವನ್ನುಂಟುಮಾಡುವ ಸಂಧಿಯಲ್ಲಿ ಜಾಗ್ರತವಾಗಿರಬೇಕು. ಬಂಧುಗಳೆಲ್ಲರೂ ಒಂದಾಗಿ ಬಂಧನವನ್ನು ನಿವಾರಿಸಿಕೊಂಡು ಮುಂದಡಿಯಿಡಬೇಕು. ಅಂದರೆ ಚಾಲುಕ್ಯರ ವೈಭವವು ಸಿದ್ಧವು."

ಅಂಬಿಕಾದೇವಿಯ ಈ ಸಂಧಿಗ್ಧ ಮಾತುಗಳ ಅರ್ಥವು ಸೋಮೇಶ್ವರನ ಮಂದ ಬುದ್ಧಿಗೆ ತೋಚಲಿಲ್ಲ. ಆದರೆ ವಿಕ್ರಮಾದಿತ್ಯನ ತಲೆಯಲ್ಲಿ ಒಂದು ವಿಧವಾದ ತೆರೆಗಳುಂಟಾದವು. ಅವನು ಚಟ್ಟನೆ ಹೊರಬಿದ್ದು ತನ್ನ ಮಂದಿರದ ದಾರೀ ಹಿಡಿದನು. ಜಯಸಿಂಹನಾದರೂ ಅವನ ಪಡಿನೆಳಲಿನ ಹಾಗೆಯೆ ಸಾಗಿದ್ದನು. ಇಬ್ಬರೂ ತಮ್ಮ ನಿವಾಸವನ್ನು ಹೊಂದಿದರು. ಹೋದೊಡನೆಯೇ ವಿಸ್ಮಯಕಾರಕ ಘಟನೆಯೊಂದು ಜರುಗಿತು. ಅಲ್ಲಿ ದೂತನೊಬ್ಬನು ವಿಕ್ರಮಾದಿತ್ಯನ ಕೈಯಲ್ಲಿ ಪತ್ರ ಕೊಟ್ಟನು.

ಅವನು ಪತ್ರವನ್ನೋದಿದನು:—

"ಕೃಷ್ಣಕಾರಸ್ಥಾನ ಜರುಗಲಿದೆ. ಇಂದೇ ಮಧ್ಯರಾತ್ರಿಯಲ್ಲಿ ನಗರ ತ್ಯಾಗ ಮಾಡಬೇಕು. ಮಹಾದ್ವಾರದ ಬಳಿಯ ದಿಡ್ಡಿಯು ತೆರೆದಿಟ್ಟಿರುವದು."

ವಿಕ್ರಮನು ವಿಸ್ಮಯಪೂರ್ಣನಾದನು. ಜಯಸಿಂಹನೂ ಸೋಜಿಗಗೊಂಡನು. ಅಂಬಿಕಾದೇವಿಯ ಸೂಚನೆಯು ನಿರರ್ಥಕವಲ್ಲೆಂದು ಅವರು ಬಗೆದರು. ಮಧ್ಯರಾತ್ರಿಯಾಯಿತು. ದಿಡ್ಡಿಯ ಬಾಗಿಲು ತೆರೆದಿತ್ತು. ವಿಕ್ರಮಾದಿತ್ಯನೂ ಜಯಸಿಂಹನೂ ತಮ್ಮ ಅಂಗರಕ್ಷಕರೊಡನೆ ಮಂದಿರದಿಂದ ಹೊರಬಿದ್ದರು. ದ್ವಾರದಲ್ಲಿ ಯಾವ ಅಡ್ಡಿಯೂ ಉಂಟಾಗಲಿಲ್ಲ. ಒಮ್ಮೆ ಅವರು ಕೋಟೆಯಿಂದ ಹೊರಬಿದ್ದರು.

ಇತ್ತ ವಿಕ್ರಮಾದಿತ್ಯ ಜಯಸಿಂಹರು ಇಳಿದ ಮಂದಿರಕ್ಕೆ ಬಲವಾದ ಮುತ್ತಿಗೆ ಬಿದ್ದಿತು. ಮಹಾಸೇನಾನಿ ಕೇಶವಾದಿತ್ಯನ ಶೂರ ಸೈನಿಕರು ಮಂದಿರವನ್ನು ಸುತ್ತುಗಟ್ಟಿ ಕಾವಲು ಮಾಡತೊಡಗಿದರು. ಒಳಗಿನ ಒಂದು ಇರಿವೆ ಕೂಡ ಹೊರಗೆ ಬೀಳದ ಹಾಗೆ ವ್ಯವಸ್ಥೆಯಾಯಿತು. ಸೋಮೇಶ್ವರ ಮಹಾರಾಜನು ಆ ರಾತ್ರಿಯಲ್ಲಿಯೇ ಬಂದು ಮುತ್ತಿಗೆಯ ಕಾರ್ಯವು ಯಥಾಸ್ಥಿತವಾಗಿ ಸಾಗಿದ್ದು ನೋಡಿ ಆನಂದ ಶರಧಿಯಲ್ಲಿ

ಮುಳುಗಿ, ತನ್ನ ಕೃಷ್ಣಕಾರಸ್ಥಾನವು ಯಶಸ್ವಿಯಾದ ಬಗ್ಗೆ ಕೃತಕೃತ್ಯತೆ ಹೊಂದಿ ಸುಖ ನಿದ್ರೆಯನ್ನು ಹೊಂದಿದನು.

ಬೆಳಗಿನಜಾವದ ಕೋಳಿ ಕೂಗಿತು. ನಗರದ ಹೊರಕೋಟೆಯಲ್ಲಿ ಬೆಳಗಿನ ಭೇರಿಗಳು ಮೊಳಗಿದವು. ಸೋಮೇಶ್ವರ ಮಹಾರಾಜನು ಎಚ್ಚತ್ತನು. ಪ್ರಾತರ್ವಿಧಿಗಳನ್ನು ಬೇಗನೆ ನೆರವೇರಿಸಿಕೊಂಡು, ಮಂತ್ರಣಾಗಾರಕ್ಕೆ ಹೋದನು. ಕೂಡಲೇ ಮಹಾಸೇನಾಪತಿಯನ್ನು ಕುರಿತು– "ಬಂಧನೆಗೊಳಗಾದ ವಿಕ್ರಮಾದಿತ್ಯ ಜಯಸಿಂಹರನ್ನು ಬಂಧಿಸಿ ಕಾರಾಗೃಹದಲ್ಲಿರಿಸಿ ಬಿಗಿಯಾದ ಕಾವಲಿರಿಸಬೇಕು. ಮುಂದೆ ಅವರ ಪಾರುಪತ್ಯವನ್ನು ಹೇಗೆ ಮಾಡಬೇಕೆಂಬ ಬಗ್ಗೆ ಹಿಂದಿನಿಂದ ವಿಚಾರಿಸೋಣ."

ಮಹಾ ಸೇನಾಪತಿಯು ರಾಜಾಜ್ಞೆಯ ಪತ್ರ ತೆಗೆದುಕೊಂಡು ವಿಕ್ರಮಾದಿತ್ಯ ಜಯಸಿಂಹರ ಮಂದಿರವನ್ನು ಪ್ರವೇಶಿಸಿದನು. ಅಲ್ಲಿ ವಿಕ್ರಮನಿಲ್ಲ, ಜಯನಿಲ್ಲ! ದಂಗು ಬಡೆದಂತಾದನು. ಈ ಸುದ್ದಿಯು ಹಾಹಾ ಅನ್ನುವಷ್ಟರಲ್ಲಿ ಎಲ್ಲೆಡೆಗೂ ಪಸರಿಸಿತು; ಆಗಲೇ ಸೋಮೇಶ್ವರ ಮಹಾರಾಜನಿಗೂ ತಲುಪಿತು. ಅವನು ಬೆರಗಾದನು. ಬೆರಗಿನ ಹಿಂದೆ ಸಿಟ್ಟು ಬಂತು. ಸಿಟ್ಟಿಗೆದ್ದು ಹುಚ್ಚಾದನು. ಹುಚ್ಚಿನಲ್ಲಿ ಬಡಬಡಿಸಹತ್ತಿದನು. ಬಡಬಡಿಕೆ ಬೆಳೆದು ಬಡಕೊಂಡನು. ಬಡಕೊಳ್ಳುತ್ತ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲೆಂದು ಮರಗಿದನು. ಮರುಗಿ ಕೊರಗಿದನು. ಕೊರಗಿ ಕರಗಿದನು. ಕರಗಿ ಒರಗಿದನು. ತನ್ನ ಕೃಷ್ಣಕಾರಸ್ಥಾನವು ಮಣ್ಣುಪಾಲಾಯಿತಲ್ಲ ಎಂದು ಬಹುಪರಿಯಾಗಿ ಮಿಡಿಕಿದನು.

ಒರಗಿದ ಸೋಮೇಶ್ವರನೆದ್ದು ಸೇನಾಪತಿಯನ್ನು ಕುರಿತು– "ನಿಮ್ಮ ಉಪೇಕ್ಷೆಯೇ ಹೀಗೆ ಎಲ್ಲವನ್ನೂ ಹಾಳುಮಾಡಿತು. ಇದ್ದಲ್ಲಿಂದ ಆ ಮೋಸಗಾರ ಚೋರರನ್ನು ಹಿಡಿದುಕೊಂಡು ಬರ್ರಿ!" ಎಂದು ಆಜ್ಞಾಪಿಸಿದನು.

ಕೇಶವಾದಿತ್ಯನು ಬಲವಾದ ದಂಡಿನೊಡನೆ ರಾಜಧಾನಿಯಿಂದ ತೆರಳಿದನು. ನಾಲ್ಕೂ ಕಡೆಗೆ ಸೈನ್ಯವನ್ನು ಹರಿಯಬಿಟ್ಟನು. ಮುಖ್ಯ ದಿಸೆಗೆ ತಾನು ಕೆಲವು ಸೈನಿಕರೊಡನೆ ಪಯಣ ಮಾಡಿದನು. ಅಂದೇ ಕೇಶವಾದಿತ್ಯ ಸೇನಾಪತಿಗೆ ವಿಕ್ರಮ ಜಯಸಿಂಹರ ಗುಪ್ತವಾದ ಭೆಟ್ಟಿ

ಯಾಯಿತು. ಮುಂದೆ ಯಾವ ಯಾವ ವಿಧದಿಂದ ನಡೆಯಬೇಕೆಂಬ ಬಗ್ಗೆ ಅವನು ವಿಕ್ರಮ ಜಯಸಿಂಹರಿಗೆ ತಿಳಿಸಿ, ಅವರನ್ನು ಸುರಕ್ಷಿತವಾಗಿ ಬಳ್ಳಿಗಾವಿಗೆ ಪಯಣ ಬೆಳೆಯಿಸಹಚ್ಚಿ, ಒಂದೆರಡು ದಿನ ಅತ್ತ ಇತ್ತ ತಿಲೆದಾಡಿ, ಮೋಸಗಾರ ಚೋರರು ಚೋರತನದಿಂದ ಮೋಸಮಾಡಿ ಹೋದರೆಂದು ಕಲ್ಯಾಣದಲ್ಲಿದ್ದ ಸೋಮೇಶ್ವರ ಮಹಾರಾಜನಿಗೆ ತಿಳಿಸಿದನು. ತನ್ನ ಬಹುದೊಡ್ಡ ಲಾಭವು ನಷ್ಟವಾಯಿತೆಂದು ಸೋಮೇಶ್ವರನು ದುಃಖಾಬ್ಧಿಯಲ್ಲಿ ಮುಳುಗಿದನು.

▼

## ೧೨ ಅವರು ರವಿ, ನೀವು ರಾಹು!

ಸೋಮೇಶ್ವರ ಮಹಾರಾಜನು ಎಲ್ಲರ ಮೇಲೆಯೂ ಮುನಿಸುಗೊಂಡಿದ್ದನು. ತಾನು ಅತ್ಯಂತ ಗುಪ್ತವಾಗಿ ರಚಿಸಿದ ಕಾರಸ್ಥಾನವನ್ನು ಯಾರೋ ಮನೆಯೊಡಕರು ಬೈಲಿಗೆಳೆದರೆಂದೂ, ಅಂತೆಯೇ ಚೋರದ್ವಯರು ಪಲಾಯನ ಮಾಡಲು ಅವಕಾಶ ದೊರೆಯಿತೆಂದೂ ಅವನು ಬಗೆದನು. ದಿಡ್ಡಿಯ ಬಾಗಿಲದ ಕಾವಲುಗಾರರಂತೂ ಸೆರೆಮನೆಯ ಸಂಗಡಿಗರಾಗಿದ್ದರು, ಇನ್ನುಮುಂದೆ ಒಬ್ಬೊಬ್ಬರೇ ಕರ್ಮಚಾರಿಗಳ ಪಾರುಪತ್ಯ ಮಾಡಬೇಕೆಂದು ಅವನು ಹವಣಿಸಿದನು. ವಿಕ್ರಮಾದಿತ್ಯ ಜಯಸಿಂಹರೊಡನೆ ಯುದ್ಧಮಾಡಿ ಅವರನ್ನು ಸೆರೆಹಿಡಿದುತಂದು ತನ್ನ ಆಯುಷ್ಯದೊಳಗಿನ ದೊಡ್ಡ ಗಂಡಾಂತರದ ನಿವಾರಣೆ ಮಾಡಿಕೊಳ್ಳಬೇಕೆಂದು ಅವನು ಹೊಂಚು ಹಾಕಿದನು. ತನ್ನ ಸಾಮ್ರಾಜ್ಯದೊಳಗಿನ ಎಲ್ಲ ಮಂಡಲೇಶ್ವರರಿಗೂ ಯುದ್ಧದ ಸಂವರಣೆಯನ್ನು ಒಳಿತಾಗಿ ಮಾಡಿಕೊಳ್ಳಲು ಸೂಚನೆ ಕಳುಹಿಸಿದನು. ಕೊಂಕಣದ ಶಿಲಾಹಾರ ರಾಜರನ್ನೂ ಗೋಪಕಪಟ್ಟಣದ ಕದಂಬ ರಾಜನಾದ ಜಯಕೇಶಿಯನ್ನೂ ತನ್ನ ನೆರವಿಗೆ ಕರೆದನು. ಸೋಮೇಶ್ವರನ ಈ ಕಾರಸ್ಥಾನವು ಬಳ್ಳಿಗಾವಿಯಲ್ಲಿದ್ದ ವಿಕ್ರಮಾದಿತ್ಯನಿಗೆ ತಿಳಿಯಿತು. ಕೂಡಲೇ ಅವನು ದಂಡಯಾತ್ರೆಯನ್ನು ಕೈ

ಕೊಂಡನು. ಕರ್ನಾಟಕ ಸಾಮ್ರಾಜ್ಯದೊಳಗಿನ ಎಲ್ಲ ಮಂಡಲೇಶ್ವರರನ್ನು ಅಂಕಿತರನ್ನಾಗಿ ಮಾಡಿಕೊಂಡು ಬಿಟ್ಟರೆ ಸೋಮೇಶ್ವರನ ಶಕ್ತಿಯು ತಾನಾಗಿಯೇ ಹ್ರಾಸವಾಗುವದೆಂದು ಅವನು ಬಗೆದನು. ಅವನು ದೊಡ್ಡ ಸೈನ್ಯದೊಡನೆ ಕೊಂಕಣ ಪ್ರಾಂತಕ್ಕೆ ದಂಡೆತ್ತಿ ಹೋದನು. ಅವನ ದೊಡ್ಡ ದಂಡನ್ನು ತಡೆಯುವ ಸಾಮರ್ಥ್ಯವಿಲ್ಲದ ಅಲ್ಲಿಯ ಸಿಲಾಹಾರ ರಾಜರು ಮೊರೆಹೊಕ್ಕು ಒಪ್ಪಂದ ಮಾಡಿಕೊಂಡರು. ಈ ಒಪ್ಪಂದದಿಂದ ಕೊಂಕಣವು ವಿಕ್ರಮಾಂಕನ ಆಧಿಪತ್ಯಕ್ಕೊಳಗಾಯಿತು. ತರುವಾಯ ಅವನು ಗೋಪಕಪಟ್ಟಣದ ಮೇಲೆ ದಂಡೆತ್ತಿ ಹೋದನು. ಅಲ್ಲಿಯ ಕದಂಬ ಅರಸನಾದ ಜಯಕೇಶಿಯು ವಿಕ್ರಮಾದಿತ್ಯನನ್ನು ಎದುರಿಸುವ ಸಾಮರ್ಥ್ಯವು ತನ್ನಲ್ಲಿಲ್ಲವೆಂದು ಬಗೆದು, ಶರಣು ಬಂದು ಯಥೇಷ್ಟವಾಗಿ ಕಪ್ಪಕಾಣಿಕೆಗಳನ್ನೊಪ್ಪಿಸಿ ಮಾಂಡಲಿಕತ್ವವನ್ನು ಒಪ್ಪಿದನು. ತರುವಾಯ ವಿಕ್ರಮನು ಕೇರಳ ನಾಡನ್ನು ನುಗ್ಗಿದನು. ಕೇರಳಾಧಿಪತಿಯು ಉನ್ಮತ್ತತನದಿಂದ ಅವನನ್ನು ಎದುರಿಸಿದನು. ಭೀಕರವಾದ ಸಂಗ್ರಾಮವು ನಡೆಯಿತು. ಕಾಳಗದಲ್ಲಿ ವಿಕ್ರಮಾದಿತ್ಯನ ಪ್ರಚಂಡ ಶಕ್ತಿಗೆ ಅವನು ತಡೆಯಲಿಲ್ಲ. ಕೊನೆಗೆ ಅವನು ಸೋತು ಒಪ್ಪಂದ ಮಾಡಿಕೊಂಡು ವಿಕ್ರಮನ ಮಾಂಡಲಿಕನಾಗಲೊಪ್ಪಿದನು. ತರುವಾಯ ಮಹಾವಿಜಯಿಯಾದ ವಿಕ್ರಮನು ಅಲೂಪ ನಾಡನ್ನು ನುಗ್ಗಿದನು. ಅಲ್ಲಿಯ ಅರಸನು ಜಾಣತನದಿಂದ ಅವನೊಡನೆ ಒಡಂಬಡಿಕೆ ಮಾದಿಕೊಂಡು ಹೇರಳವಾದ ಕಪ್ಪಕಾಣಿಕೆಗಳನ್ನೊಪ್ಪಿಸಿದನು. ಇಷ್ಟೆಲ್ಲ ವಿಜಯಗಳನ್ನು ದೊರಕಿಸಿದ ಮೇಲೆ ಕಲಿವಿಕ್ರಮನು ತುಂಗಭದ್ರೆಯನ್ನು ದಾಟಿ ಚೋಳರಾಜ್ಯವನ್ನು ಹೊಕ್ಕನು.

ಅಣ್ಣೀಗೇರಿಯ ಕಾಳಗದಲ್ಲಿ ಕೋಪರ ಕೇಸರಿವರ್ಮ ರಾಜೇಂದ್ರ ದೇವ ಚೋಳನು ಸೋತು ಮಡಿದ ಸಂಗತಿ ಹಿಂದೆ ಹೇಳಿದೆ. ಅವನ ತರುವಾಯ ರಾಜಕೇಸರಿವರ್ಮನು ಪಟ್ಟಕ್ಕೆ ಕುಳಿತಿದ್ದನು. ಇವನಿಗೆ ವೆಂಗಿಯ ಚಾಲುಕ್ಯ ಅರಸನಾದ ರಾಜಿಗನು ಕಡುಹಗೆಯಾಗಿದ್ದನು. ಅವನು ಕಂಚಿಯ ರಾಜ್ಯವನ್ನು ಕೈವಶ ಮಾಡಿಕೊಳ್ಳಲು ಸಾಹಸ ನಡೆಯಿಸಿದ್ದನು. ಆದುದರಿಂದ ರಾಜಕೇಸರಿವರ್ಮನಿಗೆ ವಿಕ್ರಮಾದಿತ್ಯನಂತಹ

ಪ್ರತಾಪಶಾಲಿಯ ಸಹಾಯದ ಅವಶ್ಯಕತೆಯಿತ್ತು. ವಿಕ್ರಮಾದಿತ್ಯನು ತನ್ನ ರಾಜ್ಯವನ್ನು ನುಗ್ಗಿದೊಡನೆಯೆ ಅವನು ರಾಯಭಾರಿಯನ್ನು ಕಳುಹಿಸಿ ಅವನೊಡನೆ ಒಪ್ಪಂದ ಮಾಡಿಕೊಂಡನು. ವಿಕ್ರಮಾದಿತ್ಯನು ತುಂಗಭದ್ರಾ ನದಿಯ ಬಡಗಣ ದಂಡೆಯ ಮೇಲೆ ಪಾಳಯ ಹಾಕಿಕೊಂಡಿರಬೇಕೆಂದೂ, ರಾಜಕೇಸರಿವರ್ಮನು ತನ್ನ ಮಗಳನ್ನು ವಿಕ್ರಮಾದಿತ್ಯನ ಪಾಳಯಕ್ಕೆ ಕರೆದೊಯ್ದು ಅವನಿಗೆ ಮದುವೆ ಮಾಡಿಕೊಡಬೇಕೆಂದೂ, ಪರಶತ್ರುಗಳ ಬಾಧೆಯುಂಟಾದಾಗ ಒಬ್ಬರಿಗೊಬ್ಬರು ನೆರವಾಗಬೇಕೆಂದೂ ಶರ್ತುಗಳಾಗಿ ಒಡಂಬಡಿಕೆಯು ಮುಗಿಯಿತು.

ರಾಜಕೇಸರಿ ವರ್ಮನು ವಿಕ್ರಮಾದಿತ್ಯನೊಡನೆ ಒಪ್ಪಂದ ಮಾಡಿಕೊಂಡು ಅವನಿಗೆ ತನ್ನ ಮಗಳನ್ನು ಕೊಟ್ಟದ್ದು ಚೋಳ ಸರದಾರರ ಮನಸ್ಸಿಗೆ ಬರಲಿಲ್ಲ. ಅವರು ತಮ್ಮ ರಾಜನ ವಿರುದ್ಧವಾಗಿ ಸಂಚು ನಡೆಯಿಸಿದರು. ರಾಜಕೇಸರಿ ವರ್ಮನು ಮಗಳ ಮದುವೆ ಮಾಡಿ ರಾಜಧಾನಿಗೆ ಬಂದ ಕೆಲ ದಿನಗಳಲ್ಲಿಯೇ ಕೊಲೆಗೀಡಾದನು. ಈ ಸಂಗತಿಯು ವಿಕ್ರಮಾದಿತ್ಯನಿಗೆ ತಿಳಿದೊಡನೆಯೇ ದೊಡ್ಡ ದಂಡಿನೊಡನೆ ಚೋಳ ರಾಜ್ಯವನ್ನು ನುಗ್ಗಿ ಚೋಳರ ಹೊಸ ರಾಜದಾನಿಯಾದ ಗಾಂಗಕುಂಡ ಚೋಳಪುರವನ್ನು ವಶಪಡಿಸಿಕೊಂಡು ತನ್ನ ಹೆಂಡತಿಯ ಅಣ್ಣನಿಗೆ ಕಂಚಿಯ ಪಟ್ಟವನ್ನು ಕಟ್ಟಿ ಅಲ್ಲಿ ಶಾಂತತೆ ನೆಲೆಯಿಸಿದಮೇಲೆ ತುಂಗಭದ್ರಾ ತೀರಕ್ಕೆ ಬಂದನು. ಮುಂದೆ ತುಸು ದಿನಗಳಲ್ಲಿಯೆ ವೆಂಗಿಯ ಅರಸನಾದ ರಾಜಿಗನು ಕಂಚಿಯನ್ನು ಹಿಡಿದುಕೊಂಡು ವಿಕ್ರಮಾದಿತ್ಯನ ಬೀಗನನ್ನು ಕೊಲ್ಲಿಸಿದನು. ಈ ಸಂಗತಿಯು ತಿಳಿದೊಡನೆಯೇ ವಿಕ್ರಮಾದಿತ್ಯನು ಉರಿದೆದ್ದನು. ಅವನು ರಾಜಿಗನಿಗೆ ಶಾಸನ ವಿಧಿಸಲು ಸಿದ್ಧತೆ ಸಾಗಿಸಿದನು. ರಾಜಿಗನಾದರೂ ವಿಕ್ರಮಾದಿತ್ಯನನ್ನು ಹಣಿಯುವಬಗ್ಗೆ ಸಾಹಸ ಮಾಡತೊಡಗಿದನು. ಅವನು ವಿಕ್ರಮನ ಹಗೆಯಾಗಿದ್ದ ಅವನ ಅಣ್ಣ ಸೋಮೇಶ್ವರನನ್ನು ನೆರವಿಗಾಗಿ ಕರೆದನು. ರೋಗಿ ಬಯಸಿದ್ದು ಹಾಲೋಗರ, ವೈದ್ಯ ಹೇಳಿದ್ದು ಹಾಲೋಗರ ಎಂಬಂತೆ ರಾಜಿಗನ ಬೇಡಿಕೆಯಿಂದ ಸೋಮೇಶ್ವನಿಗೆ ಅತ್ಯಾನಂದವಾಯಿತು. ವಿಕ್ರಮನು ಕಲಿತನದ

ಮದದಿಂದ ಮನಸೋಕ್ತವಾಗಿ ನಡೆಯತೊಡಗಿರುವನೆಂದು ಬಗೆದ ಸೋಮೇಶ್ವರನು ಅವನ ಉಬ್ಬಾಳುತನ ತಗ್ಗಿಸಲು ಸುಸಮಯ ಒದಗಿತೆಂದು ಹಿಗ್ಗಿ ತನ್ನ ಸೈನ್ಯವನ್ನು ಸಜ್ಜುಗೊಳಿಸತೊಡಗಿದನು.

ಸೋಮೇಶ್ವರನ ಕೃತ್ಯವೂ ಅವನ ಒಲವೂ ಕರ್ನಾಟಕದ ಸಾಮ್ರಾಜ್ಯ ಹಿತೈಷಿಗಳಾದ ಕರ್ಮಚಾರಿಗಳಿಗೆ ಸರಿದೋರಲಿಲ್ಲ. ಮಹಾ ಮಂತ್ರಿಯಾದ ಬಲದೇವಯ್ಯನು ಅವನ ಈ ಸಾಹಸಕ್ಕೆ ಕಡುವಿರೋಧಿಯಾಗಿದ್ದನು. ಮಹಾ ಸೇನಾಪತಿಯಾದ ಕೇಶವಾದಿತ್ಯನಂತು ದಂಡಯಾತ್ರೆಗೆ ಹೊರಡಲು ಎಷ್ಟೂ ಉತ್ಸಾಹವನ್ನು ತೋರಿಸುತ್ತಿರಲಿಲ್ಲ. ಸೋಮೇಶ್ವರನು ಇಂತಹ ಪ್ರತಿಕೂಲತೆಯಲ್ಲಿ ಸಮರಸನ್ನಾಹ ನಡೆಯಿಸಿದ್ದನು. ಅವನಿಗೆ ಲಕ್ಷ್ಮರಸರಂತಹ ಕೆಲವು ಸರದಾರರ ಹಾಗು ಮಂಡಲೇಶ್ವರರ ಸಹಾಯವಿತ್ತು. ಆ ಸಹಾಯದಮೇಲೆ ಭರವಸೆ ಇಟ್ಟು ಅವನು ಕಾಳಗದ ಕೆಲಸ ಪ್ರಾರಂಭಿಸಿದ್ದನು. ಚಾಲುಕ್ಯ ಸಾಮ್ರಾಜ್ಯದ ವೈಭವವನ್ನು ಬೆಳೆಯಿಸಿದ ವಿಕ್ರಮಾದಿತ್ಯನ ವಿರುದ್ಧವಾಗಿ ಸೋಮೇಶ್ವರನು ನಿಂತದ್ದು ನೋಡಿ ಬಲದೇವಯ್ಯನು ಬಹುಪರಿಯಾಗಿ ಮಿಡುಕಿದನು. ಈ ಒಳ ಜಗಳವು ಚಾಲುಕ್ಯರ ವೈಭವವನ್ನು ನಷ್ಟಪಡಿಸದಿರಲಾರದೆಂದು ಅವನು ಬಗೆದನು. ಈ ಸಂಧಿಯಲ್ಲಿ ಸೋಮೇಶ್ವರನನ್ನು ದಾರಿಗೆ ತಾರದೆ ಹೋದರೆ, ಅಪಾಯವುಂಟೆಂದು ಬಗೆದು, ಅವನು ಒಡೆಯನನ್ನು ಕಂಡು ಬುದ್ಧಿ ಹೇಳುವದಕ್ಕಾಗಿ ಅರಮನೆಗೆ ಬಂದನು.

ಅರಮನೆಯಲ್ಲಿ ಸೋಮೇಶ್ವರನೂ ಅವನ ಪಟ್ಟಮಹಿಷಿಯಾದ ಅಂಬಿಕಾದೇವಿಯೂ ಕುಳಿತಿದ್ದರು. ಅಂಬಿಕಾದೇವಿಯು ತನ್ನ ಪತಿಗೆ ಅವನು ನಡಿಸಿದ ಅವಾಸ್ತವ ಕಾರ್ಯದಸಲುವಾಗಿ ಬುದ್ಧಿವಾದ ಹೇಳತೊಡಗಿದ್ದಳು. ಇದೇ ಹೊತ್ತಿನಲ್ಲಿ ಬಲದೇವಯ್ಯನ ಆಗಮನದ ಮರ್ಮವು ಸೋಮೇಶ್ವರನಿಗೆ ತಿಳಿಯದೆ ಇರಲಿಲ್ಲ. ಅವನು ಮಂತ್ರಿಯನ್ನು ಬರಮಾಡಿಕೊಂಡು— "ಮತ್ತೇನು ಮಹಾಪ್ರಧಾನರೆ? ಇಂದು ಅಕಲ್ಪಿತವಾಗಿ ಆಗಮನವಾಯಿತು?"

"ಮತ್ತೇನೂ ಇಲ್ಲ. ನಾನು ತಮ್ಮ ನಿರೋಪ ಪಡೆಯುವದಕ್ಕೆ ಬಂದಿರುವೆನು. ಇನ್ನು ನನಗೆ ಚಾಲುಕ್ಯ ಸಾಮ್ರಾಜ್ಯದ ಸೇವೆ ಮಾಡಿ ಕೊಂಡಿರುವ ಮನಸ್ಸಿಲ್ಲ, ಕಲ್ಯಾಣ ರಾಜಧಾನಿಯಲ್ಲಿರಲೂ ಇಚ್ಛೆಯಿಲ್ಲ."

"ಬಲದೇವಯ್ಯನವರೆ, ನಿಮ್ಮ ಮನಸ್ಸಿನ ಒಲವು ನನಗೆ ತಿಳಿದಿದೆ. ನೀವು ವಿಕ್ರಮನ ಪಕ್ಷಪಾತಿಗಳು. ನೀವು ರಾಜಧಾನಿಯಿಂದ ತೊಲಗಿ ವಿಕ್ರಮಾದಿತ್ಯನನ್ನು ಕೂಡುವ ಇಚ್ಛೆಯುಳ್ಳವರಾಗಿರುವಿರಿ."

"ಹಾಗೆ ತಿಳಿದುಕೊಳ್ಳಕೂಡದು. ನಾನು ನಿಮ್ಮಿಬ್ಬರನ್ನೂ ಒಂದೇ ದೃಷ್ಟಿಯಿಂದ ನೋಡುತ್ತಿರುವೆನು. ನನಗೆ ಇಬ್ಬರು ಮಹಾರಾಜರೂ ಅಷ್ಟೇ ಪೂಜ್ಯರಿರುವಿರಿ. ಮುಖ್ಯವಾಗಿ ಚಾಲುಕ್ಯ ಸಿಂಹಾಸನಕ್ಕೆ ಕರ್ನಾಟಕ ಸಾಮ್ರಾಜ್ಯಕ್ಕೆ, ಚಾಲುಕ್ಯರ ವೈಭವಕ್ಕೆ ಧಕ್ಕೆ ಯಾಗಬಾರದೆಂದು ನನ್ನ ಉತ್ಕಟೇಚ್ಛೆಯಿದೆ, ಈ ಮಾತಿಗೆ ನೀವಾಗಲಿ ವಿಕ್ರಮಾದಿತ್ಯರಾಗಲಿ ವಿರೋಧಿಯಾಗಿ ನಡೆದರೆ ಅದು ನನಗೆ ಸಹನವಾಗಲಾರದು. ನಿಮ್ಮ ಸಧ್ಯದ ಆಚರಣೆಯು ಕರ್ನಾಟಕ ಸಾಮ್ರಾಜ್ಯವನ್ನು ಅವನತಿಗೀಡುಮಾಡಲು ಕಾರಣೀಭೂತವಾಗುತ್ತಲಿದೆ. ಯಾವ ಉದ್ಯೋಗದಿಂದ ಸುಖಪಡೆಯಲು ಇಚ್ಛಿಸುವಿರೋ ಅದೇ ಉದ್ಯೋಗವು ಸುಖವೀಯುವದಕ್ಕೆ ಪ್ರತಿಯಾಗಿ ದುಃಖತನದಲ್ಲಿ ದೂಡಲು ಪ್ರವೃತ್ತವಾಗುವದೆಂಬದರ ಕಲ್ಪನೆ ನಿಮಗಿಲ್ಲ. ನಾನಿನ್ನು ಓಲಗದಲ್ಲಿದ್ದು ಮುಂದೊದಗಬಹುದಾದ ಅನಿಷ್ಟ ಪರಂಪರೆಗಳನ್ನು ನೋಡಲಾರದವನಾಗಿರುವೆನು. ಅಂತೆಯೇ ನಾನು ಇಂದು ನಿಮ್ಮ ನಿರೋಪಹೊಂದಲು ಬಂದಿರುವೆನು. ನೀವು ನಿಮ್ಮ ಕಾರ್ಯದಲ್ಲಿ ಸಹಕಾರಿಗಳಾದಂತಹರನ್ನು ನಿಮ್ಮ ರಾಜಕಾರಣದಲ್ಲಿ ತೊಡಗಿಸಿಕೊಂಡು ಮನಸ್ವಿಯಾಗಿ ನಡೆಯಬಹುದು. ನನ್ನ ಮಾತಿನ ಅನುಭವವು ಈಗ ನಿಮಗಾಗಲು ಸಾಧ್ಯವಿಲ್ಲ. ಯೋಗ್ಯ ಕಾಲದಲ್ಲಿ ಮಂತ್ರಿಯ ಮಂತ್ರಾಲೋಚನೆಯನ್ನು ಪೇಕ್ಷಿಸಿದೆನಲ್ಲ ಎಂಬ ಪಶ್ಚಾತ್ತಾಪ ವಾಣಿಯು ನಿಮ್ಮ ಮುಖದಿಂದ ಹೊರಡಬಹುದು. ಭವಿತವ್ಯವನ್ನು ತಪ್ಪಿಸುವದು ಯಾರಿಂದಲೂ ಆಗದು. ಮಹಾರಾಜರೆ, ಹೆಚ್ಚು ಮಾತಾಡಿದ್ದಕ್ಕೆ ಕ್ಷಮೆ ಯಿರಲಿ. ನಿಮ್ಮ ಆಳಿಕೆ ಪ್ರಜಾರಂಜನಕಾರಿಯಿಲ್ಲ. ನೀವು

ಕೇವಲ ವಿಲಾಸಮಗ್ನರು. ನಿಮ್ಮಲ್ಲಿ ರಾಜಕಾರಣಪಟುತ್ವವಿಲ್ಲ. ಇಂತಹ ಸ್ಥಿತಿಯಲ್ಲಿ ಕೂಡಾ ನಿಮ್ಮ ಪ್ರತಾಪಶಾಲಿ ಬಂಧುವಿನ ಸಹಾನುಭೂತಿಗೆ ಎರವಾದಿರಿ; ಇಷ್ಟೇ ಅಲ್ಲ, ಅವನಿಗೆ ಅಪಾಯವನ್ನುಂಟುಮಾಡಲು ಸಾಹಸಪಡುತ್ತಿರುವಿರಿ. ಸ್ವಾರ್ಥಕ್ಕಾಗಿ ಸೈ ಸೈ ಅನ್ನುವ ಜನ ಜಂಗುಳಿಯ ಬೆನ್ನು ಹತ್ತಿರುವಿರಿ. ನಿಮಗೂ ಕರ್ನಾಟಕ ಸಾಮ್ರಾಜ್ಯಕ್ಕೂ ಅನೇಕಾನೇಕ ಉಪಕಾರಗಳನ್ನು ನೀಡಿದ ಆ ಮಹಾತ್ಮನ— ನರಶಾರ್ದೂಲ ವೀರ ವಿಕ್ರಮಾದಿತ್ಯನ ನಾಶಕ್ಕಾಗಿ ದೀರ್ಘ ಸಾಹಸ ನಡೆಯಿಸಿರುವಿರಿ. ನೀವು ಮಾಡುವದು ನಿಮಗೆ ಚಂದ. ಮಹಾರಾಜರೆ, ಸದ್ಯದ ನಿಮ್ಮ ಓಟದಲ್ಲಿ ನಾನು ಏನು ಹೇಳಿದರೂ ಬೋರ್ಕಲ್ಲಮೇಲೆ ಮಳೆಗರೆದಂತಾಗುವದು. ಆದುದರಿಂದ ಹೆಚ್ಚು ಮಾತಾಡಿ ಮತ್ತಿಷ್ಟು ನಿಮ್ಮ ವಿರೋಧವನ್ನುಂಟುಮಾಡುವ ಯೋಚನೆ ನನ್ನದಿಲ್ಲ. ನನಗೆ ನಿರೋಪ ಕೊಡಿರಿ. ”

ಬಲದೇವಯ್ಯನು ಕೈ ಜೋಡಿಸಿ ಹೀಗೆ ಮಾತಾಡಿದ ಕೂಡಲೆ ಸೋಮೇಶ್ವರನ ಕಣ್ಣುಗಳು ಕೆಂಪಗಾದವು. ಆಗ ಅವನು— “ ಮಹಾಮಂತ್ರಿಗಳೆ, ನಿಮ್ಮ ಧೋರಣವು ನನಗೆ ಅರಿಯದೆ ಇಲ್ಲ. ನೀವು ಬಹಿರಂಗವಾಗಿ ನನ್ನ ಹಿತೈಷಿಗಳಾಗಿ ನಟಿಸುತ್ತಿದ್ದರೂ, ನಿಮ್ಮ ಅಂತರಂಗವು ಆ ನೀಚ ವಿಕ್ರಮನ ಕಡೆಗೆ ಧಾವಿಸುತ್ತಲಿದೆಯೆಂಬದನ್ನು ನಾನು ಬಲ್ಲೆನು. ನಾನು ನಿಮ್ಮನ್ನು ಮಹಾಮಂತ್ರಿಪದದಿಂದ ಕಿತ್ತುಹಾಕಿರುವೆನು. ಆದರೆ ನಿಮಗೆ ಕಲ್ಯಾಣ ರಾಜಧಾನಿಯಿಂದ ಹೊರ ಹೊರಡಲು ಅವಕಾಶವಿಲ್ಲ. ಸಧ್ಯದ ಕ್ಷುಬ್ಧ ವಾತಾವರಣವು ಶಾಂತವಾಗುವವರೆಗೆ ನೀವು ಕಣ್ಣುಸೆರೆಯಲ್ಲಿರತಕ್ಕದ್ದು. ನೀವೂ ಕೇಶವಾದಿತ್ಯ ಮಹಾ ಸೇನಾಪತಿಗಳೂ ಒಂದೇ ಅಭಿಪ್ರಾಯವುಳ್ಳವರಿರುವ ಮೂಲಕ ಅವರನ್ನಾದರೂ ಸೆರೆಯಲ್ಲಿರಿಸುವೆನು. ನೀವಿಲ್ಲದೆ ಚಾಲುಕ್ಯ ಸಾಮ್ರಾಜ್ಯದ ರಾಜಕಾರಣವು ಕುಂಠಿತವಾಗುವದೆಂಬ ನಿಮ್ಮ ಭ್ರಮೆಯು ನಿರಸನ ಹೊಂದುವವರೆಗಾದರೂ ನೀವು ಸೆರೆಯ ಸುಖವನ್ನು ಹೊಂದಲೇಬೇಕಾಗುವದು. ”

“ ಮಹಾರಾಜರವರು ಅಪೇಕ್ಷೆಇದ್ದಹಾಗೆ ವರ್ತಿಸಬಹುದು. ಹೊರಗಿನ ಅನಿಷ್ಟ ಪ್ರಸಂಗಗಳನ್ನು ಕಣ್ಣಾರೆ ನೋಡುವದಕ್ಕಿಂತ ಕಣ್ಣುಮುಚ್ಚಿ

ಕೊಂಡು ಸೆರೆಮನೆಯಲ್ಲಿರುವದೇ ಒಳಿತೆಂದು ನಾನು ಭಾವಿಸುವೆನು.” ಎಂದು ಶಾಂತಸ್ವರದಿಂದ ಬಲದೇವಯ್ಯನು ಉತ್ತರಿಸಿದನು.

ಮಹಾಮಂತ್ರಿಯ ಮಾತು ಕೇಳಿ ಮಂಚದಮೇಲೆ ಕುಳಿತಿದ್ದ ಅಂಬಿಕಾದೇವಿಗೆ ವಿಷಾದವಾಯಿತು. ಆಗ ಅವಳು ಪತಿಯನ್ನು ಕುರಿತು—“ ನೀವು ನಿಷ್ಕಲ್ಮಷ ಹೃದಯದ ಅಮಾತ್ಯರ ಭಾಷೆಯನ್ನು ಉಪೇಕ್ಷಿಸಬಾರದು. ಅವರ ಅಭಿಪ್ರಾಯವು ನಿರರ್ಥಕವಾದುದಲ್ಲವೆಂದು ನನ್ನ ಭಾವನೆ ರೂಪಭಟ್ಟಯ್ಯನವರು ಇವರಂತೆಯೆ ಅಭಿಪ್ರಾಯವುಳ್ಳವರಿದ್ದರು. ವಿಕ್ರಮಾದಿತ್ಯರಿಂದಲೇ ಕರ್ನಾಟಕ ಸಾಮ್ರಾಜ್ಯವು ವೈಭವಶಾಲಿಯಾಗುವದೆಂದು ಅವರು ಆಗಿಂದಾಗ ಅನ್ನುತ್ತಿದ್ದರು. ನೀವು ನಿಮ್ಮ ತಮ್ಮನ ಸಹಕಾರಹೊಂದಿ ಸಾಮ್ರಾಜ್ಯದ ಉತ್ಕರ್ಷೆಯನ್ನು ಸಾಧಿಸಿರಿ. ಈಗಾಗಲೇ ವಿಕ್ರಮಾದಿತ್ಯರು ಕರ್ನಾಟಕದೊಳಗಿನ ಎಲ್ಲ ಮಂಡಲೇಶ್ವರರನ್ನು ಕೈಯಲ್ಲಿ ತೆಗೆದುಕೊಂಡಿರುವರು. ವಿಕ್ರಮಾರ್ಜಿತ ಸತ್ವಶಾಲಿಗಳು ಅವರು; ನಿಮ್ಮಹಾಗೆ ಅವರು ಪರಪ್ರಕಾಶಿತ ಗ್ರಹವಲ್ಲ; ಸ್ವ ಪ್ರಕಾಶಿತ ರವಿಯಂತಿರುವರು. ಅಂತಹ ರವಿಗೆ ನಿಮ್ಮಂತಹ ರಾಹುವು ಎಷ್ಟುಕಾಲ ತೊಂದರೆ ಕೊಡಲು ಸಮರ್ಥವಾಗಬಹುದು ?

“ ವಿಕ್ರಮನು ರವಿಯೆ ? ”

“ ವಿಕ್ರಮನ ಹೆಸರಿನ ಮುಂದೆ ಆದಿತ್ಯ ಎಂಬ ಹೆಸರು ಸಾರ್ಥಕವಾಗಿಯೆ ಇರುವದು; ಅದು ನಿರರ್ಥಕವಲ್ಲ. ”

“ ನಾನು ರಾಹುವೆ ? ”

“ ವಿಕ್ರಮರ ಸಾಹಸ ಕಾರ್ಯಗಳಿಗೆ ಅಡ್ಡಿ ಆತಂಕಗಳನ್ನು ತರುತ್ತ ಅವರ ಸುವಿಶಾಲ ಹಾಗು ಧವಳ ಕೀರ್ತಿಗೆ ಕುಂದು ತರುವಹಾಗೆ ಯತ್ನಿಸುತ್ತ ಕರ್ನಾಟಕ ಸಾಮ್ರಾಜ್ಯಕ್ಕೂ ಸಾಮ್ರಾಜ್ಯದೊಳಗಿನ ಪ್ರಜೆಗಳಿಗೂ ಶನಿಗ್ರಹದಂತೆ ಪೀಡೆಯೀಯುತ್ತ ವಿಕ್ರಮಾದಿತ್ಯರಿಗೆ ರಾಹುವಿನೋಪಾದಿಯಲ್ಲಿ ಕಾಡುತ್ತ ಮನಸೋಕ್ತವಾಗಿ ನಡೆಯುವ ನೀವು ರಾಹುವಲ್ಲದೆ ಮತ್ತೇನು ? ಅವರು ರವಿ, ನೀವು ರಾಹು ! ”

" ಓಹೋ ! ಹೀಗೇನು ? ಅವನು ರವಿ, ನಾನು ರಾಹು !"

" ಈ ಮಾತಿನಲ್ಲಿ ಸಂದೇಹವಿಲ್ಲ. "

" ಒಳ್ಳೇದು, ನಿನಗೆ ಸಂದೇಹವಿರಲಿಕ್ಕಿಲ್ಲ. ನನಗೆ ಸಂದೇಹವಿದೆ ಈ ಸಂದೇಹವು ದೂರಾಗುವವರೆಗೆ ನೀನು ಸೆರೆಯಲ್ಲಿರಬೇಕು. "

ಕ್ಷುದ್ರನಾದ ಸೋಮೇಶ್ವರನು ಪ್ರಧಾನಮಾತ್ಯ ಬಲದೇವಯ್ಯನನ್ನೂ ಪಟ್ಟ ಮಹಿಷಿ ಅಂಬಿಕಾದೇವಿಯನ್ನೂ ಕಾರಾಗೃಹದಲ್ಲಿರಿಸಿದನು. ಇಷ್ಟಲ್ಲದೆ ವಿಕ್ರಮಾದಿತ್ಯನ ಪಕ್ಷಪಾತಿಗಳೆಂದು ಸಂಶಯ ಬಂದವರನ್ನೆಲ್ಲ ಅವನು ಸೆರೆಯಲ್ಲಿರಿಸಿದನು. ಕೇವಲ ಕಲ್ಯಾಣ ರಾಜಧಾನಿಯಲ್ಲಷ್ಟೇ ಅಲ್ಲ ಸಾಮ್ರಾಜ್ಯದಲ್ಲಿ ತನ್ನ ವರ್ಚಸ್ವವಿದ್ದಕಡೆಯಲ್ಲಿಯ ವಿಕ್ರಮ ಪಕ್ಷಪಾತಿಗಳು ಸೆರೆಮನೆಯ ಸಂಗಡಿಗರಾದರು. ಸಾಮ್ರಾಜ್ಯದಲ್ಲಿ ಹಾ ಹಾಕಾರವೆದ್ದಿತು. ಸೋಮೇಶ್ವರನ ಆಳಿಕೆಯು ರಾವಣೇಶ್ವರನ ಆಳಿಕೆಯಾಗಿ ಪರಿಣಮಿಸಿತು !

---

## ೧೩ ತುಂಗೆಭದ್ರೆಯ ತೆಂಕಣ ಕಾಳಗ !

ಶೀಘ್ರಗಾಮಿಯಾದ ತುಂಗಭದ್ರೆಯು 'ಖಳ-ಖಳ' ನಿನಾದದಿಂದ ಸಾಗಿದ್ದಳು. ಮಂಗಲ ಪ್ರಭಾತ ಸಮಯದ ತಾಮ್ರವರ್ಣದ ಅರುಣ ಕಾಂತಿಯಿಂದ ಪಾವನಕರವಾದ ತುಂಗಭದ್ರಾ ಜಲವು ತಾಮ್ರ ವರ್ಣವಾಗಿ ಪರಿಶೋಭಿಸತೊಡಗಿತ್ತು. ನದೀ ತಟಾಕದಲ್ಲಿ ಬೀಡು ಬಿಟ್ಟಿದ್ದ ವಿಕ್ರಮಾದಿತ್ಯನ ಶಿಬಿರದಲ್ಲಿ ಪ್ರಾತಃಕಾಲದ ರಣಭೇರಿಯು 'ಧುಡುಂ - ಧುಡುಂ' ಎಂದು ನಿನಾದ ಮಾಡತೊಡಗಿತ್ತು. ಅವನ ಮಹಾಸೇನೆಯೊಳಗಿನ ಸೈನಿಕರು ನದೀ ಸ್ನಾನ ಮಾಡುವದರಲ್ಲಿ ತೊಡಗಿದ್ದರು. ಎಲ್ಲಡೆಯಲ್ಲಿ ಒಳ್ಳೆಯ ಆತುರತೆ ನಡೆದಿತ್ತು. ಸೂರ್ಯೋದಯವಾಗುವಷ್ಟರಲ್ಲಿ ಎಲ್ಲ ಸೈನಿಕರು ಸಂಗ್ರಾಮಕ್ಕೆ ಸಜ್ಜಾಗಬೇಕಾಗಿತ್ತು. ವೆಂಗಿಯ ಚಾಲುಕ್ಯ ಕ್ಷಾಜನಾದ ರಾಜಿಗನ ಸೈನ್ಯಕ್ಕೆ ಎದುರಾಗಬೇಕಾಗಿತ್ತು.

ಸೂರ್ಯೋದಯವಾಗುತ್ತಲೆ ವಿಕ್ರಮಾದಿತ್ಯನ ವೀರ ಕನ್ನಡಿಗರ ಸೇನೆಯು ರಾಜಿಗನ ಸೈನ್ಯದ ಮೇಲೆ ಬಿದ್ದಿತು. ಒಳ್ಳೆಯ ನಿಕರವಾದ ಸಂಗ್ರಾಮವು ನಡೆಯಿತು. ಉಭಯ ಸೇನೆಯುವರೂ ತಮ್ಮ ವೀರಾವೇಶ ವನ್ನು ವ್ಯಕ್ತಗೊಳಿಸುತ್ತಲಿದ್ದರು. ಎರಡು ಪ್ರಹರಗಳವರೆಗೆ ನಿಕರವಾಗಿ ಕಾಳಗವು ನಡೆಯಿತು. ತರುವಾಯ ರಾಜಿಗನ ಸೇನೆಯು ಹಿಂದಕ್ಕೆ ಸರಿಯ ತೊಡಗಿತು. ತನ್ನ ಸೈನ್ಯಕ್ಕೆ ಅಪಜಯವುಂಟಾಗುವದೆಂದು ಅವನು ಎದೆಗೆಟ್ಟನು. ಇನ್ನೇನುಗತಿಯೆಂದು ಯೋಚಿಸುತ್ತಿರುವಷ್ಟರಲ್ಲಿ ದೂತ ನೊಬ್ಬನು ಅಲ್ಲಿಗೆ ಬಂದು, ಕರ್ನಾಟಕ ಸಾಮ್ರಾಟ್ ಭುವನೈಕಮಲ್ಲ ಸೋಮೇಶ್ವರ ಮಹಾರಾಜರ ಮಹಾಸೇನೆಯು ನದೀ ತೀರವನ್ನು ತಲು ಪಿದೆಯೆಂದೂ, ಅದು ನದಿಯನ್ನು ದಾಟಿ ಒಬ್ಬಳಿಯಾಗಿ ಬೇಗನೇ ಬರುವ ದೆಂದೂ ಸುದ್ದಿಯನ್ನು ತಂದನು. ಆಗ ರಾಜಿಗನಲ್ಲಿ ನವಚೈತನ್ಯವು ಉಂಟಾಯಿತು. ಅವನು ತನ್ನ ಸೈನ್ಯವನ್ನು ಹುರಿದುಂಬಿಸತೊಡಗಿದನು. ಸೋಮೇಶ್ವರ ಮಹಾರಾಜರ ಮಹಾ ಸೇನಾಸಾಗರವು ಕೆಲವು ನಿಮಿಷ ಗಳಲ್ಲಿ ಬರಲಿದೆ ಎಂಬ ಸಂಗತಿಯನ್ನು ಎಲ್ಲರಿಗೂ ತಿಳಿಸಿದನು. ಸಹಾಯಕ ಸೇನೆಯು ಬರುವದೆಂಬ ಧೈರ್ಯದಿಂದ ಚದುರಿದ ಸೈನ್ಯವು ಒಟ್ಟಾಗಿ ಮತ್ತೆ ಹೊಸ ಹುರುಪಿನಿಂದ ಯುದ್ಧ ಮಾಡಲನುವಾಯಿತು.

ಸೋಮೇಶ್ವರನು ದೊಡ್ಡ ದಂಡಿನೊಡನೆ ರಾಜಿಗನ ನೆರವಿಗೆ ಬರು ವವನಿರುವನೆಂಬ ಸಂಗತಿಯು ವಿಕ್ರಮಾದಿತ್ಯನಿಗೆ ಮೊದಲೇ ಗೊತ್ತಿತ್ತು. ಆ ಸೈನ್ಯದೊಡನೆ ಯುದ್ಧ ಮಾಡಲು ಮುಂಚಿತವಾಗಿ ಕೆಲವು ಸೈನ್ಯವನ್ನು ಅವನು ಕಾಯ್ದಿಟ್ಟಿದ್ದನು. ಆದರೆ ಇಷ್ಟು ಬೇಗನೇ ಆ ಸೈನ್ಯವು ಬರ ಬಹುದೆಂದು ಅವನ ಕಲ್ಪನೆಯಿರಲಿಲ್ಲ. ರಾಜಿಗನ ಸೈನ್ಯವು ದಕ್ಕೆಗೀಡಾಗಿ ಹೋದಬಳಿಕ ಸೋಮೇಶ್ವರನ ಸೈನ್ಯದ ಪಾರುಪತ್ಯ ಮಾಡಬೇಕೆಂದು ಅವನು ಎಣಿಕೆ ಹಾಕಿದ್ದನು. ಆದರೆ ಒಮ್ಮೆಲೆ ಇಬ್ಬರು ಪ್ರಬಲ ಶತ್ರು ಗಳೊಡನೆ ಹೋರಾಡುವ ಪ್ರಸಂಗವು ಅವನಿಗೆ ಪ್ರಾಪ್ತವಾಯಿತು. ಆದರೂ ಆ ವೀರಶಿರೋಮಣಿಯು ಎದೆಗುಂದಲಿಲ್ಲ. ಅವನು ಕಾದಿಟ್ಟ ದಳವನ್ನು ಸೋಮೇಶ್ವರನ ಸೈನ್ಯಕ್ಕೆದುರಾಗಲು ಸಿದ್ಧಗೊಳಿಸಿದನು. ವಿಕ್ರಮಾದಿತ್ಯ ನಿಗೆ ಚೋಳರ ಶಕ್ತಿಯ ಅಳತೆ ತಿಳಿದಿತ್ತು. ಆ ದಳದೊಡನೆ ಯುದ್ಧ

ಮಾಡಲು ಕೆಲ ವೀರ ಸೇನಾನಾಯಕರನ್ನು ಬಿಟ್ಟು, ತಾನು ಕಾದಿಟ್ಟ ದಳದೊಡನೆ ಸೋಮೇಶ್ವರನ ಸೈನ್ಯದ ಬರುವಿಕೆಯನ್ನು ನಿರೀಕ್ಷಿಸ ತೊಡಗಿದನು. ಸೋಮೇಶ್ವರನ ದಂಡಿನ ದಾರಿಯನ್ನು ಅವನು ಬಹಳ ವೇಳೆ ನಿರೀಕ್ಷಿಸಬೇಕಾಗಲಿಲ್ಲ. ಅದು ಕಲ್ಪನೆಗಿಂತ ಮೊದಲೇ ವಿಕ್ರಮಾ ದಿತ್ಯನ ಸೈನ್ಯಕ್ಕೆದುರಾಯಿತು. ತುಮುಲವಾದ ಕಾಳಗಕ್ಕೆ ಮೊದಲಾ ಯಿತು.

ವಿಕ್ರಮಾದಿತ್ಯನು ತನ್ನ ವೀರ ಸೈನ್ಯದೊಡನೆ ಸೋಮೇಶ್ವರನ ಸೈನ್ಯವನ್ನು ಹೊಕ್ಕನು. ಕತ್ತಿಗಳ ಕಡತ, ಬಾಣಗಳ ಸುರಿಮಳೆ, ಬಿಲ್ಲು ಗಳ ಝೇಂಕಾರ, ಕಲ್ಲುಗಳ ಸುಂಯ್ಕಾರ, ಆನೆಗಳ ಚೀರಾಟ, ಕುದುರೆ ಗಳ ಹೇಷ, ಗಾಯಾಳುಗಳ ಗೋಳಾಟ, ವೀರರ ಆರ್ಭಟ, ಮರಣೋ ನ್ಮುಖರ ಹಾಹಾಕಾರ ಮೊದಲಾದವು ದಶದಿಕ್ಕುಗಳನ್ನು ತುಂಬಿದವು. ರಣಾಂಗಣದಲ್ಲಿ ನಾಲ್ಕಾರು ಮೈಲುಗಳ ವರೆಗೆ ಹೆಣಗಳು ರಾಶಿರಾಶಿಯಾಗಿ ಬಿದ್ದವು. ನೆತ್ತರದ ಕಾಲುವೆಯು ಹರಿದು ತುಂಗಭದ್ರಾ ಜಲವನ್ನು ತಾಮ್ರವರ್ಣವಾಗಿ ಮಾರ್ಪಡಿಸಿತು. ಪ್ರತಾಪಶಾಲಿಯಾದ ವಿಕ್ರಮಾಂಕನು ಅಶ್ವಾರೋಹಿಯಾಗಿ ತನ್ನ ಸೈನ್ಯದೊಡನೆ ಅರಿಸೈನ್ಯವನ್ನು ಉಧ್ವಸ್ತ ಗೊಳಿಸತೊಡಗಿದ್ದನು. ಅವನ ವೇಗವು ವಿದ್ಯುದ್ವೇಗವನ್ನು ಹೋಲು ತ್ತಿತ್ತು. ಅವನು ತನ್ನ ದಂಡಿನವರನ್ನು ಹುರಿದುಂಬಿಸುತ್ತ ಎದುರಾಳಿ ಗಳನ್ನು ಖಂಡಿಸುತ್ತ ಕಾಲಯಮನೋಪಾದಿಯಲ್ಲಿ ಸಂಹಾರ ಕಾರ್ಯ ವನ್ನು ನಡೆಯಿಸಿದನು. ಅತ್ತ ರಾಜಿಗನ ಸೈನ್ಯದಲ್ಲಿಯೂ ವಿಕ್ರಮಾಂಕನ ದಳವಾಯಿಗಳ ವೀರಾವೇಶವು ಘನತೆಗೇರಿತ್ತು. ಮೊದಲೇ ಜರ್ಜರಿತ ರಾದ ರಾಜಿಗನ ಸೈನಿಕರು ಮತ್ತಿಷ್ಟು ಎದೆಗೆಟ್ಟರು. ಸೋಮೇಶ್ವರನ ಸಹಾಯಕ ಸೇನೆಯು ಬಂದರೂ ಅದರಿಂದ ತನಗೆ ಪ್ರಯೋಜನವಾಗ ಲಿಲ್ಲೆಂದು ರಾಜಿಗನು ನಿರಾಶೆಹೊಂದಿದನು. ಅವನು ಗಜಾರೂಢನಾಗಿ ತನ್ನ ಸೈನ್ಯವನ್ನು ಹುರಿದುಂಬಿಸತೊಡಗಿದ್ದನು. ಬರಬರುತ್ತ ಅವನ ಸೈನ್ಯವು ಹಿಂದೆ ಸರಿಯತೊಡಗಿತು. ಇನ್ನು ವಿಜಯದಾಶೆಯಿಲ್ಲವೆಂದು ಅವನು ಮನಗಂಡನು. ಇನ್ನುಮೇಲೆ ಕಾಳಗ ಮಾಡತೊಡಗಿದರೆ ರಣ ಮಾರಿಗೆ ತಾನು ತುತ್ತಾಗುವೆನೆಂದು ಮನವರಿಕೆ ಮಾಡಿಕೊಂಡನು.

ಕೂಡಲೇ ಅವನು ರಣಭೂಮಿಯಿಂದ ಕಾಲ್ದೆಗೆದನು. ಅವನ ಸೈನ್ಯವು ದಾರಿ ದೊರೆತಕಡೆಗೆ ಓಡತೊಡಗಿತು.

ಇತ್ತ ಸೋಮೇಶ್ವರನು ಎರಡೂ ಯುದ್ಧರಂಗಗಳು ಕಾಣುವಂತೆ ಎತ್ತರವಾದ ಆಸನದಮೇಲೆ ಕುಳಿತುಕೊಂಡಿದ್ದನು. ಅವನು ಮೊದ ಮೊದಲು ಆಸನದಮೇಲೆ ನಿಂತು ವೀರಧ್ವನಿ ಮಾಡತೊಡಗಿದ್ದನು. ಬರಬರುತ್ತ ತನ್ನ ಸೈನ್ಯದ ವೀರಾವೇಶವು ಕುಗ್ಗತೊಡಗಿತು. ಕೂಡಲೆ ಅವನ ಧ್ವನಿಯೂ ಕುಗ್ಗಿತು. ರಾಜಿಗನ ಸೈನ್ಯವು ದಿಕ್ಕಾಪಾಲಾದಕೂಡಲೆ ಅವನು ಆಸನದಮೇಲೆ ಕುಸಿಬಿದ್ದನು. ತನ್ನ ತಮ್ಮನಾದ ವಿಕ್ರಮಾಂಕನ ಸೈನ್ಯದ ಹೊಡತಕ್ಕೆ ತನ್ನ ದಂಡುಗಳೂ ದಳಪತಿಗಳೂ ಓಡತೊಡಗಿದ್ದರು. ನೋಡಿ, ಎದೆ ಎದೆ ಬಡಕೊಳ್ಳತೊಡಗಿದನು— "ಹೇಡಿಗಳೇ, ಓಡ ಬೇಡಿರಿ! ಕಾದಿ ಮಡಿಯಿರಿ! ಕೊನೆಗೆ ವಿಕ್ರಮನ್ನೊಬ್ಬನನ್ನಾದರೂ ಕಡಿಯಿರಿ! ನಿಮ್ಮ ವೀರತ್ವವೆಲ್ಲಿಮಾಯವಾಯಿತು? ನಾನು ಧೈರ್ಯ ವಾಗಿ ಈ ಆಸನದಮೇಲೆ ಕುಳಿತಿರುವೆನೆಂಬದನ್ನಾದರೂ ನೋಡಿ ಧೈರ್ಯ ಗೊಳ್ಳಿರಿ. ನಾನು ಓಡುವವರೆಗಾದರೂ ಹೋರಾಡಿರಿ!" ಎಂದು ಅವನು ಕೂಗುತ್ತಿದ್ದನು. ವಿಕ್ರಮಾದಿತ್ಯನ ಸೈನಿಕರ ಹೊಡೆತಕ್ಕೆ ಸೋಮೇಶ್ವರನ ಸೈನ್ಯವು ಹಣ್ಣುಗಾಯ ನೀರುಗಾಯಿಯಾಯಿತು. ಅದು ಒಡೆಯನ ಕೂಗನ್ನು ಕೇಳದೆ ಪಲಾಯನ ಮಾಡಿತು. ಸೋಮೇಶ್ವರನಿಗೆ ಓಡಿ ಹೋಗಲುಸಹ ದಾರಿ ದೊರೆಯದಾಯಿತು. ಅವನನ್ನು ವಿಕ್ರಮಾದಿತ್ಯನ ಸೈನಿಕರು ಸೆರೆಹಿಡಿದು ಶಿಬಿರಕ್ಕೆ ತಂದರು. ವಿಕ್ರಮಾದಿತ್ಯನಿಗೆ ಪರಾಭವ ಗೊಂಡ ಅಣ್ಣನ ಮುಖಾವಲೋಕನ ಮಾಡಲು ಮನಸ್ಸಾಗಲಿಲ್ಲ. ಎಷ್ಟು ವಿಧದಿಂದ ಹಿತ ಮಾಡಿದರೂ ಮತ್ತೆ ತನ್ನ ಮೇಲೂ ಸಾಮ್ರಾಜ್ಯದ ಮೇಲೂ ಅಹಿತವನ್ನೇ ಸಾಧಿಸಿದಬಗ್ಗೆ ಅವನ ವಿಷಯವಾಗಿ ವಿಕ್ರಮಾ ದಿತ್ಯನು ಅತ್ಯಂತ ಖತಿಗೊಂಡಿದ್ದನು. ಅವನು ತನ್ನ ಅಣ್ಣನನ್ನು ಕಲ್ಯಾ ಣಕ್ಕೆ ತೆಗೆದುಕೊಂಡು ಹೋಗಿ ಬಿಗಿಯಾದ ಬಂಧನದಲ್ಲಿರಿಸಿದನು. ಸೋಮೇಶ್ವರನು ಹಿರಿಯನಾದರೂ ಪಟ್ಟಬಾಧ್ಯನಾದರೂ ತನ್ನ ದುರ್ಗುಣ ಗಳಿಂದ ಬಾಧ್ಯತೆಯನ್ನು ಕಳೆದುಕೊಂಡು ಸಾಮ್ರಾಜ್ಯಸಿಂಹಾಸನಕ್ಕೆರ ವಾಗಿ ಸೆರೆಯ ಸಂಗಡಿಗನಾಗಬೇಕಾಯಿತು.

ತುಂಗಭದ್ರೆಯ ತೆಂಕಣ ಕಾಳಗದಲ್ಲಿ ಮಹಾ ವಿಜಯವನ್ನು ಸಂಪಾದಿಸಿದ ಪ್ರತಾಪನಿಧಿ ವಿಕ್ರಮಾದಿತ್ಯನು ತನ್ನ ಸೈನ್ಯದೊಡನೆ ಕಲ್ಯಾಣ ರಾಜಧಾನಿಯನ್ನು ಪ್ರವೇಶಿಸಿದನು. ಅಲ್ಲಿ ಓಲಗ ನೆರೆಯಿಸಿ ಎಲ್ಲರ ಅಭಿಪ್ರಾಯದಂತೆ ಸಿಂಹಾಸನವನ್ನೇರಿದನು. ಸೋಮೇಶ್ವರನ ಅತ್ಯಾಚಾರಕ್ಕೊಳಗಾಗಿ ಕಾರಾಗ್ರಹವಾಸಿಗಳಾಗಿದ್ದವರನ್ನೆಲ್ಲ ಮುಕ್ತಗೊಳಿಸಿದನು. ಎಲ್ಲ ಪ್ರಜಾಜನರು ಶಾಂತಿ ಸಮಾಧಾನಗಳಲ್ಲಿ ಕಾಲಕಳೆಯುವಹಾಗೆ ವ್ಯವಸ್ಥೆ ಮಾಡುವಬಗ್ಗೆ ಆಶ್ವಾಸನೆ ಕೊಟ್ಟನು.

ಸೋಮೇಶ್ವರನ ಪಟ್ಟದರಸಿಯಾದ ಅಂಬಿಕಾದೇವಿಯು ಸೆರೆಮನೆಯ ಕಷ್ಟದಿಂದಲೂ ಪತಿಯ ಅನಾಚಾರದ ವೃತ್ತಿಯಿಂದಲೂ ಜರ್ಜರಿತಳಾಗಿ ಪರಲೋಕವಾಸಿಯಾದಳು. ಮುಂದೆ ಸೋಮೇಶ್ವರನಾದರೂ ಬಹಳದಿಸ ಬಾಳಲಿಲ್ಲ. ಅವನು ತನ್ನ ಕರ್ಮದ ಫಲವನ್ನನುಭವಿಸುತ್ತ ಇಹಲೋಕ ತ್ಯಾಗ ಮಾಡಿದನು.

ವಿಕ್ರಮಾದಿತ್ಯನು ತನ್ನ ತಮ್ಮನಾದ ಜಯಸಿಂಹನನ್ನು ಬನವಾಸಿ ನಾಡಿನ ಮಹಾಮಂಡಲೇಶ್ವರನನ್ನಾಗಿ ನಿಯಮಿಸಿ, ತಾನು ಕರ್ನಾಟಕ ಸಾಮ್ರಾಜ್ಯವನ್ನು ಸುಖದ ನೆಳೆವೀಡು ಮಾಡಲು ಸಾಹಸಮಾಡತೊಡಗಿದನು.

# ೧೪ ಹೃದಯದ ಭಾವಚಿತ್ರ !

"ಸಖಿ ! ನೀನು ಜಗನ್ಮೋಹಿನಿ !"

"ಮಹಾಶ್ವೇತೆ, ನೀನು ಹೇಳುತ್ತಿರುವಂತೆ ನನ್ನ ರೂಪಲಾವಣ್ಯಗಳು ಇದ್ದರೂ ಅದರಿಂದ ನಿಷ್ಪ್ರಯೋಜಕ."

"ಅದೇಕೆ ದೇವೀ ? ರಾಜರಾಜೇಶ್ವರಿಯಾಗಲು ತಕ್ಕದ್ದಾದ ನಿನ್ನ ಲಾವಣ್ಯವು ಎಂದಾದರೂ ನಿರರ್ಥಕವಾಗಬಹುದೆ ?"

"ರಾಜರಾಜೇಶ್ವರಿಯಾಗಲು ನನ್ನ ಲಾವಣ್ಯವು ಯೋಗ್ಯವಿದ್ದರೂ ಯೋಗಾಯೋಗವು ಹಾಗೆ ಇದ್ದಹಾಗೆ ತೋರುವದಿಲ್ಲ."

"ಅದೇಕೆ ಸಖಿ ?"

"ತಂದೆಯವರಾದ ಮಾರಸಿಂಹರು ನನ್ನನ್ನು ಕಾಶ್ಮೀರದ ಹರ್ಷ ಮಹಾರಾಜರಿಗೆ ಕೊಡಲು ಮನಸ್ಸು ಮಾಡಿರುವರು."

"ಕಾಶ್ಮೀರದ ಹರ್ಷರಾಜರೇನು ಮಾಂಡಲಿಕರಲ್ಲ. ಸ್ವತಂತ್ರ ರಾಜರಿರುವರು. ಅವರು ಸಣ್ಣ ಸಾರ್ವಭೌಮರಂತಿರುವರೆಂದು ಕೇಳುತ್ತೇನೆ. ರೂಪದಲ್ಲಿಯೂ ಅಗ್ರೇಸರರಿರುವರೆಂಬದು ನಿನಗೂ ಗೊತ್ತಿದೆ. ಗುಣಾಢ್ಯರೂ ಇರಬಹುದೆಂದು ನಂಬುತ್ತೇನೆ."

"ಏನಿದ್ದರೂ ಅವರಿಗಿಂತ ಎಷ್ಟೋ ಪಾಲು ಪ್ರಖ್ಯಾತರಾದ ಚಕ್ರವರ್ತಿಗಳು ಭಾರತದಲ್ಲಿ ಅದರಲ್ಲಿಯೂ ದಕ್ಷಿಣ ಭಾರತದಲ್ಲಿರುವಾಗ ಕಾಶ್ಮೀರದಂತಹ ದೂರದ ಹಾಗೂ ಗುಡ್ಡಗಾಡು ಪ್ರದೇಶದ ರಾಜರನ್ನು ಏಕೆ ವರಿಸಬೇಕು ?"

"ಕಾಶ್ಮೀರವೆಂದರೆ ಭೂಲೋಕದ ನಂದನವನವೆನಿಸುವದಂತೆದೇವಿ!"

"ಕರ್ನಾಟಕವೆಂದರೆ ಭೂಲೋಕದ ಅಮರಾವತಿಯೆನಿಸುವದು ಮಹಾಶ್ವೇತೆ !"

“ಚಂದ್ರಲೇಖಾದೇವೀ, ನೀವು ಕರ್ನಾಟಕ ಸಾರ್ವಭೌಮರಾದ ವಿಕ್ರಮಾದಿತ್ಯ ಮಹಾರಾಜರನ್ನು ವರಿಸುವ ಸಂಕಲ್ಪ ಮಾಡಿಕೊಂಡಿರುವ ಹಾಗೆ ತೋರುವದು.”

“ನನ್ನ ಸಂಕಲ್ಪವು ಸಿದ್ಧಿಸುವ ಬಗೆ ಹೇಗೆ?”

“ಮಾರಸಿಂಹ ಮಹಾರಾಜರು ತಮ್ಮ ವಾತ್ಸಲ್ಯದ ಪುತ್ರಿಯ ಅಭಿಲಾಷೆಯನ್ನು ಈಡೇರಿಸದಂತಹ ಕಠೋರಹೃದಯಿಗಳಲ್ಲವೆಂದು ನಾನು ಭಾವಿಸಿರುವೆನು.”

“ಅದೇನೋ ನನಗೆ ತಿಳಿಯದು. ಅವರು ಕಾಶ್ಮೀರದ ಹರ್ಷರಾಜರೊಡನೆ ಈ ವಿಷಯದಲ್ಲಿ ಮಾತುಕತೆ ನಡೆಯಿಸಿರುವರು. ಹರ್ಷರಾಜನಾದರೋ ನನ್ನನ್ನೇ ವರಿಸುವ ಸಂಕಲ್ಪ ಮಾಡಿಕೊಂಡಿರುವನಂತೆ!”

“ಹರ್ಷರಾಜರ ಸಂಕಲ್ಪವು ಹೀಗಿದ್ದರೆ ನಿನ್ನ ಸಂಕಲ್ಪವು ಹೇಗಿದೆ ಚಂದ್ರಲೇಖಾದೇವೀ?”

“ವರಿಸಿದರೆ ಕರ್ನಾಟಕ ಸಾರ್ವಭೌಮರಾದ ಪ್ರತಾಪಶಾಲಿ ವಿಕ್ರಮಾದಿತ್ಯರನ್ನೇ ವರಿಸುವೆನು.”

“ನಿಮ್ಮ ತಂದೆಯವರು ಈ ಮಾತಿಗೆ ಸಮ್ಮತಿಸುವರೆ?”

“ತನ್ನಂತಹ ಮಾಂಡಲಿಕನೊಡನೆ ಶರೀರ ಸಂಬಂಧ ಮಾಡಲು ವಿಕ್ರಮಾಂಕ ಮಹಾರಾಜರು ಮನಸ್ಸು ಮಾಡಲಿಕ್ಕಿಲ್ಲವೆಂಬ ಭಾವನೆಯಿಂದ ಅವರು ಹರ್ಷರಾಜನೊಡನೆ ಮಾತುಕತೆ ನಡೆಯಿಸಿದ್ದಾರೆ.”

“ನೀನು ನಿನ್ನ ಮನೋದಯವನ್ನು ಸ್ಪಷ್ಟವಾಗಿ ತಿಳಿಸಿಲ್ಲವೇ?”

“ತಿಳಿಸಿದೆನು. ಆದರೆ ಆ ಕಾಲವು ಹಿಂದಾಗಿ ಹೋಯಿತೆಂದು ಅವರು ಅನ್ನುತ್ತಾರೆ. ಹರ್ಷರಾಜರಿಗೆ ನನ್ನನ್ನು ಕೊಡುವ ಬಗ್ಗೆ ಬಹು ಮಟ್ಟಿಗೆ ತಾವು ಒಪ್ಪಿಕೊಂಡಹಾಗಿದೆಯೆಂದು ಅನ್ನುವರು.”

“ಮುಂದೇನು ಗತಿ?”

“ಒದಗಿದರೆ ಸದ್ಗತಿ, ಇಲ್ಲದಿದ್ದರೆ ದುರ್ಗತಿ. ನಾನು ನಿನ್ನೆ ನನ್ನ ತಂದೆಯವರಿಗೆ ಸ್ಪಷ್ಟವಾಗಿ ಹೇಳಿರುವೆನು. ಸ್ವಯಂವರವನ್ನು ರಚಿಸುವ

ಬಗ್ಗೆ ಅವರಿಂದ ನಾನು ಆಶ್ವಾಸನೆ ತೆಗೆದುಕೊಂಡಿರುವೆನು. ವಿಕ್ರಮಾದಿತ್ಯ ಮಹಾರಾಜರು ಸ್ವಯಂವರಕ್ಕೆ ಬಂದರೆ ಒಳಿತಾಗುವದು. ಅವರು ಬಾರದೆ ಹೋದರೆ ಮಾತ್ರ ನಾನು ನನ್ನ ಆಯುಷ್ಯವನ್ನು ಕೌಮಾರ್ಯದಲ್ಲಿ ಕಳೆಯುವ ಪ್ರಸಂಗವಿದೆ."

"ದೇವೀ, ಹರ್ಷರಾಜರು ನವತರುಣರು; ವಿಕ್ರಮಾದಿತ್ಯರಾದರೋ ನಾಲ್ವತ್ತರ ಮನೆಗೆ ಬಂದವರು. ಅಲ್ಲದೆ ಅನೇಕ ಭಾರ್ಯಾನ್ವಿತರು. ಈಗಾಗಲೇ ಅವರ ಅಂತಃಪುರದಲ್ಲಿ ನಾಲ್ಕುಜನ ಪತ್ನಿಯರಿರುವರೆಂದು ಕೇಳುತ್ತೇನೆ."

"ಹೀಗಿದ್ದರೂ ಅವರೇ ನನ್ನ ಪತಿಗಳೆಂದು ತಿಳಿದಿದ್ದೇನೆ. ವಿಕ್ರಮಾದಿತ್ಯ ಮಹಾರಾಜರು ನರಶಾರ್ದೂಲರಿರುವರು. ಅವರನ್ನು ನೋಡಿದರೆ ಇಪ್ಪತ್ತು ವರ್ಷದ ನವತರುಣರಂತೆ ಶೋಭಿಸುತ್ತಿರುವರು. ಅವರು ದಂಡ ಯಾತ್ರೆಗಾಗಿ ಇಲ್ಲಿಗೆ ಬಂದಾಗ ನನ್ನ ತಂದೆಯವರ ಆತಿಥ್ಯವನ್ನು ಹೊಂದಲು ಅರಮನೆಯಲ್ಲಿ ಒಂದು ದಿನ ವಾಸವಾಗಿದ್ದರು. ಅಂದೇ ನಾನು ಅವರಲ್ಲಿ ಮೋಹಿತಳಾಗಿರುವೆನು. ಅವರಾದರೂ ಅಟ್ಟಾಲಿಕೆಯಲ್ಲಿದ್ದ ನನ್ನನ್ನು ನೋಡಿ ಕೆಲವು ಕ್ಷಣಗಳವರೆಗೆ ಶಿಲಾಪ್ರತಿಮೆಯಂತೆ ನಿಂತಿದ್ದರು. ಈ ವಿಷಯವು ಯಾರಿಗೂ ತಿಳಿಯದು. ನನ್ನ ಪ್ರಣಯ ಪತ್ರಿಕೆಯೂ ತಂದೆಯವರ ಸ್ವಯಂವರ ನಿಮಂತ್ರಣ ಪತ್ರಿಕೆಯೂ ಅವರ ಕೈಸೇರಿದರೆ ನನ್ನ ಇಚ್ಛೆಯು ನಿಶ್ಚಯವಾಗಿ ಈಡೇರುವದು."

"ಹಾಗಾದರೆ ಹರ್ಷರಾಜರ ಮನೋಭಂಗವಾದಂತಾಗುವದು."

"ಅದಕ್ಕೆ ನನ್ನ ಉಪಾಯವಿಲ್ಲ" ಎಂದು ಚಂದ್ರಲೇಖೆಯು ನುಡಿದು "ಮಹಾಶ್ವೇತೆ, ನಾನು ಒಂದು ಪ್ರಣಯ ಪತ್ರಿಕೆಯನ್ನು ಸಿದ್ಧಪಡಿಸಿರುವೆನು. ಅದನ್ನು ಗುಪ್ತವಾಗಿ ಕಲ್ಯಾಣನಗರಕ್ಕೆ ತಲುಪಿಸುವ ವ್ಯವಸ್ಥೆಯನ್ನು ನೀನು ಮಾಡಬೇಕು."

"ಅವಶ್ಯವಾಗಿ ಆಗಲಿ ದೇವಿ!"

ಚಂದ್ರಲೇಖೆಯು ಕರಾಡದ ಶಿಲಾಹಾರ ರಾಜನಾದ ಮಾರಸಿಂಹನ ಕುಮಾರಿಯು. ಇವಳ ಸೌಂದರ್ಯವು ಆಗಿನ ಕಾಲದಲ್ಲಿ ಅತ್ಯಂತ ವಿಖ್ಯಾತ

ವಾಗಿತ್ತು. ಉತ್ತರಾಪಥದ ರಾಜರು ಸಹ ಇವಳ ಸೌಂದರ್ಯ ಖ್ಯಾತಿಯನ್ನು ಕೇಳಿ ಮುಗ್ಧರಾಗಿದ್ದರು. ಎಷ್ಟೋ ಜನರು ಕರಾಡದ ವರೆಗೆ ಬಂದು ಅವಳ ಸೌಂದರ್ಯ ನಿರೀಕ್ಷಣೆ ಮಾಡಿ ಹೋಗಿದ್ದರು. ಎಷ್ಟೋ ಜನರು ತಮ್ಮ ಪ್ರಶಸ್ತಿಗಳೊಡನೆ ಮಾರಸಿಂಹನೊಡನೆ ಪತ್ರವ್ಯವಹಾರ ನಡೆಯಿಸಿದ್ದರು. ಕಾಶ್ಮೀರದ ಅರಸನಾದ ಹರ್ಷರಾಜನಂತು .ಒಮ್ಮೆ ಕರಾಡಕ್ಕೆ ಬಂದು ತನ್ನ ದೇಶದ ನೈಸರ್ಗಿಕ ವೈಭವವನ್ನೂ ತನ್ನ ಅತುಲ ಐಶ್ವರ್ಯವನ್ನೂ ಪ್ರಶಂಸಿಸಿ ಚಂದ್ರಲೇಖೆಯನ್ನು ಕಣ್ತುಂಬ ನೋಡಿ ಹೋಗಿದ್ದನು. ಇತ್ತೀಚೆಗೆ ನಡೆದ ಪತ್ರವ್ಯವಹಾರದಿಂದ ಚಂದ್ರಲೇಖೆಯು ತನ್ನವಳೇ ಎಂದು ಅವನು ಎಣಿಕೆ ಹಾಕಿದ್ದನು. ಆದರೆ ಸ್ವಯಂವರದಿಂದ ಅವಳ ವಿವಾಹವು ನೆರವೇರುವದೆಂಬ ವಾರ್ತೆಯು ಕಿವಿಗೆ ಬಿದ್ದ ಮೇಲೆ ಮಾತ್ರ ಅವನಿಗೆ ಸ್ವಲ್ಪ ನೊಣತಿಂದಂತಾಗಿತ್ತು. ಆದರೂ ಅವನು ಎದೆಗುಂದಲಿಲ್ಲ. ಯಾಕಂದರೆ ಕಾಶ್ಮೀರದ ವೈಭವಶಾಲಿ ಅರಸನಾದ ತನ್ನನ್ನು ಬಿಟ್ಟು ಇತರರನ್ನು ಅವಳು ಎಂದೂ ವರಿಸಲಾರಳೆಂಬ ಹೆಮ್ಮೆಯು ಅವನಿಗೆ ಇತ್ತು. ಆದುದರಿಂದ ಅವನು ಈ ಬಗ್ಗೆ ಅಷ್ಟೊಂದು ಸೊರಗುತ್ತಿರಲಿಲ್ಲ. ತನ್ನಂತಹ ಶೂರ ಧೀರನನ್ನೂ, ರೂಪಸಂಪನ್ನನನ್ನೂ, ತರುಣನನ್ನೂ ಚಂದ್ರಲೇಖೆಯು ಸ್ವಸಂತೋಷದಿಂದ ವರಿಸುವಳೆಂದು ಅವನು ಬಗೆದಿದ್ದನು ತಾನು ಕರಾಡಕ್ಕೆ ಹೋದಾಗ ಅವಳನ್ನು ಪ್ರತ್ಯಕ್ಷ ಭೆಟ್ಟಿಯಾಗಿ ಪರಿಚಯ ಮಾಡಿಕೊಡದೆ ಬಂದದ್ದು ದಡ್ಡತನವಾಯಿತೆಂದು ಅವನು ಪಶ್ಚಾತ್ತಾಪ ಬಡುತ್ತಿದ್ದನು. ಆದರೆ ಅವನು ಈ ಕೊರತೆಯನ್ನು ತಕ್ಕಮಟ್ಟಿಗಾದರೂ ಹೋಗಲಾಡಿಸಬೇಕೆಂದು ತನ್ನ ಭಾವಚಿತ್ರವನ್ನು ಚಂದ್ರಲೇಖೆಯ ಕಡೆಗೆ ಕಳುಹಿಸಿ ಕೊಟ್ಟಿದ್ದನು. ಕಾಶ್ಮೀರದ ರಾಜನ ಈ ಭಾವಚಿತ್ರವು ಚಂದ್ರಲೇಖೆಯ ಕಣ್ಣಿಗೆ ಬೀಳುವದೇ ತಡ, ಅದರ ವ್ಯವಸ್ಥೆಯಾಗಿ ಹೋಗಿ ಬಿಟ್ಟಿತು. ಕನ್ಯೆಯು ವರನ ಚಿತ್ರವನ್ನು ಚನ್ನಾಗಿ ನೋಡಿದಳೋ ಇಲ್ಲವೋ ಅಷ್ಟರಲ್ಲಿಯೆ ಅದನ್ನು ಅವಳು ನಾಶಗೊಳಿಸಿಬಿಟ್ಟಳು. ಚಂದ್ರಲೇಖೆಯ ಈ ಪ್ರವೃತ್ತಿಯನ್ನು ನೋಡಿ ಅಮರಸಿಂಹನು ಸ್ವಯಂವರವನ್ನು ಏರ್ಪಡಿಸಬೇಕೆಂದು ನಿರ್ಧಾರ ಮಾಡಿದನು. ಚಂದ್ರಲೇಖೆಯು ವಿಕ್ರಮಾದಿತ್ಯನನ್ನು ವರಿಸುವ ಇಚ್ಛೆಯುಳ್ಳವಳಾಗಿದ್ದಳೇನೋ ನಿಜ. ಸಾರ್ವಭೌಮರಾಜನೂ,

ಬಹುಪತ್ನೀತನೂ ಆದ ಅವನು ತನ್ನ ಮಗಳನ್ನು ಸ್ವೀಕರಿಸುವನೋ ಇಲ್ಲವೋ ಎಂಬ ಶಂಕೆಯು ಮಾರಸಿಂಹನಿಗಿತ್ತು. ಆದುದರಿಂದಲೇ ಅವನು ಸ್ವಯಂವರವನ್ನೇರ್ಪಡಿಸುವ ಸಾಹಸ ಮಾಡಿದನು.

ತಂದೆಯು ಸ್ವಯಂವರವನ್ನೇರ್ಪಡಿಸಿದ ಸಂಗತಿಯಿಂದ ಚಂದ್ರ ಲೇಖೆಯು ಆನಂದಗೊಂಡಳು. ಆದರೆ ಸ್ವಯಂವರಕ್ಕೆ ವಿಕ್ರಮಾದಿತ್ಯನೇ ಬಾರದೆ ಹೋದರೆ ಗತಿಯೇನೆಂದು ಅವಳು ಚಿಂತಿಸತೊಡಗಿದಳು. ತನ್ನ ಮನಸ್ಸಿನ ಚಿಂತೆಯ ಹಾಗೂ ಅನುಮಾನದ ನಿವಾರಣೆಗಾಗಿ ಅವಳು ಪ್ರಣಯ ಪತ್ರಿಕೆಯನ್ನು ಕಲ್ಯಾಣಕ್ಕೆ ಕಳುಹಿಸಬೇಕೆಂದು ನಿರ್ಧಾರ ಮಾಡಿದಳು. ಅವಳು ತನ್ನ ಈ ನಿರ್ಧಾರವನ್ನು ತನ್ನ ಸಖಿಯಾದ ಮಹಾ ಶ್ವೇತೆಗೆ ತಿಳಿಸಿದಳು. ಮಹಾಶ್ವೇತೆಯು ಅವಳ ಪ್ರೇಮದ ಸಖಿಯೂ, ದಾಸಿಯೂ ಆಗಿದ್ದಳು. ಅವಳಾದರೂ ಒಡತಿಯ ಇಚ್ಛೆಯಂತೆ ಅವಳ ಪ್ರಣಯಪತ್ರಿಕೆಯನ್ನು ಕಲ್ಯಾಣಕ್ಕೆ ಕಳುಹಿಸಲೊಪ್ಪಿದಳು.

ಚಂದ್ರಲೇಖೆಯೂ ಮಹಾಶ್ವೇತೆಯೂ ಕೃಷ್ಣಾನದಿಯಲ್ಲಿ ನೌಕಾ ವಿಹಾರ ಮಾಡುತ್ತ ಸಂತೋಷದಿಂದ ಸಂಭಾಷಣ ನಡೆಯಿಸಿದ್ದರು. ಸಂಧ್ಯಾ ಕಾಲವಾಗಿತ್ತು. ಅಸ್ತಮಾನ ಸೂರ್ಯನ ಹೊಂಬಣ್ಣದ ಕಿರಣಗಳು ಹೊಂಬಣ್ಣದ ಚಂದ್ರಲೇಖೆಯ ಹೊಂಬಣ್ಣದ ಮೊಗದ ಕಾಂತಿಯನ್ನು ಹೆಚ್ಚುಗೊಳಿಸಿದ್ದವು. ಕೃಷ್ಣಾ ಜಲದಮೇಲೆ ಬಿದ್ದ ಸೂರ್ಯನ ಕಿರಣಗಳು ಪರಾವರ್ತನ ಹೊಂದಿ ಚಂದ್ರಲೇಖೆಯ ಚಂದ್ರಮುಖದ ಪ್ರಭೆಯನ್ನು ದ್ವಿಗುಣಿತಮಾಡಿದ್ದವು. ಮಹಾಶ್ವೇತೆಯು ನೌಕೆಯನ್ನು ಸಾಗಿಸುತ್ತಲೆ–
"ಪ್ರಿಯಸಖಿ! ನಿನ್ನಲ್ಲಿ ದರ್ಪಣವಿದೆಯೆ?"

"ಈಗ ದರ್ಪಣವೇಕೆಬೇಕು ಮಹಾಶ್ವೇತೆ?

"ನಿನ್ನ ಈಗಿನ ಚಂದ್ರಮುಖವನ್ನು ನಿನ್ನ ಕಣ್ಣಿನಿಂದ ಕಣ್ತುಂಬ ನೋಡಿಸಬೇಕಾಗಿದೆ." ಮಹಾಶ್ವೇತೆ ಅಚ್ಚರಿಗೊಂಡು ನುಡಿದಳು.

ಚಂದ್ರಲೇಖೆಯು ಸುಳ್ಳು ಸಿಟ್ಟು ತಂದುಕೊಂಡು– "ಬಡಿವಾರ ಮಾಡಬೇಡಬಿಡು ಮಹಾಶ್ವೇತೆ. ಏನೇನೋ ಅನ್ನುತ್ತಿರುವೆಯಾಯಿತು."

"ದೇವಿ, ನಾನು ಸುಳ್ಳಾಡುವದಿಲ್ಲ. ನೀನು ಕರ್ನಾಟಕ ಸಾಮ್ರಾಟನ ರಾಣಿಯಾಗಲು ನಿಜವಾಗಿಯೂ ಯೋಗ್ಯಳಿರುವೆ" ಎಂದು ಮಹಾಶ್ವೇತೆಯು ನುಡಿದು– "ದೇವಿ, ನಿಮ್ಮ ಪ್ರಣಯ ಪತ್ರಿಕೆಯೊಳಗಿನ ಸಂಗತಿಯನ್ನು ನನಗೆ ತಿಳಿಸಲಾರೆಯಾ ?"

"ತಿಳಿಸುವದು ಸಾಧ್ಯವಿಲ್ಲ."

"ನನಗೆ ಹೇಳದಂತಹ ಸಂಗತಿಯೇ ಅದು ?"

"ಹಾಗೇನೂ ಇಲ್ಲ, ಹೇಳಲಾಗುವದಿಲ್ಲ. ಪತ್ರಿಕೆಯನ್ನು ತೆಗೆದು ಕೊಂಡು ಓದಿ ನೋಡು" ಎಂದು ಚಂದ್ರಲೇಖೆಯು ನುಡಿದು ಪ್ರಣಯ ಪತ್ರವನ್ನು ಉಡಿಯಿಂದ ತೆಗೆದು ಅವಳ ಕೈಯಲ್ಲಿ ಕೊಟ್ಟು–"ಇಂದು ನಿನಗೆ ತೋರಿಸಬೇಕೆಂಬ ಯೋಚನೆಯಿಂದಲೇ ಸಂಗಡ ತಂದಿರುವೆನು, ಓದಿ ನೋಡು."

ಮಹಾಶ್ವೇತೆಯು ಪತ್ರವನ್ನೋದಿದಳು–

"ಮನೋಹರಾ!

ಈ ನಿಮ್ಮ ಪ್ರಣಯಿನಿಯಾದ ಚಂದ್ರಲೇಖೆಯನ್ನು ನಿಮ್ಮ ಚರಣದಾಸಿಯನ್ನಾಗಿ ಮಾಡಿಕೊಳ್ಳಲು ಸ್ವಯಂವರಕ್ಕೆ ಬರಬೇಕಾಗಿ ಸೆರಗೊಡ್ಡಿ ಬೇಡುವೆನು.

ನನ್ನ ನಿಮ್ಮ ಅಂತಃಕರಣಗಳು ತಾವು ಸಭಾಮಂದಿರದಲ್ಲಿ ಇದ್ದಾಗ, ನಾನು ಅಟ್ಟಾಲಿಕೆಯ ಮೇಲಿದ್ದಾಗ ಏಕಜೀವವಾದ ಸಂಗತಿಯನ್ನು ನಾನು ಮರೆತಿಲ್ಲ; ನೀವೂ ಮರೆತಿಲ್ಲವೆಂದು ನಾನು ನಂಬುತ್ತೇನೆ. ದುಷ್ಯಂತ ಮಹಾರಾಜನು ಶಕುಂತಲೆಯನ್ನು ಮರೆತಂತಾಗಬಾರದೆಂದು ನಾನು ಈ ಪ್ರಣಯ ಪತ್ರಿಕೆಯನ್ನು ತಮ್ಮ ಸನ್ನಿಧಿಗೆ ಕಳುಹಿಸಿರುವೆನು. ದುಷ್ಯಂತ ಮಹಾರಾಜನ ಹಾಗೆ ತಾವು ಉಂಗುರವನ್ನು ಕೊಟ್ಟಿದ್ದರೆ ಈ ಪ್ರಣಯ ಪತ್ರಿಕೆ ಕಳುಹಿಸುವ ಸಂದರ್ಭವಿರಲಿಲ್ಲ. ಅದನ್ನೇ ನೆನಪಿಗಾಗಿ ಕಳುಹಿಸುತ್ತಿದ್ದೆನು. ತವಕದ ಈ ಭೆಟ್ಟಿಯಲ್ಲಿ ಅಷ್ಟು ಅವಕಾಶವಾಗಲಿಲ್ಲೆಂಬ ಮಾತು

ನಾನು ಒಪ್ಪುತ್ತೇನೆ. ನೀವಾದರೂ ಈ ಮಾತಿಗೆ ಅಸಮ್ಮತಿಯನ್ನು ತೋರಿಸಲಾರಿರಿ.

ಒಟ್ಟಿನ ಮೇಲೆ ನೀವು ನನ್ನ ಹೃದಯೇಶ್ವರರು. ನನ್ನನ್ನು ತಮ್ಮ ಚರಣ ಕಿಂಕರಳನ್ನಾಗಿ ಮಾಡಿಕೊಂಡರೆ ಮಾತ್ರ ನನ್ನ ಜೀವಿತವು ಸುಖಮಯವಾಗುವದು.

ನಾನು ಅಜ್ಞಳು, ಅಬಲೆಯು, ಇದಕ್ಕಿಂತ ಹೆಚ್ಚಿಗೆ ಬರೆಯಲಾರೆ. ಸ್ವಯಂವರ ಸಂಧಿಯನ್ನೂ, ಆ ಸಂಧಿಯಲ್ಲಿ ನಿಮ್ಮ ಬರುವಿಕೆಯನ್ನೂ ಚಾತಕದಂತೆ ನಿರೀಕ್ಷಿಸುವೆನು.

ತಮ್ಮ ಚರಣದಾಸಿ,

ಚಂದ್ರಲೇಖೆ"

ಪತ್ರವನ್ನೋದಿ ಮಹಾಶ್ವೇತೆಯು ಗಹಗಹಿಸಿ ನಕ್ಕಳು. ಅವ ನಗುತ್ತಲೆ- "ದೇವಿ, ನೀನು ಮಹಾ ಪ್ರತಾಪಶಾಲಿಯಾದ ವಿಕ್ರಮಾ ತ್ಯರ ಮೇಲೆ ದಾಳಿ ಮಾಡಿ ವಿಜಯಿಯಾಗುವದು ನಿಶ್ಚಯ. ಈ ನಿ ಹೃದಯದ ಭಾವಚಿತ್ರವನ್ನು ಕಲ್ಯಾಣಕ್ಕೆ ಕಳುಹಿಸುವ ವ್ಯವಸ್ಥೆ ಮಾ ವೆನು."

"ಮಹಾಶ್ವೇತೆ, ದೂತನೊಡನೆ ನೀನೂ ಹೊರಡಬೇಕು. ನೀ ಅವರಿಗೆ ನನ್ನ ಮನೋದಯವನ್ನು ಚನ್ನಾಗಿ ತಿಳಿಸು. ಪತ್ರದಿಂದ ಭಾ ಚನ್ನಾಗಿ ವ್ಯಕ್ತವಾಗುವದಿಲ್ಲ. ಒಟ್ಟಿನಮೇಲೆ ಅವರು ಸ್ವಯಂವರ ಬರುವಹಾಗೆ ಮನವೊಲಿಸಿ ಬರಬೇಕು ಕಂಡೆಯಾ?"

"ನಿಮ್ಮ ಅನುಜ್ಞೆಯಂತೆ ನಾನೂ ಹೊರಡುವೆನು" ಎಂದು ಮಹ ಶ್ವೇತೆಯು ನುಡಿದಳು.

ಸಂಧಿ ಪ್ರಕಾಶವು ಅಡಗುತ್ತ ಬಂದಿತು. ಇಬ್ಬರೂ ಜಲವಿಹಾ ಮುಗಿಸಿ ನೌಕೆಯನ್ನು ದಂಡೆಗೆ ಬಿಟ್ಟು ಅರಮನೆಗೆ ಬಂದರು.

## ೧೫ ವಿದ್ಯಾಪತಿ ಬಿಲ್ಹಣ

ವಿಕ್ರಮಾಂಕದೇವ ಸಾರ್ವಭೌಮನು ತುಂಗಭದ್ರೆಯ ತೆಂಕಣ ಕಾಳಗದಲ್ಲಿ ಮಹಾವಿಜಯವನ್ನು ಸಂಪಾದಿಸಿದಮೇಲೆ ಕಲ್ಯಾಣಕ್ಕೆ ಬಂದು ಸಾಮ್ರಾಜ್ಯದೊಳಗಿನ ಬಹುಜನರ ಸಮ್ಮತಿಯ ಮೇರೆಗೆ ರಾಜ್ಯಾಭಿಷೇಕ ಮಾಡಿಸಿಕೊಂಡನು. ಅವನು ಸೋಮೇಶ್ವರನ ಕಾಲದ ಕುಕರ್ಮಿಗಳಾದ ಕರ್ಮಚಾರಿಗಳನ್ನು ಕಿತ್ತೊಗೆದನು. ಅವನು ತನ್ನ ನಂಬಿಗೆಯ ಹಾಗು ಏಕನಿಷ್ಠ ಜನರನ್ನು ಓಲಗದಲ್ಲಿ ಸೇರಿಸಿಕೊಂಡನು. ಪದ್ಮನಾಭಯ್ಯನು ಇವನ ಪ್ರಧಾನಾಮಾತ್ಯನಾದನು. ಅನಂತಪಾಲಯ್ಯನು ಮಹಾಸೇನಾನಿಯಾದನು. ಗೋವಿಂದರಸನನ್ನು ಉಪಸೇನಾಪತಿಯನ್ನಾಗಿ ನಿಯಮಿಸಿದನು. ಇವನು ಪಟ್ಟಕ್ಕೆ ಬಂದಕೂಡಲೇ ಸಾಮ್ರಾಜ್ಯದೊಳಗಿನ ಎಲ್ಲ ಮಂಡಲೇಶ್ವರರನ್ನು ಸ್ವಾಧೀನಪಡಿಸಿಕೊಂಡನು. ಜನರಂಜನಕಾರಿಯಾಗಿ ಅರಸನೆಂದರೆ ದೇವನೆಂಬ ಭಾವನೆಯು ಪ್ರಜಾಜನರಲ್ಲಿ ನೆಲೆಗೊಳ್ಳುವಂತೆ ಮಾಡಿದನು. ಇವನ ಆಳಿಕೆಯು ಭಗವಾನ್ ಶ್ರೀರಾಮಚಂದ್ರನ ಆಳಿಕೆಯನ್ನು ಹೋಲುತ್ತಿತ್ತೆಂದರೆ ಅತಿಶಯೋಕ್ತಿಯಾಗಲಾರದು. ಸಾಮ್ರಾಜ್ಯದಲ್ಲಿ ಕಳ್ಳಕಾಕರ ಭಯವಿರಲಿಲ್ಲ. ಮನೆಯ ಬಾಗಿಲಿಗೆ ಬೀಗ ಹಾಕುತ್ತಿರಲಿಲ್ಲ. ರಾಮೇಶ್ವರದಿಂದ ಕಾಶಿಯ ವರೆಗೆ ಕೋಲಿಗೆ ಬಂಗಾರ ಕಟ್ಟಿಕೊಂಡು ಹೋಗಬಹುದಾಗಿತ್ತು. ಇವನು ವಿದ್ವಾಂಸನಿದ್ದು, ವಿದ್ವಾಂಸರಿಗೂ ಕವಿಗಳಿಗೂ ಆಶ್ರಯ ಕೊಡುತ್ತಿದ್ದನು. ಇವನ ಆಸ್ಥಾನದಲ್ಲಿ ಅನೇಕ ಪಂಡಿತರಿದ್ದು 'ಮಿತಾಕ್ಷರ' ಎಂಬ ಪ್ರಸಿದ್ಧ ಧರ್ಮಶಾಸ್ತ್ರ ಕರ್ತನಾದ ವಿಜ್ಞಾನೇಶ್ವರನು ಇವನ ಆಸ್ಥಾನದಲ್ಲಿ ಪರಿಶೋಭಿಸುತ್ತಿದ್ದನು.

ವಿಕ್ರಮಾದಿತ್ಯನು ಸಾಮ್ರಾಜ್ಯವನ್ನು ನಿರ್ವೈರವನ್ನಾಗಿ ಮಾಡಿದನು. ಸ್ವಾರ್ಥಲಾಲಸೆಗಾಗಿ ಸೋಮೇಶ್ವರನ ಬೆನ್ನು ಹತ್ತಿ ಅನ್ಯಾಯ ಮಾಡಿದವರನ್ನು ಕೂಡ ಕ್ಷಮಿಸಿ ಓಲಗದಲ್ಲಿರಿಸಿಕೊಂಡು ತನ್ನ ಘನವಂತಿಕೆಯನ್ನು

ಪ್ರಕಟಿಸಿದನು. ಲಕ್ಷ್ಮರಸನು ಮೊದಲು ವಿಕ್ರಮಾದಿತ್ಯನ ಪಕ್ಷಪಾತಿಯೂ ಸ್ನೇಹಾಂಕಿತನೂ, ಏಕನಿಷ್ಠ ಸೇವಕನೂ ಅವನ ಅರಸಿಯರಲ್ಲೊಬ್ಬಳಾದ ವೈಲಾಲ ಮಹಾದೇವಿಯನ್ನು ಎತ್ತಿ ಆಡಿಸಿದವನೂ ಆಗಿದ್ದನು. ಇವನು ಸೋಮೇಶ್ವರನ ಬಣ್ಣದ ಮಾತುಗಳಿಗೆ ಮರುಳಾಗಿ ಅವನ ಪಕ್ಷಪಾತಿಯಾಗಿ ವಿಕ್ರಮಾದಿತ್ಯನ ದ್ರೋಹ ಕಟ್ಟಿಕೊಂಡಿದ್ದನು. ಮುಂದೆ ಅವನು ತನ್ನ ತಪ್ಪಿಗಾಗಿ ಪಶ್ಚಾತ್ತಾಪವನ್ನು ವ್ಯಕ್ತಗೊಳಿಸಿ ಕ್ಷಮೆಯಾಚನೆ ಮಾಡಿದ್ದರಿಂದ ಅವನಿಗೆ ಸಾಮಂತಾಧಿಪತಿಯ ಅಧಿಕಾರ ದೊರೆತು ದಂಡನಾಯಕನಾದನು.

ವಿಕ್ರಮಾದಿತ್ಯನ ಕೀರ್ತಿ ಪ್ರಭೆಯು ದಶದಿಶೆಗಳಲ್ಲಿ ಬೆಳಗತೊಡಗಿತು. ಚಾಲುಕ್ಯರ ವೈಭವವು ಅತ್ಯಂತ ಉಚ್ಚ ಸ್ಥಿತಿಗೇರಿತು. ಜಗತ್ತಿನಲ್ಲಿ ಕಲ್ಯಾಣದಂತಹ ರಾಜಧಾನಿಯಿಲ್ಲ; ಕರ್ನಾಟಕ ಸಾಮ್ರಾಜ್ಯದಂತಹ ಸಾಮ್ರಾಜ್ಯವಿಲ್ಲ; ಚಾಲುಕ್ಯರ ವೈಭವದಂತಹ ವೈಭವವಿಲ್ಲ; ವಿಕ್ರಮಾಂಕದೇವನಂತಹ ಸಾರ್ವಭೌಮರಿಲ್ಲ ಎಂದು ಎಲ್ಲರೂ ಅನ್ನತೊಡಗಿದರು. ಇವನಿಗೆ ಪುತ್ರಸಂತಾನವಿದ್ದರೂ, ತನ್ನ ಘನಪಂತಿಕೆಗನುಗುಣವಾಗಿ ತನ್ನ ಬಂಧುವಾದ ಜಯಸಿಂಹನಿಗೆ ಯೌವರಾಜ್ಯಾಭಿಷೇಕ ಮಾಡಿಸಿ, ಅವನನ್ನು ಬನವಾಸಿ ಮಹಾಮಂಡಲದ ಅಧಿಪತಿಯನ್ನಾಗಿ ಮಾಡಿದನು. ವಿಕ್ರಮಾದಿತ್ಯನ ಈ ಅಕೃತ್ರಿಮ ಬಂಧು ಪ್ರೇಮವನ್ನು ಸಾಮ್ರಾಜ್ಯದ ಪ್ರಜಾಜನರೆಲ್ಲ ಹೊಗಳಿದರು.

ವಿಕ್ರಮನು ವಿದ್ಯಾಪಕ್ಷಪಾತಿ. ಅವನು ಎಷ್ಟೇ ರಾಜಕಾರಣದಲ್ಲಿ ಮುಳುಗಿರುತ್ತಿದ್ದರೂ ವಿದ್ವಾಂಸರಿಗೂ ಕವಿಗಳಿಗೂ ಆಶ್ರಯ ಕೊಡುವದನ್ನು ದುರ್ಲಕ್ಷಿಸುತ್ತಿದ್ದಿಲ್ಲ. ಇವನ ಔದಾರ್ಯ ಕೀರ್ತಿಗಳು ಭರತಖಂಡದಲ್ಲೆಲ್ಲ ಹಬ್ಬಿದವು. ಇವನು ಪ್ರತಿವರ್ಷದಲ್ಲಿ ಹದಿನಾರು ಮಹಾದಾನಗಳನ್ನು ಮಾಡುತ್ತಿದ್ದನು. ಇವನು ಅನೇಕ ದೇವಸ್ಥಾನಗಳನ್ನು ಕಟ್ಟಿಸಿ ಅನೇಕ ದೇವಸ್ಥಾನಗಳಿಗೆ ಭೂದಾನ ಕೊಟ್ಟನು. ಇವನ ಆಸ್ಥಾನದಲ್ಲಿ ಕೀರ್ತಿವರ ಮಲ್ಲಿಕಾರ್ಜುನ ವಿಜ್ಞಾನೇಶ್ವರ ಮೊದಲಾದ ಮಹಾ ಕವಿಗಳಿದ್ದರು. ವಿಕ್ರಮಾದಿತ್ಯನು ಹೀಗೆ ವಿದ್ಯಾಪಕ್ಷಪಾತಿಯಾಗಿದ್ದುದು ಭರತಖಂಡದ ತುಂಬ

ಪಸರಿಸಿತ್ತು. ಅನೇಕ ವಿಖ್ಯಾತ ಕವಿಗಳು ಇವನಲ್ಲಿಗೆ ಬಂದು ತಮ್ಮ ವಿದ್ವತ್ತೆಯನ್ನು ಪ್ರದರ್ಶಿಸಿ ಸಂಭಾವನೆ ಹೊಂದಿ ಹೋಗುತ್ತಿದ್ದರು.

ವಿಕ್ರಮಾದಿತ್ಯನ ಈ ಘನವಾದ ಕೀರ್ತಿಯು ಕಾಶ್ಮೀರ ದೇಶದ ಘನಪಂಡಿತನಾದ ಬಿಲ್ಹಣ ಭಟ್ಟನ ಕಿವಿಗೆ ಬಿದ್ದಿತು. ಇವನು ಜನ್ಮಭೂಮಿಯನ್ನು ಬಿಟ್ಟು ಚೇದಿದೇಶದ ಕರ್ಣರಾಯನ ಆಸ್ಥಾನದಲ್ಲಿದ್ದನು. ಈ ಚೇದಿರಾಜನು ರಾಜ್ಯಭ್ರಷ್ಟನಾದಮೇಲೆ ಬಿಲ್ಹಣ ಕವಿಯು ಅಲ್ಲಿಂದ ದಕ್ಷಿಣಾಪಥಕ್ಕೆ ಹೊರಟನು. ಅವನು ಕ್ಷೇತ್ರ-ತೀರ್ಥಗಳನ್ನು ಮಾಡುತ್ತ ರಾಮೇಶ್ವರಕ್ಕೆ ಹೋದನು. ರಾಮೇಶ್ವರ ಯಾತ್ರೆಯನ್ನು ಮುಗಿಸಿದಮೇಲೆ ಅವನು ಕಲ್ಯಾಣನಗರಿಯ ಹಾಗೂ ಕರ್ನಾಟಕ ಸಾಮ್ರಾಜ್ಯದ ಸಾರ್ವಭೌಮನಾದ ವಿಕ್ರಮಾದಿತ್ಯನ ಖ್ಯಾತಿಯನ್ನು ಕೇಳಿ ಅಲ್ಲಿಗೆ ಬಂದನು.

ಈ ಬಿಲ್ಹಣನು ಸಂಸ್ಕೃತ ಕವಿಯು. ಕನ್ನಡನಾಡಿನಲ್ಲಿ ತನಗೆ ಆಶ್ರಯ ದೊರೆಯುವದೋ ಇಲ್ಲವೋ ಎಂದು ಅವನು ಶಂಕೆಗೊಂಡಿದ್ದನು. ಶ್ರೀ ಯಾಜ್ಞವಲ್ಕ್ಯ ಸ್ಮೃತಿಗೆ ಮಿತಾಕ್ಷರಾ ಎಂಬ ಟೀಕೆ ಬರೆಯತೊಡಗಿದ್ದ ವಿಜ್ಞಾನೇಶ್ವರ ಪಂಡಿತನಿಗೆ ಬಿಲ್ಹಣನು ಭೆಟ್ಟಿಯಾದನು. ವಿಜ್ಞಾನೇಶ್ವರನು ಬಿಲ್ಹಣನ ಘನಪಾಂಡಿತ್ಯವನ್ನು ನೋಡಿ ಮೆಚ್ಚಿ ಅವನನ್ನು ಆಸ್ಥಾನಕ್ಕೆ ಕರೆದೊಯ್ದನು.

ಬಿಲ್ಹಣಭಟ್ಟನು ಆಸ್ಥಾನಕ್ಕೆ ಹೋದೊಡನೆಯೇ ವಿಕ್ರಮಾಂಕದೇವ ಮಹಾರಾಜನಿಗೆ ಅಭಿವಾದನೆಮಾಡಿ– "ನಾಸೀದಸ್ತಿ ಭವಿಷ್ಯತಿ ಕ್ಷಿತಿತಲೇ ಕಲ್ಯಾಣ ಕಲ್ಪಂ ಪುರಂ। ನೋದೃಷ್ಟಃ ಶ್ರುತಏವವಾ ಕ್ಷಿತಿಪತಿಃ ಶ್ರೀ ವಿಕ್ರಮಾರ್ಕೋಪಮಃ ॥"

ವಿಕ್ರಮಾದಿತ್ಯನು ಬಿಲ್ಹಣ ಕವಿಯನ್ನು ಸ್ವಾಗತಿಸಿ, ಯೋಗ್ಯ ಸ್ಥಾನದಲ್ಲಿ ಕುಳ್ಳಿರಿಸಿ ಅನೇಕ ಕುಶಲ ಪ್ರಶ್ನೆಗಳನ್ನು ವಿಚಾರಿಸಿದನು.. ಅನಂತರದಲ್ಲಿ ಅವನು ಇಷ್ಟು ದಿನಗಳ ವರೆಗೆ ಬಿಲ್ಹಣನು ಮಾಡಿದ ಗೀರ್ವಾಣ ಭಾಷಾ ಸೇವೆಯ ಬಗ್ಗೆ ಗೊತ್ತುವಳಿ ಮಾಡಿಕೊಂಡನು. ಅನಂತರದಲ್ಲಿ ಅವನು– "ಕವಿಶ್ರೇಷ್ಠರೆ, ನಿಮ್ಮಂತಹ ಕವಿಕುಲಚಕ್ರವರ್ತಿಗಳು ನನ್ನ

ಆಸ್ಥಾನದಲ್ಲಿರುವದು ನನಗೆ ಹಾಗೂ ನನ್ನ ಸಾಮ್ರಾಜ್ಯಕ್ಕೆ ಭೂಷಣಾವಹವು ನೀವು ನನ್ನ ಆಸ್ಥಾನದಲ್ಲಿ ನಿಶ್ಚಿಂತೆಯಿಂದ ಕಾಲಹರಣ ಮಾಡಬಹುದು. ನನ್ನ ಆಸ್ಥಾನಪಂಡಿತರಾದ ಈ ವಿಜ್ಞಾನೇಶ್ವರ ಮಹಾಕವಿಗಳು ಶ್ರೀ ಯಾಜ್ಞವಲ್ಕ್ಯ ಸ್ಮೃತಿಗೆ ಮಿತಾಕ್ಷರಾ ಎಂಬ ಭಾಷ್ಯವನ್ನು ಬರೆಯತೊಡಗಿರುವರು. ಅವರು ಈ ಮಹಾ ಕಾವ್ಯವನ್ನು ಪೂರ್ತಿಗೊಳಿಸುವರು. ನೀವು ಯಾವದೊಂದು ಮಹಾ ಕಾವ್ಯವನ್ನು ಪ್ರಾರಂಭಿಸಬೇಕು. ನಿಮ್ಮ ವಿಖ್ಯಾತಿಯನ್ನು ನಾನು ಕೇಳಿರದಿದ್ದರೂ ನಿಮ್ಮನ್ನು ನೋಡಿದೊಡನೆಯೆ ಹಾಗೂ ನಿಮ್ಮ ಭಾಷೆಯನ್ನು ಕೇಳಿದೊಡನೆಯೆ ನೀವು ಮಹಾಕವಿಗಳಿರುವಿರೆಂದು ವಿದಿತವಾಗುವದು. ನೀವು ಯಾವ ಮಹಾಕಾವ್ಯ ಬರೆಯಲು ಇಚ್ಛಿಸುವಿರಿ?"

"ಮಹಾರಾಜರೆ!" ಬಿಲ್ಹಣ ಕವಿಯು ನಮ್ರತೆಯಿಂದ– "ನಾನು ನಿಮ್ಮ ಇತಿಹಾಸವನ್ನು 'ವಿಕ್ರಮಾಂಕದೇವ ಚರಿತೆ' ಎಂಬ ಹೆಸರಿನಿಂದ ಸಂಸ್ಕೃತದಲ್ಲಿ ಬರೆಯುವೆನು."

ವಿಕ್ರಮಾದಿತ್ಯನು ಸಂತೋಷಪಟ್ಟನು. ತನ್ನ ಆಳಿಕೆಯಲ್ಲಿಯೇ ತನ್ನ ಚರಿತ್ರವು ಬರೆಯಲ್ಪಟ್ಟರೆ ಯಥಾಸ್ಥಿತವಾಗುವದೆಂದು ಬಗೆದು ಮಹಾಕವಿ ಬಿಲ್ಹಣಭಟ್ಟನಿಗೆ ತನ್ನ ಚರಿತ್ರವನ್ನು ಬರೆಯಲು ಅನುಮತಿ ಕೊಟ್ಟನು.

ಅನಂತರದಲ್ಲಿ ವಿಜ್ಞಾನೇಶ್ವರ ಪಂಡಿತನು– "ಮಹಾರಾಜರೆ, ಕರ್ನಾಟಕದಲ್ಲಿ ಕನ್ನಡ ಕವಿಗಳಿಗಿದ್ದಹಾಗೆ ಸಂಸ್ಕೃತ ಕವಿಗಳಿಗೂ ಗೌರವ ದೊರಯುತ್ತಿರುವದು ಪ್ರಸಂಶನೀಯವು. ಕರ್ನಾಟಕದಲ್ಲಿ ವೈದಿಕಮತಾನುಯಾಯಿಗಳಾದ ನಿಮ್ಮಿಂದ ಸಂಸ್ಕೃತ ಭಾಷೆಗೂ ಪ್ರಶಸ್ತಿಯಿರುವದನ್ನು ಕೇಳಿ ಮಹಾಕವಿ ಬಿಲ್ಹಣಭಟ್ಟರು ಆನಂದಬಟ್ಟಿರುವರು."

ವಿಜ್ಞಾನೇಶ್ವರನು ಹೀಗೆ ನುಡಿಯುತ್ತಿರುವಾಗ ಪ್ರತಿಹಾರಿಯು ಅಲ್ಲಿಗೆ ಬಂದು ವಿಕ್ರಮಾದಿತ್ಯನನ್ನು ಕುರಿತು– "ಜಿಯಾ, ದ್ವಾರದಲ್ಲಿ ಕರಾಡದ ಶಿಲಾಹಾರ ರಾಜನ ದೂತನೂ, ರಾಜಕುಮಾರಿ ಚಂದ್ರಲೇಖಾ ದೇವಿಯವರ ಸಖಿ ಮಹಾಶ್ವೇತೆಯೂ ಬಂದಿರುವರು. ಆಜ್ಞೆಯಾದರೆ ಒಳಗೆ ಕಳುಹಿಸುವೆನು."

"ಚಂದ್ರಲೇಖೆ!" ವಿಕ್ರಮನು ವಿಸ್ಮಯದಿಂದ ನುಡಿದನು.

"ಮಹಾರಾಜರೆ, ಚಂದ್ರಲೇಖೆಯೆಂದರೆ ಕರಾಡದ ಶಿಲಾಹಾರ ಮಾರಸಿಂಹನ ಕುಮಾರಿಯು. ಭುವನೈಕ ಸುಂದರಿಯು. ಅವಳು ನಿಮ್ಮ ಬಳಿಗೆ ತನ್ನ ಸಖಿಯನ್ನು ಕಳುಹಿಸಬೇಕಾದರೆ ಪ್ರಣಯ ಸಂಬಂಧವೇ ಇರಬಹುದಾಗಿದೆ. ಚಂದ್ರಲೇಖಾ ದೇವಿಯನ್ನು ನಾನು ಕಣ್ಣಾರೆ ಕಂಡಿರುವೆನು. ನಿಜವಾಗಿ ಅವಳು ನಿರ್ಜರಾಂಗನೆ!" ಎಂದು ಬಿಲ್ಹಣ ಕವಿಯು ವಿಕ್ರಮಾದಿತ್ಯನಿಗೆ ಹೇಳಿದನು.

ವಿಕ್ರಮಾದಿತ್ಯನು ಚಂದ್ರಲೇಖೆಯನ್ನು ನೋಡಿದ್ದನು. ಅವಳ ರೂಪ ಲಾವಣ್ಯಗಳು ಆಮರಣವಾಗಿ ಅವನ ಸ್ಮೃತಿಪಟಲದಿಂದ ಮರೆಯಾಗುವಂತಿರಲಿಲ್ಲ. ವಿಕ್ರಮಾದಿತ್ಯನು ದಂಡಯಾತ್ರೆಗೆ ಹೊರಟಾಗ ಶಿಲಾಹಾರ ರಾಜ ಮಾರಸಿಂಹನು ಒಪ್ಪಂದ ಮಾಡಿಕೊಂಡು, ಒಂದು ದಿನ ಅವನನ್ನು ಅತಿಥಿಯಾಗಿ ಉಳಿಸಿಕೊಂಡಿದ್ದನು. ಅಂದು ವಿಖ್ಯಾತನಾದ ಕರ್ನಾಟಕ ಸಾರ್ವಭೌಮನನ್ನು ನೋಡಬೇಕೆಂದು ಕುತೂಹಲದಿಂದ ಚಂದ್ರಲೇಖೆಯು ಉಪ್ಪರಿಗೆಯ ಮುಂಭಾಗಕ್ಕೆ ಬಂದಳು. ವಿಕ್ರಮಾದಿತ್ಯನು ಆ ಅಟ್ಟಾಲಿಕೆಯು ಕೆಳಗಿನ ಭಾಗದಲ್ಲಿ ಹೊರಟಿದ್ದನು. ಆಗ ಅಕಸ್ಮಾತ್ತಾಗಿ ಅವನಿಗೆ ಚಂದ್ರಲೇಖೆಯ ಭೆಟ್ಟಿಯಾಯಿತು. ವಿಕ್ರಮಾದಿತ್ಯನು ಆ ಜಗನ್ಮೋಹಿನಿಯನ್ನು ನೋಡಿ ದಂಗುಬಡೆದನು. ಚಂದ್ರಲೇಖೆಯಾದರೂ ತ್ರಿಭುವನಮಲ್ಲ ವಿಕ್ರಮಾದಿತ್ಯನನ್ನು ನೋಡಿ ಬೆರಗಾದಳು. ಕೆಲವು ಕ್ಷಣ ಅವರ ಇಬ್ಬರ ದೃಷ್ಟಿ ಮಿಲನವಾಯಿತು. ತರುವಾಯ ಇಬ್ಬರೂ ಬಲುಮೆಯಿಂದ ತಮ್ಮ ದೃಷ್ಟಿಗಳನ್ನು ಬಿಡಿಸಿಕೊಂಡು ಕಾಲು ಕಿತ್ತಿದರು. ವಿಕ್ರಮಾದಿತ್ಯನಿಗೆ ಅಂದು ನೋಡಿದ ರೂಪವು ಇಂದು ಕಣ್ಣಮುಂದೆ ಕಟ್ಟಿದಂತಾಯಿತು ಕೆಲವು ವೇಳೆ ವಿಚಾರದಲ್ಲಿ ಮುಳುಗಿದ ಮೇಲೆ ಅವನು ಬಿಲ್ಹಣ ಕವಿಯನ್ನು ಕುರಿತು– "ಕವಿಪುಂಗವರೆ, ನೀವು ಹೇಳುತ್ತಿರುವ ಹಾಗೆ ಚಂದ್ರಲೇಖೆಯು ಜಗನ್ಮೋಹಿನಿಯೇ ಇರುವಳು" ಎಂದು ನುಡಿದು, ಅವನು ಪ್ರತಿಹಾರಿಗೆ- "ನೀನು ಕರಾಡದ ದೂತನನ್ನೂ, ಚಂದ್ರಲೇಖೆಯ ಸಖಿಯನ್ನೂ ಅರಮನೆಗೆ ಕಳುಹಿಸು" ಎಂದು ಹೇಳಿದನು.

"ಮಹಾರಾಜರೆ, ಚಂದ್ರಲೇಖಾ ದೇವಿಯು ಕರ್ನಾಟಕ ಸಾಮ್ರಾಟರಾದ ತಮ್ಮ ಅಂತಃಪುರವನ್ನು ಸೇರಲು ತಕ್ಕವಳಿರುವಳು. ಕಾಶ್ಮೀರಾಧಿಪತಿಗಳಾದ ಹರ್ಷರಾಜರು ಅವಳನ್ನು ವರಿಸಲು ಉತ್ಕಟೇಚ್ಛೆಯುಳ್ಳವರಾಗಿರುವಂತೆ ತೋರುವದು. ನಾನು ಕರಾಡದಲ್ಲಿ ಕೆಲದಿನ ಮಾರಸಿಂಹರ ಅತಿಥಿಯಾಗಿ ಉಳಿದಿದ್ದೆನು. ಕಾಶ್ಮೀರವು ನನ್ನ ಜನ್ಮಭೂಮಿಯಾದುದರಿಂದ ಅಲ್ಲಿಯ ಪರಿಸ್ಥಿತಿಯ ವಿಷಯವಾಗಿ ಮಾರಸಿಂಹರು ನನ್ನನ್ನು ವಿಚಾರಿಸಿದರು. ನಾನು ಅವರಿಗೆ ನನ್ನ ಜನ್ಮ ಭೂಮಿಯ ಯಥಾಸ್ಥಿತ ಪರಿಚಯ ಮಾಡಿಕೊಟ್ಟೆನು. ತಮ್ಮ ಕುಮಾರಿಯನ್ನು ಕಾಶ್ಮೀರಾಧಿಪತಿಗೆ ಕೊಡುವ ತಮ್ಮ ಇಚ್ಛೆಯನ್ನೂ ಮಾರಸಿಂಹರು ನನ್ನೆದುರಿಗೆ ಪ್ರಕಟಿಸಿದ್ದರು. ಈಗ ಸ್ವಯಂವರದ ಆಟವನ್ನೇಕೆ ಹೂಡಿದರೋ ತಿಳಿಯದು. ಬಹುತರವಾಗಿ ಚಂದ್ರಲೇಖಾ ದೇವಿಯು ಮನಸ್ಸಿನಲ್ಲಿ ಹರ್ಷರಾಜನನ್ನು ವರಿಸುದಿರಲಿಕ್ಕಿಲ್ಲವೆಂದು ಈ ಘಟನೆಯಿಂದ ಊಹಿಸಲು ಅಡ್ಡಿಯಿಲ್ಲ. ಕರಾಡದ ದೂತನೂ, ಚಂದ್ರಲೇಖೆಯ ಸಖಿಯೂ ಇಲ್ಲಿಗೆ ಬರಬೇಕಾದರೆ ಬಹುಮಟ್ಟಿಗೆ ಅವರು ವಧುವಿನ ಸಂದೇಶವನ್ನು ತಂದಿರಬಹುದು" ಎಂದು ಬಿಲ್ಹಣ ಕವಿಯು ವಿಕ್ರಮಾದಿತ್ಯನಿಗೆ ಹೇಳಿದನು.

ತರುವಾಯ ಆಸ್ಥಾನ ಕವಿಗಳೊಡನೆ ಹಾಗು ಈ ಹೊಸ ಕವಿಯಾದ ಬಿಲ್ಹಣನೊಡನೆ ಬೇರೆಬೇರೆ ವಿಷಯಗಳ ಬಗ್ಗೆ ವಿಕ್ರಮಾದಿತ್ಯನು ಸ್ವಲ್ಪ ವೇಳೆ ಮಾತಾಡಿ ಓಲಗವನ್ನು ವಿಸರ್ಜಿಸಿದನು.

## ೧೬ ಪ್ರಣಯ ಪತ್ರಿಕೆಯ ಪ್ರತ್ಯುತ್ತರ

ಮಹಾಶ್ವೇತೆಗೆ ಸಾವಳದೇವಿಯ ಮಂದಿರದಲ್ಲಿ ಆತಿಥ್ಯ ಹೊಂದಲು ವ್ಯವಸ್ಥೆ ಮಾಡಲ್ಪಟ್ಟಿತು. ಸಾವಳದೇವಿಯು ಮಹಾಶ್ವೇತೆಯನ್ನು ಗೌರವಿಸಿದಳು. ಅವಳ ಊಟ-ಉಪಚಾರಗಳ ವ್ಯವಸ್ಥೆಯು ಸನ್ಮಾನನೀಯ ರೀತಿಯಲ್ಲಿ ಮಾಡಲ್ಪಟ್ಟಿತು. ಭೋಜನೋತ್ತರದಲ್ಲಿ ಸಾವಳದೇವಿಯು ಅವಳನ್ನು ತನ್ನ ಮಂಚದ ಮೇಲೆ ಕುಳ್ಳಿರಿಸಿಕೊಂಡು ಕರಾಡದ ರಾಜಕುಮಾರಿ ಚಂದ್ರಲೇಖಾ ದೇವಿಯ ಸಂಬಂಧವಾಗಿ ಮಾತಾಡತೊಡಗಿದಳು. ವಿಕ್ರಮಾದಿತ್ಯನಿಗೆ ಸಾವಳದೇವಿಯಲ್ಲದೆ ಬೇರೆ ಮೂರು ಜನ ಭಾರ್ಯೆಯರಿದ್ದರು. ಎರಡನೆಯವಳು ಲಕ್ಷ್ಮಾದೇವಿ. ಮೂರನೆಯವಳು ಕದಂಬ ರಾಜನಾದ ಟಿಕ್ಕನ ಕುಮಾರಿ ಜಕ್ಕಲದೇವಿಯು. ನಾಲ್ಕನೆಯವಳು ಮಲ್ಲಿಯ ಮಹಾದೇವಿ. ಈ ನಾಲ್ಕುಜನ ಹೆಂಡಿರು ವಿಕ್ರಮಾದಿತ್ಯನಿಗಿದ್ದರೂ ಚಂದ್ರಲೇಖಾದೇವಿಯಂಥಹ ಜಗನ್ಮೋಹಿನಿಯು ಐದನೆಯ ಹೆಂಡತಿಯಾಗಲು ಅಪೇಕ್ಷಿಸುತ್ತಿರುವದು ಸಾವಳದೇವಿಗೆ ವಿಸ್ಮಯ ಜನಕ ಸ್ಥಿತಿಯಾಗಿತ್ತು. ಇವೆಲ್ಲ ಸಂಗತಿಗಳು ಚಂದ್ರಲೇಖೆಗೆ ಗೊತ್ತಿಲ್ಲದೆ ಹೋಗಿ ಹಿಂದಿನಿಂದ ಪಶ್ಚಾತ್ತಾಪಕ್ಕೆ ಈಡೇರಬಾರದೆಂಬ ಉದ್ದೇಶದಿಂದ ಅವಳು ಎಲ್ಲ ವಿಷಯವನ್ನೂ ಮಹಾಶ್ವೇತೆಯ ಮುಖಾಂತರವಾಗಿ ಅವಳ ಒಡತಿಗೆ ತಿಳಿಸಬೇಕೆಂದು ಯೋಚಿಸಿ ಅವಳನ್ನು ತನ್ನ ವಿಶ್ರಾಂತಿ ಭವನಕ್ಕೆ ಕರೆಯಿಸಿದಳು.

“ಮಹಾಶ್ವೇತೆ, ಮಹಾರಾಜರ ಮುಖದಿಂದ ನಿನ್ನ ಒಡತಿಯ ಅಪೇಕ್ಷೆಯು ನನಗೆ ತಿಳಿಯಿತು. ಮಹಾರಾಜರಿಗೆ ನಾಲ್ಕುಜನ ಪತ್ನಿಯರು ಉಂಟು. ಅವರು ಈಗ ನಾಲ್ವತ್ತು ವರ್ಷದ ವಯಸ್ಸಿನವರು. ವರಾಪೇಕ್ಷಿ ವಧುವಿಗೆ ವರನ ವಿಷಯವಾಗಿ ಎಲ್ಲ ಸಂಗತಿಗಳು ಗೊತ್ತಿರುವದು ಅತ್ಯಂತ ಆವಶ್ಯಕ. ಹಿಂದಿನಿಂದ ಆ ಸಂಗತಿ ತಿಳಿದಿರಲಿಲ್ಲ; ಇದು ಗೊತ್ತಿದ್ದಿಲ್ಲ ಮೊದಲಾದ ವಿಚಾರಗಳು ಮನಸ್ಸಿನಲ್ಲಿ-ಬಂದು ತಲ್ಲಣಗೊಳ್ಳುವ ಪ್ರಸಂಗ

ಒದಗಬಾರದು. ಚಂದ್ರಲೇಖೆಯಂತಹ ನಿರ್ಜರಾಂಗನೆಗೆ ನವತರುಣ ರಾದ ರಾಜಕುಮಾರರಿಗೇನು ಕಡಿಮೆ? ನಿನ್ನ ಸಖಿಗೆ ನಾನು ಹೇಳುತ್ತಿರುವ ಎಲ್ಲ ಸಂಗತಿಗಳು ತಿಳಿದಿರುವವೆ?"

"ದೇವಿ, ಚಂದ್ರಲೇಖಾ ದೇವಿಯವರಲ್ಲಿ ವಿಕ್ರಮಾದಿತ್ಯರ ವಿಷಯ ವಾಗಿ ನೆಲೆಗೊಂಡ ಪ್ರೇಮ ಪ್ರಣಯಗಳು ಸ್ವಾಭಾವಿಕವಾದವುಗಳಿರುವವು. ಪರಪ್ರೇರಣೆಯಿಂದ ಅವು ನೆಲೆಗೊಂಡಿಲ್ಲ; ವಿಕ್ರಮಾದಿತ್ಯ ಮಹಾರಾಜರು ಕರ್ನಾಟಕದ ಸಾಮ್ರಾಜ್ಯದ ಸಾರ್ವಭೌಮರಿರುವರೆಂಬ ಉದ್ದೇಶದಿಂದ ನೆಲೆಗೊಂಡಿಲ್ಲ. ಮಹಾರಾಜರು ದಂಡಯಾತ್ರೆಗೆ ಹೊರಟಾಗ ಕರಾಡದಲ್ಲಿ ಒಂದು ದಿನ ವಸತಿ ಮಾಡಿದ್ದರು. ಆಗ ಚಂದ್ರಲೇಖಾ ದೇವಿಯವರು ಸ್ವಾಭಾವಿಕವಾಗಿಯೇ ನಿಮ್ಮ ಪತಿರಾಯರಲ್ಲಿ ಪ್ರಣಯವುಳ್ಳವರಾದರು. ವಿಕ್ರಮಾದಿತ್ಯ ಮಹಾರಾಜರಾದರೂ ನನ್ನ ಒಡತಿಯಲ್ಲಿ ಪ್ರೇಮವಿಟ್ಟ ಬಗ್ಗೆ ಅವರು ಮನೋಮನ ನಂಬಿಕೆ ಮಾಡಿಕೊಂಡಿರುವರು. ನೀವು ಹೇಳು ತ್ತಿರುವ ವಿಷಯಗಳೆಲ್ಲವೂ ನನ್ನ ಒಡತಿಗೆ ಗೊತ್ತಿವೆ. ಈ ವಿಷಯಗಳು ಯಾವೂ ಅವರಿಗೆ ಅಡ್ಡಿಯನ್ನುಂಟುಮಾಡುವದಿಲ್ಲ. ಮನಸ್ಸಿಗೆ ಬೇಸರ ಪಡಿಸುವದೂ ಇಲ್ಲ. ನಿಮ್ಮಂತಹ ಸುಹೃದಯದ ಸವತಿಯರಿರುವದು ಭೂಷಣವೇ ಸರಿ. ಅವರ ತಿಳುವಳಿಕೆ ಹೀಗೆಯೇ ಇರುವದು. ದೇವಿ, ನಮ್ಮ ದೇವಿಯವರು ನಿಮ್ಮಂತೆಯೇ ಮಹಾನುಭಾವಿಗಳಾಗಿರುವರು. ಅವರಲ್ಲಿ ಅಸೂಯಾಗುಣವಿಲ್ಲ. ಅವರ ಸಮತ್ವ ಭಾವನೆ ಪ್ರಶಂಸನೀಯ ವಿದೆ. ನಾನು ಒಬ್ಬ ದಾಸಿಯಾಗಿದ್ದರೂ ನನ್ನನ್ನು ಗೆಳತಿಯಂತೆಯೂ, ಒಡಹುಟ್ಟಿದವಳಂತೆಯೂ ನೋಡುತ್ತಿರುವರು. ನಾನಾದರೂ ಅವರನ್ನು ನನ್ನ ಒಡತಿಯೆಂದು ಭಾವಿಸದೆ ಒಡಹುಟ್ಟಿದವರಹಾಗೆ ಕಾಣುತ್ತಿರುವೆನು. ನನ್ನಂತಹ ದಾಸಿಯಲ್ಲಿ ಈ ವಿಧದ ಪ್ರೇಮ ತೋರಿಸ್ತುವ ನನ್ನ ಒಡತಿ ಯವರು ನಿಮ್ಮಂತಹ ಉದಾರ ಹೃದಯದ ಸವತಿಯರನ್ನು ಕಂಡರೆ ಎಷ್ಟು ಹಿಗ್ಗುವರೆಂಬದನ್ನು ನಾನು ಈಗ ಹೇಳಲಾರೆನು. ನಾನು ಹೇಳುತ್ತಿರುವ ಮಾತುಗಳು ಮುಂದೆ ತಾವಾಗಿ ಅನುಭವಕ್ಕೆ ಬರುವವಿರುವ ಮೂಲಕ ಅವುಗಳನ್ನು ಅಷ್ಟು ವಿಸ್ತಾರ ಪೂರ್ವಕ ತಿಳಿಸಬೇಕಾದ ಅಗತ್ಯವೂ ಇಲ್ಲ.

ನೀವೆಲ್ಲರೂ ರಾಣಿ ಮಹಾರಾಣಿಯವರು ನಿಮ್ಮ ಪತಿಗೆ ಸ್ವಯಂವರಕ್ಕೆ ಹೊರಡಲು ಸಂತೋಷದಿಂದ ಸಮ್ಮತಿಯಿಯಾಯಬೇಕೆಂದು ಬೇಡಿಕೊಳ್ಳುವೆನು."

"ಮಹಾರಾಜರ ಇಚ್ಛೆಗೆ ನಾವು ಯಾರೂ ವಿರೋಧಿಗಳಲ್ಲ. ಚಂದ್ರಲೇಖಾ ದೇವಿಯಂತಹ ದಿವ್ಯ ಲಾವಣ್ಯಮಯಿಯು ಚಾಲುಕ್ಯ ಸಾಮ್ರಾಟನ ರಾಣಿಯೆನಿಸಿ, ರಾಜಮಂದಿರವನ್ನು ಭೂಷಿತಗೊಳಿಸುವದು ನಮ್ಮೆಲ್ಲರಿಗೂ ಅಭಿಮಾನದ ಸಂಗತಿ. ನೀನು ನಿನ್ನ ಒಡತಿಗೆ ಈ ವಿಷಯವನ್ನು ಮರೆಯದೆ ಹೇಳು."

ಸಾವಳ ದೇವಿಯು ಹೀಗೆ ನುಡಿಯುತ್ತಿರುವಾಗ ವಿಕ್ರಮಾದಿತ್ಯ ಮಹಾರಾಜನು ಅಲ್ಲಿಗೆ ಬಂದನು. ಆದುದರಿಂದ ಅವರ ಸಂಭಾಷಣಗಳು ಅಲ್ಲಿಗೇ ನಿಂತವು. ವಿಕ್ರಮಾದಿತ್ಯನು ಬಂದಮೇಲೆ ಸಾವಳದೇವಿಯನ್ನು ಕುರಿತು– "ನಾನು ಬಂದುದರಿಂದ ನಿಮ್ಮ ಮಾತು–ಕತೆಗಳಿಗೆ ಅಡ್ಡಿಯಾಗಲಿಲ್ಲವಷ್ಟೆ?"

"ಅಡ್ಡಿಯಾಗಲಿಲ್ಲ; ನಿಮ್ಮ ಆಗಮನವು ಅನುಕೂಲವೇ ಆಯಿತು" ಎಂದು ಸಾವಳದೇವಿಯು ನಗುತ್ತ– "ಹೋದಹೋದಲ್ಲಿ ಒಬ್ಬೊಬ್ಬ ಪತ್ನಿಯನ್ನು ಗಂಟು ಹಾಕಿಕೊಳ್ಳುವ ಚಟವೇ ಬಿದ್ದಹಾಗೆ ತೋರುವದು ಮಹಾರಾಜರಿಗೆ!"

"ಇಂತಹ ಚಟವು ದುಶ್ಚಟಗಳಲ್ಲಿ ಗಣಿಸಲ್ಪಡುವದೇನು ಪ್ರಿಯೆ?"

"ನಿಮಗೆ ಹೇಗೆ ತೋರುವದು?"

"ಬಹಳ ಜನ ಹೆಂಡರಿರುವದು ಗಂಡನಿಗೆ ಭೂಷಣ; ಬಹುಪತ್ನೀತನನ್ನು ವರಿಸುವದು ವಧುವಿಗೆ ಭೂಷಣ. ಭಗವಾನ್ ಶ್ರೀ ಕೃಷ್ಣನಿಗೆ ಹದಿನಾರು ಸಾವಿರ ಹೆಂಡರಿದ್ದುದರಿಂದ ಅವನು ಭಗವಂತನಾದನು. ನಮ್ಮಂತಹ ಸಾರ್ವಭೌಮರಿಗೆ ಅಷ್ಟುಜನ ಬೇಡ, ಹತ್ತೆಂಟಾದರೂ ಬೇಡವೆ?"

"ನಿಮ್ಮ ಅನುಕೂಲಸಿಂಧುವು ನೆಟ್ಟಗಿದೆ. ಭಗವಾನ್ ಶ್ರೀಕೃಷ್ಣನ ಉಪಮೆ ಕೊಡುವವರಾದ ನೀವು ಅವನ ವಾಕ್ಯವನ್ನು ಅನುಸರಿಸುವಿರಿ.

'ವಾಸಾಂಸಿ ಜೀರ್ಣಾನಿ ಯಥಾವಿಹಾಯ ನವಾನಿ ಗೃಹ್ಣಾತಿ ನರೋಽಪರಾಣಿ' ಎಂಬಂತೆ ಹೊಸ ಹೆಂಡತಿ ಬಂದೊಡನೆಯೆ ನಮ್ಮಂತಹ ಹಳೆಯ ಹೆಂಡಿರು ತಿರಸ್ಕೃತರಾಗಬಹುದಾದ ಪ್ರಸಂಗವೆಲ್ಲಿ ಬರುವದೋ ಎಂಬ ಅಂಜಿಕೆ ನಮಗೆ! ಈ ಅಂಜಿಕೆಯು ನಿವಾರಣೆಯಾಗುವವರೆಗೆ ನಾವು ನಾಲ್ವರೂ ನಿಮ್ಮ ಮೇಲೆ ಏಕೆ ದಾಳಿ ಮಾಡಬಾರದು ಹೇಳಿರಿ?''

ನಗುತ್ತ ಸಾವಳದೇವಿಯಾಡಿದ ನುಡಿಗೆ ವಿಕ್ರಮಾದಿತ್ಯನೂ ನಕ್ಕನು. ಮಹಾಶ್ವೇತೆಯೂ ನಕ್ಕಳು. ಅನಂತರದಲ್ಲಿ ವಿಕ್ರಮಾದಿತ್ಯನು– "ನಿಮ್ಮ ಮನಸ್ಸಿನೊಳಗಿನ ಅಂಜಿಕೆಯನ್ನು ಚಂದ್ರಲೇಖೆಯೇ ನಿವಾರಿಸುವಳು. ಅವಳು ರೂಪದಲ್ಲಿ ಹೇಗೋ ಹಾಗೆ ಗುಣದಲ್ಲಿಯೂ ಅದ್ವಿತೀಯಳಿರುವಳು. ಅವಳ ಸಹವಾಸವು ನನ್ನಷ್ಟೇ ನಿಮಗೂ ಸುಖದಾಯಿಯಾಗುವದು.''

"ಬೇಕಾದದ್ದು ಬೆಲ್ಲಕ್ಕಿಂತ ಸವಿ, ಸಾಗಲಿ ನಿಮ್ಮ ಲಗ್ನದ ಸಂತೆ!'' ಎಂದು ಸಾವಳದೇವಿಯು ನುಡಿದು– "ನಾನೇನೋ ಹೊಟ್ಟೆಕಿಚ್ಚು ಪಡುವದಿಲ್ಲ. ನನ್ನ ಈ ನಂಬಿಕೆಯ ಮಾತಿನ ಮೇಲೆ ವಿಶ್ವಾಸವಿದ್ದರೆ ನಿಮ್ಮ ನೂತನ ವಧುವಿನ ಪ್ರಣಯಪತ್ರಿಕೆಯನ್ನು ತೋರಿಸಬಹುದು.''

"ಆ ಪತ್ರದಲ್ಲಿ ನಾನು ಬಾಯಿಯಿಂದ ಹೇಳಿದ್ದಕ್ಕಿಂತ ಹೆಚ್ಚೇನೂ ಇಲ್ಲ'' ಎಂದು ವಿಕ್ರಮಾದಿತ್ಯನು ನಗುತ್ತ ನುಡಿದು ಪ್ರಣಯ ಪತ್ರಿಕೆಯನ್ನು ಪತ್ನಿಯ ಕೈಯಲ್ಲಿ ಕೊಟ್ಟನು.

ಸಾವಳದೇವಿಯು ಪತ್ರವನ್ನೋದಿದ ಮೇಲೆ– "ಸೌಂದರ್ಯದಲ್ಲಿಯೂ ಅದ್ವಿತೀಯಳು; ಗುಣದಲ್ಲಿಯೂ ಅದ್ವಿತೀಯಳು, ಭಾಷೆಯಲ್ಲಿಯೂ ಅದ್ವಿತೀಯಳು; ಪ್ರಣಯದ ಬೆಡಗಿನಲ್ಲಿಯೂ ಅದ್ವಿತೀಯಳು! ಇಂತಹ ಸವತಿಯಿರುವದು ನಮಗೂ ಬೇಕಾದ ವಿಷಯ. ಬೇಕಾದದ್ದು ಬೆಲ್ಲಕ್ಕಿಂತ ಸವಿಯಾಗುವದೇ ಸರಿ" ಎಂದು ವಿನೋದ ಮಾಡುತ್ತ ಅವಳು ಹೇಳಿದಳು.

ಗಂಡ–ಹೆಂಡಿರ ಈ ವಿನೋದ ಸಂಭಾಷಣಗಳನ್ನು ಕೇಳಿದ ಮಹಾಶ್ವೇತೆಗೆ ಸಂಭ್ರಮವಾಯಿತು. ಆಗ ಅವಳು ತನ್ನ ಮನೋದಯವನ್ನು ವ್ಯಕ್ತಗೊಳಿಸಲು– ''ಮಹಾರಾಜ್ಞಿಯವರೆ, ಮಹಾರಾಜರೆ, ನೀವು

ವಿನೋದದ ಕಣಿಯಾಗಿರುವಿರಿ: ನಿಮ್ಮ ಮಂದಿರವು ಪ್ರೇಮದ ಮಂದಿರವು ನಿಮ್ಮ ಹೃದಯ ಮಂದಿರವೂ ಪ್ರೇಮಭರಿತವಾಗಿಯೆ ಇದೆ. ಇಂತಹ ಆನಂದ ಮಂದಿರದಲ್ಲಿದ್ದು, ಆನಂದಸಾಗರದಲ್ಲಿ ಲೋಲಾಡುತ್ತ ಆತ್ಮಾನಂದ ಹೊಂದುವ ಕಾಲವು ಚಂದ್ರಲೇಖಾದೇವಿಯವರಿಗೆ ಸನ್ನಿಹಿತವಾಗಿದ್ದುದು ಅವರ ಪ್ರಾಕ್ತನ ಪುಣ್ಯವಿಶೇಷದಿಂದಲೆ ಎಂದು ಭಾವಿಸುವೆನು'' ಎಂದು ನುಡಿದು— ''ನಮ್ಮ ಒಡತಿಯರ ಪ್ರಣಯ ಪತ್ರಿಕೆಗೆ ಉತ್ತರ ದೊರಿತಹಾಗಿದ್ದರೂ, ಪ್ರತ್ಯುತ್ತರ ದೊರೆಯಬೇಕೆಂದು ಇಚ್ಛಿಸುವೆನು.''

''ಯಾರಿಂದ ಉತ್ತರ ಬೇಕು?'' ಎಂದು ಸಾವಳದೇವಿಯು ಪ್ರಶ್ನೆ ಮಾಡಿದಳು.

''ಯಾರಿಂದ ದೊರೆತರೂ ನನಗೆ ಸರಿ ಹೋಗುವದು. ಆದರೆ ನನ್ನ ಒಡತಿಗೆ ಹೆಚ್ಚು ಸಂತೋಷವೆನಿಸಬೇಕಾದರೆ ಯಾರಿಗೆ ಪತ್ರವಿದೆಯೋ ಅವರಿಂದ ಉತ್ತರ ದೊರೆಯಬೇಕೆಂದು ನನ್ನ ಮತವಿದೆ.''

ವಿಕ್ರಮಾದಿತ್ಯನು ಪ್ರತ್ಯುತ್ತರವನ್ನು ಬರೆದು ಸಾವಳದೇವಿಯ ಕೈಯಲ್ಲಿ ಕೊಟ್ಟು, ''ಓದಿನೋಡಿ ನೀನೇ ನಿನ್ನ ಕೈಯಿಂದ ಮಹಾಶ್ವೇತೆಗೆ ಕೊಡು.''

ಸಾವಳದೇವಿಯು ಪತ್ರ ತೆಗೆದುಕೊಂಡು ಓದತೊಡಗಿದಳು—

''ಪ್ರಿಯೆ ಚಂದ್ರಲೇಖೆ,

ಅಂದು ಹುಟ್ಟಿದ ಪ್ರೇಮಾಂಕುರವು ವೃಕ್ಷರೂಪಿಯಾಗಿ, ಫಲದ್ರೂಪ ಹೊಂದುತ್ತಿರುವದು ಸಂತೋಷದ ಸಂಗತಿ. ನಿನ್ನ ಇಚ್ಛೆಯನ್ನು ಪೂರೈಸಲು ಸ್ವಯಂವರಕ್ಕೆ ಬರುವೆನು. ಕರ್ನಾಟಕ ಸಮ್ರಾಟನನ್ನು ವರಿಸಲು ನೀನು ಹೇಗೆ ಆತುರಳಾಗಿರುವೆಯೊ ಹಾಗೆಯೆ ಜಗನ್ಮೋಹಿನಿಯಾದ ನಿನ್ನನ್ನು ವರಿಸಲು ನಾನು ಆತುರನಾಗಿರುವೆನು.

ನಿನ್ನ ಪ್ರಣಯೇಚ್ಛು,

ವಿಕ್ರಮಾಂಕದೇವ''

ಪತ್ರವನ್ನೋದಿದ ಮೇಲೆ ಸಾವಳದೇವಿಯು– “ಹೃದಯದಲ್ಲಿ ಪ್ರೇಮರಸವಿದ್ದಹಾಗೆ ಭಾಷೆಯಲ್ಲಿಯೂ ಆ ರಸವಿದೆ” ಎಂದು ನುಡಿದು ಪತ್ರವನ್ನು ಮಹಾಶ್ವೇತೆಯ ಸ್ವಾಧೀನ ಪಡಿಸಿದಳು.

ತರುವಾಯ ಮಹಾಶ್ವೇತೆಯು ಮಹಾರಾಜನನ್ನೂ, ಮಹಾರಾಣಿಯನ್ನೂ ಕುರಿತು– “ಉಭಯತರೂ ನನಗೆ ನಿರೋಪ ಕೊಡಿರಿ.”

“ಹೋಗಿಬಾ!” ಎಂದು ವಿಕ್ರಮಾದಿತ್ಯನು ನುಡಿದನು.

“ಹೋಗಿ ಪ್ರಣಯ ದೇವಿಯನ್ನು ಕರೆದುಕೊಂಡೇ ಬಾ” ಎಂದು ಸಾವಳದೇವಿಯು ನುಡಿದಳು.

“ಪ್ರಣಯ ದೇವನೊಡನೆ ಪ್ರಣಯ ದೇವಿಯು ಬಂದೇ ಬರುವಳು. ಒಡತಿಯ ಪಡಿನೆಳಲಿನಂತೆ ನಾನು ಅವಳ ಜೊತೆಯಲ್ಲಿ ಇದ್ದೇ ಇರುವೆನು.”

ಮಹಾಶ್ವೇತೆಯು ಹೀಗೆ ನುಡಿದು ಅರಸು ಅರಸಿಯರ ಅಪ್ಪಣೆ ಪಡೆದು ಕಲ್ಯಾಣನಗರಿಯಿಂದ ಕರಾಡದ ಕಡೆಗೆ ಪಯಣ ಮಾಡಿದಳು.

# ೧೭ ಚಂದ್ರಲೇಖೆಯ ಸ್ವಯಂವರ

ಮಾರಸಿಂಹನ ರಾಜಧಾನಿಯಾದ ಕರಾಡದಲ್ಲಿ ಗೊಂದಲವೇ ಗೊಂದಲ. ರಾಜಕುಮಾರಿ ಚಂದ್ರಲೇಖೆಯ ಸ್ವಯಂವರದ ನಿಮಿತ್ತವಾಗಿ ಭರತಖಂಡದೊಳಗಿನ ಬಹುತರ ರಾಜಮಹಾರಾಜರೂ ರಾಜಕುಮಾರರೂ ಬಂದಿದ್ದರು. ಇನ್ನು ಅಪವಾದವಾಗಿ ಉಳದಿದ್ದರೆ ತೀರ ವಯೋವೃದ್ಧರೂ, ಚಂದ್ರಲೇಖೆಗಿಂತ ಚಿಕ್ಕವರೂ, ವಿವಾಹವಯಸ್ಕರಲ್ಲದಂತಹರೂ ಅತಿ ಕುರೂಪಿಗಳೆಂದು ಖ್ಯಾತಿಗೊಂಡವರೂ ಇರಬಹುದಾಗಿದ್ದಿತು. ದಿಕ್ಷಿಣಾಪಥ ದಲ್ಲಾಗಲಿ, ಉತ್ತರಾಪಥದಲ್ಲಾಗಲಿ ಈ ಬಗೆಯ ವರಸಂದಣಿಯು ಎಂದೂ ಆಗಿರಲಿಕ್ಕಿಲ್ಲವೆಂದು ಜನರು ಅನ್ನತೊಡಗಿದ್ದರು. ಮಾರಸಿಂಹನು ಎಲ್ಲ ಅತಿಥಿಗಳಿಗೂ ಯೋಗ್ಯ ಸೌಕರ್ಯಗಳನ್ನೊದಗಿಸಿ ಕೊಟ್ಟಿದ್ದನು. ಅರಮನೆಯ ಪಟಾಂಗಣದಲ್ಲಿ ಭವ್ಯವಾದ ಸ್ವಯಂವರ ಮಂಟಪವು ಸಿದ್ಧವಾಗಿತ್ತು. ಸ್ವಯಂವರದ ಕಾಲವು ಸಮಿಾಪಿಸಿತ್ತು. ಎಲ್ಲ ಮಹಾರಾಜರೂ ರಾಜರೂ ಯುವರಾಜರೂ ಸ್ವಯಂವರ ಮಂಟಪದಲ್ಲಿ ಸಾಲು ಸಾಲಾಗಿ ಮಂಡಿಸಿದ್ದ ಆಸನದ ಮೇಲೆ ಮಂಡಿತರಾಗಿದ್ದರು. ಎಲ್ಲರೂ ಚಾತಕದಂತೆ ಅಪ್ಸರಾಂಗನೆಯಂತಹ ಚಂದ್ರಾನನೆ ಚಂದ್ರಲೇಖೆಯ ಬರುವಿಕೆಯನ್ನು ನಿರೀಕ್ಷಿಸತೊಡಗಿದ್ದರು. ಈಗ ಬರುವಳು, ಆಗ ಬರುವಳು, ಮುಹೂರ್ತ ಸಮಿಾಪಿಸಿತು, ಬೇಗ ಬರುವಳು ಎಂದು ವರಜನರು ಗುಜುಗುಜು ಮಾತಾಡುತ್ತಿರುವದರ ಹೊರತು ಬೇರೆ ಧ್ವನಿಯಿರಲಿಲ್ಲ. ಒಬ್ಬನು ಮಿಾಸೆ ಹುರಿಮಾಡಿ ಕನ್ನಡಿ ನೋಡುವನು; ಮತ್ತೊಬ್ಬನು ಮುಕುಟ ಸರಿಮಾಡಿ ಗೋಣು ಹೊರಳಿಸುವನು; ಮಗದೊಬ್ಬನು ಕಂಠಹಾರವನ್ನು ಸರಿಪಡಿಸಿಕೊಂಡು ಎದೆ ನೋಡಿಕೊಳ್ಳುವನು; ಇನ್ನೊಬ್ಬನು ಎಲ್ಲವನ್ನೂ ಬಿಟ್ಟು ಮಂಟಪ ಮಹಾದ್ವಾರವನ್ನೇ ನಿರೀಕ್ಷಿಸುತ್ತಲಿರುವನು. ಪ್ರೇಕ್ಷಕರು ಈ ವರವೃಂದದ ಚೇಷ್ಟೆಗಳನ್ನು ನಿರೀಕ್ಷಿಸುತ್ತ ಮೆಲ್ಲಗು ನಗುತ್ತಲಿದ್ದರು. ಒಂದು ಕಡೆಗೆ ತಂದೆ ಬರಲಿಕ್ಕಿಲ್ಲೆಂಬ ಭಾವನೆಯಿಂದ ಬಂದ ಮಗನು

ತಲೆಬಾಗಿಸಿ ಕುಳಿತದ್ದು ನೋಡಿ ಅವರು ಪಿಸುಗುಡುತ್ತಿದ್ದರು, ಇನ್ನೊಂದು ಕಡೆಗೆ ಮಗನು ಬರಲಿಕ್ಕಿಲ್ಲವೆಂದು ತಂದೆ ಬಂದದ್ದು ನೋಡಿ ನಸುನಗುತ್ತಿದ್ದರು. ಬೇರೊಂದು ಕಡೆಗೆ ಅಣ್ಣನು ಬರನೆಂದು ತಮ್ಮನೂ, ತಮ್ಮನು ಬರಲಾರನೆಂದು ಅಣ್ಣನೂ ಬಂದದ್ದನ್ನು ನೋಡಿ ವಿನೋದ ಮಾಡುತ್ತಿದ್ದರು. ಮುದುಕನಾಗಿದ್ದರೂ ದೇಹಯಷ್ಟಿ ಬಡವಾಗಿಲ್ಲವೆಂಬ ಹೆಮ್ಮೆಯಿಂದ ಬಂದ ವೃದ್ಧ ವರನನ್ನೂ, ಬಡವರಾಗಿದ್ದರೂ ಬಡಕರಾಗಿಲ್ಲವೆಂಬ ಮದದಿಂದ ಬಂದ ಲಘುಜನಪತಿಗಳನ್ನೂ ನೋಡಿ ಅವರು ಹಾಸ್ಯಗೈಯುತ್ತಿದ್ದರು.

ಸ್ವಯಂವರ ಮಂಟಪದಲ್ಲಿ ಹೀಗೆ ಗೊಂದಲ ನಡೆದಾಗ ಗೊತ್ತು ಪಡಿಸಿದ ವೇಳೆಗೆ ವಧುವಾದ ಚಂದ್ರಲೇಖೆಯು ಅಲಂಕೃತಳಾಗಿ ಕೈಯಲ್ಲಿ ಪೂಮಾಲೆಯನ್ನು ಹಿಡಿದುಕೊಂಡು ಸ್ವಯಂವರ ಮಂಟಪವನ್ನು ಪ್ರವೇಶಿಸಿದಳು. ಕೂಡಲೇ ಮಂಟಪದಲ್ಲಿಯ ಸದ್ದಡಗಿಹೋಯಿತು. ಮಹಾಜನಗಳಿಂದ ಕಿಕ್ಕಿರಿದ ಮಂಟಪವು ಜನಗಳಿಲ್ಲವೇನೋ ಎಂಬಹಾಗೆ ಭಾಸವಾಗ ತೊಡಗಿತು. ಎಲ್ಲರ ನೇತ್ರಗಳೂ ಏಕಸಮಯಾವಚ್ಛೇದದಿಂದ ಚಂದ್ರಲೇಖೆಯ ಮುಖದಲ್ಲಿ ನಟ್ಟವು. ಆ ದೃಷ್ಟಿಗಳಿಗೆ ಸಾಮರ್ಥ್ಯವಿದ್ದುದೇ ಆಗಿದ್ದರೆ ಅವಳ ಮುಖವು ಯಾವಗತಿ ಹೊಂದುತ್ತಿತ್ತೋ ಏನೋ ಎಂದು ಚಿಕಿತ್ಸಕ ಬುದ್ಧಿಯುವರು ಮನದಲ್ಲಿಯೇ ಅಂದುಕೊಳ್ಳತೊಡಗಿದ್ದರು. ಒಬ್ಬನು ಕನ್ನಡಕ ಧರಿಸಿ ನೋಡುವನು, ಇನ್ನೊಬ್ಬನು ಅದನ್ನು ತೆಗೆದು ನೋಡುವನು, ಬೇರೊಬ್ಬನು ಕಣ್ಣು ತಿಕ್ಕಿಕೊಂಡು ನೋಡುವನು. ಹೀಗೆ ಒಂದೇ ಎರಡೇ ಅನೇಕಾನೇಕ ಬಗೆಯಾಗಿ ವರರೂ ಪ್ರೇಕ್ಷಕರೂ ನೋಡುತ್ತಿರುವಾಗಲೇ ಕನ್ಯಾಮಣಿಯಾದ ಚಂದ್ರಲೇಖೆಯು ಮಂಟಪದ ಮಧ್ಯಭಾಗದಲ್ಲಿದ್ದ ವೇದಿಕೆಯ ಮೇಲೆ ನಿಂತು ವರವೃಂದದ ಕಡೆಗೆ ಕ್ರಮವಾಗಿ ದೃಷ್ಟಿಕ್ಷೇಪಮಾಡಹತ್ತಿದಳು. ಅವಳ ದೃಷ್ಟಿಯು ವಿಶಿಷ್ಟ ಸ್ಥಳಕ್ಕೆ ಹೋದೊಡನೆಯೇ ಮುಖವು ಬಾಗಿತು. ಮೊಗದಲ್ಲಿ ನಗುವು ತುಂಬಿತು. ತುಂಬಿದ ನಗುವು ದೊಡ್ಡದಾಗದೆ ನಸುವಾಗಿಯೇ ಹೊರಬಿದ್ದಿತು. 'ನನ್ನನ್ನು ನೋಡಿದಳು, ನನ್ನನ್ನು ನೋಡಿ ನಗುವಳು' ಮೊದಲಾದ ಮಾತುಗಳು ವರವೃಂದದ ಕಡೆಯಿಂದ ಅಸ್ಪಷ್ಟವಾಗಿ ಹೊರಬೀಳತೊಡಗಿದವು.

ಸ್ವಲ್ಪ ವೇಳೆಯಮೇಲೆ ಪುರೋಹಿತರು "ಸುಮುಹೂರ್ತವು ಸಮೀಪಿಸಿತು" ಎಂದು ಸಾವಧಾನಗೊಳಿಸಿದರು. ಚಂದ್ರಲೇಖೆಯು ವೇದಿಕೆಯನ್ನಿಳಿದಳು. ಜೊತೆಯಲ್ಲಿ ಅವಳ ದಾಸಿಯೂ ಸಖಿಯೂ ಭಗಿನಿಯೂ ಆಗಿದ್ದ ಮಹಾಶ್ವೇತೆಯು ರಾಜ ಮಹಾರಾಜರು ಕುಳಿತ ಸ್ಥಳಕ್ಕೆ ಅವಳನ್ನು ಕರೆದುಕೊಂಡು ಹೋಗಿ ಒಬ್ಬೊಬ್ಬರನ್ನಾಗಿ ಪರಿಚಯ ಮಾಡತೊಡಗಿದಳು

"ಸಖಿ, ಇವನು ನೋಡೆ ಅಂಗರಾಜ. ಮಂಗನಹಾಗಿದ್ದರೂ ಇಂಗಿತಜ್ಞ"

ಮಹಾಶ್ವೇತೆಯು ಹೀಗೆ ನುಡಿದ ಕೂಡಲೇ ಸರಸ ಕನ್ನಡದ ರಸ ಗಂಧವನ್ನರಿಯದ ಅಂಗರಾಜನು ತನ್ನ ಪ್ರಶಸ್ತಿ ನಡೆದಿದೆಯೆಂದು ಮತ್ತಿಷ್ಟು ಮಂಗನಹಾಗೆ ಮೊಗಮಾಡಿ ಚಂದ್ರಲೇಖೆಯ ಸಿರಿಮೊಗವನ್ನೀಕ್ಷಿಸ ತೊಡಗಿದನು.

"ಸಖಿ, ಇವನು ಕಾಶ್ಮೀರಪತಿ ಹರ್ಷರಾಜ. ಮನದಲ್ಲಿ ಹರ್ಷದ ಲವಲೇಶವಿಲ್ಲದಿದ್ದರೂ ಹರ್ಷ ಹೆಸರನ್ನಿಟ್ಟು ಹರ್ಷಪಡುತ್ತಿರುವನು. ತನ್ನ ದೇಶ ನಂದನವನ. ಆನಂದ ಪಡಬೇಕಾದರೆ ನಂದನವನದಲ್ಲಿಯೇ ಎಂದು ಬೆಡಗಿನ ನುಡಿಗಳನ್ನಾಡುತ್ತಿದ್ದವನು ಇವನೇ ನೋಡೆ."

ಹರ್ಷರಾಜನು ಮಹಾಶ್ವೇತೆಯ ಮಾತಿನ ಮರ್ಮವನ್ನರಿಯದೆ ತನ್ನ ಪ್ರಶಂಸೆ ನಡೆದಿದೆಯೆಂದು ಕೆಮ್ಮಿದನು. ವಧುವು ಕಣ್ಣೆತ್ತಿ ನೋಡಲೆಂದು ಖೇಕರಿಸಿದನು. ವಧುವು ಮುಂದೆ ಹೊರಟಳು. ಒಮ್ಮೆಲೆ ಮಾಲೆ ಹಾಕಿದರೆ ಚಂದವಲ್ಲವೆಂದು ತಿಳಿದು ಮುಂದೆ ಹೋಗಿಬರೋಣವೆಂದು ಮುಂದಡಿಯಿಟ್ಟಳೆಂದು ಕಾಶ್ಮೀರಾಧಿಪತಿಯು ನುಡಿದುಕೊಂಡು ಗಂಭೀರತೆಯಿಂದ ಕುಳಿತನು.

"ಸಖಿ ಇವನು ನೋಡೆ ಕೋಡಗದಂತಹ ಕೊಡಗಿನ ದೊರೆ!"

ಚಂದ್ರಲೇಖೆಯು ತನ್ನನ್ನು ಚನ್ನಾಗಿ ನೋಡಲೆಂದು ಕೊಡಗಿನ ದೊರೆಯು ತನ್ನ ಕೊಡೆಯನ್ನೆತ್ತಲು ಅಂಗರಕ್ಷಕನಿಗೆ ಸನ್ನೆಮಾಡಿದನು.

ಚಂದ್ರಲೇಖೆ ಮತ್ತೆ ಮುಂದೆ ನಡೆದಳು. ಮಹಾಶ್ವೇತೆಯು ಆಸನ ಮಂಡಿತರಾದ ರಾಜ ಮಹಾರಾಜರನ್ನು ತೋರಿಸುತ್ತ– "ಇವನು ಗುರ್ಜರಾಧಿಪತಿ, ಇವನು ಚೇದಿರಾಜ; ಇವನು ಮಾಳವದ ದೊರೆ, ಇವನು ವಂಗರಾಜ, ಇವನು ಕಳಿಂಗದರಸ, ಇವನು ಬಹುದೂರದಲ್ಲಿಯ ಕಾಂಭೋಜದೊಡೆಯ, ಇವನು ಕಣಿವೆಯಾಚೆಯ ಗಾಂಧಾರದಧಿಪತಿ, ಇವನು ಹಿಮಗಿರಿಯ ನೆರೆಯ ನೇಪಾಲದವನಿಪ, ಇವನು ಪಾಂಡ್ಯರಾಜ. ಇವನು ಮಗದಾಧಿಪತಿ, ಇವನು ಸೌರಾಷ್ಟ್ರಭೂಮಿಪ, ಇವನು ಚೇದಿರಾಜ, ಇವನು ಲಾಟಾಧೀಶತನಯ. ಹೀಗೆ ಹೀಗೆ ಹೇಳುತ್ತ ನಡೆದಳು. ಚಂದ್ರಲೇಖೆಯು ಸುಮ್ಮನೆ ಕೆಲವರನ್ನು ನೋಡುತ್ತಲೂ, ಕೆಲವರನ್ನು ನೋಡದೆಯೂ ಸಾಗಿದ್ದಳು. ಒಬ್ಬನು ತನ್ನನ್ನು ನೋಡಲೆಂದು ಲಟಕಿ ಬಾರಿಸುವನು, ಮತ್ತೊಬ್ಬನು ಹುಸಿಗೆಮ್ಮು ಕೆಮ್ಮುವನು, ಮಗದೊಬ್ಬನು ತನ್ನ ಮುಂದಿರುವ ತಾಂಬೂಲದ ಕರಡಿಗೆಯನ್ನು ಕಾರಣವಿಲ್ಲದೆ ಬಾರಿಸುವನು. ಇನ್ನೊಬ್ಬನು ತನ್ನ ಕುಂಡಲಗಳನ್ನು ಸರಿಪಡಿಸಿಕೊಳ್ಳುವಂತೆ ಅಭಿನಯ ಮಾಡುವನು. ಹೀಗೆ ಚೇಷ್ಟೆ ನಡೆದಿರುವಾಗ ಚಂದ್ರಲೇಖೆಯೂ ಮಹಾಶ್ವೇತೆಯೂ ಕರ್ನಾಟಕ ಸಮ್ರಾಟ ವಿಕ್ರಮಾದಿತ್ಯನ ಬಳಿಗೆ ಬಂದರು.

"ಸಖಿ, ಇವರನ್ನು ಕಣ್ತುಂಬ ನಿರೀಕ್ಷಿಸು. ಮಹಾಪುಣ್ಯಶ್ಲೋಕಿಗಳು, ಪ್ರತಾಪನಿಧಿಗಳು, ಮಹಾನುಭಾವರು, ಮಹೋನ್ನತ ವೈಭವಶಾಲಿಗಳು, ಮಹತ್ತರವಾದ ಕೀರ್ತಿಯುತರು, ನಿಖಿಲ ಕರ್ನಾಟಕದ ರಾಜರಾಜೇಶ್ವರರು. ವಿಕ್ರಮಾಂಕದೇವ ಎಂಬ ಅಭಿಧಾನದಿಂದ ಭಾರತದಲ್ಲಿಯೂ ಹೊರಗೂ ಬೆಳಕನ್ನು ಕೆಡಹಿದವರು ಇವರೇ ನೋಡೆ!"

ಚಂದ್ರಲೇಖೆಯು ಮುಖವನ್ನೆತ್ತಿದಳು, ಲಜ್ಜೆಯಿಂದ ಮತ್ತೆ ಬಾಗಿಸಿದಳು. ಮುಖವು ಅರಳಿತು; ನಸುನಗೆಯಿಂದ ಬೆಳಗಿತು. ಆನಂದದಿಂದ ಹೊಳೆಯಿತು. ಉತ್ಸಾಹದಿಂದ ಕಳೆಯೇರಿತು. ಅವಳು ಮತ್ತೆ ಮುಖವೆತ್ತಿದಳು. ಕೈಯೆತ್ತಿದಳು. ಕೈಯಲ್ಲಿಯ ಮಾಲೆಯನ್ನು ವಿಕ್ರಮಾಂಕದೇವನ ಕಂಠದಲ್ಲಿ ಹಾಕಿದಳು!

ಮುಗಿಯಿತು. ಸ್ವಯಂವರದ ಆನಂದದ ಕಾರ್ಯವು ಕೊನೆಗಂಡಿತು. ಅಂದಿನ ಆನಂದದ ಸಂಧಿಯಲ್ಲಿ ಆನಂದಬಟ್ಟವರೇ ಸ್ವಲ್ಪಜನ; ಕಳವಳಗೊಂಡವರೇ ಬಹುಜನ.

ವಿಕ್ರಮಾಂಕದೇವನು ಪತ್ನಿಯ ಪಾಣಿಗ್ರಹಣ ಮಾಡಿ ತನ್ನ ಆಸನದಲ್ಲಿ ವಾಮಭಾಗದಲ್ಲಿ ಕುಳ್ಳಿರಿಸಿಕೊಂಡನು. ಪುರೋಹಿತರು "ಸುಮುಹೂರ್ತೇ ಸಾವಧಾನಃ" ಎಂದು ಅಕ್ಷತಾರೋಪಣ ಮಾಡಿದರು.

"ಅಪಮಾನ! ಅಪಮಾನ!" ಎಂಬ ಕೂಗು ಹಠಾತ್ತಾಗಿ ಕೇಳಬಂದಿತು. ವಿಕ್ರಮಾದಿತ್ಯನು ನೋಡುತ್ತಾನೆ, ಕಾಶ್ಮೀರಾಧಿಪತಿ ಹರ್ಷರಾಜನು ತನ್ನ ಕುಡಿಮೀಸೆಗಳನ್ನು ತಿರುವುತ್ತ ಕೆಡುಗಣ್ಣಿನಿಂದ ನೋಡುತ್ತ ಕೂಗುತ್ತಲಿದ್ದಾನೆ.

"ಆಶೆಹಚ್ಚಿ ಕರೆಯಿಸಿ ಅಪಮಾನ ಮಾಡಿದ ಮಾರಸಿಂಹನ ಸೇಡು ತೀರಿಸಿಕೊಳ್ಳದೆ ಬಿಡುವೆನೆ! ನನ್ನ ಹೆಂಡತಿಯಾಗತಕ್ಕವಳಿಗೆ ಗಂಡನಾದ ವಿಕ್ರಮನನ್ನು ಗತಿಗಾಣಿಸದೆ ಬಿಡುವೆನೆ?" ಎಂದು ಕಾಶ್ಮೀರಾಧಿಪತಿಯು ಮತ್ತೆ ಕೂಗಿದನು.

ವಿಕ್ರಮಾದಿತ್ಯನು ಸಿಟ್ಟಿಗೆದ್ದನು. ಆದರೂ ತಾಳ್ಮೆಯಿಂದಲೂ, ಗಂಭೀರ ವಾಣಿಯಿಂದಲೂ– "ಹರ್ಷರಾಜಾ, ನೀನು ಸುಮ್ಮನೆ ಹೊರಟು ಹೋದರೆ ನಿನಗೂ ಹರ್ಷ, ನಮಗೂ ಹರ್ಷ. ಗಲಭೆ ಮಾಡಿದರೆ ಮಾತ್ರ ನಿನ್ನ ಹರ್ಷ ಮಾಯವಾಗುವದಲ್ಲದೆ, ಹರ್ಷರಾಜನೆಂದು ಮೆರೆಯುವ ನೀನೂ ಮಾಯನಾಗುವೆ."

"ಒಳ್ಳೇದು, ಒಳ್ಳೇದು. ಕಾಲಪ್ರತೀಕ್ಷೆ ಮಾಡುವೆನು" ಎಂದು ನುಡಿದು ಉರಿದೆದ್ದ ಹರ್ಷರಾಜನು ಉರಿಯುತ್ತಲೆ ಹೊರಹೊರಟನು.

"ವಿಕ್ರಮರಾಜನನ್ನು ವರಿಸಬೇಕಾಗಿದ್ದರೆ ನನಗೇಕೆ ಆಮಂತ್ರಣ ಪತ್ರಿಕೆ ಕಳಿಸಬೇಕೋ!" ಎಂದು ಮಾಳವದರಸು ಅಳುಮೋರೆಯಿಂದ ನುಡಿದು, ಆಸನದಿಂದೆದ್ದು ಸಾಗಿದನು.

“ ಓಹೋ ! ಇಂಥ ಹೆಣ್ಣಿಗೇನು ಕಡಿಮೆ. ನಾನೇನೋ ಚಂದ ವುಳ್ಳವಳೆಂದು ಬಂದೆನು ” ಎಂದು ಕಾಂಬೋಜರಾಜನು ಜಂಬದಿಂದ ನುಡಿದು ನಡೆದನು.

“ ವಿಕ್ರಮಾದಿತ್ಯರು ನಮ್ಮ ಚಕ್ರವರ್ತಿಗಳು. ನಮ್ಮ ಸಾರ್ವ ಭೌಮನ ಮಹಾರಾಣಿಯಾಗತಕ್ಕವಳು ನನಗೆ ಮಾತೆಯ ಸಮ ” ಎಂದು ಕೊಡಗಿನ ಒಡೆಯ ಸಡಗರದಿಂದ ಅಂದು ಮುಂದಾದನು.

“ ನಾನು ಸ್ವಯಂವರ ನೋಡಲಿಕ್ಕೆ ಬಂದವನು. ನೀವು ಮತ್ತೇ ನಾದರೂ ಅಂದೀರಿ ” ಎಂದು ಮುದಿಚೇದಿರಾಜನು ಸೋಜಿಗಗೊಳ್ಳು ವಂತೆ ಓಡಿದನು.

“ ದೇಶವಾವುದೋ ಭಾಷೆಯಾವುದೋ ಮಾಲೆ ಹಾಕದಿದ್ದುದೇ ಲೇಸಾಯಿತು ” ಎಂದು ಅಂಗರಾಜನು ಅಂಗಳಕ್ಕೆ ಸಾಗಿದನು.

ಮಂಟಪವು ಬಹುಮಟ್ಟಿಗೆ ಬರಿದಾಯಿತು. ವಿಕ್ರಮಾದಿತ್ಯನು ಚಂದ್ರಲೇಖೆಯ ಕೈ ಹಿಡಿದುಕೊಂಡು ಎದ್ದನು. ಮಾರಸಿಂಹನು ಎದುರಿಗೆ ಬಂದು ವಿಕ್ರಮಾದಿತ್ಯನನ್ನೂ ಮಗಳನ್ನೂ ಆಲಿಂಗಿಸಿದನು. ನವ ದಂಪ ತಿಗಳು ಆವನಿಗೆ ಅಭಿವಾದನೆ ಮಾಡಿದರು.

ವಿಧ್ಯುಕ್ತವಾಗಿ ವಿವಾಹ ಸಮಾರಂಭವು ನೆರವೇರಿತು. ಈ ಸಡ ಗರದ ಸಮಾರಂಭವು ಪೂರೈಸಿದಮೇಲೆ ವಿಕ್ರಮಾದಿತ್ಯನು ಚಂದ್ರಲೇಖೆ ಯೊಡನೆ ಕಲ್ಯಾಣ ನಗರಿಗೆ ತೆರಳಿದನು.

## ೧೮ ಹುಚ್ಚು ಹಂಬಲ

ವಿಕ್ರಮಾದಿತ್ಯನು ಶಕ ೯೯೯ ನಳ ಸಂವತ್ಸರ ಚೈತ್ರ ಶುದ್ಧ೧ ಕ್ರಿಸ್ತ ಶಕ ೧೦೭೬ ಮಾರ್ಚ ತಿಂಗಳ ೯ ನೆಯ ತಾರೀಖಿನ ದಿವಸ ಪಟ್ಟಬಂಧ ಮಹೋತ್ಸವವನ್ನು ಪ್ರಾರಂಭಿಸಿದ ದಿನದಿಂದ ಚಾಲುಕ್ಯ ವಿಕ್ರಮ ಶಕವು ಪ್ರಾರಂಭವಾಯಿತು. ಸಾಮ್ರಾಜ್ಯದೊಳಗಿನ ಪ್ರಜಾ ಜನರು ಈ ಶಕವನ್ನು ಒಳ್ಳೆಯ ಪ್ರೇಮ-ಭಕ್ತಿಗಳಿಂದ ಪ್ರಾರಂಭಿಸಿದರು. ತಮ್ಮ ದೊರೆಯು ಶಕಪುರುಷನಾಗಲು ಅರ್ಹನೇ ಇರುವನೆಂಬ ನಂಬಿಕೆಯು ಎಲ್ಲರಿಗೂ ಆಗಿತ್ತು. ಪಟ್ಟಕ್ಕೆ ಕುಳಿತ ದಿನ ತನ್ನ ಮನೆತನದ ಸಾಮಾನ್ಯ ಬಿರುದುಗಳನ್ನಲ್ಲದೆ, ತ್ರಿಭುವನಮಲ್ಲನೆಂಬ ವಿಶಿಷ್ಟ ಬಿರುದನ್ನು ಅವನು ಧರಿಸಿಕೊಂಡನು. ತನ್ನ ಆಸ್ಥಾನ ಕವಿಯಾದ ಕಾಶ್ಮೀರಭಟ್ಟ ಬಿಲ್ಹಣನಿಗೆ ತ್ರಿಭುವನಮಲ್ಲದೇವ ವಿದ್ಯಾಪತಿ ಎಂಬ ಬಿರುದನ್ನು ಈ ಸಾರ್ವಭೌಮನು ಅರ್ಪಿಸಿದನು. ಬಿಲ್ಹಣನು ಇವನ ಜೀವನ ಚರಿತ್ರವನ್ನು ಪ್ರಾರಂಭಿಸಿ, ಚಂದ್ರಲೇಖೆಯ ಸ್ವಯಂವರದವರೆಗಿನ ಭಾಗವನ್ನೆಲ್ಲ ಪೂರ್ತಿಗೊಳಿಸಿದ್ದನು ಇದನ್ನು ಆ ಕವಿಯು ಕಲ್ಯಾಣ ರಾಜಧಾನಿಯೊಳಗಿನ ಓಲಗದಲ್ಲಿ ಮಹಾ ಪಂಡಿತರಾದ ವಿಜ್ಞಾನೇಶ್ವರ ಮೊದಲಾದ ಆಸ್ಥಾನ-ಕವಿಗಳೆದುರಿಗೆ ಓದಿ ತೋರಿಸಿದನು. ಯಥಾ ಸ್ಥಿತವಾದ ಈ ಚರಿತ್ರವನ್ನು ಕೇಳಿ ಪ್ರಜೆಗಳೂ ಕರ್ಮಚಾರಿಗಳೂ ಸಂತುಷ್ಟರಾದರು; ಸಾರ್ವಭೌಮನೂ ಮೆಚ್ಚಿದನು. ಅಂದೇ ಅವನು ತನ್ನ ಈ ಆಸ್ಥಾನ ಕವಿಗೆ ತ್ರಿಭುವನಮಲ್ಲದೇವ ವಿದ್ಯಾಪತಿ ಎಂಬ ಬಿರುದನ್ನೂ ಒಂದು ನೀಲ ಛತ್ರವನ್ನೂ ಕೊಟ್ಟನು. ವಿಕ್ರಮಾದಿತ್ಯನು ದಂಡಿನೊಡನೆ ಕರ್ನಾಟಕದಲ್ಲಿ ಸಂಚಾರ ಮಾಡುವಾಗ ಸಾರ್ವಭೌಮನ ಆನೆ ಛತ್ರಗಳಮುಂದೆ ವಿದ್ಯಾಪತಿ ಬಿಲ್ಹಣಭಟ್ಟನ ಆನೆ ಛತ್ರಗಳು ಕಂಗೊಳಿಸುತ್ತಿದ್ದವು. ವಿಕ್ರಮಾರ್ಕನ ಕೀರ್ತಿಯು ಬೆಳವಣಿಗೆಗೆ ಹಾಗು ಅವನ ಕೀರ್ತಿಯು ಚಿರಸ್ಥಾಯಿಯಾಗಿ ಬಾಳಲಿಕ್ಕೆ ಅವನ ವಿಕ್ರಮವು ಕಾರಣವಾಯಿತಲ್ಲದೆ, ಬಿಲ್ಹಣ ಭಟ್ಟನೂ ಅದಕ್ಕೆ ಅಂಶತಃ ಕಾರಣೀಭೂತನಾಗಿರುವನೆಂದು ಹೇಳಬಹುದು. ಈ ಬಿಲ್ಹಣ ಭಟ್ಟನಿಂದ

ವಿಕ್ರಮಾದಿತ್ಯನ ಗುಣಗಳ ಪ್ರಚಾರ ಕಾರ್ಯವು ಚನ್ನಾಗಿ ಆಯಿತೆಂದೆನ್ನಲು ಪ್ರತ್ಯವಾಯವಿಲ್ಲ.

ವಿಕ್ರಮಾದಿತ್ಯ ಸಾರ್ವಭೌಮನು ತನ್ನ ಅಪ್ರತಿಮ ಪ್ರತಾಪದಿಂದ ಕರ್ನಾಟಕ ಸಾಮ್ರಾಜ್ಯವನ್ನು ನಿರ್ವೈರವಮಾಡಿದುದಲ್ಲದೆ, ಕರ್ನಾಟಕದ ಹೊರಗೆ ಸಹ ತನ್ನ ವರ್ಚಸ್ಸವನ್ನು ನೆಲೆಗೊಳಿಸಿದನು. ಇಂತಹ ವೈಭವಶಾಲಿಗಳೂ ಘನವಂತರೂ ಆದ ಚಕ್ರವರ್ತಿಗಳು ಭೂಮಂಡಲದಲ್ಲಿಲ್ಲವೆಂಬ ಖ್ಯಾತಿಯುಂಟಾಯಿತು. ಬಳ್ಳಿಗಾವೆಯ ಉಮಾಮಹೇಶ್ವರನ ವರಪ್ರಸಾದದಿಂದ ಹುಟ್ಟಿದ ವಿಕ್ರಮಾದಿತ್ಯನು ನಿಜವಾಗಿ ಅವತಾರಿಕ ಪುರುಷನೇ ಎಂಬ ಭಾವನೆಯು ಪ್ರಜಾಜನರಲ್ಲುಂಟಾಯಿತು. ಸಾಹಿತ್ಯ, ಲಲಿತಕಲೆ, ಶಿಲ್ಪ ಮೊದಲಾದವುಗಳು ಇವನ ಆಳಿಕೆಯಲ್ಲಿ ಉನ್ನತಾವಸ್ಥೆಯನ್ನು ಹೊಂದಿದವು. ಇವನ ಆಳಿಕೆಯು ಶ್ರೀ ರಾಮನ ಆಳಿಕೆಯಂತೆ ಪರಿಣಮಿಸಿತು. ಬಿಲ್ಹಣ ಕವಿಯು "ಜನೈರವಜ್ಞಾತ ಕವಾಟ ಮುದ್ರಣೈಃ ಕ್ಷಪಾಸು ರಕ್ಷಾ ವಿಮುಖೈರಸುಪ್ಯತ । ಕರಾವಿಶಂತಿಸ್ಮಗವಾಕ್ಷ ವರ್ತ್ಮಸು ಕ್ಷಪಾಪತೇಶ್ಛಿದ್ರ ಪಥೈರ್ನ ತಸ್ಕರಾಃ ॥" ಎಂದರೆ ಜನರು ರಾತ್ರಿಯಲ್ಲಿ ತಮ್ಮ ಬಾಗಿಲುಗಳನ್ನು ಕೂಡ ಮುಚ್ಚುತ್ತಿರಲಿಲ್ಲ; ಅವರಿಗೆ ಕಳ್ಳರ ಭೀತಿಯೇ ಇಲ್ಲ. ಕಳ್ಳರಿಗೆ ಬದಲು ಚಂದ್ರ ಕಿರಣಗಳು ಅವರ ಗ್ರಹಗಳನ್ನು ಪ್ರವೇಶಿಸುತ್ತಿದ್ದವು. ಮೊದಲಾಗಿ ವಿಕ್ರಮಾಂಕ ದೇವ ಚರಿತೆಯಲ್ಲಿ ವರ್ಣಿಸಿರುವನು. ಈ ವಿಕ್ರಮಾಂಕದೇವ ಮಹಾರಾಜನು ತನ್ನ ಆಳಿಕೆಯನ್ನು ಕನ್ನಡಿಗರ ಸುವರ್ಣ ಯುಗವನ್ನಾಗಿ ಮಾಡಿದನು. ಕನ್ನಡಿಗರನ್ನೂ ಕರ್ನಾಟಕ ಸಾಮ್ರಾಜ್ಯವನ್ನೂ ವೈಭವಗಿರಿಯ ಅತ್ಯುಚ್ಚ ಶಿಖರದಮೇಲೆ ಒಯ್ದು ಕುಳ್ಳಿರಿಸಿದನು.

ವಿಕ್ರಮಾಂಕದೇವ ಮಹಾರಾಜನು ಪುಣ್ಯಶ್ಲೋಕಿ ಇದ್ದನು. ಇವನಂತಹ ಮಹಾನುಭಾವರೂ ಉದಾರರೂ ಆದ ಸಮ್ರಾಟರು ಜಗತ್ತಿನ ಇತಿಹಾಸದಲ್ಲಿ ಬಹಳ ಕಡಿಮೆ ಜನರಿರುವರೆಂದರೆ ತಪ್ಪಾಗದು. ಇವನು ತನ್ನ ಅಣ್ಣನ ವಿಷಯವಾಗಿ ತೋರಿಸಿದ ಔದಾರ್ಯವೂ ಮಹಾನುಭಾವತೆಯೂ ವ್ಯರ್ಥವಾಗಿ ಹೋದಂತೆ, ತಮ್ಮನ ವಿಷಯವಾಗಿ ತೋರಿಸಿದ

ಭಾವನೆಗಳು ಕೂಡ ವ್ಯರ್ಥವಾಗಿ ಹೋಗುವ ಪ್ರಸಂಗವೆಲ್ಲಿಬರುವದೋ ಎಂದು ಅವನು ಭಯಗ್ರಸ್ಥನಾಗಿದ್ದನು. ಪ್ರಾಮುಖ್ಯವಾಗಿ ಪ್ರಜಾ ಜನರು ಸುಖ ಸಾಮ್ರಾಜ್ಯದಲ್ಲಿ ಲೋಲಾಡಬೇಕೆಂದು ಅವನ ಮುಖ್ಯ ಗುರಿಇತ್ತು. ಇಂತಹ ಸ್ಥಳದಲ್ಲಿ ಇಂತಹ ಮಾಂಡಲಿಕರಿಂದ ಇಲ್ಲವೆ ಇಂತಹ ಅರಸರಿಂದ ಇಲ್ಲವೆ ಇಂತಹ ಅಧಿಕಾರಿಗಳಿಂದ ಅನ್ಯಾಯವು ನಡೆದಿರುವದೆಂಬ ಸಂಗತಿಯು ತಿಳಿದ ಕೂಡಲೆ ಅವನು ಸಂತಪ್ತನಾಗಿ ಅದಕ್ಕೆ ಪ್ರತಿಕಾರೋಪಾಯಗಳನ್ನು ತತ್‌ಕ್ಷಣವೇ ಕೈಕೊಳ್ಳುತ್ತಿದ್ದನು. ಇವನು ತನ್ನ ತಮ್ಮನಾದ ಜಯಸಿಂಹನಿಗೆ ಯುವರಾಜ ಪದವನ್ನುಕೊಟ್ಟು ಬನವಾಸಿಯ ಮಹಾಮಂಡಲೇಶ್ವರನನ್ನು ಮಾಡಿದ್ದನಷ್ಟೇ? ಇತ್ತೀಚೆಗೆ ಇವನು ಕೂಡ ಮನಸೋಕ್ತ ವ್ಯವಹಾರ ಮಾಡುವವನೂ ಪ್ರಜೆಗಳನ್ನು ನಿಷ್ಕರುಣೆಯಿಂದ ಆಳುವಂತಹನೂ, ತನ್ನ ಔದಾರ್ಯವನ್ನು ದಾಕ್ಷಿಣ್ಯದಲ್ಲಿ ತರದೆ ಪ್ರತಿ-ಯಾಗಿ ತನ್ನ ವಿರುದ್ಧ ಸಂಚು ನಡೆಯಿಸಲು ಪ್ರವೃತ್ತನಾದಂತಹನೂ ಆಗಿರುವನೆಂಬ ಸಂಗತಿಯು ಅವನಿಗೆ ಕರ್ಣೋಪಕರಣವಾಗಿ ತಿಳಿದುಬಂದಿತ್ತು ಯಾವದೊಂದು ಸಂಗತಿಯನ್ನು ಪ್ರತ್ಯಕ್ಷ ಕಂಡರೂ ಪರಾಮರ್ಶ ಮಾಡಬೇಕೆಂಬ ನಾಣ್ನುಡಿಯಂತೆ ವಿಕ್ರಮಾದಿತ್ಯನು ತನ್ನ ತಮ್ಮನಮೇಲೆ ಪ್ರತಿಕಾರೋಪಾಯಗಳನ್ನು ಕೈಕೊಳ್ಳದೆ, ಆ ನಾಡಿನ ವಾತಾವರಣವು ಹೇಗಿರುವದು, ಜಯಸಿಂಹನ ನಡವಳಿಕೆಯೇನು, ಜನದ ಸ್ಥಿತಿಗತಿ ಹೇಗಿವೆ, ಮೊದಲಾದ ಎಲ್ಲ ಸಂಗತಿಗಳನ್ನು ತಿಳಿದುಕೊಂಡು ಬರುವದಕ್ಕಾಗಿ ತನ್ನ ಅತ್ಯಂತನಂಬಿಗೆಯ ಗುಪ್ತ ಚರರನ್ನು ವೇಷಾಂತರದಿಂದ ಕಳುಹಿಸಿದನು. ಹಾಗು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಂಡು ಬರುವದಕ್ಕಾಗಿ ಇವನು ತನ್ನ ಮಗಳಾದ ಮೈಲಾಲದೇವಿಯ ಪತಿ ಕದಂಬ ಎರಡನೆಯ ಜಯಕೇಶಿಯನ್ನು ಬನವಾಸಿಗೆ ಸ್ವಾಭಾವಿಕ ರೀತಿಯಲ್ಲಿ ಕಳುಹಿಸಿಕೊಟ್ಟನು.

ವಿಕ್ರಮಾದಿತ್ಯನು ಚಂದ್ರಲೇಖೆಯ ಸ್ವಯಂವರ ಪ್ರಸಂಗದಿಂದ ಇಲ್ಲಿಯವರೆಗೆ ಅತ್ಯಂತ ಸುಖ ಸಂಕಥಾ ವಿನೋದದಲ್ಲಿ ಕಾಲಕಳೆಯುತ್ತಿದ್ದನು. ಅವನ ಸಾಮ್ರಾಜ್ಯವು ಶಾಂತಿಯ ತವರುಮನೆಯಾಗಿ ಹೋಗಿದ್ದುದರಿಂದ ಅವನ ಮನಸ್ಸೂ ಶಾಂತತೆಯ ನೆಲೆವೀಡಾಗಿತ್ತು. ಅವನು

ಎಷ್ಟೋ ವೇಳೆ ಚಂದ್ರಲೇಖೆಯೊಡನೆ ಕ್ರೀಡಾ ಸರೋವರದಲ್ಲಿ ನೌಕಾ ಕ್ರೀಡೆಯಾಡುತ್ತಲೂ, ಉದ್ಯಾನದಲ್ಲಿ ಸ್ವಚ್ಛಂದ ವಿಹಾರ ಮಾಡುತ್ತಲೂ ಆಸ್ಥಾನದಲ್ಲಿ ಮಹಾ ಕವಿಗಳೊಡನೆ ಯಾವುದೊಂದು ವಿಷಯದ ಬಗ್ಗೆ ಚರ್ಚಿಸುತ್ತಲೂ ಸಾಮ್ರಾಜ್ಯದಲ್ಲಿ ಸಾಹಿತ್ಯದ ಹಾಗು ಧರ್ಮ ನೀತಿಗಳ ಬೆಳವಣಿಗೆಯ ವಿಷಯದಲ್ಲಿ ಅನೇಕ ಪ್ರಯತ್ನಗಳನ್ನು ಮಾಡುತ್ತಲೂ, ಒಳ್ಳೆಯ ಆನಂದದಿಂದ ಕಾಲಹರಣ ಮಾಡತೊಡಗಿದ್ದನು. ಮಹಾಮಂತ್ರಿ ಪದ್ಮನಾಭಯ್ಯ ಮಹಾ ಸೇನಾಪತಿ ಅನಂತಪಾಲಯ್ಯ ಗೋವಿಂದರಸ ಲಕ್ಷ್ಮರಸ ಮೊದಲಾದವರು ತಮ್ಮ ಮಂಡಲಗಳ ವ್ಯವಸ್ಥೆಯನ್ನು ಸಾಮ್ರಾಜ್ಯದ ರಾಜ್ಯಭಾರ ವ್ಯವಸ್ಥೆಯನ್ನೂ ಉತ್ತಮವಾಗಿ ಸಾಗಿಸುತ್ತಿದ್ದರು. ಸಾಮ್ರಾಜ್ಯದ ವಿಷಯವಾಗಿ ಚಿಂತೆ ಸಮ್ರಾಟನಿಗೆ ಎಷ್ಟೂ ಇರಲಿಲ್ಲ. ಶಾಂತಿಕಾಲದಲ್ಲಿ ಎಂಥವನೂ ರಾಜ್ಯಭಾರ ವಹಿಸಬಹುದು. ಸುವ್ಯವಸ್ಥೆಯ ಹಾಗು ಶಾಂತಿಯ ನೆಲೆವೀಡಾದ ಸಾಮ್ರಾಜ್ಯದ ಆಡಳಿತೆ ನಡೆಯಿಸಲು ಪ್ರಧಾನಾಮತ್ಯನಿಗೂ ಮಹಾ ಸೇನಾನಿಗೂ ಎಷ್ಟೂ ಭಾರವೆನಿಸುತ್ತಿರಲಿಲ್ಲ. ಅವರು ರಾಜನ ಒಲವಿನಂತೆ ಎಲ್ಲ ಸೂತ್ರಗಳನ್ನೂ ಚಾಲನೆ ಮಾಡುತ್ತ ಮಹಾರಾಜನಿಗೆ ವಿಶ್ರಾಂತಿ ಹೊಂದಲು ಪೂರ್ಣ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದರು. ವಸ್ತುಸ್ಥಿತಿ ಹೀಗಿದ್ದರೂ ವಿಕ್ರಮಾದಿತ್ಯನು ರಾಜ್ಯಕಾರಣವನ್ನು ದುರ್ಲಕ್ಷಿಸುತ್ತಿರಲಿಲ್ಲ. ಎಲ್ಲಿ ಎಲ್ಲಿ ಏನು ನಡೆದಿದೆ ಯೆಂಬದನ್ನು ತಿಳಿಯುವದಕ್ಕಾಗಿ ಆವನು ಗುಪ್ತಚಾರರ ಜಾಳಗೆಯನ್ನು ಸಾಮ್ರಾಜ್ಯದಲ್ಲಿ ಹೆಣೆದಿದ್ದನು. ಅವರ ಮುಖದಿಂದಲೇ ಜಯಸಿಂಹನ ವೃತ್ತಿ ಭೇದದ ಸಂಗತಿಗಳು ಗೊತ್ತಾದವು. ಕೂಡಲೆ ಅವನು ಎಲ್ಲ ವಿಷಯಗಳನ್ನು ಸಂಪೂರ್ಣವಾಗಿ ಗೊತ್ತುಹಚ್ಚುವ ಉದ್ದೇಶದಿಂದ ಅಲ್ಲಿಗೆ ತನ್ನ ನುರಿತ ಗುಪ್ತಚಾರರನ್ನೂ ಗುಪ್ತವಾಗಿ ಕಳುಹಿಸಿ, ಅಳಿಯ ಜಯಕೇಶಿಯನ್ನು ಸ್ವಾಭಾವಿಕವಾಗಿಯೋ ಏನೋ ಎನ್ನುವಂತೆ ಕಲ್ಯಾಣದಿಂದ ಕಳುಹಿಸಿದ್ದನು.

ವಿಕ್ರಮಾದಿತ್ಯನ ನಿರೋಪದ ಮೇರೆಗೆ ಜಯಕೇಶಿಯು ಬನವಾಸಿ ನಾಡಿಗೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ನಿರೀಕ್ಷಿಸಿಕೊಂಡು ಬಂದನು. ಅವನು ತನ್ನ ಮಾವನಾದ ವಿಕ್ರಮಾದಿತ್ಯನಿಗೆ ಭೆಟ್ಟಿ

ಯಾಗಿ ಜಯಸಿಂಹನ ಧೋರಣವೇನಿರುವದೆಂಬದನ್ನೂ ರಾಜ್ಯದ ಪರಿಸ್ಥಿತಿ ಯೇನಾಗಿರುವದೆಂಬದನ್ನೂ ವಿವರಿಸಿ ಹೇಳಿದನು. ಜಯಸಿಂಹನು ಸ್ವತಂತ್ರನಾಗಲೂ ಪ್ರಸಂಗವೊದಗಿದರೆ ಸೋಮೇಶ್ವರನಹಾಗೆ ಶಸ್ತ್ರವೆತ್ತಲೂ ಸಿದ್ಧನಿರುವನೆಂಬ ಸಂಗತಿಯು ವಿಕ್ರಮಾದಿತ್ಯನಿಗೆ ತಿಳಿದುದಲ್ಲದೆ ಪ್ರಜಾಜನರು ಜಯಸಿಂಹನ ಅತ್ಯಾಚಾರದಿಂದ ಸಂತ್ರಸ್ತರಾಗಿರುವ ವಿಷಯವನ್ನೆಲ್ಲ ತಿಳಿಸಿದನು. ಈ ಸಂಗತಿಯನ್ನು ಕೇಳಿ ವಿಕ್ರಮಾದಿತ್ಯನಿಗೆ ಬಹಳೇ ಕೆಡಕೆನಿಸಿತು. ಅಣ್ಣನೊಡನೆ ಕಾದಬೇಕಾದ ಬಗ್ಗೆ ಆದ ಪಶ್ಚಾತ್ತಾಪವು ಕಡಿಮೆಯಾಗುವಷ್ಟರಲ್ಲಿ ತಮ್ಮನೊಡನೆ ಕಾದುವ ಪ್ರಸಂಗ ಒದಗಿತೆಂದು ಅವನು ನೊಂದುಕೊಂಡನು. ಮುಂದೆ ಯಾವ ಉಪಾಯ ಮಾಡಬೇಕೆಂಬ ಬಗ್ಗೆ ಮಹಾ ಮಂತ್ರಿಯಾದ ಪದ್ಮನಾಭಯ್ಯನನ್ನು ಮಂತ್ರಣಾಗಾರಕ್ಕೆ ಕರೆಯಿಸಿ ಈ ಪ್ರಸ್ತಾಪ ತೆಗೆದನು. ಅಷ್ಟರಲ್ಲಿ ಬನವಾಸಿ ನಾಡಿಗೆ ಹೋದ ಗುಪ್ತಚಾರರ ಪ್ರಮುಖರು ಅಲ್ಲಿಗೆ ಬಂದರು. ಆಗ ಅವರು ತಾವು ಕಂಡ ಹಾಗು ನೋಡಿದ ಸಂಗತಿಗಳನ್ನು ಸಾರ್ವಭೌಮನಿಗೆ ತಿಳಿಸುವ ಉದ್ದೇಶದಿಂದ ಕೈಜೋಡಿಸಿ— "ಮಹಾರಾಜಾಧಿರಾಜ! ತಮ್ಮ ಅಪ್ಪಣೆಯಂತೆ ನಾವು ಸೋಗು ಹಾಕಿಕೊಂಡು ಬನವಾಸಿ ಸಂತಲಿಗೆ ನಾಡುಗಳನ್ನೆಲ್ಲ ಸಂಚರಿಸಿದೆವು. ನಮಗೆ ತಿಳಿದ ಸಂಗತಿಗಳನ್ನೆಲ್ಲ ಅರುಹಲಿಕ್ಕೆ ಹೆದರಿಕೆ ಬರುತ್ತದೆ. ನಮಗೆ ಗೊತ್ತಾದುದನ್ನೆಲ್ಲ ಹೇಳಲಿಕ್ಕೆ ಅಭಯ ವಚನವನ್ನು ದಯವಿಟ್ಟು ದಯಪಾಲಿಸಿದರೆ ನಾವು ಕಂಡುದನ್ನೂ ಕೇಳಿದುದನ್ನೂ ಮರೆಮಾಡದೆ ಅರಿಕೆ ಮಾಡಿಕೊಳ್ಳುವೆವು" ಎಂದು ಹೇಳಿ ಮತ್ತೆ ಸಾಷ್ಟಾಂಗವಾಗಿ ಎರಗಿದರು.

ವಿಕ್ರಮಾರ್ಕನು ತುಸು ಆಲೋಚಿಸಿ— "ಏಳಿರಿ, ಅಂಜಬೇಡಿರಿ ಇದ್ದುದನ್ನು ಮಾಜದೆ ಯಥಾರ್ಥವಾಗಿ ಹೇಳಿರಿ. ಸತ್ಯಾಶ್ರಯವೆಂಬುದೇ ನನ್ನ ಮನೆತನದ ಬಿರುದಾಗಿದೆ. ದಿಟವನ್ನು ಹೇಳುವುದೇ ನಿಮ್ಮ ಕರ್ತವ್ಯ ನನ್ನಿಯನ್ನಾಡುವವರು ನನ್ನವರೆಂದೆಣಿಸುವದೇ ನನ್ನ ರಾಜಧರ್ಮವು. ಸತ್ಯಕ್ಕೆ ಸಾವಿಲ್ಲ. ಸತ್ಯವಂತರನ್ನು ಪಾಲಿಸುವದೇ ನನ್ನ ಕರ್ತವ್ಯ. ಏಳಿರಿ ಮಾಜದೆ ಹೇಳಿರಿ. ಭಯಪಡಬೇಡಿರಿ"

ವಿಕ್ರಮಾದಿತ್ಯ ಸಾರ್ವಭೌಮನು ಹೀಗೆ ಅಭಯ ವಚನವನ್ನು ಕೊಟ್ಟ ಕೂಡಲೆ ಬೇಹಿನವರ ಮುಖ್ಯಸ್ಥನು ಎದ್ದು ಕೈಮುಗಿದುಕೊಂಡು—"ಜೀಯಾ! ದಯವಿಟ್ಟು ಚಿತ್ತೈಸಿರಿ. ನಾನು ಹೇಳುವ ಸುದ್ದಿಯಲ್ಲಿ ಒಂದು ಅಕ್ಷರವಾದರೂ ಹೆಚ್ಚು ಕಡಿಮೆಯಾಗಿರುವದಿಲ್ಲ. ಬನವಾಸಿ ಸಂತಲಿಗೆ ನಾಡುಗಳಲ್ಲಿದ್ದ ದೊಡ್ಡವರು, ಸಣ್ಣವರು, ಹಿರಿಯರು, ಕಿರಿಯರು, ಬಡವರು ದೈವುಳ್ಳವರು, ಆಶ್ರಿತರು ವಿರೋಧಿಗಳು, ಹುಡುಗರು, ಹೆಂಗಸರು, ವೈದಿಕರು ಗ್ರಹಸ್ಥರು, ಅಧಿಕಾರಿಗಳು ವರ್ತಕರು, ಕೂಲಿಯವರು ಒಕ್ಕಲಿಗರು, ಎಲ್ಲರೂ ತಮ್ಮ ತಮ್ಮ ಜಯಸಿಂಹ ಮಹಾರಾಜರು ಅನ್ಯಾಯದಿಂದಲೂ ಬಲುಮೆಯಿಂದಲೂ ತಮ್ಮಲ್ಲಿದ್ದ ಹಣವನ್ನು ಹರಕೊಳ್ಳುತ್ತಾರೆಂದು ಎಡಬಿಡದೆದೂರುತ್ತಾರೆ. ಹೀಗೆ ಜನರನ್ನು ಪೀಡಿಸಿ ತೆಗೆದುಕೊಂಡ ಹಣವನ್ನು ಅವರು ಹೊಸ ದಂಡನ್ನು ಕಟ್ಟಕೊಳ್ಳಲಿಕ್ಕೂ ಹೊಸ ಆನೆಗಳನ್ನು ಕೊಳ್ಳಲಿಕ್ಕೂ ವೆಚ್ಚ ಮಾಡುತ್ತಾರಂತೆ. ಗುಡ್ಡಗಳಲ್ಲಿದ್ದ ಕಾಡುಜನರು ಅವರ ವಶವರ್ತಿಗಳಾಗಿರುತ್ತಾರೆ. ದ್ರವಿಡ ಅರಸನ ಸಹಾಯ ದೊರಕಿಸಲಿಕ್ಕೆ ವಿಶ್ವಪ್ರಯತ್ನ ನಡೆದಿರುವದು. ತಮ್ಮ ದಂಡಿನವರನ್ನು ಒಡೆಯಿಸಿಕೊಳ್ಳಲು ಹಲವು ಹಂಚಿಕೆಗಳು ಮಾಡಲ್ಪಡುತ್ತಿರುವವು. ಈ ಎಲ್ಲ ಪ್ರಯತ್ನದ, ಈ ಎಲ್ಲ ಜೋಡಣೆಯ, ಈ ಎಲ್ಲ ಸಿದ್ಧತೆಯ, ಈ ಎಲ್ಲ ಸಾಹಸದ ಮುಖ್ಯ ಉದ್ದೇಶವು ತಮ್ಮ ರಾಜಧಾನಿಯಾದ ಕಲ್ಯಾಣದ ಮೇಲೆ ದಂಡೆತ್ತಿ ಬರುವದೇ ಇರುತ್ತದೆಂದು ಜನರು ಗುಜಗುಡುತ್ತಾರೆ. ನನಗೆ ತಿಳಿದುದನ್ನು ಮುಚ್ಚುಮರೆ ಮಾಡದೆ ಇದ್ದುದನ್ನು ಇದ್ದ ಹಾಗೆ ಮಹಾ ಪ್ರಭುಗಳಿಗೆ ಅರಿಕೆ ಮಾಡಿಕೊಂಡಿರುತ್ತೇನೆ. ತಮ್ಮ ದಿವ್ಯ ಚಿತ್ತಕ್ಕೆ ಯೋಗ್ಯವಾಗಿ ಕಂಡುದನ್ನು ಮಾಡಬಹುದು" ಎಂದು ಬಿನ್ನವಿಸಿದನು.

ವಿಕ್ರಮಾದಿತ್ಯನು ಚಾರರಿಂದ ಎಲ್ಲ ಸಂಗತಿಯನ್ನು ತಿಳಿದುಕೊಂಡು ಅವರಿಗೆ ನಿರೋಪ ಕೊಟ್ಟು, ಮಹಾಮಂತ್ರಿ ಪದ್ಮನಾಭಯ್ಯನನ್ನು ಕುರಿತು—"ಅಮಾತ್ಯಕ್ಕೆ ಯಾವುದು ಎಂದೂ ಬರಬಾರದೆಂದು ನಾನು ಇಚ್ಛಿಸುತ್ತಿರುವೆನೋ ಅದು ದ್ರುತಗತಿಯಿಂದ ಎದುರಿಗೆ ಬಂದು ನಿಂತಿತು. ಅಣ್ಣನೊಡನೆ ಮಮತೆಯಿಂದಿರಬೇಕು ಅವನ ಗೌರವವನ್ನು ಕಾಯಬೇಕು ಅವನು ಎಷ್ಟೇ ನಿಷ್ಪ್ರಯೋಜಕನಿದ್ದರೂ ಅವನನ್ನು ಹೆಸರಿಗೆ ಸಾರ್ವಭೌಮ

ನನ್ನಾಗಿ ಮಾಡಿ, ನಾನು ಮಾಡುವ ಕಾರ್ಯವೇ ಅವನ ಕಾರ್ಯವೆಂದು ತೋರಿಸುತ್ತ ಸಾಮ್ರಾಜ್ಯದ ಬೆಳವಣಿಗೆ ಮಾಡಬೇಕೆಂಬ ನನ್ನ ಸಾಹಸವು ಹೇಗೆ ವ್ಯರ್ಥವಾಯಿತೆಂಬದು ನಿಮಗೆ ಗೊತ್ತಿದೆ. ನಾನು ಜಯಸಿಂಹನಲ್ಲಿ ಹೇಗೆ ನಡೆದುಕೊಳ್ಳುವೆನೆಂಬುದು ನಿಮಗೆ ತಿಳಿದಿದೆ. 'ರಾಜ' ಎಂಬ ಹೆಸರಿನ ಹೊರತು ನನಗಿದ್ದಷ್ಟು ಸೌಕರ್ಯಗಳೂ ನನ್ನಷ್ಟೇ ಸಿರಿಯೂ ನನ್ನಷ್ಟೇ ಗೌರವವೂ ಅವನಿಗುಂಟು. ಇನ್ನೂ ಅನೇಕ ಬಗೆಯಾಗಿ ನಾನು ಅವನ ಹಿತವನ್ನು ಸಾಧಿಸಲು ಸಿದ್ಧನಿರುವೆನು. ಹೀಗಿದ್ದು ಅವನು ನನ್ನನ್ನೇ ಮುರಿಯಲು ಸಾಹಸ ಪಡುತ್ತಿರುವನು. ನನ್ನನ್ನು ಮುರಿಯುವದಕ್ಕಾಗಿ ಸಾಮ್ರಾಜ್ಯದ ಪ್ರಜಾ ಜನರನ್ನು ಹಿಂಡಿ ಹಿಪ್ಪಿಮಾಡಿ ಹಣಸೆಳೆದು ಬಲ ಬೆಳೆಯಿಸುತ್ತಿರುವನು. ಅವನು ಮಹಾ ಮೂರ್ಖನಿರುವಹಾಗೆ ತೋರುವದು. ಈಗ ಅವನು ಹಿಡಿದ ದಾರಿಯು ನಿಶ್ಚಯವಾಗಿ ಸುಖದ ದಾರಿಯಲ್ಲ. ಅವನು ಸರ್ವನಾಶದ ದಾರಿಯನ್ನು ಹಿಡಿಯುತ್ತಲಿರುವನು. ಅವನಿಗೆ ಈ ವೇಳೆಯಲ್ಲಿ ಬುದ್ಧಿಗಲಿಸದೆ ಹೋದರೆ ಮಹತ್ತರವಾದ ಅಪಾಯವುಂಟು. ನೀವು ಬನವಾಸಿಗೆ ಹೋಗಿ ಅವನಿಗೆ ನನ್ನ ಇಚ್ಛೆಯನ್ನು ತಿಳಿಸಿ ಚನ್ನಾಗಿ ಉಪದೇಶಿಸಿರಿ. ಅವನು ತಾನು ಸ್ವತಂತ್ರನಾಗಬೇಕೆಂದು ಹವಣಿಸುತ್ತಿರುವದಲ್ಲದೆ ಸಾಮ್ರಾಜ್ಯಕ್ಕೆ ಆಘಾತ ಕೊಡುವ ಸಾಹಸ ನಡೆಯಿಸಿರುವನು. ನಾನು ಸ್ವತಂತ್ರ ರಾಜನ ಹಾಗೆಯೇ ಅವನಿಗೆ ಸೌಕರ್ಯಗಳನ್ನೊದಗಿಸಿಕೊಟ್ಟಿದ್ದರೂ ಅವನು ಹೀಗೆ ನಡೆಯುತ್ತಿರುವದು ಅವನ ವಿನಾಶಕಾಲದ ಚಿಹ್ನ. ಅವನು ನನ್ನ ಒಡಹುಟ್ಟಿದವನಿರುವ ಮೂಲಕ ಅವನಿಗೆ ಹಾನಿಯಾಗಬಾರದೆಂದೂ, ಅವನು ತನ್ನ ಆಯುಷ್ಯವನ್ನು ಸುಖದಲ್ಲಿ ಕಳೆಯಬೇಕೆಂದೂ ನನ್ನ ಬಯಕೆಯಿದೆ. ಚಾಲುಕ್ಯರ ವೈಭವದ ಇಂತಹ ಕಾಲದಲ್ಲಿ ಜಯಸಿಂಹನು ಹೀಗೆ ಅಡ್ಡದಾರಿ ಹಿಡಿದಿರುವದು ಅತ್ಯಂತ ದುಃಖಪ್ರದ ಸಂಗತಿ. ನೀವು ಸಾಧ್ಯವಿದ್ದಮಟ್ಟಿಗೆ ಅವನನ್ನು ದಾರಿಗೆ ತರಲು ಪ್ರಯತ್ನಿಸಿರಿ. ನಿಮ್ಮ ಕಾರ್ಯವು ಅಯಶಸ್ವಿಯಾಯಿತೆಂದರೆ ಮುಂದೆ ದಂಡೋಪಾಯವು ಕಟ್ಟಿಟ್ಟದ್ದೇ. ಅವನ ಹಿತಾಹಿತಗಳು ಅವನ ಸ್ವಾಧೀನವಿರುವವು. ಪ್ರಜಾರಂಜನಕರನಾಗದೆ ಹೋದ ರಾಜನು ಬಹುಕಾಲ ಬಾಳಲಾರನೆಂಬದು ಅವನಿಗೆ ತಿಳಿದಿಲ್ಲ. ಸ್ವಾರ್ಥ ಲೋಲು

ಪತೆ ಅಸೂಯ ಬುದ್ಧಿ ಒಡಕು ಮೊದಲಾದವುಗಳು ಅತ್ಯಂತ ನಾಶಕಾರಿಯಾದ ಅಸ್ತ್ರಗಳು. ಈ ಅಸೂಯಾ ಬುದ್ಧಿಯು ಭಾರತವನ್ನು ಅವನತಿಗಿಳಿಸುತ್ತಲಿದೆ. ಜಡ ಸ್ವಾರ್ಥವು ಭಾರತದ ಗೌರವವನ್ನು ಮಾಯಮಾಡುತ್ತಲಿದೆ: ಒಡಕು ಭಾರತದ ಭಾಗ್ಯವನ್ನು ಕೆಡಿಸುತ್ತಲಿದೆ; ನಮ್ಮ ಕರ್ನಾಟಕದಲ್ಲಿ ಸೋಮೇಶ್ವರರ ತರುವಾಯ ಈ ಸ್ಥಿತಿ ಇಲ್ಲವೆಂದು ಸಂತೋಷಬಡುವಷ್ಟರಲ್ಲಿ ಭಾರದಲ್ಲಿದ್ದುದು ಇಲ್ಲಿಯೂ ಇದೆ ಎಂದು ಅನ್ನುವ ಪ್ರಸಂಗವು ಜಯಸಿಂಹನ ಕೃತ್ಯಗಳಿಂದ ಬಂದಿತು. ಇದಕ್ಕೇನು ಕಾಲಗತಿಯನ್ನಬೇಕೋ ದೈವಗತಿಯೆನ್ನಬೇಕೋ ತಿಳಿಯದು ”

ವಿಕ್ರಮಾದಿತ್ಯ ಮಹಾರಾಜನು ಹೀಗೆ ನುಡಿದಮೇಲೆ ಪ್ರಧಾನಾಮಾತ್ಯ ಪದ್ಮನಾಭಯ್ಯನು ಶಾಂತಸ್ವರದಿಂದ— “ ಜಯಸಿಂಹ ಮಹಾರಾಜರು ಅನಭಿಜ್ಞರು. ಅವರಿಗೆ ಜಗತ್ತಿನ ಅನುಭವವಿಲ್ಲ. ಕೈಕೆಳಗಿನ ಕರ್ಮಚಾರಿಗಳು ಸ್ವಾರ್ಥಪರರಿರುವರು. ದುರುಪದೇಶದ ಪರಿಣಾಮವೇ ಇದೆಂದು ನಾನು ಊಹಿಸುವೆನು. ಅವರಿಗೆ ತಮ್ಮ ಯೋಗ್ಯತೆಯ ಹಾಗು ಶಕ್ತಿಯ ಪರಿವೆ ಯಿಲ್ಲ; ನಿಮ್ಮ ಪ್ರತಾಪದ ಆಳತೆಯಿಲ್ಲ. ಬಲ ಬೆಳೆಯಿ[illegible]ದರೆ ಕರ್ನಾಟಕ ಸಾಮ್ರಾಜ್ಯವು ಹಸ್ತಗತವಾಗುವದೆಂದೂ, ತಾವೇ ಏಕ ಛತ್ರಾಧಿಪತಿಗಳಾಗಿ ಮೆರೆಯಬೇಕೆಂದೂ ಅವರ ಹಂಬಲವಿದೆ. ಇದು ಕೈಗೂಡದ ಹಂಬಲ, ಹುಚ್ಚು ಹಂಬಲ, ಯೋಗ್ಯ ಬುದ್ಧಿವಾದದಿಂದ ಅವರ ಬುದ್ಧಿಯು ಸುಧಾರಿಸಬಹುದು; ಹೃದಯವು ವಿಕಾರರಹಿತವಾಗಬಹುದು ”

ಪದ್ಮನಾಭಯ್ಯನು ಹೀಗೆ ನುಡಿದಮೇಲೆ ಜಯಸಿಂಹನ ಗುಣಗಳನ್ನು ಸುಧಾರಿಸುವಬಗ್ಗೆ ಕೆಲವು ವೇಳೆ ಮಾತುಕತೆಗಳು ನಡೆದವು. ತರುವಾಯ ಓಲಗದ ವೇಳೆಯಾದುದರಿಂದ ಉಭಯತರೂ ಅಲ್ಲಿಂದ ತೆರಳಿದರು.

## ೧೯ ಸಂಗ್ರಾಮವು ನಿರ್ಣಯಿಸಲಿ !

ಪದ್ಮನಾಬಯ್ಯನು ಬನವಾಸಿಗೆ ಬಂದನು. ಅವನು ಜಯಸಿಂಹ ನನ್ನು ಕಂಡು ಅವನುನಡೆಯಿಸಿದ ಕಾರಸ್ಥಾನದಬಗ್ಗೆ ವಿವೇಚನೆ ಮಾಡ ತೊಡಗಿದನು. ಕದಂಬರಾಜ ಜಯಕೇಶಿಯು ಇಲ್ಲಿ ತಾನು ನಡೆಯಿಸಿದ ಸಾಹಸ ಕಾರ್ಯಗಳನ್ನು ತನ್ನ ಅಣ್ಣನಿಗೆ ತಿಳಿಸಿದಮೂಲಕ ಅವನು ಹೆದರಿ ಮಹಾಮಂತ್ರಿಯನ್ನು ತನ್ನಕಡೆಗೆ ಕಳುಹಿರುವನೆಂದು ಜಯಸಿಂಹನ ತಿಳುವಳಿಕೆಯಾಯಿತು. ಆಗ ಅವನು ಪದ್ಮನಾಭಯ್ಯನಿಗೆ— "ಮಹಾ ಮಂತ್ರಿಗಳೆ, ನಿಮ್ಮ ಸಾರ್ವಭೌಮರು ಸಮದೃಷ್ಟಿಯವರಾಗಿದ್ದರೆ ನನ್ನ ವಶದಲ್ಲಿ ಕರ್ನಾಟಕ ಸಾಮ್ರಾಜ್ಯವನ್ನೇಕೆಕೊಡಬಾರದು ? ಪಟ್ಟಬಾಧ್ಯ ರಾದ ಸೋಮೇಶ್ವರರನ್ನು ಸಿಂಹಾಸನಚ್ಯುತರನ್ನಾಗಿ ಮಾಡಲು ಸಾಹಸ ಬಟ್ಟ ವಿಕ್ರಮಾದಿತ್ಯರನ್ನು ನಾನೇಕೆ ಸಿಂಹಾಸನಚ್ಯುತರನ್ನಾಗಿ ಮಾಡ ಬಾರದು ? ಸಾಮ್ರಾಜ್ಯವನ್ನು ನನ್ನ ವಶಕ್ಕೆ ಕೊಟ್ಟು ತಾವೇ ಬನವಾಸಿ ಮಂಡಲದ ಆಧಿಪತ್ಯವಹಿಸಲಿ. ಸಾಮ್ರಾಜ್ಯವೈಭವ ಬೆಳೆಯಿಸಲೂ ಅದನ್ನು ಶಾಂತಿ ಪೂರಿತಮಾಡಲೂ ತಾವು ಹೆಣಗುತ್ತೇವೆಂದು ದೊಡ್ಡ ದೊಡ್ಡ ಮಾತಾಡುವ ಅವರು ಅದಕ್ಕಾಗಿ ಇಷ್ಟುತ್ಯಾಗವನ್ನು ಮಾಡಲಿ ನೋಡೋಣ."

ಜಯಸಿಂಹನ ಹುಚ್ಚುತನದ ಮಾತು ಕೇಳಿ ಪದ್ಮನಾಭಯ್ಯನಿಗೆ ನಗುಬಂದಿತು. ಪರಕ್ಷಣದಲ್ಲಿ ಸಿಟ್ಟೂ ಬಂದಿತು ಆಗ ಅವನು ತನ್ನ ಎಲ್ಲವಿಕಾರಗಳನ್ನು ನುಂಗಿಕೊಂಡು ಗಂಭೀರತೆಯಿಂದ— "ಸೋಮೇ ಶ್ವರ ಮಹಾರಾಜರು ಅಪಾತ್ರರಿದ್ದಮೂಲಕ ಅವರಿಗೆ ದುರವಸ್ಥೆ ಪ್ರಾಪ್ತ ವಾಯಿತು. ಪ್ರಜಾರಂಜಕನಾಗದ ಅರಸನು ಅರಸನಾಗಿ ಬಾಳಲು ಅನ ರ್ಹನು. ಬನವಾಸಿಮಂಡಲವನ್ನಷ್ಟು ಆಳುವ ಯೋಗ್ಯತೆ ಇಲ್ಲದ ನೀವು ಸಾಮ್ರಾಜ್ಯ ಭಾರವನ್ನು ವಹಿಸುವಬಗೆ ಹೇಗೆ ? ನಿಮ್ಮ ಮಂಡಲದ ಹೊರಗೆ ಶಾಂತಿಸೌಖ್ಯಗಳು ಪೂರ್ಣವಾಗಿ ತುಂಬಿರುವವು ! ನಿಮ್ಮ ಮಂಡಲದಲ್ಲಿ ನೋಡಿದತ್ತ ಹಾಹಾಕಾರವು ಕೇಳಬರುತ್ತಿದೆ. ಪ್ರಜೆಗ

ಳಿಗೂ ಕರ್ಮಚಾರಿಗಳಲ್ಲನೇಕರಿಗೂ ನೀವು ತಲೆಭಾರಾಗಿರುವಿರಿ. ಹಿಂದೆ ಸೋಮೇಶ್ವರ ಮಹಾರಾಜರು ಹೇಗೆ ಸಾಮ್ರಾಜ್ಯ ನಾಶದ ಪ್ರಯತ್ನ ಮಾಡಿದರೋ ಹಾಗೆಯೇ ನಿಮ್ಮ ಉಪಕ್ರಮವೂ ಕಂಡುಬರುವದು. ಜಡಸ್ವಾರ್ಥ ಅಸೂಯಾಬುದ್ಧಿ ಮೊದಲಾದವುಗಳು ಎಂದೂ ಫಲದಾಯಿಯಾಗುವದಿಲ್ಲ. ವಿಕ್ರಮಾದಿತ್ಯ ಮಹಾರಾಜರು ನಿಮ್ಮ ವಿಕ್ರಮದಿಂದ ರಾಜ್ಯ ವೈಭವಗಳನ್ನು ಅನುಭವಿಸುತ್ತಿರುವದಿಲ್ಲ. ನೀವು ಅವರ ಸಹೋದರರಿರುವಮೂಲಕವಾಗಿ ಬನವಾಸಿ ಮಂಡಲದಂತಹ ದೊಡ್ಡಮಂಡಲವನ್ನು ಅರಸರಂತೆ ಆಳುವ ಸೌಕರ್ಯ ಸೌಲಭ್ಯಗಳು ದೊರೆತಿವೆ; ಯುವರಾಜಪದವಿ ದೊರೆತರೆ ನೀವು ಸೇನಾಸಂಗ್ರಹ ಮಾಡಿರಬಹುದು; ಆನೆ ಒಂಟೆಗಳನ್ನು ಗಳಿಸಿಕೊಂಡಿರಬಹುದು; ಸಾಮ್ರಾಜ್ಯದೊಳಗಿನ ಹಲಕೆಲವು ಸೈನಿಕರನ್ನಾಗಲಿ ದಂಡನಾಯಕರನ್ನಾಗಲಿ ದ್ರವ್ಯಲಾಲಸೆಯಿಂದ ಒಡೆದುಕೊಂಡಿರಬಹುದು; ಸಾಮ್ರಾಜ್ಯದ ಹೊರಗಿನ ಅರಸರ ಹಾಗೂ ಮಂಡಲೇಶ್ವರರ ಸಹಕಾರವನ್ನು ಹೊಂದಿರಬಹುದು. ಎಷ್ಟುಬಗೆಯಾಗಿ ನೀವು ಸಂರಕ್ಷಣೆ ಮಾಡಿಕೊಂಡಿದ್ದರೂ, ನಿಮ್ಮ ಸಾಮರ್ಥ್ಯವು ವಿಕ್ರಮಾದಿತ್ಯ ಮಹಾರಾಜರ ಮಹಾಶಕ್ತಿಯ ಪಾಸಂಗಕ್ಕೆ ಹತ್ತಲಾರದು ನೀವು ಮಹಾರಾಜರೊಡನೆ ಸಹಕರಿಸಿದರೆ ನಿಮಗೆ ಸುಖವುಂಟು, ಶಾಂತಿಯುಂಟು ವೈಭವವನ್ನನುಭವಿಸಲು ಅವಕಾಶವುಂಟು, ಹಾಗೆಮಾಡದೆ ಹೋದರೆ ನೀವು ಸರ್ವನಾಶ ಹೊಂದುವಿರಿ; ನಿಮ್ಮ ಅಣ್ಣಂದಿರ ಮನಸ್ಸಿಗೆ ದೊಡ್ಡ ಆಘಾತವನ್ನುಂಟುಮಾಡುವಿರಿ; ಸಾಮ್ರಾಜ್ಯ ಗೌರವಕ್ಕೂ ಅದರ ಏರಿಕೆಗೂ ಬಾಧೆ ತರುವಿರಿ! ನೀವು ಈ ವಿಷಯದಲ್ಲಿ ಸಮಬುದ್ಧಿ ಶಾಂತಿಗಳನ್ನು ಹೊಂದಿ ಪರ್ಯಾಲೋಚಿಸಿರಿ. ನಾನು ಮಹಾರಾಜರ ಪಕ್ಷವಹಿಸಿ ಮಾತಾಡುವೆನೆಂದು ಭಾವಿಸಕೂಡದು. ನಾನು ಹೇಳುವ ಮಾತಿನಲ್ಲಿ ನಿಮ್ಮ ಹಿತವೇ ಹೆಚ್ಚುಂಟು. ನಾನು ನಿಮಗೆ ತಿಳಿಸುವದೇನಂದರೆ, ನೀವು ಸಮ್ರಾಟರ ಸಹಕಾರ ಹೊಂದಿರಿ; ಅವರೊಡನೆ ನಿರ್ಮಲಾಂತಃಕರಣದಿಂದ ವರ್ತಿಸಿರಿ; ಪ್ರಜೆಗಳು ಸ್ವಾನಂದ ಸಾಮ್ರಾಟದಲ್ಲಿ ಲೋಲಾಡುವಂತೆ ಆಳಿರಿ. ರಾಜನಿರುವದು ಪ್ರಜೆಗಳನ್ನು ಹಾಳುಮಾಡುವದಕ್ಕಲ್ಲ; ಅವರನ್ನು ಉಳಿಸುವದಕ್ಕಾಗಿ. ಅವರಿಗೆ ಬೇಕಾದ ಶಾಂತಿ ಸಮಾಧಾನ

ಗಳು ದೊರಕುವಂತೆ ಆಳುವದೇ ರಾಜನ ಕರ್ತವ್ಯ ನೀವು ಬಲ್ಲವರಿರು ವಿರಿ. ನಮ್ಮ ಮಹಾರಾಜರಿರುವಿರಿ. ನನಗೆ ನೀವು ವಿಕ್ರಮಾದಿತ್ಯ ಸಾರ್ವ ಭೌಮರು ಹೇಗೋಹಾಗೆ. ಅಂತೆಯೇ ಎಲ್ಲಮಾತುಗಳನ್ನು ಮರೆಮಾಡದೆ ಬಿನ್ನವಿಸಿರುವೆನು. ನೀವು ನಿಮ್ಮ ಮಂಡಲದಲ್ಲಿ ಅಶಾಂತಿಯ ಬೀಜಗಳನ್ನು ಹೇಗೆಹೇಗೆ ಬಿತ್ತಿ ನಿಮ್ಮ ಆಳಿಕೆಯ ಆಯುಷ್ಯ ಪರಿಮಾಣವನ್ನು ಆಕುಂಚ ಗೊಳಿಸುತ್ತ ನಡೆದಿರುವರೆಂಬದರ ಕಲ್ಪನೆ ನಿಮಗಿಲ್ಲ. ಅದು ನಮಗೆ ತಿಳಿ ದಿದೆ. ನಮ್ಮಲ್ಲಿ ಸೈನ್ಯವಿದೆ; ಶಸ್ತ್ರಗಳಿವೆ; ರಾಜಮಹಾರಾಜರ ಬೆಂಬಲ ವಿದೆ; ನಾವು ಹೇಗೆನಡೆದರೂ ನಮ್ಮನ್ನು ಕೇಳುವವರಾರು; ನಾವು ಸಮರ್ಥ ರಿರುವದರಿಂದ ದುರ್ಬಲ ಪ್ರಜೆಗಳು ನಮಗೆ ಏನುಮಾಡುವರು ಮೊದ ಲಾದ ಅಹಂಕಾರಕ್ಕೆ ಒಳಗಾಗುವದು ರಾಜನ ಶುದ್ಧ ತಪ್ಪು ವಿಚಾರ. ಅನೇಕ ಇರುವೆಗಳು ಕೂಡಿ ಸೊಕ್ಕಿದ ದೊಡ್ಡ ಹಾವನ್ನು ಕೊಂದುಬಿಡು ವವು. ಶಾಂತಿಯೇ ಜೀವನ, ಅಶಾಂತಿಯೇ ಮರಣ ಈ ತತ್ವವನ್ನು ನೆನ ಪಿನಲ್ಲಿಟ್ಟು ನಡೆದರೆ ರಾಜನು ಬಾಳುವನು, ಆಳುವನು. ಇಡೀ ಭರತ ಭೂಮಿಯಲ್ಲಿ ವರ್ಚಸ್ಸನ್ನು ನೆಲೆಗೊಳಿಸಿದ, ಹಾಗು ಅನೇಕ ಪ್ರಚಂಡ ಪ್ರತಾಪ ನಿಧಿಗಳನ್ನು ಮಣ್ಣುಮುಕ್ಕಿಸಿ ಹಣೆಹಚ್ಚಿಸಿಕೊಂಡ ದಿವ್ಯ ಪ್ರತಾಪ ಶಾಲಿಗಳಾದ ವಿಕ್ರಮಾದಿತ್ಯರೆದುರಿಗೆ ನೀವೆಂದರೆ ಎಷ್ಟರವರು? ಸೂರ್ಯನ ಮುಂದಿನ ಹೊನ್ನೇಹುಳ! ನಾನು ನಿಮ್ಮ ಮನಸ್ಸಿಗೆ ನೋವುಂಟು ಮಾಡಲು ಹೀಗೆ ಮಾತಾಡುವೆನೆಂದು ತಿಳಿಯಬೇಡಿರಿ. ನಾನು ಆಡುವದು ನನ್ನಮನಸ್ಸಿಗಾದ ನೋವಿನಸಲುವಾಗಿ! ನಿಮಗೆ ನೋವಾಗಬಾರದೆಂಬ ಉಚ್ಚಭಾವನೆಯುಳ್ಳವನಾದುದಕ್ಕಾಗಿ ಭಟ್ಟಂಗಿಗಳಹಾಗೆ ಧಣಿ ಧಣಿ! ಭಲೆ ಭಲೆ! ಶಾಬಾಸ್ ಎಂದು ಪ್ರಶಂಸನೆ ಮಾಡಿ ನಾನೇನು ಸ್ವಾರ್ಥ ಸಾಧನೆ ಮಾಡಬೇಕಾದುದಿಲ್ಲ; ನನಗೆ ಅದು ಬೇಕಾಗಿಲ್ಲ. ಮಹಾರಾಜರ ಆಜ್ಞೆಯಮೇರೆಗೆ ನಿಮಗೆ ಇಷ್ಟುತಿಳಿಸಿರುವೆನು. ನಾನಾಡಿದ ಮಾತು ನಿಮ್ಮ ಸೇವಕನಾದ ನನ್ನವಲ್ಲ; ನಿಮ್ಮ ಅಣ್ಣಂದಿರಾದ ವಿಕ್ರಮಾದಿತ್ಯ ಮಹಾರಾಜರವು. ಹೇಳುವಷ್ಟು ಹೇಳಿರುವೆನು! ತಾವು ಕೇಳುವಷ್ಟು ಕೇಳಿರಿ. ಕೇಳಲಾರದವನ್ನು ಬಿಡರಿ ಬಿಡುವವನ್ನುಮಾತ್ರ ಬಿಡರಿ. ಬಿಡ ಬಾರದವನ್ನು ಮಾತ್ರ ಹಿಡಿಯದೇ ಬಿಡಬೇಡರಿ."

ಪದ್ಮನಾಭಯ್ಯನು ಹೀಗೆ ನುಡಿದಕೂಡಲೆ ಜಯಸಿಂಹನು ಕಣ್ಣಿನಿಂದ ಕಿಡಿಗಳನ್ನು ಕೆಡಹುತ್ತಿರುವಂತೆ ತೋರಿದನು. ಅವನು ಸಂತಾಪದ ಭರದಲ್ಲಿ— "ಪದ್ಮನಾಭಯ್ಯನವರೆ, ನೀವು ಶಿಷ್ಟಾಯಿಗೆಂದುಬಂದು ಈ ರೀತಿ ನನ್ನಗೌರವಕ್ಕೂ ನನ್ನ ಮರ್ಯಾದೆಗೂ ಬಾಧೆತರುವಂತಹ ಮಾತುಗಳನ್ನಾಡಿದ್ದಕ್ಕೆ ನಿಮಗೆ ತಕ್ಕ ಪ್ರಾಯಶ್ಚಿತ್ತ ಮಾಡಬೇಕಾಗಿತ್ತು. ಯಾವಮಾತುಗಳನ್ನಾಡಲಿಕ್ಕೆ ನನ್ನ ಅಣ್ಣನ ಯೋಗ್ಯತೆಯಿಲ್ಲವೋ ಅಂತಹ ಮಾತುಗಳನ್ನಾಡಿದ್ದರಿಂದ ನನ್ನ ಸಂತಾಪವನ್ನು ಜಾಗ್ರತಪಡಿಸಿದಿರಿ. ನೀವು ಶಿಷ್ಟಾಯಿಗೆ ಬಂದಿಲ್ಲ; ಸಂಗ್ರಾಮದ ಆಹ್ವಾನಕ್ಕೆ ಬಂದಿರುವಿರಿ. ನೀವು ಹೆಚ್ಚುಮಾತು ಬೆಳೆಯಿಸದೆ ಬಂದದಾರಿಗೆ ಸುಂಕವಿಲ್ಲವೆಂಬಹಾಗೆ ಹೊರಟುಹೋಗತಕ್ಕದ್ದು. ವಿಕ್ರಮಾದಿತ್ಯನ ಅಳವನ್ನು ನಾನು ಅರಿತಿರುವೆನು. ಅವನ ಪೊಳ್ಳುಬೆದರಿಕೆಗೆ ಬೆದರಲು ನಾನೇನು ಸೋಮೇಶ್ವರ ಮಹಾರಾಜನಹಾಗೆ ಹೇಡಿಯಲ್ಲ. ಉಳಿದ ಮಂಡಲೇಶ್ವರರಹಾಗೆ ಅಳ್ಳೆದೆಯವನಲ್ಲ. ನನ್ನಲ್ಲಿ ಸೈನ್ಯವಿದೆ; ಶಸ್ತ್ರಗಳಿವೆ; ಇಂತಹ ವಿಕ್ರಮಾದಿತ್ಯರನೇಕರನ್ನು ಸದೆಬಡೆಯುವ ಕಲಿತನವಿದೆ. ಕರ್ನಾಟಕ ಸಾಮ್ರಾಜ್ಯದಲ್ಲಿ ಅರ್ಧಭಾಗವನ್ನು ಸ್ವಾಧೀನ ಪಡಿಸಿ ನಾನು ಸ್ವತಂತ್ರ ರಾಜನೆಂಬದನ್ನು ಆ ವಿಕ್ರಮನು ಒಪ್ಪಬೇಕು, ಇಲ್ಲವೆ ರಣಕ್ಕೆ ಅಣಿಯಾಗಬೇಕು. ಇದೇ ನನ್ನ ಸ್ಪಷ್ಟವಾದ ಒಂದೇ ಉತ್ತರವು!"

ಜಯಸಿಂಹನ ಮಾತುಗಳಿಂದ ಪದ್ಮನಾಭಯ್ಯನು ಮರುಗಿದನು. ಮೂರ್ಖಂಗೆ ಬುದ್ಧಿಯನು ಹೇಳಿದರೆ ಬೋರ್ಕಲ್ಲಮೇಲೆ ಮಳೆಗರೆದಹಾಗೆಂದು ಮನದಲ್ಲಿ ಅಂದುಕೊಂಡು ಅವನು "ಮಹಾರಾಜರೆ, ನಿಮ್ಮ ನಿಶ್ಚಯವು ಈ ಮೇರೆಗೆ ಇದ್ದರೆ ಅದಕ್ಕೆ ನೀವು ಹೇಳಿದಹಾಗೆ ರಣವೇ ಉತ್ತರವು. ಸಾಮ್ರಾಜ್ಯವನ್ನು ತುಂಡುಮಾಡಿ ಹರಿದುಹಂಚುವ ಘಾತಕೀ ಸಾಹಸವನ್ನು ಎಂತಹರೂ ಮಾಡಲಾರರು. ಸಾಮ್ರಾಜ್ಯವನ್ನು ತುಂಡು ಮಾಡುವ ಅಧಿಕಾರವು ನಿಮಗೂಇಲ್ಲ, ವಿಕ್ರಮಾದಿತ್ಯ ಮಹಾರಾಜರಿಗೂ ಇಲ್ಲ. ಕರ್ನಾಟಕದ ಏಕೀಕರಣಗೊಳಿಸಿ ಏಕೀಕರಣ ಪ್ರಭಾವದಿಂದ ಅದು ಬಲಗೊಳ್ಳುವಂತೆ ಮಾಡಿ, ಪ್ರಜೆಗಳ ಉನ್ನತಿಯನ್ನು ಸಾಧಿಸುವದು ಸುಜ್ಞರ ವಿಚಾರ. ಅದನ್ನು ಬಿಟ್ಟುಕೊಟ್ಟು ಏಕರಾಷ್ಟ್ರವನ್ನು ಖಂಡ

ತುಂಡಾಗಿ ಮಾಡುವದು ಯಾರಿಗೆತಾನೆ ಲಾಭದಾಯಕವು? ಸ್ವಾರ್ಥಿಗಳಾದ ನಿಮ್ಮಂತಹ ಅರಸರು ರಾಜ್ಯವೈಭವಗಳನ್ನನುಭವಿಸಲು ಆತುರರಾಗಿ ಅಂತಹ ಕಾರ್ಯಮಾಡಲುದ್ಯುಕ್ತರಾದರೆ ಅದಕ್ಕೆ ಸಾಮ್ರಾಜ್ಯದ ಪ್ರಜೆಗಳ ಹಾಗು ಕರ್ಮಚಾರಿಗಳ ಬಲವಾದ ವಿರೋಧವಿದೆ. ಅಲ್ಲದೆ ಸಾಮ್ರಾಜ್ಯವು ವಿಕ್ರಮಾದಿತ್ಯಮಹಾರಾಜರ ವಿಕ್ರಮಾರ್ಜಿತ ಸೊತ್ತಾಗಿದೆ. ಆಹವಮಲ್ಲ ಸೋಮೇಶ್ವರ ಮಹಾರಾಜರ ಆಳಿಕೆಯಲ್ಲಿದ್ದ ಸಾಮ್ರಾಜ್ಯವು ವಿಕ್ರಮಾಂಕದೇವ ಮಹಾರಾಜರ ಕಲಿತನದಿಂದ ದ್ವಿಗುಣಿತವಾಗಿರುವದನ್ನು ನೀವು ಅರಿತಿಲ್ಲವೆ? ಪಿತ್ರಾರ್ಜಿತ ಸಾಮ್ರಾಜ್ಯದ ಮಾನದಿಂದ ನಿಮಗೆ ಕೊಡಲ್ಪಟ್ಟ ಬನವಾಸಿ ಮಹಾಮಂಡಲವೇ ಹೆಚ್ಚು. ಭಾರತದಲ್ಲಿ ಚಿಕ್ಕವರಿಗೆ ರಾಜ್ಯಾಂಗವನ್ನು ತುಂಡುಮಾಡಿಕೊಟ್ಟ ದೃಷ್ಟಾಂತಗಳೊಂದಾದರೂ ಇದ್ದರೆ ಹೇಳಿರಿ. ಹೀಗಿದ್ದು ನೀವು ಹೀಗೆ ಹಟಹಿಡಿದಿರುವದು ಯಾವ ಉತ್ಪಾತದ ಲಕ್ಷಣವೋ ನಾನು ಕಾಣೆ."

"ಪದ್ಮನಾಭಯ್ಯನವರೆ, ಸಾಮ್ರಾಜ್ಯವು ವಿಕ್ರಮಾರ್ಜಿತ ಸತ್ವಶಾಲಿಗಳ ಸೊತ್ತೆಂದು ನೀವು ಒಪ್ಪಿಕೊಳ್ಳುವಿರಷ್ಟೇ? ಅದೇ ವಿಕ್ರಮದಿಂದ ನಾನು ಕರ್ನಾಟಕ ಸಾಮ್ರಾಜ್ಯವನ್ನು ಏಕೆ ವಶಪಡಿಸಿಕೊಳ್ಳಲಾಗದು?"

"ವಿರೋಚಿತ ಭಾಷಣವಿದು. ಇಂತಹರು ವೀರತನದಿಂದಲೆ ಗೆಲ್ಲಬೇಕಲ್ಲದೆ, ಅರ್ಧ ಸಾಮ್ರಾಜ್ಯವನ್ನು ತುಂಡುಮಾಡಿಕೊಡುವ ಯೋಚನೆ ಮಾಡುವದು ಅವಾಸ್ತವವು. ನೀವು ಸಿಟ್ಟಿಗೇಳದಿದ್ದರೆ ನಿಮಗೊಂದು ಸೂಚನೆ ಮಾಡಬಯಸುವೆನು."

"ನಿಮ್ಮ ಸೂಚನೆ ಯೇನು? ಬೀಳಲಿ ನಿಮ್ಮ ಬುದ್ಧಿಯಪ್ರಕಾಶ!"

"ಸಾಮ್ರಾಜ್ಯದಲ್ಲಿ ಒಡಕುಹುಟ್ಟುವ ಸಾಹಸ ಮಾಡುವದಕ್ಕಿಂತ ನಿಮ್ಮ ಶಕ್ತಿ ಸಾಮರ್ಥ್ಯಗಳನ್ನು ಪರಕೀಯರಮೇಲೆ ಉಪಯೋಗಿಸಿ ಜಯಶಾಲಿಗಳಾದರೆ ನೀವೂ ಒಂದು ಸಾಮ್ರಾಜ್ಯವನ್ನು ಕಟ್ಟುವಿರಿ. ವಿಕ್ರಮಾದಿತ್ಯ ಮಹಾರಾಜರು ನರ್ಮದೆಯವರೆಗೆ ಕರ್ನಾಟಕ ಸಾಮ್ರಾಜ್ಯವನ್ನು

ಬೆಳೆಯಿಸಿರುವದಲ್ಲದೆ ಉತ್ತರಾಪಥದಲ್ಲಿ ಸಹ ತಮ್ಮ ಮಂಡಲೇಶ್ವರರನ್ನು ನಿಯಮಿಸಿರುವರು. ನೀವು ಉತ್ತರಾಪಥದಮೇಲೆ ದಾಳಿಮಾಡಿ ನಿಮ್ಮ ವೀರತೆಯ ಸಿರಿಯನ್ನು ಮೆರೆಯಿಸಿ ಸ್ವತಂತ್ರ ಹಾಗು ಹೊಸ ಸಾಮ್ರಾಜ್ಯ ವನ್ನು ಕಟ್ಟಿದರೆ ನೀವು ದೊಡ್ಡದೊಂದು ಕಾರ್ಯಸಾಧಿಸಿದಂತಾಗುವದು. ನೀವು ಹೀಗೆಮಾಡಿದರೆ ನಿಮ್ಮ ಕೀರ್ತಿಯು ಬೆಳೆಯುವದು. ಕನ್ನಡಿಗರ ಖ್ಯಾತಿಯು ಹೆಚ್ಚಳಹೊಂದುವದು. ವಿಕ್ರಮಾರ್ಕ ಮಹಾರಾಜರಿಗೂ ಸಂತೋಷವುಂಟಾಗುವದು. ಉಭಯ ಬಂಧುಗಳು ಗೃಹಕಲಹದ ಬೇಗೆ ಯನ್ನು ಹೊತ್ತಿಸದೆ ಪವನಹುತವಹರಂತೆ ಕೂಡಿ ದಂಡಯಾತ್ರೆ ಕೈಕೊಂಡರೆ ಕರ್ನಾಟಕವು ವಿಶಾಲಕರ್ನಾಟಕವಾಗಿ ಆಸೇತು ಹಿಮಾ ಚಲದವರೆಗೆ ವ್ಯಾಪಿಸುವದು."

"ಪದ್ಮನಾಭಯ್ಯನವರೆ, ನಾನು ನಿಮ್ಮಿಂದ ಬುದ್ಧಿಗಲಿಯುವಷ್ಟು ಮೂರ್ಖನಿಲ್ಲ. ಇಬ್ಬರೂಕೂಡಿ ದಂಡಯಾತ್ರೆಮಾಡಬೇಕು, ರಾಜ್ಯಗಳಿಸ ಬೇಕು. ಪಾದಾಕ್ರಾಂತ ರಾಜ್ಯವೆಲ್ಲ ಸಮ್ರಾಟನದು, ನಾವುಮಾತ್ರ ವಿಧ ವೆಯರಂತೆ ಒಂದುಮಂಡಲವನ್ನೋ ಒಂದು ಗ್ರಾಮವನ್ನೋ ಉಂಬಳಿ ತೆಗೆದುಕೊಂಡು ಕಾಲಹರಣಮಾಡಬೇಕು. ಇದೇ ಅಲ್ಲವೆ ನಿಮ್ಮ ಬ್ರಹ್ಮ ಜ್ಞಾನ. ಶಾಬಾಸ್ ಈ ಬುದ್ಧಿವಾದಮಾಡಲಿಕ್ಕೆ ವಿಕ್ರಮಾದಿತ್ಯನು ನಿಮಗೆ ಹೇರಳವಾದ ಪ್ರತಿಫಲವಿತ್ತಿರಬಹುದಲ್ಲವೆ ! ಇನ್ನು ನೀವು ದಯಪಾಲಿಸಿರಿ. ಜಯಸಿಂಹಮಹಾರಾಜರ ದಂಡು ಕಲ್ಯಾಣವನ್ನು ಮುತ್ತುವದಕ್ಕೆ ಬೇಗನೆ ಬರುವದಿರುವದೆಂದು ಪ್ರಕಟೀಕರಿಸಿರಿ !"

ಪದ್ಮನಾಭಯ್ಯನು ಜಯಸಿಂಹನೊಡನೆ ಮಾತಾಡಲು ಬಹಳೇ ಹೇಸಿಕೊಂಡನು. ಇನ್ನು ಮಾತುಬೆಳೆಯಿಸಿ ಪ್ರಯೋಜನವಿಲ್ಲೆಂದು ಬಗೆದು ಅವನ ನಿರೋಪಹೊಂದಿ ಕಲ್ಯಾಣದ ದಾರಿಹಿಡಿದನು. ಮಂತ್ರಿಯು ಪ್ರಯಾಣಮಾಡಿದ ಮೂರನೆಯದಿನವೆ ಜಯಸಿಂಹನು ಸಂಗ್ರಾಮದ ಪ್ರಯಾಣಸಿದ್ಧತೆಯಲ್ಲಿ ತೊಡಗಿದನು. ದಿನಾವಧಿ ಮಾಡಿದರೆ ವಿಕ್ರಮಾ ದಿತ್ಯನು ಸಮರಸಿದ್ಧತೆ ಮಾಡಬಹುದೆಂದ ತಿಳಿದು, ಅವನಿಗೆ ಯಾವ ಆಸ್ಪದವೂ ದೊರೆಯದಹಾಗೆ ಕಲ್ಯಾಣದಮೇಲೆ ದಾಳಿ ಮಾಡಬೇಕೆಂದು ಜಯಸಿಂಹನ ಹಂಚಿಕೆಯಿತ್ತು.

ಪದ್ಮನಾಭಯ್ಯ ಮಹಾಪ್ರಧಾನಿಯು ಕಲ್ಯಾಣವನ್ನು ತಲುಪಿದನು. ಅವನು ಜಯಸಿಂಹನ ಅಭಿಪ್ರಾಯವನ್ನು ತಿಳಿಸಿ, ಉನ್ಮಾರ್ಗಗಾಮಿಯಾದ ಅವನು ದಂಡೋಪಾಯವಿಲ್ಲದೆ ದಾರಿಗೆ ಬರಲಾರನೆಂಬದನ್ನು ಸ್ಪಷ್ಟವಾಗಿ ವಿಕ್ರಮಾದಿತ್ಯನಿಗೆ ತಿಳಿಸಿದನು. ವಿಕ್ರಮಾದಿತ್ಯನು ಈ ಸಂಗತಿಯನ್ನು ಕೇಳಿ ಬಹುಪರಿಯಾಗಿ ಮಿಡುಕಿದನು. ತನಗೆ ಸಹೋದರರ ಬಲವು ಇಲ್ಲವೆಂದು ಅವನು ಗಟ್ಟಿಯಾಗಿ ತಿಳಿದನು. ಇನ್ನು ಸ್ವಸ್ಥವಾಗಿ ಕುಳಿತು ಪ್ರಯೋಜನವಿಲ್ಲೆಂದು ಬಗೆದು, ಬೇಗನೆ ಸಂಗ್ರಾಮಸಿದ್ಧತೆ ಮಾಡಿಕೊಂಡು ಮಹಾ ಸೇನೆಯೊಡನೆ ಕಲ್ಯಾಣದಿಂದ ಹೊರಟನು. ತಮ್ಮನ ಸೈನ್ಯವು ಕಲ್ಯಾಣವನ್ನು ತಲುಪದಹಾಗೆ ಮಾಡಬೇಕೆಂದು ಅವನು ಸೀಘ್ರಗಾಮಿಯಾಗಿ ಹೊರಟನು. ಜಯಸಿಂಹನ ಸೈನ್ಯವು ಕೃಷ್ಣಾವೇಣಿ ನದಿಯನ್ನು ತಲುಪುವಷ್ಟರಲ್ಲಿ ಇವನೂ ಅಲ್ಲಿಗೆ ತಲುಪಿದನು. ಸಹೋದರರ ಮಹಾಸೇನೆಗಳು ನದೀ ತಟಾಕದಲ್ಲಿ ಬೀಡುಬಿಟ್ಟವು ಬೇಗನೆ ಕೈಗೆಕೈ ಹತ್ತಬೇಕಾಗಿತ್ತು, ಆದರೆ ಉದಾರನೂ ಮಹಾನುಭಾವನೂ ಆದ ವಿಕ್ರಮಾದಿತ್ಯನು ಕೊನೆಯಪ್ರಯತ್ನ ಮಾಡಿನೋಡಬೇಕೆಂದು ಮಹಾಸೇನಾಪತಿಯಾದ ಅನಂತ ಪಾಲಯ್ಯನನ್ನೂ ಜಯಸಿಂಹನ ಕಡೆಗೆ ಮಧ್ಯಸ್ಥಿಕೆಗಾಗಿ ಕಳುಹಿದನು.

ಅನಂತಪಾಲಯ್ಯನು ಜಯಸಿಂಹನನ್ನು ಭೆಟ್ಟಿಯಾದನು. ಜಯಸಿಂಹನು ಅವನನ್ನು ಸ್ವಾಗತಿಸಿದನು. ಅನಂತರದಲ್ಲಿ ಅವನು "ಮತ್ತೇನು? ಮಹಾ ಸೇನಾಪತಿಗಳ ಆಗಮನವಾಯಿತು? ರಣದಲ್ಲಲ್ಲದೆ ಭೆಟ್ಟಿ ಮನೆಯಲ್ಲಿ ಅನಾವಶ್ಯಕವೆನಿಸುವದು."

"ವಿಕ್ರಮಾದಿತ್ಯ ಸಾರ್ವಭೌಮರು ಶಿಷ್ಟಾಯಿಗ್ಗಾಗಿ ನನ್ನನ್ನು ನಿಮ್ಮ ಕಡೆಗೆ ಕಳುಹಿಸಿರುವರು ನಮ್ಮನಮ್ಮೊಳಗೆ ಕಲಹವು ಒಳಿತಲ್ಲವೆಂದು ಅವರ ಅಭಿಪ್ರಾಯವಿದೆ ಪದ್ಮನಾಭಯ್ಯ ಮಹಾಮಂತ್ರಿಗಳ ಹೇಳಿಕೆಯು ನಿಮ್ಮಮನಸ್ಸಿನಮೇಲೆ ಸುಪರಿಣಾಮವನ್ನುಂಟು ಮಾಡಲಿಲ್ಲ. ಸಂಗ್ರಾಮದ ಹವ್ಯಾಸವನ್ನುಬಿಟ್ಟು ಸುಖದಿಂದಿರಲು ಇನ್ನೂ ಅವಕಾಶವಿದೆ. ಒಮ್ಮೆ ಕೈಗೊಟ್ಟಮೇಲೆ ಹಿಂದಿನಿಂದ ಶಿಷ್ಟಾಯಿ ಸಂಧಾನಗಳಿಗೆ ಅವಕಾಶ ಉಳಿ

ಯಲಿಕ್ಕಿಲ್ಲ. ವಿಚಾರಮಾಡಿ ಕಾರ್ಯಮಾಡಲು ಮಹಾರಾಜರು ನಿಮಗೆ ಮನಃಪೂರ್ವಕವಾಗಿ ಸಂಧಿಯನ್ನು ಕಲ್ಪಿಸಿಕೊಟ್ಟಿರುವರು."

"ಹೀಗೇನು?" ತಿರಸ್ಕಾರವ್ಯಂಜಕಸ್ವರದಿಂದ ಜಯಸಿಂಹನು "ಹೀಗೆ ಶಿಷ್ಟಾಯಿಯ ವೇಷ ಹಾಕಿ ದೊಡ್ಡದೊಡ್ಡ ಗುಡ್ಡದಂತಹ ಮಾತಾಡುವದಕ್ಕಿಂತ ಸೋತೆನೆಂದು ಶರಣಾಗತನಾಗಿ ಸಿಂಹಾಸನವನ್ನೊಪ್ಪಿಸಿ ಜೀವವುಳಿಸಿಕೊಳ್ಳಲು ಯಾರುಬೇಡವೆನ್ನುವರು?"

"ಓಹೋ!" ಅನಂತಪಾಲಯ್ಯನು ಸೋಜಿಗದಿಂದ "ಮಹಾರಾಜರ ಶಿಷ್ಟಾಯಿಯ ಅರ್ಥವನ್ನು ನೀವು ಹೀಗೆ ಮಾಡಿಕೊಂಡಿರುವಿರಿ!"

"ಹೀಗಲ್ಲದೆ ಮತ್ತೆ ಹೇಗೆ ಅರ್ಥಮಾಡಬೇಕು? ಪದದ ಅರ್ಥ ಪಲ್ಲವಿಯಲ್ಲಿ!"

ಜಯಸಿಂಹ ಮಹಾರಾಜರೆ, ಯುದ್ಧದ ಪರಿಣಾಮವು ನಿಮಗೆ ಕಾಣುತ್ತಿರಲಿಕ್ಕಿಲ್ಲ; ನನಗೆ ತಿಳಿದಿದೆ."

"ಪರಿಣಾಮ ಏನಾಗುವದೆಂಬದು ನನಗೂ ತಿಳಿದಿದೆ."

"ನೀವು ಏನುತಿಳಿದುಕೊಂಡಿರುವಿರಿ?"

"ಕಲ್ಯಾಣವು ನನ್ನ ವಶವಾಗುವದೆಂದೂ, ವಿಕ್ರಮನು ಶರಣು ಬಂದು ನನ್ನ ಮಾಂಡಲಿಕನಾಗಲೊಪ್ಪನೆಂದೂ ನಾನು ತಿಳಿದಿರುವೆನು."

"ಪಲಾಯನ ಮಾಡುವದಿಲ್ಲವೆಂದು ಪಣತೊಟ್ಟು ಕಾಳಗಗೊಟ್ಟರೆ ಒಂದುಪಿಳ್ಳೆಕೂಡ ಸುದ್ದಿಹೇಳಲು ಉಳಿಯುವದಿಲ್ಲವೆಂದು ನಾನು ಪ್ರತಿಜ್ಞೆ ಮಾಡಿ ಹೇಳುವೆನ."

"ನೀವು ಮಹಾ ಸೇನಾಪತಿಗಳು ಈತರದ ಅಧಟತನದ ಭಾಷೆಯು ನಿಮ್ಮಪದವಿಗೆ ಶೋಭಿಸುವಂತಿದೆ. ಇನ್ನು ಇಲ್ಲಿ ಮಾತಾಡುವ ಕಾರಣವಿಲ್ಲ ಎಲ್ಲವನ್ನು ಸಂಗ್ರಾಮವು ನಿರ್ಣಯಿಸಲಿ"

"ನಿರ್ಣಯಕೊಡಲು ರಣವು ಸಿದ್ಧವಿದೆ."

ರಣಮಾರಿಯು ಹೆಣಗಳ ರಾಶಿಯನ್ನು ಆಹುತಿ ತೆಗೆದುಕೊಳ್ಳಲು ಆತುರಳಾಗಿರುವಳು. ಇನ್ನು ನನಗೆ ನಿರೋಪಕೊಡಿರಿ." ಎಂದು ಅನಂತಪಾಲಯ್ಯನು ನುಡಿದು, ಉತ್ತರದ ಪ್ರತೀಕ್ಷೆಸಹಮಾಡದೆ ಅಲ್ಲಿಂದ ಹೊರಟುಹೋದನು.

## ೨೦ ಕೃಷ್ಣವೇಣೀ ಕಾಳಗ

ಜಯಸಿಂಹನು ವಿಕ್ರಮಾರ್ಕನ ರಾಜ್ಯವನ್ನು ಪ್ರವೇಶಿಸಿದೊಡನೆಯೆ ಅನೇಕ ಊರುಗಳನ್ನು ಸುಲಿಯುತ್ತಲೂ ಕೊಳ್ಳಿ ಇಡುತ್ತಲೂ ಬಂದಿದ್ದನು. ಈ ಸಂಗತಿಯು ವಿಕ್ರಮಾದಿತ್ಯನಿಗೆ ತಿಳಿದೊಡನೆಯೇ ಮತ್ತಿಷ್ಟು ಸಂತಪ್ತನಾದನು. ಇನ್ನು ತಮ್ಮನೆಂಬ ಅಭಿಮಾನವನ್ನು ಬಿಡಬೇಕೆಂದು ನಿರ್ಧಾರಮಾಡಿ ಕಾಳಗಕ್ಕೆ ಅಣಿಯಾಗುವಷ್ಟರಲ್ಲಿ ಜಯಸಿಂಹನ ಕಡೆಯಿಂದ ಒಬ್ಬ ರಾಯಭಾರಿಯು ಅವನ ಬಳಿಗೆ ಬಂದು ಒಡಂಬಡಿಕೆಯ ಮಾತುಕತೆ ನಡೆಯಿಸಿದನು. ಅದಾವ ಕಾರಣದಿಂದಲೋ ತಮ್ಮನಲ್ಲಿ ಸುಬುದ್ಧಿ ಉದಯವಾಯಿತೆಂದು ವಿಕ್ರಮಾದಿತ್ಯನು ಸಂತೋಷಬಟ್ಟನು. ಅವನು ಒಡಂಬಡಿಕೆಯ ಕಟ್ಟಳೆಗಳನ್ನು ತಿಳಿದುಕೊಳ್ಳಲು ಯತ್ನಿಸಿದನು. ಆದರೆ ಆ ಪ್ರತಿನಿಧಿಯು ಕಟ್ಟಳೆಗಳನ್ನು ಹೇಳಲಿಲ್ಲ. ಹಿಂದಿನಿಂದ ಎಲ್ಲವನ್ನು ತಿಳಿಸುವೆನೆಂದು ತಮ್ಮ ಮಹಾರಾಜರು ಹೇಳಿರುವರೆಂದು ಉಸುರಿದನು. ಏನೇ ಆಗಲಿ, ಸಂಗ್ರಾಮವು ನಿಂತು ಶಾಂತಿಯು ನೆಲೆಗೊಂಡರೆ ಸಾಕೆಂದು ವಿಕ್ರಮಾದಿತ್ಯನು ಆನಂದಗೊಂಡು, ಬೇಗನೆ ಒಡಂಬಡಿಕೆಯ ಕಟ್ಟಳೆಗಳನ್ನು ತಿಳಿಸುವದಕ್ಕಾಗಿ ಜಯಸಿಂಹನಿಗೆ ಹೇಳಬೇಕೆಂದು ಪ್ರತಿನಿಧಿಗೆ ತಿಳಿಸಿದನು.

ಕೃಷ್ಣವೇಣೀ ದಂಡೆಯಲ್ಲಿ ಉಭಯತರ ದೊಡ್ಡ ಸೈನ್ಯಗಳು ಬೀಡು ಬಿಟ್ಟಿದ್ದವು. ಎರಡೂ ಸೈನ್ಯಗಳು ಯುದ್ಧ ನಿಂತಿತೆಂದು ಸ್ವಚ್ಛಂದ ವೃತ್ತಿಯಲ್ಲಿ ವೇಳೆಗಳೆಯತೊಡಗಿದರು. ಒಡಂಬಡಿಕೆಯಾಗುವ ಪ್ರಸ್ತಾಪ ನಡೆದಮೇಲೆ ವೈರಕ್ಕೆ ಎಡೆಯೆಲ್ಲಿ? ವಿಕ್ರಮಾದಿತ್ಯನ ಸೈನಿಕರೂ ದಂಡನಾಯಕರೂ ಜಯಸಿಂಹನ ಪಾಳ್ಯಕ್ಕೂ ಜಯಸಿಂಹನ ಸೈನಿಕರೂ ದಂಡನಾಯಕರೂ ವಿಕ್ರಮಾದಿತ್ಯನ ಪಾಳ್ಯಕ್ಕೂ ಬರಹೋಗುವದನ್ನು ಮಾಡತೊಡಗಿದರು. ಇಬ್ಬರೂ ಕರ್ನಾಟಕದ ಮಹಾರಾಜರು; ಇಬ್ಬರೂ ಬಂಧುಗಳು. ಹೀಗಿದ್ದಮೇಲೆ ಒಡಂಬಡಿಕೆ ನಡೆದಾಗ ಸಂದೇಹಕ್ಕೆ ಎಡೆಯೆಲ್ಲಿ? ಈ

ಸ್ನೇಹವನ್ನು ಕಂಡು ಕರ್ನಾಟಕ ಸಾಮ್ರಾಜ್ಯದ ಮುಖ್ಯ ಕರ್ಮಚಾರಿಗಳಿಗೆ ಸಂತೋಷವಾಯಿತು. ಜಯಸಿಂಹನು ಇಂದು, ನಾಳೆ, ಎಂದು ದಿನಗಳೆಯ ತೊಡಗಿದನು. ಹೀಗೆ ಕೆಲ ದಿನಗಳು ಕಳೆದವು. ಇನ್ನೂ ಒಡಂಬಡಿಕೆಯ್ಲ ಕಟ್ಟಳೆಗಳಲ್ಲಿ ಒಂದೂ ವಿಕ್ರಮಾದಿತ್ಯನ ಕಡೆಗೆ ಬರಲಿಲ್ಲ. ಹೀಗೆಯೇ ನೊಣ ಹೊಡೆಯುತ್ತ ಕುಳಿತುಕೊಳ್ಳವದು ಅವನಿಗೆ ಬೇಸರಿಕೆಯನ್ನುಂಟು ಮಾಡಿತು. ಜಯಸಿಂಹನು ಹೀಗೆ ಧಿನಾವಧಿ ಮಾಡುವದನ್ನು ನೋಡಿ ಅವನಿಗೆ ಒಂದು ವಿಧದ ಅನುಮಾನವುಂಟಾಯಿತು. ಅವನು ತನ್ನ ಗುಪ್ತ ಚಾರರ ನಾಯಕನನ್ನು ಜಯಸಿಂಹನ ಪಾಳ್ಯಕ್ಕೆ ಕಳುಹಿಸಿ ಅಲ್ಲಿ ನಡೆದ ಚಲನವಲನೆಯನ್ನು ತಿಳಿದುಕೊಳ್ಳಲು ಹವಣಿಸಿದನು. ಈ ಹಂಚಿಕೆ ಯಿಂದ ಅವನ ಯತ್ನವು ಫಲಿಸಿತು. ಗುಪ್ತಚಾರರ ನಾಯಕನು ಜಯ ಸಿಂಹನು ನಡಿಸಿದ ಸೂಕ್ಷ್ಮ ಕಾರಸ್ಥಾನಗಳನ್ನು ತಿಳಿದುಕೊಂಡು ಬಂದನು.

ವಿಕ್ರಮಾದಿತ್ಯನ ಗುಪ್ತ ಚಾರನು ಜಯಸಂಹನ ಕಾರಸ್ಥಾನಗಳನ್ನು ತಿಳಿದುಕೊಂಡು ಬಂದಮೇಲೆ ಒಡೆಯನಿಗೆ ಭೆಟ್ಟಿಯಾಗಿ— "ಜೀಯಾ, ಜಯಸಿಂಹ ಮಹಾರಾಜನು ವಿಸ್ಮಯ ಜನಕ ಹಾಗು ಉದ್ವೇಗ ಜನಕ ಕಾರಸ್ಥಾನಗಳನ್ನು ನಡೆಯಿಸಿರುವರು. ಅವರು ಬಹಳೇ ಗುಪ್ತವಾಗಿ ಕಾರಸ್ಥಾನ ನಡೆಯಿಸಿದ್ದಾರೆ. ತಾವು ನಡೆಯಿಸಿದ ಕೃಷ್ಣಕೃತ್ಯಗಳ ಗಂಧವು ಇತರರಿಗೆ ತಗಲದಂತೆ ಅವರು ಬಹಳೇ ಜಾಗ್ರತೆಗೊಳ್ಳುತ್ತಲಿದ್ದಾರೆ. ತಮ್ಮ ಮಂಡಲದಲ್ಲಿ ಪ್ರಜೆಗಳನ್ನು ಸುಲಿದು ತಂದ ಹಣವನ್ನು ನಮ್ಮ ಸೈನಿಕರಿಗೆ ಕೊಟ್ಟು ಎಷ್ಟೋ ಜನರನ್ನು ತಮ್ಮ ಕಡೆಗೆ ಎಳೆದುಕೊಂಡಿದ್ದಾರೆ. ಸಂಣ-ಪುಟ್ಟ ದಂಡನಾಯಕರಿಗೆ ಲಂಚಕೊಟ್ಟು ಒಡೆದುಕೊಂಡಿದ್ದಾರೆ. ತಮ್ಮ ರಾಜ್ಯದಲ್ಲಿ ಭೂರಿ ವೇತನ ಕೊಡುವೆವೆಂದು ಹೇಳಿ ಎಷ್ಟೋ ಸೈನ್ಯದ ಮನವೊಲಿಸಿಕೊಂಡಿದ್ದಾರೆ. ಯುದ್ಧ ಪ್ರಸಂಗವು ನಡೆದರೆ ತಮ್ಮಮೇಲೆ ಶಸ್ತ್ರ ವೆತ್ತದೆ, ಆಯತ್ತ ಸಮಯದಲ್ಲಿ ತಮ್ಮ ಸೈನ್ಯವನ್ನು ಕೂಡಬೇಕೆಂದು ಎಷ್ಟೋ ಜನರನ್ನು ಒಲಿಸಿಕೊಂಡಿದ್ದಾರೆ. ಹೀಗೆ ಒಂದಿಲ್ಲೊಂದು ಬಗೆಯಿಂದ ಸಾಮ್ರಾಜ್ಯ ಸೈನ್ಯದಲ್ಲಿ ಒಡಕಿನ ಬೀಜ ಬಿತ್ತುವ ಕೆಡಕುತನವನ್ನು ಎಡಬಿಡದೆ ನಡೆಯಿಸಿದ್ದರಿಂದ ನಮ್ಮ ಸೈನ್ಯ ಶಕ್ತಿಯು ಕಡಿಮೆಯಾಗತೊಡಗಿದೆ. ನೀವು ತಮ್ಮನೆಂದು ಅಂತಃಕರಣ

ತೋರಿಸುವಿರಿ; ತಮ್ಮನು ಕರಳಲ್ಲಿ ಕತ್ತರಿಯಾಡಿಸುತ್ತಿರುವನು. ಇದ್ದ ಸಂಗತಿಯನ್ನು ಇದ್ದಹಾಗೆ ಅರಿಕೆಮಾಡಿಕೊಂಡಿದ್ದೇನೆ. ಹೀಗೆಯೇ ಕೆಲ ದಿನಗಳು ಕಳೆದರೆ ಸಾಮ್ರಾಜ್ಯ ಸೇನೆಯು ಶಕ್ತಿಗುಂದಿ ಪರಾಭೂತವಾಗುವ ಪ್ರಸಂಗ ವೊದಗುವದರಲ್ಲಿ ಸಂದೇಹವಿಲ್ಲ."

ಗುಪ್ತಚಾರರ ಮುಖ್ಯನ ಮಾತುಗಳನ್ನು ಕೇಳಿದಕೂಡಲೇ ವಿಕ್ರಮಾದಿತ್ಯನು ಮಿತಿಮೀರಿ ರೇಗಿದನು. ಕೂಡಲೇ ಅವನು ಸೇನಾಪತಿ ಅನಂತಪಾಲಯ್ಯನನ್ನು ಕರೆದು ಎಲ್ಲ ಸಂಗತಿಯನ್ನು ತಿಳಿಸಿದನು. ಆಗ ಅನಂತಪಾಲಯ್ಯನು— "ಜಯಸಿಂಹ ಮಹಾರಾಜರ ವರ್ತನದ ಬಗ್ಗೆ ಸಂದೇಹಉಂಟಾಗಿ ನಾನು ಅವರ ಚಲನ ವಲನಗಳನ್ನು ತಿಳಿದುಕೊಳ್ಳುವದಕ್ಕಾಗಿ ಗುಪ್ತಚಾರರನ್ನು ಕಳುಹಿಸಿದ್ದೆನು. ಅವರು ಅಕಲ್ಪಿತವಾಗಿ ಸೈನ್ಯವನ್ನು ಹೊಕ್ಕು ನಿಮ್ಮನ್ನು ಸೆರೆಹಿಡಿಯುವ ತಂತ್ರ ಹೂಡಿರುವರೆಂದು ತಿಳಿದುಬಂದಿದೆ. ನನ್ನ ಗುಪ್ತಚಾರನು ಇದೀಗ ಈ ಸಂಗತಿಯನ್ನು ತಿಳಿಸಿ ಹೋದನು."

"ಅನಂತಪಾಲಯ್ಯನವರೇ, ಮೋಹವು ನಷ್ಟವಾಯಿತು. ನಿಜವಾದ ತಿಳುವಳಿಕೆಯಾಯಿತು. ನೀವು ಅವಕಾಶಮಾಡದೆ ಕಾಳಗವನ್ನು ಪ್ರಾರಂಭಿಸಿರಿ. ತಡಮಾಡಿದರೆ ಕೆಲಸ ಕೆಡುವ ಸಂಭವವಿದೆ" ಎಂದು ವಿಕ್ರಮಾದಿತ್ಯನು ಪ್ರಧಾನಾಮಾತ್ಯನಿಗೆ ತಿಳಿಸಿದನು.

ಮಾರನೆಯ ದಿನವೇ ವಿಕ್ರಮಾದಿತ್ಯನ ಸೈನ್ಯವು ಜಯಸಿಂಹನ ಸೈನ್ಯದಮೇಲೆ ಅಕಸ್ಮಿಕವಾಗಿ ಬಿದ್ದಿತು. ಈ ಘಟನೆಯಿಂದ ಜಯಸಿಂಹನಿಗೆ ಆಶ್ಚರ್ಯವೆನಿಸಿತು. ಅವನು ತನ್ನ ಒಬ್ಬ ದೂತನನ್ನು ವಿಕ್ರಮಾದಿತ್ಯನಕಡೆಗೆ ಕಳುಹಿಸಿ, ಸಂಧಾನ ನಡೆದಾಗ ಕಾಳಗ ಹೂಡುವದು ಅಸಮಂಜಸವೆಂದು ಹೇಳಿಕಳುಹಿದನು. ಆಗ ವಿಕ್ರಮಾದಿತ್ಯನು ಜಯಸಿಂಹನಿಗೆ— "ಸಂಧಾನದ ಸೋಗುಹಾಕಿ ಗೃಹಭೇದಿತನದಂತಹ ಕುಕರ್ಮಗಳನ್ನಾಚರಿಸುವದೂ ಅಸಮಂಜಸ, ಮೋಸಗಾರಿಕೆಗೆ ಸರಿಯಾದ ಪ್ರಾಯಶ್ಚಿತ್ತವಿಧಿಸಲು ಶಸ್ತ್ರವೆತ್ತುವ ಪ್ರಸಂಗ ವೊದಗಿತು" ಎಂದು ಹೇಳಿಕಳುಹಿದನು.

ಘನಘೋರವಾದ ಸಂಗ್ರಾಮವೆಸಗಿತು. ವಿಕ್ರಮಾದಿತ್ಯನ ದಳವು ಜಯಸಿಂಹನ ದಳದಮೇಲೆ ಬಿದ್ದು ನಿಕರವಾಗಿ ಕಾದತೊಡಗಿತು, ಜಯಸಿಂಹನ ದಳವಾದರೂ ಸಣ್ಣದಿರಲಿಲ್ಲ. ಅದು ವಿಕ್ರಮಾದಿತ್ಯನ ದಂಡಿನೊಡನೆ ತುಮುಲವಾಗಿ ಸಂಗ್ರಾಮ ನಡೆಯಿಸಿತು. ಜಯಸಿಂಹನು ತನ್ನಲ್ಲಿದ್ದ ನೂರಾರು ಆನೆಗಳನ್ನೂ ಅಶ್ವಾರೋಹಿ ಸೈನ್ಯವನ್ನೂ ತೆಗೆದುಕೊಂಡು, ಆ ತಂಡಕ್ಕೆ ತಾನೇ ನಾಯಕನಾಗಿ ವಿಕ್ರಮಾದಿತ್ಯನ ದಂಡಿನ ಒಂದು ಭಾಗದಮೇಲೆ ರಭಸದಿಂದ ಏರಿ ಹೋದನು. ಜಯಸಿಂಹನ ಈ ಏರಾಟದಿಂದ ವಿಕ್ರಮಾದಿತ್ಯನ ಸೈನ್ಯದ ಒಂದು ಭಾಗವು ಚದರಿತು. ಕೂಡಲೇ ವಿಕ್ರಮಾದಿತ್ಯನು ತನ್ನ ಅಶ್ವಾರೋಹಿ ಸೈನ್ಯವನ್ನು ತೆಗೆದುಕೊಂಡು ಚದರಿದ ಸೈನ್ಯದ ಭಾಗದಕಡೆಗೆ ಹೋದನು. ಅಲ್ಲಿಯ ಅಧಿಪತಿಯು ಕದಂಬ ತೈಲಪದೇವನಿದ್ದನು. ಅವನು ತನ್ನ ಚದರಿದ ಸೈನ್ಯವನ್ನು ಹುರುಪಿನಿಂದ ಒಂದು ಗೂಡಿಸಿದನು. ವಿಕ್ರಮಾದಿತ್ಯನ ಅಶ್ವಾರೋಹಿ ಸೈನ್ಯವೂ ಕದಂಬ ತೈಲಪನ ಸೈನ್ಯವೂ ಒಂದುಗೂಡಿ ಜಯಸಿಂಹನ ಗಜಸೈನ್ಯದಮೇಲೆ ಬಿದ್ದಿತು. ಭಯಂಕರವಾದ ಕಾಳಗವು ನಡೆಯಿತು. ವಿಕ್ರಮಾದಿತ್ಯನ ಅಬ್ಬರಕ್ಕೆ ಜಯಸಿಂಹನ ಸೈನ್ಯವು ತಡೆಯಲಿಲ್ಲ. ಸ್ವಲ್ಪ ಹೊತ್ತಿನಲ್ಲಿ ಜಯಸಿಂಹನ ವಿಜಯಾನಂದವು ಮಾಯವಾಯಿತು. ಅವನ ಸೈನ್ಯವು ಆಳತೆಗೆಟ್ಟು ಇಳಿಗುರುಳತೊಡಗಿತು. ಹೆಣಗಳು ರಾಶಿರಾಶಿಯಾಗಿ ಬಿದ್ದವು. ನೆತ್ತರವು ಸರವುಗಟ್ಟಿ ಹರಿಯಿತು. ರಣಮಾರಿಯ ಈ ಕೋಲಾಹಲವು ಜಯಸಿಂಹನ ಸೈನ್ಯವನ್ನು ಧೃತಿಗುಂದಿಸಿತು. ಪಲಾಯನದ ಹೊರತು ಅದಕ್ಕೆ ಅನ್ಯಮಾರ್ಗವೇ ಉಳಿಯಲಿಲ್ಲ. ಅದು ದಾರಿ ದೊರೆತ ಕಡೆಗೆ ಓಡತೊಡಗಿತು. ಜಯಸಿಂಹನು ಇನ್ನು ತನಗೆ ಉಳವಿಲ್ಲೆಂದು ಬಗೆದು ತನ್ನ ಆನೆಯನ್ನು ಓಡಿಸಿದನು. ಅವನು ಓಟಕ್ಕೆ ಪ್ರಾರಂಭಮಾಡಿದೊಡನೆಯೇ ಕದಂಬ ತೈಲಪನು ತನ್ನ ದಳದೊಡನೆ ಅವನನ್ನು ಬೆನ್ನಟ್ಟಿದನು. ಸ್ವಲ್ಪ ದೂರ ಹೋದಕೂಡಲೇ ಉನ್ಮತ್ತ ಆನೆಯು ಜಯಸಿಂಹನನ್ನು ಕೆಳಗೆ ಕೆಡಹಿ ಓಡಿಹೋಯಿತು. ಕೂಡಲೇ ಕದಂಬ ತೈಲಪನು ಅವನನ್ನು ಸೆರೆಹಿಡಿದು ವಿಕ್ರಮಾದಿತ್ಯನಮುಂದೆ ನಿಲ್ಲಿಸಿದನು. ವಿಕ್ರಮಾದಿತ್ಯನು ಕೃಷ್ಣವೇಣೀ ಕಾಳಗದಲ್ಲಿ ಮಹಾ ವಿಜಯವನ್ನು

ಸಂಪಾದಿಸಿದನು. ಜಯಸಿಂಹನ ಆನೆ ಕುದುರೆಗಳೂ ಶಸ್ತ್ರ ಸಾಮಗ್ರಿಗಳೂ ಅಳಿದುಳಿದ ದಂಡೂ ಅವನ ಕೈವಶವಾಯಿತು.

ವಿಕ್ರಮಾದಿತ್ಯನು ಅಪರಾಧಿಯಂತೆ ಎದುರಿಗೆ ನಿಂತ ಜಯಸಿಂಹನನ್ನು ನೋಡಿ—"ತಮ್ಮಾ ಜಯಸಿಂಹಾ, ನಿನ್ನ ಮನದ ಹಂಬಲವೇನಿದೆ? ಬನವಾಸಿಯ ನಾಡೊಂದೆ ನಿನಗೆ ಸಾಲದಾಗಿತ್ತೇ ? ಅದಕ್ಕಾಗಿ ಇಂತಹ ಉನ್ಮಾರ್ಗಗಾಮಿತನದಿಂದ ಆಚರಿಸಿದೆಯಾ ? ನೀನು ನಿನ್ನ ದುಷ್ಕೃತ್ಯಗಳಿಂದ ಗಳಿಸಿದ್ದೇನು ? "

"ಚಾಲುಕ್ಯ ಸಿಂಹಾಸನವನ್ನು ಗಳಿಸಬೇಕೆಂದು ನನ್ನ ಪ್ರಬಲವಾದ ಆಕಾಂಕ್ಷೆಯಿತ್ತು; ಆದರೆ ನನ್ನ ದುರ್ದೈವವು ಅದನ್ನು ನನ್ನ ವಶಕ್ಕೆ ಕೊಡಲಿಲ್ಲ "

"ಜಯಸಿಂಹ, ಕರ್ನಾಟಕ ಸಾಮ್ರಾಜ್ಯದ ದೃಷ್ಟಿಯಿಂದ ಸಣ್ಣದಾದ ಬನವಾಸಿ ಪ್ರಾಂತವನ್ನು ಆಳಲಾಗದವನಿಂದ ಕರ್ನಾಟಕ ಸಾಮ್ರಾಜ್ಯದ ರಕ್ಷಣೆಯ ಕಾರ್ಯವು ಹೇಗೆ ನೆರವೇರಬೇಕು ? ಪ್ರಜೆಗಳ ವಿಶ್ವಾಸವನ್ನೂ ಅವರ ಪ್ರೇಮವನ್ನೂ ಗಳಿಸಿಕೊಳ್ಳದೆ ಹೋದರೆ ರಾಜ್ಯವು ಸ್ವಾಧೀನತೆಯಲ್ಲಿ ಉಳಿಯಲಾರದು. ಮುಂದೆ ನಿನ್ನ ಇಚ್ಛೆಯೇನುಂಟು ? "

"ಕಲ್ಯಾಣದ ಚಾಲುಕ್ಯ ಸಿಂಹಾಸನವನ್ನು ಇಂದಿಲ್ಲ ನಾಳೆ ಕೊನೆಗೆ ತಿಂಗಳೆರಡು ತಿಂಗಳಿಗೆ ಕಟ್ಟಕಡೆಗೆ ವರ್ಷೋಪ್ಪತ್ತಿನಲ್ಲಿ ವಶಪಡಿಸಿಕೊಳ್ಳುವದೇ ನನ್ನ ಗುರಿ ! ಇಡೀ ಆಯುಷ್ಯದಲ್ಲಿ ನಾನು ಈ ಸಾಹಸವನ್ನು ಮಾಡುವವನೇ ! "

"ಜಯಸಿಂಹ, ವಿಚಾರ ಮಾಡಿ ನೋಡು. ನಿನಗೆ ಇನ್ನೂ ಅವಕಾಶ ಕಲ್ಪಿಸಿಕೊಡುವೆನು ತಪ್ಪಿಗೆ ಒಪ್ಪಿ, ಪಶ್ಚಾತ್ತಾಪ ಹೊಂದಿ, ಒಳ್ಳೆಯ ದಾರಿಯಿಂದ ನಡೆಯುವ ಪ್ರತಿಜ್ಞೆ ಮಾಡಿದರೆ ನಿನಗೆ ಸಾಮ್ರಾಜ್ಯದಲ್ಲಿ ಯುವರಾಜನಾಗಿ, ಮಹಾಮಂಡಲಾಧಿಪತಿಯಾಗಿ, ಸಾಮ್ರಾಟನಂತೆ ವೈಭವಶಾಲಿಯಾಗಿ ಮೆರೆಯಲು ಸಂಧಿಯುಂಟು. "

"ನನಗೆ ಬುದ್ಧಿಯದೆ. ಬೇರೆಯವರ ಉಪದೇಶದ ಅವಶ್ಯಕತೆ ನನಗಿಲ್ಲ. ಇಡೀ ಆಯುಷ್ಯದಲ್ಲಿ ನಾನು ಕರ್ನಾಟಕದ ಒಡೆತನವನ್ನು ಸಾಧಿಸಲು ಪ್ರಯತ್ನಿಸತಕ್ಕವನೇ. ಇದರ ಹೊರತು ಬೇರೆ ಮಾತಿಲ್ಲ."

"ಇದೇ ನಿನ್ನ ಕೊನೆಯ ನಿರ್ಧಾರವೆ?"

"ಇದೇ ನನ್ನ ನಿರ್ಧಾರ, ನನ್ನ ಪ್ರತಿಜ್ಞೆ"

ವಿಕ್ರಮಾದಿತ್ಯನು ಆಸನದಿಂದೆದ್ದನು. ತರುವಾಯ ತೈಲಪದೇವನಿಗೆ— "ಇವನನ್ನು ಬಿಗಿಯಾದ ಕಾವಲಿನಲ್ಲಿರಿ, ರಾಜಮರ್ಯಾದೆಗುಚಿತವಾದ ವ್ಯವಸ್ಥೆಯಿಂದ ನಡೆಯಿಸಿಕೊಳ್ಳಿರಿ. ಇಡೀ ಆಯುಷ್ಯದ ತುಂಬ ಸೆರೆಯಲ್ಲಿರಬೇಕೆಂದೇ ಇವನ ದೈವದಲ್ಲಿರುವಾಗ ಅದನ್ನು ತಪ್ಪಿಸುವದು ಇತರರಿಂದಾಗದು"

ವಿಕ್ರಮಾದಿತ್ಯನು ಈ ಮೇರೆಗೆ ಆಜ್ಞಾಪಿಸಿ ಹೊರಗೆ ಹೊರಟನು. ಪರಕ್ಷಣದಲ್ಲಿ ರಾಜಾಜ್ಞೆಯು ಪ್ರಚಾರದಲ್ಲಿ ತರಲ್ಪಟ್ಟಿತು. ಜಯಸಿಂಹನು ಬಂಧನೆಯಲ್ಲಿರಿಸಲ್ಪಟ್ಟನು. ಬನವಾಸಿಯ ಮಂಡಲದ ಆಧಿಪತ್ಯವು ಕದಂಬ ತೈಲಪನಿಗೆ ಒಪ್ಪಿಸಲ್ಪಟ್ಟಿತು. ಮಾರನೆಯ ದಿನವೇ ವಿಕ್ರಮಾದಿತ್ಯನು ತನ್ನ ಸೈನ್ಯದೊಡನೆ ಕಲ್ಯಾಣದ ಕಡೆಗೆ ತೆರಳಿದನು.

# ೨೧ ವ್ಯರ್ಥ ಪ್ರಯತ್ನ

ವಿಕ್ರಮಾದಿತ್ಯನು ನಿಶ್ಶತ್ರುವೂ ನಿಶ್ಚಿಂತನೂ ಆದನು. ಅವನು ನೂತನ ಪತ್ನಿಯಾದ ಚಂದ್ರಲೇಖಾ ದೇವಿಯೊಡನೆ ವಿನೋದದಲ್ಲಿ ಕಾಲಕಳೆಯಲಾರಂಭಿಸಿದನು. ಅವನ ಮನಸ್ಸಿನಲ್ಲಿ ತನ್ನಹೆಸರಿನ ಒಂದು ರಾಜಧಾನಿಯನ್ನು ಸ್ಥಾಪಿಸಬೇಕೆಂದು ಯೋಚಿಸಿದನು. ಅವನು ವಿಷ್ಣು ಕಮಲಾ ವಿಲಾಸಿಯ ಒಂದು ಸುಂದರವಾದ ಗುಡಿಯನ್ನು ಒಂದು ಸರೋವರವನ್ನೂ ಸುತ್ತಲೂ ವಿಕ್ರಮಪುರವೆಂಬ ರಾಜಧಾನಿಯನ್ನೂ ನಿರ್ಮಾಣ ಮಾಡಬೇಕೆಂದು ಯೋಚಿಸಿ ಕಾರ್ಯಾರಂಭ ಮಾಡಿದನು. ಅವನು ಈ ಕೆಲಸವನ್ನು ತನ್ನ ಮನಸ್ಸಿನಂತೆ ಮಾಡಿಸಬೇಕೆಂಬ ಉದ್ದೇಶದಿಂದ ವಿಕ್ರಮಪುರ ರಾಜಧಾನಿಯೊಳಗಿನ ಅರಮನೆಯಲ್ಲಿಯೆ ವಾಸ ಮಾಡತೊಡಗಿದನು. ಅವನು ಹೀಗೆ ಅನೇಕ ಕಾರ್ಯಗಳಕಡೆ ತೊಡಗಿದ್ದರೂ ರಾಜಕಾರಣವನ್ನು ದುರ್ಲಕ್ಷಿಸುತ್ತಿದ್ದಿಲ್ಲ. ಅವನು ಮೇಲಿಂದಮೇಲೆ ಕಲ್ಯಾಣಕ್ಕೆ ಹೋಗಿಬರುತ್ತಿದ್ದನು. ಯಾವನಾದರೂ ಮಾಂಡಲಿಕನು ಉನ್ಮಾರ್ಗಗಾಮಿಯಾದರೆ ಆಗಿಂದಾಗ ಹೋಗಿ ಅವನ ಶಾಸನ ಮಾಡಿ ಬರುತ್ತಿದ್ದನು. ಇದೇ ಸಂಧಿಯಲ್ಲಿ ವೆಂಗಿಯ ಚಾಲುಕ್ಯರಾಜನು ದೊಡ್ಡ ದಂಡು ಕಟ್ಟಿಕೊಂಡು ಬಲಿಷ್ಠನಾಗಿ ಕರ್ನಾಟಕ ಸಾಮ್ರಾಜ್ಯದಮೇಲೆ ದಂಡೆತ್ತಿಬರುವವನಿರುವನೆಂಬ ವಾರ್ತೆಯು ವಿಕ್ರಮಾದಿತ್ಯನಿಗೆ ನಿಳಿಯಿತು. ಕೂಡಲೆ ಅವನು ದಂಡೆತ್ತಿಹೋಗಿ ವೆಂಗಿಯ ಅರಸನನ್ನು ಸೋಲಿಸಿ ಕಂಚಿಯನ್ನು ಕೈವಶ ಮಾಡಿಕೊಂಡು ಅಲ್ಲಿ ತನ್ನ ಹೆಂಡತಿಯ ಆಪ್ತನೊಬ್ಬನನ್ನು ಪಟ್ಟಕ್ಕೆ ಕುಳ್ಳಿರಿಸಿ, ಮರಳಿ ವಿಕ್ರಮಪುರಕ್ಕೆ ಬಂದನು.

ವಿಕ್ರಮಪುರವು ಕೆಲದಿನಗಳಲ್ಲಿ ಸುಂದರವಾದಪಟ್ಟಣವಾಗಿ ತೋರತೊಡಗಿತು. ವಿಷ್ಣು ಕಮಲಾವಿಲಾಸಿಯ ದೇವಾಲಯದ ಮುಂದಿರುವ ದೊಡ್ಡ ಸರೋವರವು ವಿಕ್ರಮಾದಿತ್ಯನ ಕ್ರೀಡಾ ಸರೋವರವಾಗಿ ಪರಿಣಮಿಸಿತು. ಅವನು ಚಂದ್ರಲೇಖೆಯೊಡನೆ ಸಾಯಂಕಾಲದಲ್ಲಿ ನೌಕಾ

ವಿಹಾರಮಾಡುತ್ತಿದ್ದನು. ಕಲ್ಯಾಣದಲ್ಲಿಯ ಪದ್ಮನಾಭಯ್ಯ ಪ್ರಧಾನಾಮಾತ್ಯನು ಜಾಣನೂ ರಾಜಕಾರಣ ಧುರೀಣನೂ ಏಕನಿಷ್ಠನೂ ಇದ್ದುದರಿಂದ ಸಾಮ್ರಾಜ್ಯದ ಆಳಿಕೆಯ ಬಹುಭಾಗ ಚಿಂತೆಯು ಕಡಿಮೆಯಾಗಿ ವಿಕ್ರಮಾದಿತ್ಯನಿಗೆ ಹೀಗೆ ಸುಖಸಂಕಥಾ ವಿನೋದದಲ್ಲಿ ಕಾಲ ಕಳೆಯಲು ಅವಕಾಶವಿದ್ದಿತು.

ವಿಕ್ರಮಾದಿತ್ಯನು ವಿಕ್ರಮಪುರದ ತನ್ನ ಹೊಸ ರಾಜಧಾನಿಯಲ್ಲಿ ವಸತಿಮಾಡಿದ್ದನು. ಒಂದುದಿನ ಮಧ್ಯರಾತ್ರಿ ಸಮಯದಲ್ಲಿ ಕೆಲವು ಪುಂಡರು ಅವನ ಅರಮನೆಯನ್ನು ಪ್ರವೇಶಿಸಿದರು. ಈ ಗದ್ದಲದಿಂದ ಚಂದ್ರಲೇಖೆಯು ಗಾಬರಿಗೊಂಡಳು. ಅವಳು ಪತಿಯವಿರೋಧಿಗಳಾರೋ ಬಂದಿರುವರೆಂದು ಬಗೆದು ಬಾಗಿಲನ್ನು ಭದ್ರಪಡಿಸಿದಳು. ಹೊರಗೆ ಕಾವಲುಗಾರರ ಚೀತ್ಕಾರ ಧ್ವನಿಯು ಕೇಳಹತ್ತಿತ್ತು. ಪುಂಡರನಾಯಕನು ಅಟ್ಟಾಲಿಕೆಯನ್ನೇರಿ ಭಿತ್ತಿವಾತಾಯನದಲ್ಲಿ ಇಣಿಕಿಹಾಕಿದನು. ವಿಕ್ರಮಾದಿತ್ಯನು ನಗ್ನ ಖಡ್ಗಧಾರಿಯಾಗಿ ನಿಂತಿದ್ದಾನೆ. ಬಳಿಯಲ್ಲಿ ಚಂದ್ರಲೇಖಾದೇವಿಯು ಭಯವಿಹ್ವರಳಾಗಿ ನಿಂತಿದ್ದಾಳೆ!

" ಚಂದ್ರಲೇಖೆ! ಬಾಗಿಲತೆರೆ, ನಿನ್ನನ್ನು ವಶಪಡಿಸಿಕೊಳ್ಳಬೇಕೆಂದು ಕಾಶ್ಮೀರದೇಶದಿಂದ ಬಂದಿದ್ದೇನೆ. ಇಂದು ನಿನ್ನ ಪತಿಯನ್ನು ಕೊಂದು ನಿನ್ನನ್ನು ಕೈವಶಪಡಿಸಿಕೊಂಡು ಹೋಗುವೆನು. ನೀನು ಬಾಗಿಲ ತೆರೆಯದಿದ್ದರೆ ಅದನ್ನು ಮುರಿದಾದರೂ ಒಳಗೆ ಪ್ರವೇಶ ಮಾಡುವೆನು. ಕಲ್ಯಾಣದಂತಹ ಭದ್ರವಾದ ನಗರಿಯಲ್ಲಿ ನನ್ನ ಅಭಿಲಾಷೆ ಪೂರೈಸುವಂತಿದ್ದಿಲ್ಲ. ನಿನ್ನ ಗಂಡನ ಈ ಹೊಸ ರಾಜಧಾನಿಯು ನನ್ನ ಸಸೈನ್ಯ ಪ್ರವೇಶಕ್ಕೆ ಒಳ್ಳೆಯ ಅನುಕೂಲವಾಗಿ ಪರಿಣಮಿಸಿತು."

" ನರಾಧಮಾ! ಪರನಾರಿಯನ್ನಪೇಕ್ಷಿಸಿ ಇಷ್ಟುಶ್ರಮಬಟ್ಟು ಇಲ್ಲಿಗೆ ಕಾಶ್ಮೀರದಿಂದ ಬಂದಿರುವೆಯಾ? ಒಳಿತಾಯಿತು." ಎಂದು ವಿಕ್ರಮಾದಿತ್ಯನು ನುಡಿದು ಚಂದ್ರಲೇಖೆ, ನೀನು ಒಳಗೆನಡೆ. ನಾನು ಈ ಹರ್ಷನ ಪಾರುಪತ್ಯ ಮಾಡುವೆನು."

ವಿಕ್ರಮಾದಿತ್ಯನು ಹೀಗೆ ನುಡಿದು ದ್ವಾರವನ್ನು ತೆರೆಯಲು ಹೊರಟನು. ಆಗ ಚಂದ್ರಲೇಖೆಯು ಅಡ್ಡಬಂದು — "ನಾಥಾ! ಇದು ಅಸಮಯ! ಹೊರಗೆ ಹರ್ಷರಾಜನ ಸೈನ್ಯವಿದೆ. ನಿಮ್ಮ ಕಾವಲುಗಾರರೂ ಸೈನಿಕರೂ ಹರ್ಷನ ಸೈನ್ಯದ ಖಡ್ಗಗಳಿಗೆ ಬಲಿಯಾಗಿರುವರು. ಹೀಗೆ ಏಕಾಕಿಯಾಗಿ ಶತ್ರು ಸಮೂಹವನ್ನು ಪ್ರವೇಶಿಸುವದು ಘಾತಕವು."

ವಿಕ್ರಮಾದಿತ್ಯನು ಚಂದ್ರಲೇಖೆಯನ್ನು ಬೇರೆ ಕರೆದೊಯ್ದು ಮೆಲ್ಲಗೆ ಏನನ್ನೋ ಹೇಳಿದನು. ಕೂಡಲೆ ಅವಳು ಅಟ್ಟಾಲಿಕೆಯ ಒಳದಾರಿಯಿಂದ ಕೆಳಗಿಳಿದಳು. ಆಗ ಅವಳು ಕೈಯಲ್ಲಿ ಪಂಜುಹಿಡಿದಿದ್ದಳು. ಅವಳು ಅರಮನೆಯಲ್ಲಿದ್ದ ನೆಲಮಾರ್ಗದಿಂದ ಸೇನಾಪತಿಯ ಮಂದಿರವನ್ನು ಪ್ರವೇಶಿಸಿ, ಅರಮನೆಯಲ್ಲಿ ನಡೆದ ಕೋಲಾಹಲದ ವಾರ್ತೆಯನ್ನು ತಿಳಿಸಿದಳು. ಕೂಡಲೆ ಸೇನಾಪತಿಯು ತನ್ನಲ್ಲಿದ್ದ ಹಲಕೆಲವು ಸೈನಿಕರೊಡನೆ ನೆಲಮಾರ್ಗದಿಂದ ಅಟ್ಟಾಲಿಕೆಗೆ ಬಂದರು. ಬಾಗಿಲು ತೆರೆಯಲ್ಪಟ್ಟಿತು. ಅರಮನೆಯ ಪ್ರಾಂಗಣದಲ್ಲಿ ಕದನವೆಸದಿತು. ಅಷ್ಟರಲ್ಲಿ ವಿಕ್ರಮಾದಿತ್ಯನ ಸೈನಿಕರನೇಕರು ಅಲ್ಲಿಗೆಬಂದು ಹರ್ಷನ ಸೈನ್ಯದಮೇಲೆ ಬಿದ್ದರು. ವಿಕ್ರಮಾದಿತ್ಯನ ಸೈನ್ಯದ ಆವೇಶದ ಹೊಡತಕ್ಕೆ ಹರ್ಷನ ಸೈನ್ಯವು ತಡೆಯಲಿಲ್ಲ. ಆಗ ಅವನು ಅಳಿದುಳಿದ ತನ್ನ ಸೈನಿಕರೊಡನೆ ಪಲಾಯನ ಮಾಡಿದನು. ರಾತ್ರಿಯ ವೇಳೆಯಾದುದರಿಂದ ಹರ್ಷನನ್ನು ಸೆರೆಹಿಡಿಯುವ ಕಾರ್ಯವು ಸಾಧಿಸಲಿಲ್ಲ.

ವಿಜಯಯಾದ ವಿಕ್ರಮಾದಿತ್ಯನು ಅಟ್ಟಾಲಿಕೆಯನ್ನು ಪ್ರವೇಶಿಸಿದನು. ಅಲ್ಲಿ ಚಂದಲೇಖೆಯು ಒಂದು ಪತ್ರವನ್ನೋದತೊಡಗಿದ್ದಳು. ವಿಕ್ರಮನು ಒಳಗೆಹೋಗಿ "ಆ ಪತ್ರ ವಾವುದು?" ಎಂದು ಅವಳನ್ನು ಕೇಳಿದನು.

"ಅವನದೇ, ಆ ಕಾಮಾಂಧ ಹರ್ಷನಪತ್ರ!" ಎಂದು ನುಡಿದು, ಚಂದ್ರಲೇಖೆಯು ಪತ್ರವನ್ನು ಪತಿಯ ಸ್ವಾಧೀನಪಡಿಸಿದಳು. ವಿಕ್ರಮಾದಿತ್ಯನು ಅದನ್ನು ಓದಿದನು.

" ಪ್ರಿಯ ಚಂದ್ರಲೇಖೆ!

ನಿನ್ನ ತಂದೆಯು ನಿನ್ನನ್ನು ನನಗೆ ಅರ್ಪಿಸಬೇಕೆಂದು ಸಂಕಲ್ಪವಮಾಡಿದ್ದನು. ವಿಕ್ರಮಾದಿತ್ಯನು ಸ್ವಯಂವರಕ್ಕೆ ಬಾರದಿದ್ದರೆ ನೀನು ನಿಶ್ಚಯವಾಗಿ ನನ್ನನ್ನೇ ವರಿಸುತ್ತಿದ್ದೆಯೆಂಬದನ್ನು ನಾನು ಅರಿತಿರುವೆನು. ನೀನು ಕಾಶ್ಮಿರಕ್ಕೆ ಬಂದರೆ ವಿಕ್ರಮಾದಿತ್ಯನನ್ನೂ ವಿಕ್ರಮಪುರ ಕಲ್ಯಾಣಗಳನ್ನೂ ಪೂರ್ಣಮರೆಯುವೆ. ಕರ್ನಾಟಕಸಾಮ್ರಾಜ್ಯಕ್ಕಿಂತ ಮಿಗಿಲಾದ ಹರ್ಷನ ಕಾಶ್ಮಿರ ಸಾಮ್ರಾಜ್ಯದಲ್ಲಿ ಸುಖವಾಗಿ ಕಾಲಕಳೆಯಲು ಮನಸ್ಸುಮಾಡು. ಕಾಶ್ಮಿರವೆಂದರೆ ಭೂಲೋಕದನಂದನವನ. ನಂದನವನದ ಅಧಿಕಪತಿಯಾದ ಈ ಹರ್ಷರಾಜನು ನಿಜವಾಗಿ ಹರ್ಷದಾಯಕನಿರುವನು. ನೀನು ಇನ್ನಾದರೂ ವಿಕ್ರಮನನ್ನು ತೊರೆದು ನನ್ನಸಂಗಡ ಹೊರಡು ಇಂದು ಮಧ್ಯರಾತ್ರಿಗೆ ನಾನು ನಿನ್ನ ಅಟ್ಟಾಲಿಕೆಗೆ ಬರುವೆನು.

ನಿನ್ನ ಚಿರಸಹವಾಸವನ್ನಪೇಕ್ಷಿಸುವ
ಹರ್ಷರಾಜ."

ಪತ್ರವನ್ನೋದಿ ವಿಕ್ರಮಾದಿತ್ಯನು — "ಇದು ಎಲ್ಲಿತ್ತು?"

" ಭಿತ್ತಿವಾತಾಯನದ ಕೆಳಗೆ ಬಿದ್ದಿತು."

ವಿಕ್ರಮಾದಿತ್ಯನು ಪತ್ರವನ್ನು ಹರಿದುಚಲ್ಲಿ "ಮೂರ್ಖ ಶಿರೋಮಣಿ!" ಎಂದು ಸಂತಾಪದಿಂದನುಡಿದು, ತನ್ನ ಪ್ರಿಯೆಯನ್ನು ಕೈಹಿಡಿದು ಕರೆದುಕೊಂಡು ಮಂಚದಮೇಲೆ ಕುಳ್ಳರಿಸಿಕೊಂಡು "ಇಂದಿನ ಘಟನೆಯಿಂದ ಗಾಬರಿಗೊಂಡಿಯೇನು?"

"ನಾನು ವೀರಪತ್ನಿಯಿರುವೆನು. ಪ್ರಸಂಗವೊದಗಿದ್ದರೆ ನಾನೂ ನಿಮ್ಮ ಜೊತೆಯಲ್ಲಿ ಶಸ್ತ್ರಧಾರಿಯಾಗಿ ಕಾಳಗಮಾಡುತ್ತಿದ್ದೆನು."

"ಶಾಬಾಸ್ ಆರ್ಯರಮಣಿ!" ಎಂದು ವಿಕ್ರಮಾದಿತ್ಯನು ಉದ್ಗಾರ ತೆಗೆದು "ನೀನು ನೆಲಮಾರ್ಗದಿಂದ ಹೋಗಿ ಸೇನಾಪತಿಯನ್ನು ಕರೆತ

ರುವ ಸಾಹಸಮಾಡಿದ್ದನ್ನು ಎಷ್ಟುವರ್ಣಿಸಿದರೂ ತೀರದು ನಿನ್ನನ್ನು ಇಲ್ಲಿಯೆ ಬಿಟ್ಟುಹೋಗಬೇಕೆಂದರೆ ದುಷ್ಟರು ಬಾಗಿಲ ಮುರಿದು ನಿನಗೆ ಅಪಾಯ ವನ್ನೆಲ್ಲಿ ಉಂಟುಮಾಡುವರೋ ಎಂದು ಬಗೆದು, ಆ ಕೆಲಸಕ್ಕೆ ನಿನ್ನನ್ನೇ ಕಳುಹಿದೆನು."

"ನನಗೆ ಅಪಾಯವನ್ನುಂಟು ಮಾಡುವ ಎದೆಯು ಯಾವನಿಗೂ ಇಲ್ಲ. ಹರ್ಷರಾಜನು ಒಳಗೆ ಪ್ರವೇಶಿಸಿದ್ದರೆ ಖಡ್ಗಧಾರಿಯಾಗಿ ನಿಂತು ಕಾದಿಹೊಡೆಯುತ್ತಿದ್ದೆನು, ಇಲ್ಲವೆ ಮಡಿಯುತ್ತಿದ್ದೆನು."

"ಚಂದ್ರಲೇಖೆ, ನೀನು ನನಗೆ ಶೋಭಿಸುವಂತಹ ಪತ್ನಿಯಿರುವೆ!" ಎಂದು ವಿಕ್ರಮಾದಿತ್ಯನು ನುಡಿದು "ಈ ವಿಕ್ರಮಪುರವು ಹೊಸದಾಗಿ ಕಟ್ಟಲ್ಪಟ್ಟದ್ದರಿಂದ ಕೋಟೆಕೊತ್ತಳಗಳಿಲ್ಲದೆ ಅರಕ್ಷಿತ ರಾಜಧಾನಿಯಾಗಿ ರುವದು. ಇಲ್ಲಿ ಸೈನ್ಯವೂ ಹೆಚ್ಚಾಗಿ ಇರಲಿಲ್ಲ. ಅಂತೆಯೆ ಹರ್ಷನ ಪ್ರವೇಶಕ್ಕೆ ಮಾರ್ಗವಾಯಿತು. ಕರ್ನಾಟಕದ ನಡುನಾಡಾದ ಈ ಭಾಗ ದಲ್ಲಿ ಶತ್ರುಗಳ ಕಾಟವಾಗಲಿಕ್ಕಿಲ್ಲವೆಂದು ಮಾನಸಿಕತೆ ಮಾಡಿದೆನು. ಈ ಹೊಸ ರಾಜಧಾನಿಗೆ ಕೋಟೆಕಟ್ಟಿ ಭದ್ರಮಾಡಲು ಪ್ರಾರಂಭಿಸಬೇ ಕಾಯಿತು."

"ನಾಥ, ರಾಜಕಾರಣ ಪಾರಂಗತರಾದವರು ಕೂಡ ಒಮ್ಮೊಮ್ಮೆ ಮೈಮರೆಯುವದಕ್ಕೆ ಇನ್ನೊಂದು ದೃಷ್ಟಾಂತ. ನಾನು ನಿಮಗೆ ನಿಷ್ಠುರ ವಾಗಿ ಹೇಳಬೇಕಾದುದಾದರೆ ಮಂತ್ರಿ ಸೇನಾಪತಿಗಳಮೇಲೆ ರಾಜ್ಯಭಾರ ವಹಿಸಿ ವಿಷ್ಣು ಕಮಲಾವಿಲಾಸಿನಿ ಸರೋವರದಲ್ಲಿ ಚಂದ್ರಲೇಖೆಯೊಡನೆ ಜಲಕ್ರೀಡೆಯಲ್ಲಿ ಕಾಲಕಳೆಯುವದರಿಂದ ಪ್ರತಾಪಶಾಲಿಸಾಮ್ರಾಟನ ಕರ್ತವ್ಯ ಮುಗಿಯಲಿಲ್ಲ. ಸಮ್ರಾಟರಮೇಲೆ ರಾಜ್ಯಭಾರವೆಷ್ಟಿದೆಯೆಂಬ ದನ್ನು ಪರ್ಯಾಲೋಚಿಸಿ ಕರ್ತವ್ಯದಲ್ಲಿ ಜಾಗ್ರತರಾಗಬೇಕು. ದೊಡ್ಡ ಹೊಣೆಗಾರರಾದ ನೀವು ಚಂದ್ರಲೇಖೆಯನ್ನು ಒಂದುವೇಳೆ ಮರೆತರೆ ಘಾತುಕವೆನಿಸಲಾರದು! ಆದರೆ ರಾಜ್ಯದ ಹೊಣೆಯೇನೆಂಬದನ್ನು ಮರೆ ತರೆ ಮಾತ್ರ ಉತ್ಪಾತವಾಗುವದು ಖಂಡಿತ. ದಕ್ಷಿಣದಲ್ಲಿ ಹೊಯ್ಸಳ ಬಿಟ್ಟಿದೇವನು ಮಾಂಡಲಿಕನಾಗಿದ್ದರೂ ಸ್ವತಂತ್ರ ಕಾರಭಾರ ನಡೆಯಿಸು

ವವನಹಾಗೆ ನಟಿಸುತ್ತಿರುವನು; ಉತ್ತರಾಪಥದ ರಾಜರು ಕರ್ನಾಟಕದ ಮೇರೆಯನ್ನು ಕೆಳಗೆ ದೂಡಲು ಹವಣಿಸುತ್ತಿರುವರು. ಇಂತಹ ಮಹತ್ವದ ವಿಷಯಗಳನ್ನು ನೀವು ಮರೆತರೆ ಹೇಗೆ?"

ಚಂದ್ರಲೇಖೆಯ ಮಾತುಗಳು ವಿಕ್ರಮಾದಿತ್ಯನ ಕಣ್ಣುಗಳಿಗೆ ಅಂಜನ ಹಚ್ಚಿದಂತಾದವು. ಆಗ ಅವನು ತನ್ನ ಚಕ್ಷುಗಳನ್ನು ಬಹಿರಂಗಕ್ಕೆ ತಂದು ನಿರೀಕ್ಷಿಸಿದನು. ಆಗ ಅವನಿಗೆ ತನ್ನ ಪತ್ನಿಯ ಮಾತುಗಳು ಅಯತಾರ್ಥವಲ್ಲವೆಂಬ ತಿಳುವಳಿಕೆಯಾಯಿತು. ಅವನು ತನ್ನ ಪತ್ನಿಯನ್ನು ಕುರಿತು— "ಮಾರಸಿಂಹ ಪುತ್ರೀ! ನೀನು ನನ್ನ ನೇತ್ರಕ್ಕೆ ಚನ್ನಾಗಿ ಅಂಜನ ಹಚ್ಚಿದೆ. ನೀನು ಹೇಳಿದಂತೆ ನಾನು ವಿಲಾಸಾಂಧನಾಗಿ ನಿಷ್ಕ್ರಿಯ ಪ್ರವೃತ್ತಿಗೊಳಗಾಗತೊಡಗಿದ್ದೆನು. ನೀನು ನಿಜವಾಗಿ ಆದರ್ಶ ಆರ್ಯಾಂಗನೆ!" ಎಂದು ಉದ್ಗಾರ ತೆಗೆದನು.

ವಿಕ್ರಮಾದಿತ್ಯನು ವಿಕ್ರಮಪುರದ ಕೋಟೆ-ಕೊತ್ತಳಗಳ ವ್ಯವಸ್ಥೆಯನ್ನು ಅಲ್ಲಿಯ ಮುಖ್ಯ ಕರ್ಮಚಾರಿಗೆ ಒಪ್ಪಿಸಿ, ಮಾರನೆಯ ದಿನವೇ ಚಂದ್ರಲೇಖೆಯೊಡನೆ ಕಲ್ಯಾಣ ಪುರಕ್ಕೆ ತೆರಳಿದನು.

# ೨೨ ಸುವರ್ಣ ಯುಗ !

ಪುಣ್ಯ ಶ್ಲೋಕಿಯಾದ ವೀರ ವಿಕ್ರಮಾದಿತ್ಯನು ನರ್ಮದೆಯ ದಕ್ಷಿಣಕ್ಕಿರುವ ಭಾರತಿ ವರ್ಷವನ್ನು ಸ್ವಾಧೀನಪಡಿಸಿಕೊಂಡು ಏಕಛತ್ರಾಧಿಪತಿಯಾಗಿದ್ದನು. ದಕ್ಷಿಣದಲ್ಲಿರುವ ಹೊಯ್ಸಳ ವಿಷ್ಣುವರ್ಧನ, ಮೊದಲಾದ ಮಹಾ ಮಂಡಲೇಶ್ವರರು ಇವನ ಆಧಿಪತ್ಯದಲ್ಲಿದ್ದರು. ರಾಜ್ಯದಲ್ಲಿ ಪೂರ್ಣ ಶಾಂತಿಯು ನೆಲೆಗೊಂಡಿತ್ತು. ಪ್ರಜೆಗಳಿಗೆ ಯಾವಥರದ ಕೊರತೆಗಳಿರಲಿಲ್ಲ. ಇವನ ರಾಜ್ಯವು ರಾಮರಾಜ್ಯವನ್ನು ಹೋಲುತ್ತಿತ್ತು. ರಾಜ್ಯಕ್ಕೆ ಪರಚಕ್ರಗಳ ಕಾಟವಾಗಲಿ, ಸ್ವರಾಜ್ಯದಲ್ಲಿಯ ಅಂತಃಕಲಹಗಳಾಗಲಿ ತಲೆದೋರುತ್ತಿರಲಿಲ್ಲ. ಸುಖಸಮೃದ್ಧವೂ ಶಾಂತಿಯುಕ್ತವೂ ಆದ ಕರ್ನಾಟಕ ಸಾಮ್ರಾಜ್ಯವು ಕನ್ನಡಿಗರಿಗೆ ಸುವರ್ಣಯುಗವಾಗಿ ಪರಿಣಮಿಸಿತು. ವಿಕ್ರಮಾದಿತ್ಯನು ತನ್ನ ಜ್ಯೇಷ್ಠಪುತ್ರನಾದ ಸೋಮೇಶ್ವರನಿಗೆ ಯೌವರಾಜ್ಯಾಭಿಷೇಕ ಮಾಡಿಸಿ, ಅವನನ್ನು ದಕ್ಷಿಣದ ರಾಜ್ಯವ್ಯವಸ್ಥೆಗಾಗಿ ರಾಜಧಾನಿಯಲ್ಲಿ ಬಿಟ್ಟು ಉತ್ತರ ದಿಗ್ವಿಜಯಕ್ಕಾಗಿ ತಾನು ನರ್ಮದೆಯಾಚೆಗೆ ತೆರಳಿದನು. ಈ ತ್ರಿಭುವನ ಪರಾಕ್ರಮಕ್ಕೆ ಉತ್ತರಾಪಥದ ಜನರು ತಲೆಬಾಗಿದರು. ಮಹಾರಾಜ ಪರಮೇಶ್ವರ ಇಮ್ಮಡಿ ಪುಲಿಕೇಶಿಗಿಂತ ಆರನೆಯ ವಿಕ್ರಮಾದಿತ್ಯನು ಉನ್ನತ ಕೀರ್ತಿಶಾಲಿಯೆಂದೂ ಉತ್ತುಂಗ ಪರಾಕ್ರಮಿಯೆಂದೂ ಹೊಗಳಿದರು. ಅವನು ಉತ್ತರಾಪಥದ ವಿಜಯಯಾತ್ರೆಯನ್ನು ಮುಗಿಸಿ ರಾಜಧಾನಿಗೆ ಬಂದು ಎಷ್ಟೋ ಕಾಲ ಸುಖಸಂಕಥಾ ವಿನೋದದಲ್ಲಿ ಕಾಲಕಳೆದನು. ಸಾಮ್ರಾಜ್ಯದ ಶಾಂತಿಯೇ ಹೀಗೆ ಅವನಿಗೆ ಶಾಂತಿಯಿಂದ ಕಾಲಕಳೆಯಲು ಅವಕಾಶವನ್ನು ಕಲ್ಪಿಸಿಕೊಟ್ಟಿತು. ವಿಕ್ರಮಾದಿತ್ಯನು ಉತ್ತರಾಪಥಕ್ಕೆ ದಂಡಯಾತ್ರೆಗೆ ಹೋದಾಗ ಅವನ ಆಸ್ಥಾನಕವಿಯಾದ ತ್ರಿಭುವನಮಲ್ಲದೇವ ವಿದ್ಯಾಪತಿ ಕಾಶ್ಮೀರಭಟ್ಟ ಮಹಾಕವಿ ಶ್ರೀ ಬಿಲ್ಹಣನು ವೈರಾಗ್ಯ ಪ್ರೇರಿತರಾಗಿ ತನ್ನ

ಆಶ್ರಯದಾತನನ್ನು ಬೀಳ್ಕೊಂಡು ತನ್ನ ಜನ್ಮಭೂಮಿಯಾದ ಕಾಶ್ಮೀರಕ್ಕೆ ಹೋದನು. ಹೋಗುವಾಗ ಅವನು ತನ್ನ ಸ್ವಾಮಿಯ ಚರಿತ್ರವಾದ "ವಿಕ್ರಮಾಂಕದೇವ ಚರಿತ" ಸಂಸ್ಕೃತ ಗ್ರಂಥವನ್ನು ಅವನ ಸ್ವಾಧೀನ ಪಡಿಸಿದನು.

ಈಗ ವಿಕ್ರಮಾದಿತ್ಯನು ವೃದ್ಧನಾಗಿದ್ದನು. ಅವನು ತನ್ನ ಸಾಮ್ರಾಜ್ಯದ ಭಾರವನ್ನೆಲ್ಲ ಯುವರಾಜ ಸೋಮೇಶ್ವರನ ಮೇಲೆಯೂ ಅಮಾತ್ಯ ಸೇನಾನಿಗಳಮೇಲೆಯೂ ವಹಿಸಿದ್ದನೆಂದು ಹೇಳಬಹುದು. ಈ ಸಂಧಿಯನ್ನು ಸಾಧಿಸಿ ದಕ್ಷಿಣದಲ್ಲಿಯ ಹೊಯ್ಸಳಬಿಟ್ಟಿಗನೂ ಪಾಂಡ್ಯಶಿಲಾಹಾರ ಕದಂಬ ಮೊದಲಾದ ಮಂಡಲೇಶ್ವರರೂ ಸ್ವತಂತ್ರರಾಗಲು ಹವಣಿಸಿದರು. ಹೊಯ್ಸಳ ಬಿಟ್ಟಿಗನ ಆಪ್ತ ಮಂತ್ರಿಯಾದ ಗಂಗರಾಜನು ಚೋಳರಾಜನೊಡನೆ ಕಾಲು ಕೆದರಿ ಜಗಳ ತೆಗೆದು ಅವರನ್ನು ಸೋಲಿಸಿ ಓಡಿಸಿ ಗಂಗವಾಡಿಯನ್ನು ಹೊಯ್ಸಳ ರಾಜ್ಯದಲ್ಲಿ ಸೇರಿಸಿದನು. ಹಾಗು ವಿಕ್ರಮಾದಿತ್ಯನ ದಂಡನಾಯಕರು ದಕ್ಷಿಣದ ದಂಡಯಾತ್ರೆಗೆ ಹೊರಟು ಕಣ್ಣೆಗಾಲದಲ್ಲಿ ಪಾಳಯ ಹಾಕಿಕೊಂಡಿರುವಾಗ ಈ ಗಂಗರಾಜನು ಒಂದು ರಾತ್ರಿಯಲ್ಲಿ ಆ ಪಾಳ್ಯದಮೇಲೆ ಬಿದ್ದು ಹಾಹಾಕಾರವನ್ನೆಬ್ಬಿಸಿದನು. ಈ ಸಂಗತಿಯು ವಿಕ್ರಮಾದಿತ್ಯನಿಗೆ ತಿಳಿದಕೂಡಲೇ ಅವನು ಸಿಂದವಾಡಿಯ ಮಂಡಲೇಶ್ವರನಾದ ಅಚುಗಿಯನ್ನು ಗಂಗರಾಜನಮೇಲೆ ಕಳುಹಿದನು. ಈ ಅಚುಗಿಯು ಗಂಗರಾಜನನ್ನು ಸೋಲಿಸಿ ಬೆನ್ನಟ್ಟಿ, ಕದಂಬ ಲಕ್ಷ್ಮನನ್ನು ಗೆದ್ದು ಗೋವೆಯನ್ನು ಹಿಡಿದುಕೊಂಡು, ಪಾಂಡ್ಯರನ್ನು ದಿಕ್ಕಾಪಾಲಾಗಿ ಓಡಿಸಿ, ಮಲಪರನ್ನು ಚದರಿಸಿ ಕೊಂಕಣವನ್ನು ಕೈವಶ ಮಾಡಿಕೊಂಡು ಗೋವೆಯ ಉಪ್ಪಿನ ಕಟ್ಟೆಗಳನ್ನು ಸುಟ್ಟು, ಸಾಮ್ರಾಜ್ಯದಲ್ಲಿ ಹಾವಳಿಎಬ್ಬಿಸಿದ ಒಬ್ಬ ಭೋಜನೆಂಬವನನ್ನು ಸೋಲಿಸಿ ಸೆರೆಹಿಡಿದು ಎಲ್ಲೆಡೆಯಲ್ಲಿ ಶಾಂತಿಯನ್ನು ನೆಲೆಗೊಳಿಸಿ ಮುಪ್ಪಿನ ವಿಕ್ರಮಾದಿತ್ಯ ಸಾರ್ವಭೌಮನ ಮನಸ್ಸನ್ನು ಶಾಂತಗೊಳಿಸಿದನು.

ವಿಕ್ರಮಾದಿತ್ಯನು ಸುಮಾರು ಐವತ್ತು ವರ್ಷ ಸುಖದಿಂದ ರಾಜ್ಯ ಪಾಳಿದನು. ಅವನಿಗೀಗ ತೊಂಭತ್ತೊಂದನೆಯ ವರ್ಷ ನಡೆಯುತ್ತಿತ್ತು.

ಶಿಲಾಹಾರ ರಾಜಕುಮಾರಿ ಚಂದ್ರಲೇಖಾದೇವಿಯ ಜಯಕರ್ಣನೆಂಬ ಮಗನು ಇಷ್ಟರಲ್ಲಿ ಮರಣಹೊಂದಿದ್ದನು. ಇವನಿಗೆ ಏಕಮಾತ್ರ ಪುತ್ರ ಯುವರಾಜ ಸೋಮೇಶ್ವರನು ರಾಜ್ಯಭಾರವನ್ನು ನಿರ್ವಹಿಸತೊಡಗಿದ್ದನು. ವಿಕ್ರಮಾದಿತ್ಯ ಮಹಾರಾಜನಿಗೆ ತನ್ನ ಕೊನೆಯ ದಿನಗಳು ಸಮೀಪಿಸಿದ ವೆಂದು ತಿಳಿದು ಬಂದುದರಿಂದ ಅವನು ತನ್ನ ಏಕಮಾತ್ರ ಪುತ್ರನಾದ ಸೋಮೇಶ್ವರನನ್ನೂ ಮಂಡಲೇಶ್ವರ ಮಹಾಮಂಡಲೇಶ್ವರರನ್ನೂ ಪ್ರಧಾ ನಾಮಾತ್ಯ ಸೇನಾನಿಗಳನ್ನೂ ತನ್ನ ಪತ್ನಿಯರನ್ನೂ ಬಂಧು–ಬಾಂಧವ ರನ್ನೂ ಕರೆಯಿಸಿದನು. ಎಲ್ಲರನ್ನೂ ಪ್ರೇಮಳ ದೃಷ್ಟಿಯಿಂದ ನೋಡಿ, "ನನ್ನ ಸೇವೆಯ ದಿನಗಳು ಮುಗಿದವು. ನಾನು ರಾಜನಾಗಿದ್ದರೂ ಪ್ರಜೆ ಗಳ ಸೇವಕನಾಗಿ ಅವರಿಗೆ ನನಗೆ ಸಾಧ್ಯವಾದ ಮಟ್ಟಿಗೆ ಸುಖ–ಶಾಂತಿ ಗಳನ್ನೊದಗಿಸಿಕೊಟ್ಟೆನು. ಇನ್ನು ನನ್ನ ಕುಮಾರನಾದ ಸೋಮೇಶ್ವರನು ಸಾಮ್ರಾಜ್ಯದ ಅಧಿಪತಿಯು. ಇವನಾದರೂ ನನ್ನ ಹಾಗೆಯೇ ಪ್ರಜಾ ರಂಜಕನಾಗಿರಬೇಕೆಂದು ನಾನು ಇಚ್ಛಿಸುವೆನು. ಹಾಗು ಅಂತಹ ಬುದ್ಧಿ ಯನ್ನು ಇವನಿಗೆ ಕೊಡಲೆಂದು ನಾನು ನನ್ನ ಕುಲದೇವತೆಯಾದ ಬಳ್ಳಿ ಗಾವೆಯ ಉಮಾಮಹೇಶ್ವರನನ್ನು ಪ್ರಾರ್ಥಿಸುವೆನು. ಇಹಲೋಕದಲ್ಲಿ ನನ್ನ ಕಾರ್ಯಗಳಾವುವೂ ಉಳಿದಿಲ್ಲ. ಉಳಿದಿದ್ದರೂ ಅವುಗಳನ್ನು ನೆರ ವೇರಿಸುವ ಸಾಮರ್ಥ್ಯ ನನ್ನಲ್ಲಿ ಉಳಿಯಲಿಲ್ಲ. ನನ್ನ ಕಾರ್ಯಗಳೇನಾ ದರೂ ಉಳಿದಿದ್ದರೆ ಅವುಗಳನ್ನು ನನ್ನ ಪರವಾಗಿ ನನ್ನ ಮಗನು ಪೂರೈಸ ಬಹುದೆಂದು ಆಶಿಸುವೆನು."

ವಿಕ್ರಮಾಂತ್ಯನ ಕೊನೆಯ ಭೆಟ್ಟಿಯನ್ನು ತೆಗೆದುಕೊಳ್ಳಲು ಸಿಂದ ಮನೆತನದ ಅಚುಗಿ, ಹೊಯ್ಸಳ ಬಿಟ್ಟಿದೇವ, ಮನೆಯ ಅಳಿಯ ಕದಂಬ ಮಹಾಮಂಡಲೇಶ್ವರ ಎರಡನೆಯ ಜಯಕೇಶಿ, ತ್ರಿಭುವನಮಲ್ಲ ಪಾಂಡು ದೇವ, ಜೀಮೂತವಾಹನ ಮನೆತನದ ಮಹಾ ಮಂಡಲೇಶ್ವರನಾದ ಬಾಸವೂರ ಪೆರ್ಮಾಡಿ, ಪುಲಿಗಿರಿಯ ಮಂಡಲಾಧಿಪತಿ ನಾಗವರ್ಮಯ್ಯ ಮೊದಲಾದವರು ಬಂದಿದ್ದರು. ದಕ್ಷಿಣದ ಎಲ್ಲ ಮಂಡಲೇಶ್ವರರೂ ಬಂದು ಸೌಹಾರ್ದತೆಯನ್ನು ತೋರಿಸಿದ್ದರಿಂದ ತ್ರಿಭುವನಮಲ್ಲ ವಿಕ್ರಮಾದಿತ್ಯನು

ಕೃತಕೃತ್ಯನಾದೆನೆಂದು ಭಾವಿಸಿಕೊಂಡನು. ಎಲ್ಲ ಮಂಡಲೇಶ್ವರರೂ ಸಾಮ್ರಾಜ್ಯದ ವಿಷಯದಲ್ಲಿ ನಿಷ್ಠೆಯಿಂದ ನಡೆಯುವಬಗ್ಗೆ ವಿಕ್ರಮಾದಿತ್ಯ ನಿಗೆ ಆಶ್ವಾಸನಕೊಟ್ಟು ಅವನ ಮನಸ್ಸನ್ನು ಸಾಂತ್ವನಪಡಿಸಿದರು. ಹಾಗು ಎಲ್ಲರೂ ಏಕಕಂಠವಾಗಿ ತ್ರಿಭುವನಮಲ್ಲ ವಿಕ್ರಮಾದಿತ್ಯರ ಆಳಿಕೆಯು ಕರ್ನಾಟಕ ಸಾಮ್ರಾಜ್ಯಕ್ಕೆ ಸುವರ್ಣ ಯುಗವಾಗಿ ಪರಿಣಮಿಸಿತೆಂದು ಉದ್ಗಾರ ತೆಗೆದರು.

ವಿಕ್ರಮಾದಿತ್ಯನು ಚಾಲುಕ್ಯರ ವೈಭವವನ್ನು ಬೆಳೆಯಿಸಿ ಚಾಲುಕ್ಯರ ಕೀರ್ತಿಯನ್ನು ಆಚಂದ್ರಾರ್ಕಗೊಳಿಸಿದರು. ಕರ್ನಾಟಕದಲ್ಲಿ ಇಂತಹ ಅರಸರು ಇನ್ನೊಬ್ಬರಾಗಲಿಲ್ಲೆಂಬ ಖ್ಯಾತಿಯನ್ನು ಸ್ಥಿರಪಡಿಸಿಕೊಂಡನು. ಇವನು ತನ್ನ ವಯಸ್ಸಿನ ತೊಂಭತ್ತೊಂದನೆಯ ವರ್ಷ ಕ್ರಿಸ್ತ ವರ್ಷ ೧೧೨೬ರಲ್ಲಿ ಸ್ವರ್ಗಾರೋಹಣ ಮಾಡಿದನು.

ಇವನ ತರುವಾಯ ಇವನ ಮಗ ಸೋಮೇಶ್ವರನು ಭೂಲೋಕ ಮಲ್ಲನೆಂಬ ಬಿರುದು ಧರಿಸಿ, ಸಿಂಹಾಸನಾರೋಹಣಮಾಡಿ, ವಿಕ್ರಮಾದಿತ್ಯನ ಕರ್ನಾಟಕ ಸಾಮ್ರಾಜ್ಯವನ್ನು ಸುಖ–ಶಾಂತಿಯಿಂದ ಆಳತೊಡಗಿದನು. ಆರನೆಯ ವಿಕ್ರಮಾದಿತ್ಯನ ತರುವಾಯ ಅಂತಹ ಪುಣ್ಯಶ್ಲೋಕಿಗಳೂ ಪ್ರತಾಪಸಿಧಿಗಳೂ ಆದ ಅರಸರು ಚಾಲುಕ್ಯವಂಶದಲ್ಲಿ ಹುಟ್ಟಲಿಲ್ಲವೆಂದಿಷ್ಟು ಹೇಳಿ ಕಥಾನಕವನ್ನು ಪೂರ್ತಿಗೊಳಿಸುವೆನು.

**ಮುಗಿದುದು.**